ವಿಶ್ವವಾಣಿ
ವಿಶ್ವಾಸವೇ ವಿಶ್ವ

ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ಗೆ ಝಡ್ ಶ್ರೇಣಿ ಭದ್ರತೆ

ಬೆಂಗಳೂರು: ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಕೇಂದ್ರ ಸರಕಾರವು ಝಡ್ ಶ್ರೇಣಿಯ ಭದ್ರತೆ ಒದಗಿಸಿದೆ. ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಬಳಿಕ ರಾಜ್ಯದ ಹಲವೆಡೆ ಪ್ರತಿಭಟನೆಗಳು ನಡೆದಿದ್ದವು. ಈ ಪ್ರತಿಭಟನೆಯ ನಂತರ ಬುಲೆಟ್ ಪ್ರೂಫ್ ಕಾರಿನ ವ್ಯವಸ್ಥೆ ಮಾಡಲಾಗಿತ್ತು. ಆದರೆ ಆ ಕಾರನ್ನು ರಾಜ್ಯಪಾಲರು ವಾಪಸ್ ಕಳುಹಿಸಿದ್ದರು. ಇದೀಗ ಕೇಂದ್ರ ಸರಕಾರವೇ ಝಡ್ ಶ್ರೇಣಿಯ ಭದ್ರತೆ ಒದಗಿಸಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಹೊಸದಾಗಿ ಸೇರಿರುವ
110 ಹಳ್ಳಿಗಳಿಗೆ ಕುಡಿಯುವ ನೀರನ್ನು ಒದಗಿಸುವ ಮಹತ್ವಾಕಾಂಕ್ಷೆಯ

ಕಾವೇರಿ 5ನೇ ಹಂತದ ಯೋಜನೆ

ಸನ್ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ**ರವರು
ಹಾಗೂ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ **ಶ್ರೀ ಡಿ.ಕೆ. ಶಿವಕುಮಾರ್**ರವರಿಂದ

ಲೋಕಾರ್ಪಣೆ

ದಿನಾಂಕ : 16.10.2024, ಬೆಳಿಗ್ಗೆ 10.30 ಗಂಟೆಗೆ
ಸ್ಥಳ : ತೊರೆಕಾಡನಹಳ್ಳಿ (ಟಿ.ಕೆ. ಹಳ್ಳಿ), ಬೆಂಗಳೂರು ಜಲಮಂಡಳಿ ಆವರಣ,
ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.

ಕಾವೇರಿ 5ನೇ ಹಂತದ ಯೋಜನೆ ಮುಖ್ಯಾಂಶಗಳು

ಯೋಜನೆ ವೆಚ್ಚ	ಕುಡಿಯುವ ನೀರು	ಅನುಕೂಲ
₹ 4,336 ಕೋಟಿ	110 ಹಳ್ಳಿಗಳಿಗೆ	50 ಲಕ್ಷ ಜನರಿಗೆ
ಅನುಮೋದನೆ	**ನೀರು ಪೂರೈಕೆ**	**ನೀರಿನ ಹೊಸ ಸಂಪರ್ಕ**
10 ಟಿಎಂಸಿ ಕಾವೇರಿ ನೀರು	775 ಎಂ ಎಲ್ ಡಿ	4 ಲಕ್ಷ



ಘನ ಉಪಸ್ಥಿತಿ

ಶ್ರೀಮತಿ ನಿರ್ಮಲಾ ಸೀತಾರಾಮನ್
ಮಾನ್ಯ ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ

ಶ್ರೀ ಹೆಚ್. ಡಿ. ಕುಮಾರಸ್ವಾಮಿ
ಮಾನ್ಯ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವರು, ಭಾರತ ಸರ್ಕಾರ

ಕು|| ಶೋಭಾ ಕರಂದ್ಲಾಜೆ
ಮಾನ್ಯ ಸಣ್ಣ, ಅತಿಸಣ್ಣ ಹಾಗೂ ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವರು, ಭಾರತ ಸರ್ಕಾರ

ಶ್ರೀ ವಿ. ಸೋಮಣ್ಣ
ಮಾನ್ಯ ಕೇಂದ್ರ ಜಲಶಕ್ತಿ ಮತ್ತು ರೈಲ್ವೇ ರಾಜ್ಯ ಖಾತೆ ಸಚಿವರು, ಭಾರತ ಸರ್ಕಾರ

ಶ್ರೀ ಕೆ.ಜೆ. ಜಾರ್ಜ್
ಮಾನ್ಯ ಇಂಧನ ಸಚಿವರು

ಶ್ರೀ ಎನ್. ಚೆಲುವರಾಯಸ್ವಾಮಿ
ಮಾನ್ಯ ಕೃಷಿ ಸಚಿವರು ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು

ಶ್ರೀ ರಾಮಲಿಂಗಾರೆಡ್ಡಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಶ್ರೀ ದಿನೇಶ್ ಗುಂಡೂರಾವ್
ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಶ್ರೀ ಕೃಷ್ಣ ಭೈರೇಗೌಡ
ಮಾನ್ಯ ಕಂದಾಯ ಸಚಿವರು

ಶ್ರೀ ಬಿ.ಝಡ್. ಜಮೀರ್ ಅಹ್ಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

ಶ್ರೀ ಭೈರತಿ ಸುರೇಶ್
ಮಾನ್ಯ ನಗರಾಭಿವೃದ್ಧಿ ಸಚಿವರು

ಅಧ್ಯಕ್ಷತೆ

ಶ್ರೀ ಪಿ.ಎಂ. ನರೇಂದ್ರಸ್ವಾಮಿ
ಮಾನ್ಯ ಶಾಸಕರು, ಮಳವಳ್ಳಿ ವಿಧಾನಸಭಾ ಕ್ಷೇತ್ರ

ಹಾಗೂ ಮಾನ್ಯ ಲೋಕಸಭಾ ಮತ್ತು ರಾಜ್ಯಸಭಾ ಸದಸ್ಯರುಗಳು, ವಿಧಾನಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳು ಹಾಗೂ ಎಲ್ಲಾ ಚುನಾಯಿತ ಜನಪ್ರತಿನಿಧಿಗಳು.

ಸರ್ವರಿಗೂ ಆದರದ ಸುಸ್ವಾಗತ

ಡಾ. ಶಾಲಿನಿ ರಜನೀಶ್, ಭಾಆಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು
ಕರ್ನಾಟಕ ಸರ್ಕಾರ

ಶ್ರೀ ಎಸ್. ಆರ್. ಉಮಾಶಂಕರ್, ಭಾಆಸೇ
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ನಗರಾಭಿವೃದ್ಧಿ ಇಲಾಖೆ

ಡಾ. ರಾಮ್ ಪ್ರಸಾತ್ ಮನೋಹರ್ ವಿ., ಭಾಆಸೇ
ಅಧ್ಯಕ್ಷರು,
ಬೆಂಗಳೂರು ಜಲ ಮಂಡಳಿ

ಸಮಸ್ತ ನಾಗರೀಕರು ಬನ್ನಿ, ಕಾವೇರಿಮಾತೆಯನ್ನು ನಿಮ್ಮ ಮನೆಗೆ ಬರಮಾಡಿಕೊಳ್ಳಿ.

ಗಲಭೆ ಕೇಸ್ ವಾಪಸ್: ಸ್ವಾಗತಾರ್ಹ

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಶಾಸಕ ಪ್ರಸಾದ್ ಅಬ್ಬಯ್ಯ ಮಾತನಾಡಿದರು.

ಹುಬ್ಬಳ್ಳಿ: ಹಳೇ ಹುಬ್ಬಳ್ಳಿ ಪ್ರಕರಣ ಸೇರಿದಂತೆ ಒಟ್ಟು 43 ಪ್ರಕರಣವನ್ನು ಕ್ಯಾಬಿನೆಟ್‌ನಲ್ಲಿ ಸರಕಾರ ವಾಪಾಸ್ ಪಡೆದ ನಿರ್ಧಾರವನ್ನು ಸ್ವಾಗತ ಮಾಡತ್ತೇನೆ ಎಂದು ಶಾಸಕ ಪ್ರಸಾದ್ ಅಬ್ಬಯ್ಯ ಹೇಳಿದರು.

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಹಿಂದೆ ರಾಜಕೀಯ ಪ್ರೇರಿತದಿಂದ ಬಹಳಷ್ಟು ಜನರಿಗೆ ಅನ್ಯಾಯ ಆಗಿತ್ತು. ಅದನ್ನು ಸುದೀರ್ಘವಾಗಿ ಚರ್ಚೆ ಮಾಡಿ ಕ್ಯಾಬಿನೆಟ್'ನಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದರು.

ಆರೋಪಿಗಳ ಬಂಧನದ ನಂತರ 90 ದಿನಗಳ ಒಳಗಾಗಿ ಚಾರ್ಜ್ ಶೀಟ್ ಸಲ್ಲಿಸಬೇಕೆಂಬ ನಿಯಮವಿದೆ. ಆದರೆ 90 ದಿನಗಳ ಒಳಗಾಗಿ ಚಾರ್ಜ್ ಶೀಟ್ ಸಲ್ಲಿಕೆಯಾಗಿಲ್ಲ. ಹೀಗಾಗಿ ಬೇಲ್ ಪಡೆಯಲು ಸಾಧ್ಯವಾಗಿದೆ ಎಂದರು.

ಪ್ರಕರಣದಲ್ಲಿ ಎಲ್ಲರೂ ಅಮಾಯಕರು ಇದ್ದಾರೆ ಎಂದು ನಾನು ಹೇಳುವುದಿಲ್ಲ. ಯಾರು ತಪ್ಪು ಮಾಡಿದ್ದಾರೆ ಅವರ ವಿರುದ್ಧ ಕ್ರಮವಾಗಲಿ. ಆದರೆ ಬಿಜೆಪಿ ಒಂದು ಸಮಾಜವನ್ನು ಗುರಿಯಾಗಿಸಿಕೊಂಡು ರಾಜಕೀಯ ಮಾಡುವುದು ಸರಿಯಲ್ಲ ಎಂದರು.

ನಿಜವಾಗಿಯೂ ಬಿಜೆಪಿಯವರಿಗೆ ಭಯೋತ್ಪಾದಕರು, ದೇಶದಲ್ಲಿ ಜಾತಿಧರ್ಮ ಬಿಟ್ಟು ಒಗ್ಗಟ್ಟಾಗಿ ಇದ್ದರು ಬಿಜೆಪಿಯವರು ಹಾಳು ಮಾಡುತ್ತಿದ್ದಾರೆ. ಹೀಗಿದ್ದಾಗ ಇವರಿಗೆ ಪ್ರತಿಭಟನೆ ಮಾಡುವುದಕ್ಕೆ ಯಾವ ನೈತಿಕತೆಯಿದೆ ಎಂದು ಶಾಸಕ ಪ್ರಸಾದ್ ಅಬ್ಬಯ್ಯ ಪ್ರಶ್ನಿಸಿದರು.

> ಕಾಂಗ್ರೆಸ್ ಓಲೈಕೆ ರಾಜಕೀಯ ಮಾಡುತ್ತಿದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ, ಓಲೈಕೆ ರಾಜಕೀಯ ಯಾರು ಮಾಡುತ್ತಿದ್ದಾರೆ. ಸುಖಾಸುಮ್ಮನೆ ಬಿಜೆಪಿಯವರು ಹೇಳತ್ತಾರೆ. ವಾಪಾಸ್ ಪಡೆದ 43 ಪ್ರಕರಣದಲ್ಲಿ ಅನೇಕ ಕೇಸ್‌ಗಳು ಇದೇ ತರಹ ಇದೆ. ಅದರ ಬಗ್ಗೆ ಮಾತನಾಡುತ್ತಿಲ್ಲ.
>
> -ಪ್ರಸಾದ್ ಅಬ್ಬಯ್ಯ ಶಾಸಕ

ಬಾರೀ ಮಳೆಗೆ ಮನೆಗಳು ಹಾನಿ

ನಗರದಲ್ಲಿ ಗುಡುಗು ಗಾಳಿ ಸಹಿತ ಮಳೆ | ನೀರಿನಲ್ಲಿ ಕೊಚ್ಚಿ ಹೋದ ಬೆಳೆ | ಕೋಟ್ಯಂತರ ನಷ್ಟ

ನವಲಗುಂದ: ಕಳೆದ 3-4 ದಿನಗಳಿಂದ ನಗರ ಸೇರಿದಂತೆ ತಾಲೂಕಿನಾದ್ಯಂತ ಸುರಿಯುತ್ತಿರುವ ಗಾಳಿ, ಗುಡುಗು ಸಹಿತ ಮಳೆಗೆ ನವಲಗುಂದ ನಗರದಲ್ಲಿ 15 ಮನೆ ಸೇರಿದಂತೆ ತಾಲೂಕಿನ ಗ್ರಾಮಗಳಲ್ಲಿನ 47ಕ್ಕೂ ಹೆಚ್ಚು ಮನೆಗಳು ಬಿದ್ದು ಹಾನಿಯಾಗಿದೆ.

ಸಾಕಷ್ಟು ಬೆಳೆಯೂ ಮಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದು, ಕೋಟ್ಯಾಂತರ ರೂಪಾಯಿ ನಷ್ಟ ಸಂಭವಿಸಿದೆ.

ಬುಧವಾರ-ಗುರುವಾರ ರಾತ್ರಿ ಸುರಿದ ಮಳೆಗೆ ನವಲಗುಂದ ನಗರದ ಗುಡ್ಡದಕೇರಿ ಓಣಿಯ ಬಾರಾಕಮನಾ ಸ್ಮಶಾನಗಟ್ಟಿ ಯಿಂದ ಹಿಡಿದು ಹೊರಗಿನ ದುರ್ಗಮ್ಮ ದೇವಸ್ಥಾನ ಕಡೆ, ಕಳ್ಳಿಮಠ ಓಣಿಯ ಖಬರಸ್ಥಾನವರಿಗೆ ಹಳ್ಳ ಹೊರಚೆಲ್ಲಿದ್ದು ಯಾವುದೇ ಪ್ರಾಣಹಾನಿ, ಜಾನು ವಾರು ಹಾನಿಯಾಗಿಲ್ಲ ಆದರೇ ಅಪಾರ ಪ್ರಮಾ ಣದಲ್ಲಿ ಹತ್ತಿ, ಮೆಕ್ಕೆಜೋಳ ಬೆಳೆಗಳ ಹೊಲದಲ್ಲಿ ನೀರು ನಿಂತು ಬೆಳೆಹಾನಿಯಾಗಿದ್ದು ರೈತರು ಸಂಕಷ್ಟ ಸಿಲುಕಿದ್ದಾರೆ.

ಅಲ್ಲದೇ ತಾಲೂಕಿನ ಆರೇಕುರಹಟ್ಟಿ, ಗೊಬ್ಬರ ಗುಂಪಿ, ಬೆಳವಟಗಿ, ಅಮರಗೋಳ,ಹೆಬ್ಬಾಳ, ಬಳ್ಳೂರ, ಹಾಳಕುಸುಗಲ್, ಆಹೆಟ್ಟಿ, ಯಮ ನೂರ, ಸೊಟಕನಾಳ,ಶಿರಕೋಳ, ಭೋಗಾನೂರ, ಮೊರಬ,ಕರ್ಲವಾಡ, ಕಾಲವಾಡ, ಗುಡಿಸಾಗರ, ತಿರ್ಲಾಪೂರ ಗ್ರಾಮಗಳಲ್ಲೂ ಬಾರೀ ಮಳೆಯಾಗಿದ್ದು, 71 ಕ್ಕೂ ಹೆಚ್ಚು ಮನೆಯೊಳಗೆ ನೀರು ಹೊಕ್ಕಿದೆ. ತಿರ್ಲಾಪುರ ಗ್ರಾಮದಲ್ಲಿ ಮಳೆ ನೀರನ್ನು ರಾತ್ರಿಯಿಂದ ಬೆಳಗಿನ ಜಾವದವರೆಗೂ ಮನೆಯವರು ಹೊರ ಹಾಕುತ್ತಿದ್ದ ದೃಶ್ಯ ಸರ್ವೆ ಸಾಮಾನ್ಯವಾದಂತಿತ್ತು.ಸ್ಥಳಗಳಕ್ಕೆ ತಹಸೀಲ್ದಾರ ಸುಧೀರ್ ಸಾಹುಕಾರ ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಅಧಿಕಾರಿಗಳು ಭೇಟಿ ನೀಡಿ ಮಹಜರ್ ನಡೆಸಿದರು.

ತಾಲೂಕಿನಲ್ಲಿ ಮೂರು ದಿನಗಳಿಂದ ಸುರಿಯುತ್ತಿರುವ ಮಳೆಗೆ ನವಲಗುಂದ ನಗರದ 15 ಮನೆಗಳು ಸೇರಿದಂತೆ ತಾಲೂಕಿನ 47ಮನೆಗಳು ಬಿದ್ದು ಹೋಗಿರುವ ಬಗ್ಗೆ ಕಂದಾಯ ಇಲಾಖೆ ಅಧಿಕಾರಿಗಳಿಂದ ಪ್ರಾಥಮಿಕ ವರದಿ ಬಂದಿದ್ದು, ಅಧಿಕಾರಿಗಳು ಸ್ಥಳಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಮಳೆಯಿಂದ ಗೋವಿನಜೋಳ, ಹತ್ತಿ, ಉಳ್ಳಾಗಡ್ಡಿ ಮತ್ತಿತರ ಬೆಳೆಗಳು ಕೈಗೆ ಬಾರದ ಪರಸ್ಥಿತಿ ಬಂದೋದಗಿದೆ, ಬೆಳೆಗಳು ಕೊಳೆಯುವ ಸ್ಥಿತಿ ತಲುಪಲಿದ್ದು ರೈತರು ಆತಂಕಕ್ಕೀಡಾಗಿದ್ದಾರೆ. ತಾಲೂಕಿನ ಜನರು ಸಂಕಷ್ಟಕ್ಕೆ ಸಿಲುಕಿದ್ದು ಅಪಾರ ಪ್ರಮಾಣದ ಆಸ್ತಿ-ಪಾಸ್ತಿ ನಷ್ಟವಾಗಿದೆ.

ಮುಂಗಾರು ಬೆಳೆಗಳಾದ ಮೆಕ್ಕೆಜೋಳ, ಹತ್ತಿ, ಉಳ್ಳಾಗಡ್ಡಿ ಫಸಲು ಕೈಗೆ ಬರುವ ಮುನ್ನವೇ ಮಳೆ ಹಾಗೂ ಪ್ರವಾಹಕ್ಕೆ ಸಿಲುಕಿ ಹಾನಿಯಾಗಿದ್ದು, ರೈತರಿಗೆ ಅಪಾರ ಪ್ರಮಾಣದ ನಷ್ಟ ಸಂಭವಿಸಿದೆ. ಜೊತೆಗೆ ಹಿಂಗಾರಿನಲ್ಲಿ ಅಲ್ಪ ಸ್ವಲ್ಪ ಕಡ್ಲಿ ಬಿತ್ತನೆ ಮಾಡಿದ್ದ ಬೆಳೆಯು ಚಿಗುರುವು ಮುಂಚೆ ಚಿವುಟಿ ಹೋಗಿವೆ.

ನವಲಗುಂದ ಹಾಗೂ ಅಣ್ಣಿಗೇರಿ ತಾಲೂಕಿನ ಒಟ್ಟು 8. 5ಸಾವಿರ ಎಕರೆ ಪ್ರದೇಶದ ಬೆಳೆ ನಾಶವಾಗಿದ್ದು ಜತೆಗೆ ಮಳೆಗೆ ಮನೆಗಳು ಬಿದ್ದಿವೆ, ಕೂಡಲೇ ಸರಕಾರ ಜನರ ಸಂಕಷ್ಟಗಳಿಗೆ ಸ್ಪಂದಿಸಿ ಪರಿಹಾರ ಒದಗಿಸಿಬೇಕಾಗಿದೆ.

ರೈತ ಲಕ್ಷ್ಮಣನನ್ನು ರಕ್ಷಿಸುವಲ್ಲಿ ಯಶಸ್ವಿ

ತಾಲೂಕಿನ ಕಾಲವಾಡದ ಸಮೀಪ ಬೆಣ್ಣೆಹಳ್ಳದ ಪಕ್ಕದ ದೇಗುಲದ ಆವರಣದಲ್ಲಿ ಲಕ್ಷ್ಮಣ. ಹ.ಬಾರಕೇರ ಎಂಬ ರೈತ ಸಿಲುಕಿಕೊಂಡಿದ್ದನು. ಹೊಲದ ಬದಿಯ ಕಲ್ಯಾಣ ಬಸವೇಶ್ವರ ದೇವಸ್ಥಾನದ ಕಟ್ಟೆ ಏರಿಕುಳಿತಿದ್ದು, ಹಳ್ಳ ರಭಸವಾಗಿ ಹರಿಯುತ್ತಿದ್ದ ಕಾರಣ ತಡವಾದರೂ ರೈತನ ರಕ್ಷಣೆಗೆ ತಹಸೀಲ್ದಾರ ಸುಧೀರ್ ಸಾಹುಕಾರ, ಅಗ್ನಿಶಾಮಕ ಸಿಬ್ಬಂದಿಗಳು, ಪೊಲೀಸರು ಕಾರ್ಯಾಚರಣೆ ನಡೆಸಿ ಬೋಟ್ ಮೂಲಕ ತೆರಳಿ ರೈತ ಲಕ್ಷ್ಮಣನನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ.

> ತಾಲೂಕಿನ ತಿರ್ಲಾಪೂರ ಗ್ರಾಮದಲ್ಲಿ ನಿನ್ನೆ ಸುರಿದ ಸತತ ಮಳೆಯಿಂದ ಊರಿನ ಕುಡಿಯುವ ನೀರಿನ ಕೆರೆ ಭರ್ತಿಯಾಗಿ ಊರಲ್ಲಿ ಬಂದು ಹಲವಾರು ಮನೆಗಳು ಮಳೆಯಿಂದ ಬಿದ್ದದನ್ನು ವೀಕ್ಷಿಸಿ, ಗ್ರಾ.ಪಂ. ಅಧ್ಯಕ್ಷರು ಹಾಗೂ ಸದಸ್ಯರೊಂದಿಗೆ ಸಭೆ ನಡೆಸಿ ಆಗಿರುವ ಸಮಸ್ಯೆಯನ್ನು ಊರಿನ ಹಿರಿಯರ ಸಮಕ್ಷಮದೊಂದಿಗೆ ಬಗೆಹರಿಸುವ ಕುರಿತು ಆದ ಹಾನಿಯ ಬಗ್ಗೆ ಸರ್ವೆ ಮಾಡಲು ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಗೆ ಖಡಕ ಸೂಚನೆ ನೀಡಿದ್ದೇನೆ.
>
> -ಎನ್.ಎಚ್.ಕೋನರಡ್ಡಿ ಶಾಸಕರು ನವಲಗುಂದ ವಿಧಾನಸಭಾ ಕ್ಷೇತ್ರ

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ **https://gold.samil.in** ನಲ್ಲಿ ಆನ್‌ಲೈನ್ ಮೂಲಕ **18.10.2024** ರಂದು **ಮಧ್ಯಾಹ್ನ 02:00 ರಿಂದ 05:00** ರವರೆಗೆ ನ ನಡುವೆ **ಶ್ರೀರಾಮ್ ಆಟೋಮಾಲ್ ಇಂಡಿಯಾ ಲಿಮಿಟೆಡ್** ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು, ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ವಿಫಲವಾದಲ್ಲಿ ಅದನ್ನು **28.10.2024** ರಂದು ಯಾವುದೇ ಸೂಚನೆ ಇಲ್ಲದೆ ಜಿಲ್ಲಾ ಮಟ್ಟದಲ್ಲಿ ನಿಗದಿತ ಜಿಲ್ಲಾ ಕೇಂದ್ರದಲ್ಲಿ ಮರು ಹರಾಜು ಮಾಡಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಆದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಕೊಪ್ಪಳ ಜಿಎಲ್ - #5-3-227/ಸಿ, 'ಜಿ ಎಂ ಪ್ಲಾಜಾ', 1ನೇ ಮಹಡಿ, ಆಜಾದ್ ಸರ್ಕಲ್, ಜವಾರ್ಹ ರಸ್ತೆ, ಕೊಪ್ಪಳ, ಕರ್ನಾಟಕ - 583231

ಶಾಖೆಯ ಹೆಸರು: ಗಂಗಾವತಿ-ಗಂಗಾವತಿ ಜಿಎಲ್. ತಾಲೂಕು - ಗಂಗಾವತಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL26513803, GL27736132, GL28793120, GL28777851, GL30839881, GL31047388, GL31023951
ಶಾಖೆಯ ಹೆಸರು: ಕೊಪ್ಪಳ ಜಿಎಲ್. ತಾಲೂಕು - ಕೊಪ್ಪಳ
ಚಿನ್ನದ ಸಾಲದ ಖಾತೆ ಸಂಖ್ಯೆ: GL26878737, GL27030083, GL27368501, GL27349821, GL27487410, GL28198078, GL28215404, GL28198499, GL28819044, GL28812334, GL28818495, GL28814141, GL29051034, GL29039313, GL29172208, GL29178546, GL29995789, GL29330505, GL29310549, GL30089922, GL29988009, GL29977310, GL29988286, GL30055412, GL30049289, GL30216378, GL30283147, GL30438788, GL30612336, GL30660073, GL30633573, GL30662003, GL30646029, GL30648238, GL30676901, GL30845972
ಶಾಖೆಯ ಹೆಸರು: ಕೊಪ್ಪಳ-ಕನಕಗಿರಿ ಜಿಎಲ್, ತಾಲೂಕು - ಗಂಗಾವತಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL26024082, GL26040230, GL26198679, GL26177133, GL26518049, GL26546478, GL26820515, GL27767954, GL29555110, GL29571160, GL29588877, GL29585043, GL29641806, GL29640725, GL29622192, GL29801097, GL29821457, GL30442097, GL30526924, GL31108604, GL30527746, GL30545536, GL30774258, GL31134816
ಶಾಖೆಯ ಹೆಸರು: ಕೊಪ್ಪಳ-ಕಾರಟಗಿ ಜಿಎಲ್, ತಾಲೂಕು - ಗಮ್ಮಗತ್ತಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL24501951, GL32759875, GL26256233, GL29180718, GL29156277, GL29202282, GL29192799, GL29195555, GL29204608, GL30433570, GL30740398, GL30729122, GL30856170, GL30844294, GL30907664, GL30926530
ಶಾಖೆಯ ಹೆಸರು: ಕೊಪ್ಪಳ-ಕುಸ್ತಗಿ, ತಾಲೂಕು - ಕುಷ್ಟಗಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL22284610, GL25721938, GL27338025, GL27692386, GL28294174, GL28613463, GL28588563, GL29039586, GL29051385, GL29120028, GL29151026, GL29135787, GL29181215, GL29158105, GL30773942, GL30769366, GL30845445, GL30931109, GL30951294, GL30988481, GL30968995, GL31050185, GL31030999, GL31064388

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.
ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 15.10.2024
ಸ್ಥಳ: ಕೊಪ್ಪಳ
ಎಸ್‌ಡಿ/-
ಅಧಿಕೃತಸಹಿ
ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್

ರಾಣಿ ಚನ್ನಮ್ಮ ಜಯಂತಿ ಅ.23ರಂದು

ಧಾರವಾಡ: ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಯೋಗದಲ್ಲಿ ಅಕ್ಟೋಬರ 23 ರಂದು ಮಧ್ಯಾಹ್ನ 12 ಗಂಟೆಗೆ ಕಿತ್ತೂರ ರಾಣಿ ಚನ್ನಮ್ಮ ಜಯಂತಿಯನ್ನು ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಆಯೋಜಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ. ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯ ನೂತನ ಸಭಾಭವನದಲ್ಲಿ ಜರುಗಿದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಯಂತಿ ಕಾರ್ಯಕ್ರಮವನ್ನು ನಾವೆಲ್ಲರೂ ವಿಜೃಂಭಣೆಯಿಂದ ಆಚರಿಸೋಣ ಎಂದು ತಿಳಿಸಿದರು.

ಅಕ್ಟೋಬರ್ 16 ರಂದು ಕಿತ್ತೂರು ರಾಣಿ ಚನ್ನಮ್ಮ ವಿಜಯ ಜ್ಯೋತಿ ಯಾತ್ರಾ, ರಥವು ಬೆಳಿಗ್ಗೆ 11 ಗಂಟೆಗೆ ಜಿಲ್ಲೆಗೆ ಆಗಮಿಸಲಿದೆ. ಜಿಲ್ಲಾಧಿಕಾರಿ ಕಚೇರಿ ಎದುರು ರಥಕ್ಕೆ ಪೂಜೆ ಸಲ್ಲಿಸಲಾಗುವುದು ಎಂದರು .

ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಸ್ವಾಗತಿಸಿದರು.

ಮಹಾನಗರ ಪಾಲಿಕೆ ಸದಸ್ಯ ಶಂಭು ಸಾಲಿಮನಿ, ಸಮಾಜದ ಮುಖಂಡರಾದ ನಿಂಗಣ್ಣ ಕರಿಕಟ್ಟಿ, ನಿಂಗನಗೌಡ ಪಾಟೀಲ, ಮಡಿವಾಳಪ್ಪ ಸರಿಯಣ್ಣನವರ, ಎಸ್.ಜಿ. ಪಾಟೀಲ ಸೇರಿದಂತೆ ಮುಖಂಡರು, ಹಿರಿಯರು, ಸಾರ್ವಜನಿಕರು ಉಪಸ್ಥಿತರಿದ್ದರು.

ಶಿಕ್ಷಣ ರತ್ನ ಪ್ರಶಸ್ತಿಗೆ ಸರಕಾರಿ ಶಾಲೆಯ ಶಿಕ್ಷಕರು ಆಯ್ಕೆ

ಯಲ್ಲಾಪುರ: ತಾಲೂಕಿನ ಅಲ್ಕೇರಿ ಗೌಳಿ ವಾಡ ಸರಕಾರಿ ಪ್ರಾಥಮಿಕಶಾಲೆಯ ಮುಖ್ಯ ಶಿಕ್ಷಕ ಗಂಗಾಧರ ಲಮಾಣಿ ಹಾಗೂ ಬಿಸಗೋಡ ಸರಕಾರಿ ಪ್ರೌಢಶಾಲೆ ಶಿಕ್ಷಕ ರವಿಕುಮಾರ ಕೆ ಎನ್ ಅವರು ಸೂರ್ಯ ಫೌಂಡೇಶನ್ (ರಿ)ಹಾಗೂ ಸ್ಪಾರ್ಕ್ ಅಕಾಡೆಮಿ ವತಿಯಿಂದ ಬೆಂಗಳೂರಿನಲ್ಲಿ ಆಯೋಜಿಸಿರುವ ರಾಜ್ಯಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಶಿಕ್ಷಣ ರತ್ನ ರಾಜ್ಯಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಶಿಕ್ಷಣ ಕ್ಷೇತ್ರದಲ್ಲಿ ಅತ್ಯುತ್ತಮ ಪ್ರಾಮಾಣಿಕ ಸೇವೆ, ಮಕ್ಕಳ ಸರ್ವತೋಮುಖ ಬೆಳವಣಿಗೆ, ಶಾಲೆಯ ಅಭಿವೃದ್ಧಿಗೆ ಶ್ರಮಿಸುತ್ತಿರುವ ವಿಶಿಷ್ಟ ಶಿಕ್ಷಕರಾಗಿ ಉತ್ತಮ ಸಾಧಕರಾಗಿರುವ ವಿದ್ಯಾರ್ಥಿಗಳ ಮೆಚ್ಚಿನ ಶಿಕ್ಷಕರಾಗಿರುವ ಇವರನ್ನು ಗುರುತಿಸಿ 2024-25 ಸಾಲಿನ ಶಿಕ್ಷಣ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಇಂಡೋ ಗ್ಲೋಬ್ ಗ್ರೂಪ್ ಆಫ್ ಇನ್ಸಿಟ್ಯೂಷನ್ ಸಹಯೋಗದಲ್ಲಿ ಬೆಂಗಳೂರಿನ, ಚಿಕ್ಕಬಾಣಾವರದಲ್ಲಿ ಅ.15ರಂದು ನಡೆಯಲಿರುವ ರಾಜ್ಯ ಮಟ್ಟದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸೂರ್ಯ ಫೌಂಡೇಶನ್(ರಿ),ಸ್ಪಾರ್ಕ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷ ಸೋಮೇಶ್ ಅವರು ತಿಳಿಸಿದ್ದಾರೆ.

ನರೇಗಾ ಜಾಗೃತಿ ರಥಕ್ಕೆ ಸಿಇಒ ಚಾಲನೆ

ನರೇಗಾ ಯೋಜನೆಯ ಮಾಹಿತಿ ತಲುಪಿಸುವ ಜಾಗೃತಿ ರಥಕ್ಕೆ ಜಿ. ಪಂ. ಸಿಇಒ ಅಕ್ಷಯ ಶ್ರೀಧರ್ ಅವರು ಚಾಲನೆ ನೀಡಿದರು.

ಹಾವೇರಿ: ಗ್ರಾಮೀಣ ಭಾಗದ ಪ್ರತಿ ಮನೆ ಮನೆಗೆ ಭೇಟಿ ನೀಡಿ, ನರೇಗಾ ಯೋಜನೆಯ ಮಾಹಿತಿ ತಲುಪಿಸುವ ಜಾಗೃತಿ ರಥಕ್ಕೆ ಸೋಮವಾರ ಜಿಲ್ಲಾ ಪಂಚಾಯತ್ ಕಚೇರಿ ಆವರಣದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಅಕ್ಷಯ ಶ್ರೀಧರ್ ಅವರು ಚಾಲನೆ ನೀಡಿದರು ಹಾಗೂ ಕರಪತ್ರ ಬಿಡುಗಡೆಗೊಳಿಸಿದರು.

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 2025-26ನೇ ಸಾಲಿನ ಕಾರ್ಮಿಕ ಆಯವ್ಯಯ ತಯಾರಿಲು ಅ.02ರಿಂದ ಒಂದು ತಿಂಗಳ ಕಾಲ ಎಲ್ಲಾ ಗ್ರಾಮ ಪಂಚಾಯತಿ ಮಟ್ಟದಲ್ಲಿ 'ಉದ್ಯೋಗ ಖಾತರಿ ನಡಿಗೆ ಸಬಲತೆಯೆಡೆಗೆ ಅಭಿಯಾನ ಆರಂಭಿಸಲಾಗಿದೆ. ರೈತರು ತಮಗೆ ಬೇಕಾದ ಕಾಮಗಾರಿಗಳನ್ನು ಅನುಷ್ಠಾನ ಮಾಡಿಕೊಳ್ಳಲು ಮೊಬೈಲ್ ಮತ್ತು ಇಲಾಖೆಯ ವೆಬ್‌ಸೈಟಿನಲ್ಲಿ ಇಂದೀಕರಿಸಲು ಅನುವು ಮಾಡಲಾಗಿದೆ. ಈ ಒಂದು ಸೌಲಭ್ಯದಿಂದ ಗ್ರಾಮೀಣ ಭಾಗದಜನರಿಗೆ ಸಾಕಷ್ಟು ಅನುಕೂಲವಾಗುತ್ತದೆ ಎಂದು ಅವರು ಹೇಳಿದರು.

ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಾ.ರಂಗ ಸ್ವಾಮಿ, ಜಿ.ಪಂ.ಅಧಿಕಾರಿಗಳಾದ ಕುಮಾರ ಮಣ್ಣವಡ್ಡರ, ಮೀಶೆ, ಕೊರವರ, ಜಿಲ್ಲಾ ಬ್ಯಾಂಕ್ ವ್ಯವಸ್ಥಾಪಕ ಅಣ್ಣಯ್ಯ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಸುರೇಶ ಹುಗ್ಗಿ ಇತರರು ಉಪಸ್ಥಿತರಿದ್ದರು.

ಅ.17ರಂದು ವಾಲ್ಮೀಕಿ ಜಯಂತಿ ಆಚರಣೆಗೆ ಸಿದ್ಧತೆ

ಹಾವೇರಿ: ಜಿಲ್ಲಾ ಮಟ್ಟದಲ್ಲಿ ಶ್ರೀಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭ ಅ.17 ರಂದು ಹಾವೇರಿ ನಗರದ ಜಿಲ್ಲಾ ಗುರುಭವನದಲ್ಲಿ ಆಚರಿಸಲಾಗುತ್ತಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ತಿಳಿಸಿದ್ದಾರೆ. ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅ.4 ರಂದು ಜರುಗಿದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸದಂತೆ ಅರ್ಥಪೂರ್ಣ ಜಯಂತಿ ಆಚರಿಸಲಾಗುತ್ತಿದೆ. ಅ.17 ರಂದು ಬೆಳಿಗ್ಗೆ 9 ಗಂಟೆಗೆ ಪುರಸಿದ್ದೇಶ್ವರ ದೇವಸ್ಥಾನದಿಂದ ಶ್ರೀ ಮಹರ್ಷಿ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ಹೊರಡಲಿದೆ. ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಗುರುಭವನದಲ್ಲಿ ವೇದಿಕೆ ಕಾರ್ಯಕ್ರಮ ಜರುಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ.ಜಾತಿಗಳ ಒಳಮೀಸಲಾತಿ ಜಾರಿಗೆ ಬೃಹತ್ ಪ್ರತಿಭಟನೆ

ಧಾರವಾಡ: ಜಿಲ್ಲಾ ಪರಿಶಿಷ್ಟ ಜಾತಿಗಳ ಒಳಮೀಸಲಾತಿ ಜಾರಿ ಹೋರಾಟ ಸಮಿತಿ ಯಿಂದ ಅಕ್ಟೋಬರ್ 16 ರಂದು ಬೃಹತ್ ಪ್ರತಿಭಟನೆಗೆ ನಿರ್ಧಾರ ಮಾಡಲಾಗಿದೆ. ಧಾರವಾಡ ನಗರದ ಕಲಾಭವನದಿಂದ ಜಿಲ್ಲಾಧಿಕಾರಿಗಳ ಕಚೇರಿವರೆಗೂ ಪಾದಯಾತ್ರೆ ಮೂಲಕ ಈ ಹೋರಾಟ ನಡೆಯಲಿದೆ ಎಂದು ಸಮಾಜದ ಮುಖಂಡರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮೀಸಲಾತಿಗಾಗಿ ಹೋರಾಟ ಮಾಡುತ್ತಾ ಬಂದಿದ್ದರೂ, 2023 ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ ಪಕ್ಷವೂ ತನ್ನ ಪ್ರನಾಳಿಕೆಯಲ್ಲಿ, ನ್ಯಾ.ಸದಾಶಿವ ಆಯೋಗದ ವರದಿಯನ್ನು ಯಥಾವತ್ತಾಗಿ ಜಾರಿ ಮಾಡುತ್ತೇವೆ ಎಂದಿದ್ದರು. ಆದರೆ, ಅಧಿಕಾರಕ್ಕೆ ಬಂದ ಮೇಲೆ ಯೂಟರ್ನ ಹೊಡೆಯುವ ಕೆಲಸ ಮಾಡಿದ್ದಾರೆ. ಮೀಸಲಾತಿಗಾಗಿ ಹೋರಾಟ ಮಾಡುತ್ತಾ, ನಮ್ಮ ಹಕ್ಕನ್ನು ನಾವು ಪಡೆಯುವ ಕೆಲಸ ಮಾಡೋಣ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವಿಧ ಬೇಡಿಕೆ ಈಡೇರಿಕೆಗೆ ಪ್ರತಿಭಟನೆ, ಡಿಸಿಗೆ ಮನವಿ

ಹಾವೇರಿ: ಜಿಲ್ಲೆಯ ಗ್ರಾಮ ಪಂಚಾಯತಿ ಅಡಿಯಲ್ಲಿ ತರಬೇತಿ ಪಡೆದ ಸ್ವಚ್ಛ ವಾಹಿನಿ ಡ್ರೈವರ್‌ಗಳನ್ನು ಕೆಲಸಕ್ಕೆ ತಗೆದುಕೊಳ್ಳುವಂತೆ ಒತ್ತಾಯಿಸಿ ವ್ಯವಸಾಯ ವೃತ್ತಿಪರ ಯೂನಿಯನ್ ಅವರು ಸೋಮವಾರ ಡಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ಡಿಸಿ ಅವರಿಗೆ ಮನವಿ ಸಲ್ಲಿಸಿದರು. ಜಿಲ್ಲಾಧ್ಯಕ್ಷ ಶೇಖಪ್ಪ ಶಿವಕ್ಕನವರ ಮಾತನಾಡಿ, ಸ್ವಚ್ಛ ವಾಹಿಸಿ ಕಸ ವಿಲೇವಾರಿ ಡ್ರೈವರ್ ಗಳು ತರಬೇತಿ ಪಡೆದು 2 ವರ್ಷ ಕಳೆದರೂ ಗ್ರಾಮ ಪಂಚಾಯತಿ ಪಿಡಿಒಗಳು ನಿರಂತರ ಕೆಲಸ ನೀಡದೇ ಅನ್ಯಾಯ ಮಾಡುತ್ತಿದ್ದಾರೆ. ಪ್ರತಿ ತಿಂಗಳು ವೇತನವನ್ನು ನೀಡಿಲ್ಲ. ಕಾನೂನು ಬದ್ಧ ವೇತನ ನೀಡಬೇಕು. ಪ್ರತಿ ದಿನ ಕೆಲಸ ಕಲ್ಪಿಸಬೇಕು. ಈ ಸಂದರ್ಭದಲ್ಲಿ ದೀಪಾ ಈಳಿಗೇರ, ಕಾಮಾಕ್ಷಿ ರೇವಣಕರ್,ಕುಮಾರ ಸುಳ್ಳಣ್ಣನವರ,ವಿರೇಶ ಹಲಗೇರಿ,ಚನ್ನಬಸಯ್ಯ ಹಿರೇಮಠ, ನಾಗಪ್ಪ ಮಾಳಗಿ,ಮಂಜುಳಾ ಭರಮಗೌಡ್ರ,ಬಸವಣ್ಣೆಮ್ಮ ಚಲವಾದಿ ಸೇರಿದಂತೆ ನೂರಾರು ಜನರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ **https://gold.samil.in** ನಲ್ಲಿ ಆನ್‌ಲೈನ್ ಮೂಲಕ **18.10.2024** ರಂದು **ಮಧ್ಯಾಹ್ನ 02:00 ರಿಂದ 05:00** ರವರೆಗೆ ನ ನಡುವೆ **ಶ್ರೀರಾಮ್ ಆಟೋಮಾಲ್ ಇಂಡಿಯಾ ಲಿಮಿಟೆಡ್** ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿ ನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು, ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ವಿಫಲವಾದಲ್ಲಿ ಅದನ್ನು **28.10.2024** ರಂದು ಯಾವುದೇ ಸೂಚನೆ ಇಲ್ಲದೆ ಜಿಲ್ಲಾ ಮಟ್ಟದಲ್ಲಿ ನಿಗದಿತ ಜಿಲ್ಲಾ ಕೇಂದ್ರದಲ್ಲಿ ಮರು ಹರಾಜು ಮಾಡಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಆದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಹುಬ್ಬಳ್ಳಿ - ಗೋಕುಲ್ ರಸ್ತೆ ಜಿಎಲ್ - #38ಎ -1, 'ರುಚಿತ್ ಪ್ಲಾಜಾ', 1ನೇ ಮಹಡಿ, ಕೆ ಎಸ್ ಆರ್ ಟಿ ಸಿ ಡಿಪೋ ಹತ್ತಿರ, ಎದುರು. ಜಾವಾ ಶೋ ರೂಮ್, ಗೋಕುಲ್ ರಸ್ತೆ, ಹುಬ್ಬಳ್ಳಿ - 580030. ಕರ್ನಾಟಕ

ಶಾಖೆಯ ಹೆಸರು: ಧಾರವಾಡ-ಉಣಕಲ್ ಜಿಎಲ್. ತಾಲೂಕು - ಹುಬ್ಬಳ್ಳಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL24606067, GL26881094, GL27063267
ಶಾಖೆಯ ಹೆಸರು: ಹುಬ್ಬಳ್ಳಿ-ಕೊಯಿನ್ ರೋಡ್ ಜಿಎಲ್. ತಾಲೂಕು - ಹುಬ್ಬಳ್ಳಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL28012019, GL30180324, GL24875788, GL26350315, GL26498124, GL26532666, GL27766345, GL27952837, GL28409193, GL28386398, GL28416855, GL28531764, GL28682412, GL28746215, GL28762981, GL28823066, GL28845628, GL28963048, GL28980401, GL29534780, GL29549019, GL29932776, GL29920630, GL29963850, GL29933341, GL29987768, GL29975662, GL30002677, GL30011536, GL30092131, GL30041802, GL30652488, GL30768786, GL30983099, GL30990640
ಶಾಖೆಯ ಹೆಸರು: ಹುಬ್ಬಳ್ಳಿ - ಗೋಕುಲ್ ರೋಡ್ ಜಿಎಲ್. ತಾಲೂಕು - ಹುಬ್ಬಳ್ಳಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL28814462, GL29713155, GL29905416, GL29895291, GL30281812, GL30661146, GL30632991, GL30664170, GL32978090
ಶಾಖೆಯ ಹೆಸರು: ಹುಬ್ಬಳ್ಳಿ-ಕಸಬಾಪೇಠ ಮುಖ್ಯ ರೋಡ್ ಜಿಎಲ್. ತಾಲೂಕು - ಹುಬ್ಬಳ್ಳಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL25996210, GL32709801, GL26744529, GL28022821, GL28058516, GL28184471, GL28165645, GL28261927, GL28278127, GL28329653, GL28310807, GL28368989, GL29059166, GL28935882, GL28918524, GL28929227, GL29145777, GL30837571, GL30989895, GL30971081, GL30997856, GL31053350, GL31086925
ಶಾಖೆಯ ಹೆಸರು: ಹುಬ್ಬಳ್ಳಿ-ಕೇಶ್ವಾಪುರ ಜಿಆಎಚ್. ತಾಲೂಕು - ಹುಬ್ಬಳ್ಳಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL24676291, GL28764505, GL25373838, GL25529009, GL25733460, GL25817833, GL26102530, GL26375279, GL26477207, GL27128530, GL27405636, GL28283961, GL27441788, GL27607286, GL27819375, GL28142018, GL28225037, GL29058973, GL29106639, GL29336191, GL29368943, GL29395307, GL29678394, GL29700226, GL29896307, GL31092773, GL29995631, GL30097161, GL30224344, GL30223640, GL30439229, GL30672398, GL30782964, GL31140583
ಶಾಖೆಯ ಹೆಸರು: ಹುಬ್ಬಳ್ಳಿ-ಕೇಶ್ವಾಪುರ ಜಿಎಲ್. ತಾಲೂಕು - ಹುಬ್ಬಳ್ಳಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL21803773, GL25594827, GL32797203, GL28005834, GL29145797, GL29234507, GL29913909, GL29931046, GL30785576, GL30801774, GL30941708, GL30953144

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.
ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 15.10.2024
ಸ್ಥಳ: ಧಾರವಾಡ
ಎಸ್‌ಡಿ/-
ಅಧಿಕೃತಸಹಿ
ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್

CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ **https://gold.samil.in** ನಲ್ಲಿ ಆನ್‌ಲೈನ್ ಮೂಲಕ **18.10.2024** ರಂದು **ಮಧ್ಯಾಹ್ನ 02:00 ರಿಂದ 05:00** ರವರೆಗೆ ನ ನಡುವೆ **ಶ್ರೀರಾಮ್ ಆಟೋಮಾಲ್ ಇಂಡಿಯಾ ಲಿಮಿಟೆಡ್** ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು, ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ವಿಫಲವಾದಲ್ಲಿ ಅದನ್ನು **28.10.2024** ರಂದು ಯಾವುದೇ ಸೂಚನೆ ಇಲ್ಲದೆ ಜಿಲ್ಲಾ ಮಟ್ಟದಲ್ಲಿ ನಿಗದಿತ ಜಿಲ್ಲಾ ಕೇಂದ್ರದಲ್ಲಿ ಮರು ಹರಾಜು ಮಾಡಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಆದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಫೆಲ್ಲಿಎಫಿಫೆಈ ಎಡಿ - #2228-ಎ 1-1, 'ಚಕ್ರಸಾಲಿ ಕಟ್ಟಡ' ನೆಲ ಮಹಡಿ, ಸೌದತ್ತಿ ರಸ್ತೆ, ನರಗುಂದ ಪಟ್ಟಣ - ತಾಲೂಕು, ಗದಗ ಜಿಲ್ಲೆ, ನರಗುಂದ - 582207. ಕರ್ನಾಟಕ

ಶಾಖೆಯ ಹೆಸರು: ಗದಗ-ಮುಂಡರಗಿ ಜಿಎಲ್. ತಾಲೂಕು - ಮುಂಡರಗಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL19434615, GL32681075, GL24900640, GL25001503, GL28919754, GL25087096, GL25841085, GL32654833, GL27651711, GL27779590, GL27756439, GL28096951, GL28121536, GL28278818, GL28259417, GL28984334, GL29002602, GL29090961, GL29099783, GL29181028, GL29156029, GL30113658, GL30091745, GL30164508, GL30149724, GL30214319, GL30203406, GL30257945, GL30250377, GL30611926, GL30283196, GL30293185, GL30294924, GL30286221, GL30429687, GL30663068, GL30590530, GL30622847, GL30660249, GL30639399, GL30806234, GL30825267, GL30890475, GL31304218, GL32821058
ಶಾಖೆಯ ಹೆಸರು: ಗದಗ-ಸ್ಟೇಷನ್ ರೋಡ್ ಜಿಎಲ್. ತಾಲೂಕು - ಗದಗ
ಚಿನ್ನದ ಸಾಲದ ಖಾತೆ ಸಂಖ್ಯೆ: GL23407240, GL29055443, GL28312382, GL28329902, GL29053109, GL29026194, GL29151114, GL29135890, GL29143779, GL29196613, GL29182040, GL29445358, GL29451795, GL29529355, GL29549183, GL29850613, GL29914030, GL29836535, GL29857855, GL29875601, GL29923604, GL29985628, GL29971523, GL29981021, GL29985282, GL30389397, GL30518824, GL30522587, GL30620348, GL30628717, GL30717013, GL30697666, GL30913109
ಶಾಖೆಯ ಹೆಸರು: ಕೊಪ್ಪಳ-ಕುಕನೂರು ಜಿಎಲ್. ತಾಲೂಕು - ಯಲ್ಬುರ್ಗಾ
ಚಿನ್ನದ ಸಾಲದ ಖಾತೆ ಸಂಖ್ಯೆ: GL31186822, GL31382003, GL24771746, GL26883973, GL32504507, GL26956666, GL27756163, GL27779564, GL27901402, GL27881709, GL28883217, GL28903336, GL28929412, GL28919783, GL28962164, GL28980266, GL29763062, GL29772212, GL30865935, GL29851736, GL29875314, GL29947326, GL29962612, GL30003065, GL30012067, GL30536778, GL30644256, GL30661954, GL30772941, GL30764961, GL30770352, GL30839288, GL30927095, GL30908562, GL30967224, GL30954202, GL30962857, GL30971338, GL30991852, GL31014311, GL30997167, GL31028468, GL31033207, GL31089303, GL31132181, GL31132454
ಶಾಖೆಯ ಹೆಸರು: ನರಗುಂದ-ನರಗುಂದ ಜಿಎಲ್. ತಾಲೂಕು - ನರಗುಂದ
ಚಿನ್ನದ ಸಾಲದ ಖಾತೆ ಸಂಖ್ಯೆ: GL23509441, GL24378425, GL24452916, GL25554154, GL25716529, GL25760891, GL32367152, GL26472479, GL26985082, GL27561847, GL27586554, GL27833479, GL27815499, GL28684024, GL28697687, GL28728782, GL29032130, GL29052592, GL29037190, GL29108095, GL29107531, GL29125062, GL29132381, GL29253096, GL29246942, GL29775369, GL29907301, GL29884393, GL30488416, GL30732486, GL30764617, GL30838762, GL30855217, GL30846890, GL30872853, GL30862037, GL31018193, GL31049489, GL31060479

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.
ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 15.10.2024
ಸ್ಥಳ: ಗದಗ
ಎಸ್‌ಡಿ/-
ಅಧಿಕೃತಸಹಿ
ಐಐಎಫ್ಎಲ್ ಫೈನಾನ್ಸ್ ಲಿಮಿಟೆಡ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪುಟ ತೆರೆದಂತೆ...

ಅತಿಯಾದ ಆತ್ಮವಿಶ್ವಾಸ ಕಂಟಕವಾದೀತು!
ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ಸಂ.ಪುಟ | 6

ಬಹುಕೋಟಿ ಡಾಲರ್ ವ್ಯವಹಾರದ ಗೇಮಿಂಗ್!
ವಿಶ್ವರಂಗ
ರಂಗಸ್ವಾಮಿ ಮೂಕನಹಳ್ಳಿ
ಸಂ.ಗಡು | 7

ಮರಳಿ ಕಾಡಿಗೆ ತೆರಳಿದ ದಸರೆ ಆನೆಗಳು

ಮೈಸೂರು ದಸರಾ ಜಂಬೂಸವಾರಿಯಲ್ಲಿ ಪಾಲ್ಗೊಂಡ ಗಜಪಡೆಗೆ ಸೋಮವಾರ ಇಲ್ಲಿನ ಅರಮನೆ ಆವರಣದಿಂದ ಬೀಳ್ಕೊಡಲಾಯಿತು. ಅಭಿಮನ್ಯು ನೇತೃತ್ವದ 13 ಆನೆಗಳು ಒಟ್ಟಿಗೆ ಸೊಂಡಿಲನ್ನೆತ್ತಿ ಕೃತಜ್ಞತೆ ಸಲ್ಲಿಸುತ್ತ ನಾಡಿನಿಂದ ಮತ್ತೆ ಕಾಡಿನತ್ತ ಹೊರಟವು. ಆನೆಗಳ ನಿರ್ಗಮನ ಕಂಡು ಜನರು ಭಾವುಕರಾದರು.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ನಟ ದರ್ಶನ್ ಹಾಗೂ ಗೆಳತಿ ಪವಿತ್ರಾಗೌಡಗೆ ಜಾಮೀನು ನಿರಾಕರಿಸಿರುವ ನ್ಯಾಯಾಲಯ, ಬಹುಕೋಟಿ ಹಗರಣದ ಆರೋಪಿ ಮಾಜಿ ಸಚಿವ ಬಿ.ನಾಗೇಂದ್ರಗೆ ಜಾಮೀನು ಮಂಜೂರು ಮಾಡಿದೆ. ಇದೇ ವೇಳೆ ಶಾಸಕ ಮುನಿರತ್ನ ವಿರುದ್ಧದ ಅತ್ಯಾಚಾರ ಪ್ರಕರಣದಲ್ಲಿನ ಮೂವರು ಆರೋಪಿಗಳಿಗೆ ನಿರೀಕ್ಷಣಾ ಜಾಮೀನು ಮಂಜೂರಾಗಿದ್ದು, ಬ್ಲ್ಯಾಕ್‌ಮೇಲ್ ಆರೋಪ ಸಂಬಂಧ ಎಫ್‌ಐಆರ್ ರದ್ದತಿ ಕೋರಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಹೈಕೋರ್ಟ್ ಮುಂದೂಡಿದೆ.

ದಚ್ಚುಗಿಲ್ಲ ಜಾಮೀನು, ನಾಗೇಂದ್ರಗೆ ಜಾಮೂನು

ದರ್ಶನ್, ಪವಿತ್ರಾಗೆ ಜಾಮೀನು ನಕಾರ | ಶಾಸಕ ನಾಗೇಂದ್ರ ಇಂದು ಬಿಡುಗಡೆ ಸಾಧ್ಯತೆ

ಮುನಿಟ್ರ್ಯಾಪ್: ಮೂವರಿಗೆ ನಿರೀಕ್ಷಣಾ ಜಾಮೀನು | ಹೈಕೋರ್ಟ್ ಮೆಟ್ಟಿಲೇರಿದ ಎಚ್ಡಿಕೆ

ದರ್ಶನ್, ಪವಿತ್ರಾಗೆ ಜೈಲೇ ಗತಿ

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್, ಪವಿತ್ರಾ ಗೌಡ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಾಲಯ ವಜಾಗೊಳಿಸಿದೆ.

ಸರಕಾರದ ಅಭಿಯೋಜಕ ಎಸ್‌ಪಿಪಿ ಪ್ರಸನ್ನಕುಮಾರ್ ಹಾಗೂ ದರ್ಶನ್ ಪರ ವಕೀಲ ಸಿ.ವಿ.ನಾಗೇಶ್ ಅವರ ಸುದೀರ್ಘ ವಾದ-ಪ್ರತಿವಾದ ಆಲಿಸಿದ್ದ 57ನೇ ಸಿಸಿಎಚ್ ನ್ಯಾಯಾಲಯದ ನ್ಯಾ.ಜೈಶಂಕರ್ ಅವರು ತೀರ್ಪು ಕಾಯ್ದಿರಿಸಿದ್ದರು. ಸೋಮವಾರ ತೀರ್ಪು ಪ್ರಕಟವಾಗಿದ್ದು, ಆರೋಪಿಗಳಾದ ದರ್ಶನ್ ಮತ್ತು ಪವಿತ್ರಾ ಗೌಡ, ನಾಗರಾಜ್, ಲಕ್ಷ್ಮಣ್‌ಗೆ ಜಾಮೀನು ಮಂಜೂರಾಗಿಲ್ಲ. ಆದರೆ ಪ್ರಕರಣದಲ್ಲಿದ್ದ ರವಿಶಂಕರ್ ಮತ್ತು ದೀಪಕ್‌ಗೆ ಜಾಮೀನು ನೀಡಿ ಕೋರ್ಟ್ ಆದೇಶ ನೀಡಿದೆ.

ರೇಣುಕಾಸ್ವಾಮಿ ಕೊಲೆ ಆರೋಪದ ಮೇಲೆ ಜೂನ್ 11ರಂದು ದರ್ಶನ್ ಹಾಗೂ ಇತರರನ್ನು ಬಂಧಿಸಲಾಗಿತ್ತು. ಸದ್ಯ ದರ್ಶನ್ ಬಳ್ಳಾರಿ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದು, ಈಗಾಗಲೇ 100ಕ್ಕೂ ಹೆಚ್ಚು ದಿನಗಳನ್ನು ಜೈಲಲ್ಲಿ ಕಳೆದಿದ್ದಾರೆ.

ಸೆಪ್ಟೆಂಬರ್ 21ರಂದು ಜಾಮೀನು ಅರ್ಜಿ ಸಲ್ಲಿಸಲಾಗಿತ್ತು. ಪ್ರಾಸಿಕ್ಯೂಷನ್ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಪ್ರಸನ್ನಕುಮಾರ್ ವಾದ ಮಂಡಿಸಿದ್ದಾರೆ. ದರ್ಶನ್ ಪರ ವಕೀಲ ಸಿ.ವಿ.ನಾಗೇಶ್ ಹಾಗೂ ಪವಿತ್ರಾ ಗೌಡ ಪರವಾಗಿ ವಕೀಲ ಟಾಮಿ ಸೆಬಾಸ್ಟಿಯನ್ ವಾದಿಸಿದ್ದರು.

ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿದ್ದ ದರ್ಶನ್ ಅವರಿಗೆ ವಿಶೇಷ ಸೌಲಭ್ಯ ನೀಡಿದ ಆರೋಪ ಕೇಳಿಬಂದಿತ್ತು. ಈ ಹಿನ್ನೆಲೆಯಲ್ಲಿ ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ವರ್ಗ ಮಾಡಲಾಗಿತ್ತು. ಜತೆಗೆ ಪವಿತ್ರಾ ಗೌಡ ಮತ್ತು ಕೆಲವರನ್ನು ಪರಪ್ಪನ ಅಗ್ರಹಾರದಲ್ಲಿ ಉಳಿಸಿಕೊಂಡು, ಇನ್ನಿತರ ಆರೋಪಿಗಳನ್ನು ರಾಜ್ಯದ ವಿವಿಧ ಜೈಲುಗಳಿಗೆ ಸ್ಥಳಾಂತರಿಸಲಾಗಿತ್ತು.

ಈ ಮೊದಲು ನಡೆದ ಜಾಮೀನು ಅರ್ಜಿ ವಿಚಾರಣೆ ವೇಳೆ ದರ್ಶನ್ ವಿರುದ್ಧ ಸಾಂದರ್ಭಿಕ ಸಾಕ್ಷಿ ಸೃಷ್ಟಿಸಲಾಗಿದೆ. ಹತ್ಯೆ ಸ್ಥಳದಲ್ಲಿ ನೈಲಾನ್ ಹಗ್ಗ, ಮರದ ಕೊಂಬೆ, ಸ್ಟೋನಿ ಬ್ರೂಕ್ ಪಬ್ ಹೆಸರಿನ ನೀರಿನ ಬಾಟಲಿ ಮಹಜರು ಮಾಡಿರುವುದಾಗಿ ಪೊಲೀಸರು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಿದ್ದಾರೆ ಎಂದು ಶುಕ್ರವಾರ ನಾಗೇಶ್ ವಾದಿಸಿದ್ದರು. ಆದರೆ ಸರಕಾರಿ ವಿಶೇಷ ಅಭಿಯೋಜಕ ಪ್ರಸನ್ನ ಕುಮಾರ್ ಅವರು ರೇಣುಕಾಸ್ವಾಮಿ ಕೊಲೆ ಪ್ರಕರಣ ತನಿಖೆ ಅತ್ಯುತ್ತಮ ಎಂದು ನ್ಯಾಯಾಲಯಕ್ಕೆ ತಿಳಿಸಿದ್ದರು.

ಮೂರು ತಿಂಗಳ ಬಳಿಕ ನಾಗೇಂದ್ರಗೆ ಜಾಮೀನು

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದದಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಗರಣದ ಆರೋಪಿಯಾಗಿರುವ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಮೂರು ತಿಂಗಳ ಹಿಂದೆ ಅಕ್ರಮ ಹಣ ವರ್ಗಾವಣೆ ಆರೋಪದಡಿ ಬಂಧಿತರಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ನಾಗೇಂದ್ರ ಅವರಿಗೆ ಎರಡು ಲಕ್ಷ ರುಪಾಯಿ, ಇಬ್ಬರ ಭದ್ರತೆ ಹಾಗೂ ಸಾಕ್ಷ್ಯ ನಾಶಪಡಿಸದಂತೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ಜೈಲಾಧಿಕಾರಿಗಳು ಆದೇಶ ಪ್ರತಿ ದೊರೆತ ಬಳಿಕ ಬಿಡುಗಡೆ ಪ್ರಕ್ರಿಯೆ ನಡೆಸಲಿದ್ದು, ಮಂಗಳವಾರ ಬಿಡುಗಡೆಯಾಗುವ ಸಾಧ್ಯತೆಯಿದೆ.

ನಿಗಮದಲ್ಲಿ ನಡೆದಿರುವ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿತರಾದ ಮಾಜಿ ಸಚಿವ ಬಿ.ನಾಗೇಂದ್ರ ವಿರುದ್ಧ ಜಾರಿ ನಿರ್ದೇಶನಾಲಯ (ಇಡಿ) ಚಾರ್ಜ್‌ಶೀಟ್ ಅನ್ನು ನ್ಯಾಯಾಲಯಕ್ಕೆ ಸಲ್ಲಿಸಿತ್ತು. ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ನಾಗೇಂದ್ರ, ಸೇರಿದಂತೆ ಇತರ ಆರೋಪಿಗಳ ಪಾತ್ರ ಹಾಗೂ ವಾಲ್ಮೀಕಿ ನಿಗಮದಲ್ಲಿ ಬಹುಕೋಟಿ ಹಣದ ದುರ್ಬಳಕೆ ಕುರಿತಂತೆ ತನಿಖಾ ವರದಿ ಅಧಿಕಾರಿಗಳು ಸಲ್ಲಿಸಿದ್ದು, ನ್ಯಾಯಾಲಯದಿಂದ ಸ್ವೀಕೃತವಾಗಿರುವುದಾಗಿ ಪ್ರಕಟಣೆಯಲ್ಲಿ ಇಡಿ ತಿಳಿಸಿತ್ತು.

ಮುನಿ ಸಹಚರರಿಗೆ ರಿಲೀಫ್

ಲೈಂಗಿಕ ಕಿರುಕುಳ ಆರೋಪ ಪ್ರಕರಣದ ಸಂಬಂಧ ಎ1 ಆರೋಪಿ ಶಾಸಕ ಮುನಿರತ್ನ ಹೊರತುಪಡಿಸಿ ಉಳಿದ ಮೂವರಿಗೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಸೋಮವಾರ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂತೋಷ್ ಗಜಾನನ ಭಟ್ ಅವರು, ಆರೋಪಿಗಳಾದ ಲೋಹಿತ್, ಕಿರಣ್ ಮತ್ತು ಮಂಜುನಾಥ್‌ಗೆ ಜಾಮೀನು ಮಂಜೂರು ಮಾಡಿದರು. ಸಮಾಜ ಸೇವಕಿಯಾಗಿ ಗುರುತಿಸಿಕೊಂಡು ಬಿಜೆಪಿಯಲ್ಲೂ ಸಕ್ರಿಯವಾಗಿದ್ದ ರಾಜರಾಜೇಶ್ವರಿ ನಗರದ ಸುಮಾರು 40 ವರ್ಷದ ಮಹಿಳೆಯ ದೂರಿನ ಆಧಾರದ ಮೇಲೆ ಕಗ್ಗಲೀಪುರ ಠಾಣೆಯಲ್ಲಿ ಶಾಸಕ ಮುನಿರತ್ನ ಸೇರಿದಂತೆ ಇತರರ ಮೇಲೆ ಎಫ್‌ಐಆರ್ ದಾಖಲಾಗಿತ್ತು.

ಎಚ್‌ಡಿಕೆ ಅರ್ಜಿ 21ಕ್ಕೆ ಮುಂದೂಡಿಕೆ

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಿರುದ್ಧದ ಬ್ಲ್ಯಾಕ್‌ಮೇಲ್ ಎಫ್‌ಐಆರ್ ರದ್ದು ಕೋರಿರುವ ಪ್ರಕರಣದ ವಿಚಾರಣೆಯನ್ನು ಹೈಕೋರ್ಟ್ ಅ.21ಕ್ಕೆ ಮುಂದೂಡಿದೆ. ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ಹೇಮಂತ್ ಚಂದನಗೌಡರ್ ಅವರ ಪೀಠ ವಿಚಾರಣೆ ಮುಂದೂಡಿದೆ.



ಉದ್ಯಮಿ ವಿಜಯ್ ಟಾಟಾಗೆ ಬೆದರಿಕೆ ಪ್ರಕರಣದಲ್ಲಿ ಕೇಂದ್ರ ಸಚಿವ ಎಚ್. ಡಿ. ಕುಮಾರಸ್ವಾಮಿ ಮತ್ತು ಎಂಎಲ್‌ಸಿ ರಮೇಶ್ ಗೌಡ ವಿರುದ್ಧ ಬೆಂಗಳೂರಿನ ಅಮೃತಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.

ನಿಖಿಲ್ ಕುಮಾರಸ್ವಾಮಿಯನ್ನು ಚನ್ನಪಟ್ಟಣ ಉಪ ಚುನಾವಣೆಗೆ ನಿಲ್ಲಿಸುತ್ತಿದ್ದೇನೆ. 50 ಕೋಟಿ ರು. ಕೊಡದೇ ಇದ್ದರೆ ನಿಮ್ಮ ಯೋಜನೆಗಳನ್ನು ಸಂಪೂರ್ಣ ಮಾಡಲು ಬಿಡುವುದಿಲ್ಲ ಎಂದು ಎಚ್.ಡಿ.ಕುಮಾರಸ್ವಾಮಿ ಬೆದರಿಕೆ ಹಾಕಿದ್ದರು ಎಂದು ವಿಜಯ್ ಟಾಟಾ ದೂರು ನೀಡಿದ್ದರು.

ಈ ಸಂಬಂಧ ಜೀವ ಬೆದರಿಕೆ ಮತ್ತು ಸುಲಿಗೆ ಯತ್ನ ಆರೋಪದಡಿ ಎಂದು ಪೊಲೀಸರು ಪ್ರಕರಣ ದಾಖಲಿಸಿದ್ದರು. ಈ ಎಫ್‌ಐಆರ್ ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಲಾಗಿದೆ.

ದಾರಿದೀಪೋಕ್ತಿ

ಬೆಳಗ್ಗೆ ಎದ್ದ ತಕ್ಷಣ ಯೋಚಿಸುವ ಒಂದು ಸಕಾರಾತ್ಮಕ ಚಿಂತನೆ, ಆ ನಿಟ್ಟಿನಲ್ಲಿ ತೆಗೆದುಕೊಳ್ಳುವ ಒಂದು ನಿರ್ಧಾರ, ಇಡೀ ದಿನವನ್ನು ಅತ್ಯಂತ ಫಲದಾಯಕವಾಗಿ ಪರಿವರ್ತಿಸಬಲ್ಲುದು. ಬೆಳಗಿನ ಉತ್ತಮ ಯೋಚನೆ ಆ ದಿನವನ್ನು ಸಾರ್ಥಕವಾಗಿಸಬಲ್ಲುದು.

ವಕ್ರತುಂಡೋಕ್ತಿ

ಪ್ರಾಣಿ ಮತ್ತು ಮನುಷ್ಯರು ಬೇರೆ ಅಲ್ಲ. ಹುಲಿ ಮತ್ತು ಹೆಂಡತಿಯನ್ನು ಯಾವತ್ತೂ ಕೆಣಕಬಾರದು.

ಕರೋನಾ ಲಸಿಕೆ ವಿರುದ್ಧ ಪಿಐಎಲ್ ವಜಾ

ದೆಹಲಿ: ಕೋವಿಡ್-19 ನಿಗ್ರಹಕ್ಕೆ ಲಸಿಕೆ ಪಡೆದವರಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಮತ್ತಿತರ ಆರೋಗ್ಯ ಸಮಸ್ಯೆ, ಅಡ್ಡ ಪರಿಣಾಮ ಕಾಣಿಸಿಕೊಂಡಿವೆ ಎಂದು ಆರೋಪಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್)ಯನ್ನು ಸುಪ್ರೀಂಕೋರ್ಟ್ ಸೋಮವಾರ ವಜಾಗೊಳಿಸಿದ್ದು, 'ಕೇವಲ ಸಂಚಲನ ಮೂಡಿಸಲೆಂದೇ ಅರ್ಜಿ ಸಲ್ಲಿಸಲಾಗಿದೆ' ಎಂದು ಅರ್ಜಿದಾರ ರಿಗೆ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾ.ಜೆ.ಬಿ.ಪರದಿವಾಲಾ ಮತ್ತು ನ್ಯಾ. ಮನೋಜ್ ಮಿಶ್ರಾ, ಅವರ ಪೀಠ ಛೀಮಾರಿ ಹಾಕಿದೆ.

ಮೂವರಿಗೆ ಅರ್ಥಶಾಸ್ತ್ರ ನೊಬೆಲ್ ಪ್ರಶಸ್ತಿ

ಸ್ಟಾಕ್‌ಹೋಮ್: ಸ್ವೀಡನ್‌ನ 'ರಾಯಲ್ ಸ್ವೀಡಿಷ್ ಅಕಾಡೆಮಿ ಆಫ್ ಸೈನ್ಸಸ್' ಸಂಸ್ಥೆಯಿಂದ ವಿಜ್ಞಾನಿ ದಿ.ಆಲ್ಫ್ರೆಡ್ ನೊಬೆಲ್ ಸ್ಮರಣಾರ್ಥ ನೀಡಲಾಗುವ ನೊಬೆಲ್ ಪ್ರಶಸ್ತಿಗಳಲ್ಲಿ ಅರ್ಥಶಾಸ್ತ್ರ ಅಧ್ಯಯನಕ್ಕೆ ನೀಡಲಾಗುವ ಪ್ರಶಸ್ತಿಯು ಈ ಬಾರಿ ಡರೋನ್ ಏಸ್‌ಮೊಗ್ಲು, ಸೈಮನ್ ಜಾನ್ಸನ್ ಮತ್ತು ಜೇಮ್ಸ್ ಎ.ರಾಬಿನ್ಸನ್ ಅವರಿಗೆ ಒಲಿದಿದೆ. ಅಮೆರಿಕ ಮೂಲದ ಮೂವರು ಅರ್ಥಶಾಸ್ತ್ರಜ್ಞರು 'ದೇಶದ ಏಳಿಗೆಯಲ್ಲಿ ಸಾಮಾಜಿಕ ಸಂಸ್ಥೆಗಳ ಪಾತ್ರ ಕುರಿತು ನಡೆಸಿದ ಅಧ್ಯಯನಕ್ಕೆ ಈ ಬಾರಿಯ ನೊಬೆಲ್ ಪ್ರಶಸ್ತಿ ಸಂದಿದೆ.

ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆ

ಬೆಂಗಳೂರು: ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಯಲಹಂಕ ಸಮೀಪದ ಸಿಂಗನಾಯಕನಹಳ್ಳಿಯ ಯಡಿಯೂರಪ್ಪ ನಗರದ ಅವಿನಾಶ್ (33), ಪತ್ನಿ ಮಮತಾ(30), ಮಕ್ಕಳಾದ ಅಧೀಯ (5) ಮತ್ತು ಅನಯಾ (3) ಮೃತರು. ಇಬ್ಬರು ಮಕ್ಕಳನ್ನು ತಾಯಿಯೇ ಕತ್ತು ಹಿಸುಕಿ ಸಾಯಿಸಿದ್ದಾರೆ. ಮನೆಗೆ ಬಂದ ಗಂಡ ಅವಿನಾಶ್, ಹೆಂಡತಿ, ಇಬ್ಬರು ಮಕ್ಕಳು ಜೀವ ಬಿಟ್ಟಿರುವುದನ್ನು ನೋಡಿ, ನಂತರ ಆತನೂ ಸಾವಿಗೆ ಶರಣಾಗಿದ್ದಾನೆ. ಮೃತರು ಕಲಬುರಗಿ ಮೂಲದವರೆಂಬುದು ತಿಳಿದುಬಂದಿದೆ.

ಕಾಶ್ಮೀರದಲ್ಲಿ ರಾಷ್ಟ್ರಪತಿ ಆಡಳಿತ ಅಂತ್ಯ

ಶ್ರೀನಗರ: ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರದಲ್ಲಿ ಸದ್ಯ ಜಾರಿಯಲ್ಲಿದ್ದ ರಾಷ್ಟ್ರಪತಿ ಆಳ್ವಿಕೆ ಭಾನುವಾರ ಕೊನೆಗೊಂಡಿದೆ. ಇದರೊಟ್ಟಿಗೇ ಚುನಾಯಿತ ಸರಕಾರ ರಚನೆಗೆ ಅವಕಾಶ ಮಾಡಿಕೊಡಲಾಗಿದೆ. ಕೇಂದ್ರ ಗೃಹ ಸಚಿವಾಲಯ ಈ ಕುರಿತು ಅಧಿಸೂಚನೆ ಹೊರಡಿಸಿದೆ. ನ್ಯಾಷನಲ್ ಕಾನ್ಫರೆನ್ಸ್-ಕಾಂಗ್ರೆಸ್ ಮೈತ್ರಿಕೂಟ ಚುನಾವಣೆ ಜಯಿಸಿ ಸರಕಾರ ರಚನೆಗೆ ಸಜ್ಜಾಗಿದೆ. ಎನ್‌ಸಿ ಪಕ್ಷದ ಒಮರ್ ಅಬ್ದುಲ್ಲಾ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದು, ಸಿಎಂ ಆಗಿ ಸದ್ಯದಲ್ಲೇ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಮುಂದಿನ 15 ದಿನ ವಿವಿಧ ಜಿಲ್ಲೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

ರಾಜ್ಯ ಪ್ರವಾಸ ಆರಂಭಿಸಿದ ಸಿಎಂ

ಬೆಂಗಳೂರು: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರಯತ್ನಿಸಿದ್ದ ಪ್ರತಿಪಕ್ಷಗಳಿಗೆ ಸಡ್ಡು ಹೊಡೆದು, ಸಿದ್ದರಾಮಯ್ಯ ಅವರು ರಾಜ್ಯಾದ್ಯಂತ ಪ್ರವಾಸ ಆರಂಭಿಸಿದ್ದಾರೆ. ಈ ಪ್ರವಾಸದ ಮೂಲಕ ರಾಜ್ಯದಲ್ಲಿ ಪಕ್ಷ ಸಂಘಟನೆಯ ಜತೆಜತೆಗೆ ಪ್ರತಿಪಕ್ಷಗಳಿಗೆ ಸ್ಪಷ್ಟ ಸಂದೇಶ ರವಾನಿಸಲು ಸಿದ್ಧತೆ ನಡೆಸಿದ್ದಾರೆ.

ರಾಜ್ಯ ಸರಕಾರದ ವಿರುದ್ಧ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಪ್ರತಿಪಕ್ಷಗಳಿಗೆ ಸ್ಪಷ್ಟ ಸಂದೇಶ ರವಾನಿಸುವ ಹಾಗೂ ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ಕಾಂಗ್ರೆಸ್ ಸರಕಾರದ ಅಭಿವೃದ್ಧಿ ಯೋಜನೆಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಈ ರಾಜ್ಯ ಪ್ರವಾಸ ಆರಂಭಿಸಿದ್ದಾರೆ. ಈ ಬಗ್ಗೆ ಅಧಿಕೃತವಾಗಿ ಮುಖ್ಯಮಂತ್ರಿಗಳ ಕಚೇರಿ ಮಾಹಿತಿ ನೀಡದಿದ್ದರೂ, ಕಳೆದೊಂದು ವಾರದಿಂದ ಸಿದ್ದರಾಮಯ್ಯ ಅವರ ಪ್ರವಾಸ ಪಟ್ಟಿ ಹಾಗೂ ಮುಂದಿನ ಒಂದು ವಾರದ ಪಟ್ಟಿಯನ್ನು ಗಮನಿಸಿದರೆ ರಾಜ್ಯ ಪ್ರವಾಸ ಆರಂಭಿಸಿರುವುದು ಸ್ಪಷ್ಟವಾಗುತ್ತದೆ.

ಈ ಪ್ರವಾಸದ ವೇಳೆ ಜಿಲ್ಲಾ ವ್ಯಾಪ್ತಿಯಲ್ಲಿ ವಿವಿಧ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವರಿಗೆ ಹಾಗೂ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇದರೊಂದಿಗೆ ಬಿಜೆಪಿ-ಜೆಡಿಎಸ್ ಸರಕಾರದ ಹಾಗೂ ಪಕ್ಷದ ವಿರುದ್ಧ ಮಾಡುತ್ತಿರುವ ಆರೋಪಗಳಿಗೆ ಪ್ರತ್ಯುತ್ತರ ನೀಡಲು ವೇದಿಕೆಯನ್ನು ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ಪ್ರವಾಸದ ಬಹುತೇಕ ಕಡೆ ಕೆಪಿಸಿಸಿ ಅಧ್ಯಕ್ಷ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕೂಡ ಭಾಗವಹಿಸಲಿದ್ದು, ಆ ಮೂಲಕ ಒಗ್ಗಟ್ಟಿನ ಮಂತ್ರ ಜಪಿಸಲಿದ್ದಾರೆ.

ಅಭಿವೃದ್ಧಿಗೆ ವೇಗ: ಕಳೆದ ಬಜೆಟ್ ಘೋಷಣೆಯ ಹಲವು ಯೋಜನೆಗಳಿಗೆ ಚಾಲನೆ ನೀಡಲಾಗುತ್ತಿದೆ. ಇದರೊಂದಿಗೆ ಜಿಲ್ಲಾ ವ್ಯಾಪ್ತಿಯಲ್ಲಿ ಹೊಸದಾಗಿ ಕೇಳಿಬರುತ್ತಿರುವ ಬೇಡಿಕೆಗಳಿಗೆ ಸ್ಪಂದಿಸುವ ಕಾರ್ಯಕ್ಕೆ ಮುಖ್ಯಮಂತ್ರಿಗಳು ಮುಂದಾಗಿದ್ದಾರೆ. ಈ ಮೂಲಕ ಪಕ್ಷದ ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದರೊಂದಿಗೆ, ಅಭಿವೃದ್ಧಿಗೂ ವೇಗ ನೀಡುವ ಲೆಕ್ಕಾಚಾರದಲ್ಲಿ ಸಿದ್ದರಾಮಯ್ಯ ಇದ್ದಾರೆ ಎಂದು ಮೂಲಗಳು ತಿಳಿಸಿವೆ.

ಉಪಚುನಾವಣೆ ತಯಾರಿ: ಮುಂದಿನ 10ರಿಂದ 12 ದಿನಗಳಲ್ಲಿ ಚನ್ನಪಟ್ಟಣ, ಶಿಗ್ಗಾವಿ, ಸಂಡೂರಿಗೆ ಉಪಚುನಾವಣೆ ಘೋಷಣೆಯಾಗುವ ಸಾಧ್ಯತೆಯಿದೆ. ಆದ್ದರಿಂದ ಸಿಎಂ ಸಿದ್ದರಾಮಯ್ಯ ಅವರು ತಮ್ಮ ಪ್ರವಾಸದಲ್ಲಿ ಈ ಕ್ಷೇತ್ರಗಳಿಗೂ ಹೊಂದಿಕೊಂಡಂತೆ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಈ ಮೂಲಕ ಸರಕಾರಿ ಕಾರ್ಯಕ್ರಮಗಳ ಜತೆಜತೆಗೆ ಉಪಚುನಾವಣಾ ತಯಾರಿ ಆರಂಭಿಸಿದ್ದಾರೆ.

ಜಿಲ್ಲಾ ಪ್ರವಾಸದ ಪಟ್ಟಿ ಸಿದ್ಧ

ಈಗಾಗಲೇ ದಸರಾ ಸಮಯದಲ್ಲಿ ಹಳೇ ಮೈಸೂರು ಭಾಗದ ವಿವಿಧ ಭಾಗಗಳಿಗೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಭಾಗದ ವಿವಿಧ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸೋಮವಾರ ಬಳ್ಳಾರಿ ಜಿಲ್ಲೆಗೆ ಭೇಟಿ ನೀಡಿದ್ದಾರೆ. ಮಂಗಳವಾರ ಹಾಗೂ ಬುಧವಾರ ಬೆಂಗಳೂರಿನಲ್ಲಿಯೇ ಇರುವ ಸಿದ್ದರಾಮಯ್ಯ ಅವರು ಗುರುವಾರದ ಬಳಿಕ ಮತ್ತೆ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಲಿದ್ದಾರೆ. ಈಗಾಗಲೇ ಜಿಲ್ಲಾವಾರು ಪಟ್ಟಿ ಸಿದ್ಧಪಡಿಸಲಾಗಿದೆ.

ಸಂಪುಟ ಸಭೆ 25ಕ್ಕೆ ಮುಂದೂಡಿಕೆ

ಈ ಗುರುವಾರ (ಸೆ.18)ಕ್ಕೆ ಸಚಿವ ಸಂಪುಟ ಸಭೆ ನಿಗದಿಪಡಿಸಲಾಗಿತ್ತು. ಈ ವೇಳೆ ಜಾತಿಗಣತಿ ಬಗ್ಗೆ ತೀರ್ಮಾನ ಕೈಗೊಳ್ಳುವ ಮಾತುಗಳನ್ನು ಸಿಎಂ ಆಡಿದ್ದರು. ಆದರೆ ಸಾಲು ಸಾಲು ಜಿಲ್ಲಾ ಪ್ರವಾಸಗಳಿರುವ ಹಿನ್ನೆಲೆಯಲ್ಲಿ ಸಚಿವ ಸಂಪುಟ ಸಭೆಯನ್ನು ಮುಂದಿನ ಗುರುವಾರಕ್ಕೆ ಮುಂದೂಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಹನ್ನೊಂದು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್

ಬೆಂಗಳೂರು: ಬಂಗಾಳ ಕೊಲ್ಲಿ ಮತ್ತು ಅರಬ್ಬೀ ಸಮುದ್ರದಲ್ಲಿ ಚಂಡಮಾರುತ ತೀವ್ರ ಸ್ವರೂಪ ಪಡೆದಿದ್ದು, ಭಾರೀ ಮಳೆಯಾಗುವ ಸಾಧ್ಯತೆಯಿರುವುದರಿಂದ ಅ.17ರಿಂದ 11 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಹವಾಮಾನ ಇಲಾಖೆ ಘೋಷಿಸಿದೆ.

ಅ.17ರ ಬೆಳಗ್ಗೆ 8.30 ರಿಂದ ಅ. 18ರ ಬೆಳಗ್ಗೆ 8.30 ರವರೆಗೆ ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಹಾಗೂ ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಕೊಡಗು, ಕೋಲಾರ, ರಾಮನಗರ, ಶಿವಮೊಗ್ಗ, ತುಮಕೂರು ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಕೊಡಲಾಗಿದೆ. ಇದಲ್ಲದೆ ಪ್ರತ್ಯೇಕವಾಗಿ ಅ.15ರಿಂದ ಮೂರು ದಿನ ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಯೆಲ್ಲೋ ಅಲರ್ಟ್ ಕೊಡಲಾಗಿದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ ಜಿಲ್ಲೆಗಳಲ್ಲಿ ಮೊದಲ ಎರಡು ದಿನ ಯೆಲ್ಲೋ ಮತ್ತು ಇನ್ನೊಂದು ದಿನ ಆರೆಂಜ್ ಅಲರ್ಟ್ ನೀಡಲಾಗಿದೆ. ಚಾಮರಾಜನಗರಕ್ಕೆ ಅ.15 ಮತ್ತು 16ರಂದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ನಾರಿಹಳ್ಳ ಕಿರುಜಲಾಶಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ಬಾಗಿನ ಅರ್ಪಿಸಿದರು. ವಿಜಯನಗರ ಮತ್ತು ಬಳ್ಳಾರಿ ಉಸ್ತುವಾರಿ ಸಚಿವ ಬಿ.ಝಡ್ ಜಮೀರ್ ಅಹಮದ್ ಖಾನ್, ಕಾರ್ಮಿಕ ಸಚಿವ ಸಂತೋಷ್ ಲಾಡ್, ಸಂಸದ ಇ.ತುಕಾರಾಂ ಇದ್ದರು.

ವಿಮಾನಗಳಿಗೆ ಬಾಂಬ್ ಬೆದರಿಕೆ

ಮುಂಬೈ: ದೇಶದಲ್ಲಿ ಒಂದೆಡೆ ರೈಲುಗಳನ್ನು ಹಳಿ ತಪ್ಪಿಸಿ ಅನಾಹುತವೆಸಗಲು ಸಂಚು ನಡೆಯುತ್ತಿರುವುದು ವರದಿಯಾಗುತ್ತಿದ್ದರೆ, ಇನ್ನೊಂದೆಡೆ ವಿಮಾನಗಳಿಗೆ ಬಾಂಬ್ ಬೆದರಿಕೆ ಕರೆ ಪ್ರಕರಣಗಳು ಹೆಚ್ಚುತ್ತಿವೆ. ಸೋಮವಾರ ಒಂದೇ ದಿನ ಬಾಂಬ್ ಬೆದರಿಕೆ ಸಂದೇಶಗಳ ಹಿನ್ನೆಲೆಯಲ್ಲಿ ಮೂರು ವಿಮಾನಗಳ ಪ್ರಯಾಣ ಗಂಟೆಗಟ್ಟಲೆ ವಿಳಂಬವಾಗಿದೆ. ಏರ್ ಇಂಡಿಯದ ಒಂದು ವಿಮಾನ ಮತ್ತು ಇಂಡಿಗೊ ಸಂಸ್ಥೆಯ ಎರಡು ವಿಮಾನಗಳ ಪ್ರಯಾಣಿಕರು ಮತ್ತು ಚಾಲನಾ ಸಿಬ್ಬಂದಿ ಬಾಂಬ್ ಕರೆಗಳ ಕಾರಣ ತಾಸುಗಟ್ಟಲೇ ಪರಿತಪಿಸುವಂತಾಗಿದೆ.

ಪಿಎಂ ಇಂಟರ್ನ್‌ಷಿಪ್‌ಗೆ ನಿರೀಕ್ಷೆ ಮೀರಿ ಪ್ರತಿಕ್ರಿಯೆ

ದೆಹಲಿ: ಪ್ರಧಾನ ಮಂತ್ರಿ ಇಂಟರ್ನ್‌ಷಿಪ್ ಯೋಜನೆ ಆರಂಭಗೊಂಡಿದ್ದು, ದೇಶಾದ್ಯಂತದ ಯುವಜನರಿಂದ ನಿರೀಕ್ಷೆ ಮೀರಿ ಪ್ರತಿಕ್ರಿಯೆ ವ್ಯಕ್ತವಾಗಿದೆ. ಯೋಜನೆ ಜಾರಿಯಾದ ಕೇವಲ 24 ಗಂಟೆಗಳಲ್ಲೇ 1.55 ಲಕ್ಷ ಯುವಜನರು ಯೋಜನೆಯ ಫಲಾನುಭವಿಗಳಾಗಲು ಆಸಕ್ತಿ ತೋರಿದ್ದಾರೆ. ವಾಸ್ತವದಲ್ಲಿ 1.25 ಲಕ್ಷ ಯುವಜನರಿಗಾದರೂ ಯೋಜನೆಯ ಪ್ರಯೋಜನ ತಲುಪಿಸಬೇಕು ಎಂದು ಸಚಿವಾಲಯ ಗುರಿ ಇಟ್ಟುಕೊಂಡಿತ್ತು. ಆದರೆ, ನಿರೀಕ್ಷೆ ಮೀರಿ ಯುವಜನರು ಪ್ರತಿಕ್ರಿಯಿಸಿದ್ದಾರೆ ಎಂದು ಸಚಿವಾಲಯ ತಿಳಿಸಿದೆ.

ದುಬಾರಿ ಖಾಸಗಿ ಆ್ಯಪ್‌ಗಳಿಗೆ ಸಡ್ಡು ಹೊಡೆಯಲು ಸಿದ್ಧತೆ

ಬರಲಿದೆ ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ ಆ್ಯಪ್

ಸರಕಾರದಿಂದಲೇ ಫುಡ್ ಆ್ಯಪ್

ಬೆಂಗಳೂರು: ಗ್ರಾಹಕರಿಂದ ಹಾಗೂ ಹೋಟೆಲ್‌ಗಳಿಂದ ಡೆಲಿವರಿ ಆ್ಯಪ್‌ಗಳು ಹೆಚ್ಚುವರಿ ಹಣ ಪಡೆಯುತ್ತಿದ್ದು, ಇದರಿಂದ ಗ್ರಾಹಕರು ಹಾಗೂ ಮಾರಾಟಗಾರರಿಗೆ ಭಾರೀ ಹೊಡೆತ ಬೀಳುತ್ತಿರುವುದನ್ನು ತಡೆಯುವುದಕ್ಕಾಗಿ ಕೇಂದ್ರ ಸರಕಾರವೇ ಆ್ಯಪ್ ಸೇವೆ ನೀಡಲು ಸಿದ್ಧತೆ ಮಾಡಿದೆ.

ಹೋಟೆಲ್‌ನಲ್ಲಿ 30 ರು.ಗೆ ದೊರೆಯುವ ಇಡ್ಲಿಗೆ ಆನ್‌ಲೈನ್‌ನಲ್ಲಿ 60-80 ರು. ಕೊಡಬೇಕು, ದೋಸೆ ಹೋಟೆಲ್‌ಗಳಲ್ಲಿ 40ರು.ಗೆ ಸಿಗುವುದು ಆನ್‌ಲೈನ್‌ನಲ್ಲಿ 80-100 ರು. ನೀಡಬೇಕಾಗುವುದು, ಖಾರಾಬಾತ್ 30 ರು.ಗೆ ದೊರೆಯುವುದು ಆನ್‌ಲೈನ್‌ನಲ್ಲಿ 80-100 ರು. ಕೊಡಬೇಕಾಗುವುದು. ಮನೆ ಬಾಗಿಲಿಗೆ ತಲುಪಿಸುತ್ತಾರೆ ಎನ್ನುವ ಕಾರಣಕ್ಕೆ ಗ್ರಾಹಕರು ಈ ರೀತಿ ಡಬಲ್ ದುಡ್ಡು ಪಾವತಿಸುತ್ತಾರೆ. ಆದರೆ ಈ ಹೆಚ್ಚುವರಿ ಹಣವು ಅತ್ತ ಹೋಟೆಲ್‌ನವರಿಗೂ ದೊರೆಯುವುದಿಲ್ಲ, ಇತ್ತ ಡೆಲಿವರಿ ಬಾಯ್‌ಗಳಿಗೂ ಸರಿಯಾಗಿ ನೀಡಲಾಗುವುದಿಲ್ಲ. ಬದಲಾಗಿ ಡೆಲಿವರಿ ಆ್ಯಪ್‌ಗಳು ಲಾಭ ಮಾಡಿಕೊಳ್ಳುತ್ತಿವೆ.

- ಕನಿಷ್ಠ ದರದಲ್ಲಿ ಗ್ರಾಹಕರಿಗೆ ಸೇವೆ ನೀಡುವ ಉದ್ದೇಶದೊಂದಿಗೆ ಆ್ಯಪ್ ಆರಂಭ
- ಆ್ಯಪ್ ಜತೆಗೆ ಒಪ್ಪಂದ ಮಾಡಿಕೊಳ್ಳಲು ಹೋಟೆಲ್ ಮಾಲೀಕರಿಂದ ಉತ್ಸಾಹ

ಗ್ರಾಹಕರು, ಹೋಟೆಲ್‌ನವರು ಹೆಚ್ಚುವರಿ ಮೊತ್ತ ಪಾವತಿಸುವುದನ್ನು ತಡೆಯುವುದಕ್ಕಾಗಿ ಕೇಂದ್ರ ಸರಕಾರವೇ ಒಎನ್‌ಡಿಸಿ ಸೇವೆ ಒದಗಿಸಲು ಮುಂದಾಗಿದೆ. ಇದರಿಂದ ಗ್ರಾಹಕರಿಗೂ ನಷ್ಟವಿಲ್ಲ, ಮಾರಾಟಗಾರರಿಗೂ ನಷ್ಟವಾಗುವುದಿಲ್ಲ.

ಓಪನ್ ನೆಟ್ವರ್ಕ್ ಫಾರ್ ಡಿಜಿಟಲ್ ಕಾಮರ್ಸ್ ಎನ್ನುವ ಈ ಆ್ಯಪ್ ಇನ್ಮುಂದೆ ಫುಡ್ ಡೆಲಿವರಿ ಕ್ಷೇತ್ರಕ್ಕೆ ಕಾಲಿಡಲಿದ್ದು, ಕೇಂದ್ರ ಸರಕಾರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರದ ಉತ್ತೇಜನ ಇಲಾಖೆಯಿಂದ ದೇಶದಲ್ಲಿ ಈ ಸೇವೆ ಆರಂಭಿಸಲಿದೆ. ಹೋಟೆಲ್ ಮಾಲೀಕರು ಕೂಡ ಈ ಆ್ಯಪ್ ಸೇವೆ ಜತೆ ಒಪ್ಪಂದ ಮಾಡಿಕೊಳ್ಳಲು ಉತ್ಸಾಹ ತೋರಿದ್ದಾರೆ. ಈಗಾಗಲೇ ಪ್ರಾಯೋಗಿಕವಾಗಿ ಹಲವು ಹೋಟೆಲ್‌ಗಳು ಈ ಆ್ಯಪ್ ಮೂಲಕ ಸೇವೆ ಆರಂಭಿಸಿದೆ. ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್‌ನಲ್ಲಿ 30 ರುಪಾಯಿ ಇಡ್ಲಿ 35 ರಿಂದ 40 ರುಪಾಯಿಗೆ ಸಿಗಲಿದೆ. ಇದು ಗ್ರಾಹಕರ ಜೇಬಿಗೂ ಹಗುರವಾಗಲಿದ್ದು, ಹೋಟೆಲ್‌ಗಳು ಹೆಚ್ಚಿನ ದರ ತೆರುವುದನ್ನು ನಿಯಂತ್ರಿಸಲಿದೆ.

ದೆಹಲಿಯಲ್ಲಿ ಪಟಾಕಿ ಮಾರಾಟಕ್ಕೆ ನಿಷೇಧ

ದೆಹಲಿ: ಎಲ್ಲ ಮಾದರಿಯ ಪಟಾಕಿಗಳ ತಯಾರಿಕೆ, ಸಂಗ್ರಹಣೆ, ಮಾರಾಟ ಮತ್ತು ಬಳಕೆಗೆ ನಿಷೇಧ ವಿಧಿಸಿರುವ ದೆಹಲಿ ಸರಕಾರ, ಜನವರಿ 1ರವರೆಗೆ ಈ ಆದೇಶ ಜಾರಿಯಲ್ಲಿರುತ್ತದೆ ಎಂದು ಹೇಳಿದೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಸಚಿವ ಗೋಪಾಲ್ ರೈ, ವಾಯುಮಾಲಿನ್ಯ ತಡೆಗಟ್ಟುವ ನಿಟ್ಟಿನಲ್ಲಿ ಸರಕಾರ ಈ ನಿರ್ಧಾರ ತೆಗೆದುಕೊಂಡಿದ್ದು, ಜನರು ಈ ಆದೇಶ ಪಾಲಿಸಬೇಕು. ಆದೇಶ ಪಾಲಿಸದವರ ವಿರುದ್ಧ ಮಾಲಿನ್ಯ ನಿಯಂತ್ರಣ ಸಮಿತಿ ಕ್ರಮ ಕೈಗೊಳ್ಳಲಿದೆ ಎಂದು ರೈ ತಿಳಿಸಿದ್ದಾರೆ.

ಕೋಮು ದಳ್ಳುರಿ: ಉ.ಪ್ರದೇಶ ಪ್ರಕ್ಷುಬ್ಧ

ಬಹ್ರೈಚ್: ಉತ್ತರ ಪ್ರದೇಶದ ಬಹ್ರೈಚ್ ಪಟ್ಟಣ ಸಮೀಪದ ಮನ್ಸೂರ್ ಗ್ರಾಮದಲ್ಲಿ ದಸರಾ ಮಹೋತ್ಸವ ಸಮಾರೋಪ ಸಂದರ್ಭ ದುರ್ಗಾಮಾತೆಯ ವಿಗ್ರಹ ವಿಸರ್ಜನೆಗೆ ಮುನ್ನ ಭಾನುವಾರ ನಡೆದ ಮೆರವಣಿಗೆ ವೇಳೆ 22 ವರ್ಷದ ಯುವಕನ ಹತ್ಯೆಯಾಗಿದೆ. ಆ ಬಳಿಕ ಕೋಮುಗಲಭೆ ಶುರುವಾಗಿ ಗ್ರಾಮದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿದೆ. ಪೊಲೀಸರು ಈವರೆಗೆ 30 ಜನರನ್ನು ಬಂಧಿಸಿದ್ದಾರೆ. ಕಲ್ಲು ತೂರಾಟ ಮತ್ತು ಗುಂಡಿನ ದಾಳಿಯಲ್ಲಿ 6 ಮಂದಿ ಗಾಯಗೊಂಡಿದ್ದಾರೆ.

ಫನ್‌ತರಂಗ
- ರಘುಪತಿ ಶೃಂಗೇರಿ -

ರಾಜಕೀಯ ಮುಖಂಡನಿಂದ 5 ಎಕರೆ ಸರ್ಕಾರಿ ಭೂಮಿ ವಾಪಸ್



ಸಮಾಚಾರ ಸಣ್ಣದಲ್ಲ

ಡೆಂಘೀಗೆ ಮಗು ಬಲಿ

ದಾವಣಗೆರೆ: ಡೆಂಘೀ ಜ್ವರಕ್ಕೆ 2 ವರ್ಷ 11 ತಿಂಗಳ ಮಗು ಬಲಿಯಾಗಿರುವ ಘಟನೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಚಿಕ್ಕೂಡ ಗ್ರಾಮದಲ್ಲಿ ನಡೆದಿದೆ. ಮೃತ ಮಗುವನ್ನು ಚಿಕ್ಕೂಡ ಗ್ರಾಮದ ರಾಜಪ್ಪ ಮತ್ತು ದಿವ್ಯ ದಂಪತಿಯ 2 ವರ್ಷದ 11 ತಿಂಗಳ ನಿರ್ವಾಣ ಕುಮಾರ್ ಎಂದು ಗುರುತಿಸಲಾಗಿದೆ. 5 ದಿನಗಳಿಂದ ಮಗು ತೀವ್ರ ಜ್ವರದಿಂದ ಬಳಲುತ್ತಿತ್ತು. ಚಿಕಿತ್ಸೆಗಾಗಿ ಮಗುವನ್ನು ಜಿಲ್ಲೆಯ ಶಿವಮೊಗ್ಗದ ಸರ್ಜಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಬಳಿಕವು ಸ್ವಲ್ಪವೂ ಚೇತರಿಕೆ ಕಾಣದೇ ಮಗು ಸಾವನ್ನಪ್ಪಿದೆ. ಗ್ರಾಮದಲ್ಲಿ ಸ್ವಚ್ಛತೆ ಇಲ್ಲದಿರುವುದರಿಂದ ಡೆಂಘೀಗೆ ಕಾರಣವಾಗಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಬಾಲಕ ಸಾವು

ಗೋಕಾಕ: ನೀರು ಕುಡಿಯಲು ಹೋಗಿದ್ದ ಬಾಲಕ ಕಾಲುಜಾರಿ ಮಾರ್ಕಂಡೇಯ ನದಿಯಲ್ಲಿ ಕೊಚ್ಚಿ ಹೋಗಿದ್ದ ಯುವಕ ಶವಾಗಿ ಪತ್ತೆಯಾದ ಘಟನೆ ಗೋಕಾಕ್ ನಗರದಲ್ಲಿ ನಡೆದಿದೆ. ಭಾನುವಾರ ಮಧ್ಯಾಹ್ನ ಗೋಕಾಕ್ ನಗರದ ಮಾರ್ಕಂಡೆಯ ನದಿಯ ತಿರದ ಹೆಜ್ಜೆಗಾರ ಹೊಲದ ಹತ್ತಿರ ನೀರು ಕುಡಿಯಲು ಹೋಗಿದ್ದ ಸಾಗರ ಗೌಳಿ (16) ಯುವಕ ಕಾಲು ಜಾರಿ ಹರಿಯುತ್ತಿರುವ ನದಿಯಲ್ಲಿ ಕೊಚ್ಚಿ ಹೋಗಿದ್ದ. ಯುವಕನಿಗಾಗಿ ಹುಡುಕಾಟ ಮುಂದುವರಿದಿತ್ತು. ಅಗ್ನಿ ಶಾಮಕ ದಳ ಹಾಗೂ ಎಸ್‌ಡಿಆರ್‌ಎಫ್ ಸಿಬ್ಬಂದಿ ತೀವ್ರ ತಪಾಸಣೆ ನಂತರ ಯುವಕನ ಮೃತದೇಹ ಪತ್ತೆಯಾಗಿದೆ.

ವಿಶ್ವವಾಣಿ
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಪ್ರತಿದಿನ ಆರಾಮದಿಂದ ಓದಿ

ಫ್ರೀಡಂಪಾರ್ಕ್‌ನಲ್ಲಿ ಕಾಂಗ್ರೆಸ್ ವಿರುದ್ಧ ಬಿಜೆಪಿ ನಾಯಕರಿಂದ ಪ್ರತಿಭಟನೆ | ರಾಜಭವನಕ್ಕೆ ಬಿಜೆಪಿ ನಿಯೋಗ

ಸರಕಾರ ವಜಾಕ್ಕೆ ಆಗ್ರಹಿಸಿ ರಾಜ್ಯಪಾಲರಿಗೆ ಮನವಿ

ಬೆಂಗಳೂರು: ಮತಬ್ಯಾಂಕ್ ಗಾಗಿ ಹಾಗೂ ಹಗರಣಗಳನ್ನು ಮರೆಮಾಚಲು ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಕಾಂಗ್ರೆಸ್ ಸರಕಾರ ಮುಂದಾಗಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಿರುವ ಬಿಜೆಪಿ, ನಂತರ ರಾಜ್ಯಪಾಲರಿಗೆ ದೂರು ನೀಡಿದೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಸರಕಾರದ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಬಿಜೆಪಿ ನಾಯಕರು ಭಾಗವಹಿಸಿದ್ದರು. ನಂತರ ಬಿಜೆಪಿ ಶಾಸಕರು, ಮುಖಂಡರೊಂದಿಗೆ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ ದೂರು ಪತ್ರ ಸಲ್ಲಿಸಿದರು.

ನಂತರ ಮಾತನಾಡಿದ ಪ್ರತಿಪಕ್ಷ ನಾಯಕ ಆರ್. ಅಶೋಕ, ಕುರ್ಚಿ ಅಲುಗಾಡುತ್ತಿರುವ ಸಮಯದಲ್ಲಿ ಮುಸ್ಲಿಮರು ನನ್ನ ಪರವಾಗಿದ್ದಾರೆ ಎಂದು ತೋರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹೀಗೆ ಮಾಡಿದ್ದಾರೆ. ದೇಶದ್ರೋಹಿ ಚಟುವಟಿಕೆ, ಪೊಲೀಸರ ಮೇಲೆ ಹಲ್ಲೆ ಮಾಡಿದ ಪ್ರಕರಣ ಕಾಂಗ್ರೆಸ್ ಸರಕಾರ ಮುಚ್ಚಿಹಾಕಿದೆ. ರೈತ ಹೋರಾಟ, ಕನ್ನಡ ಹೋರಾಟಗಳಿಗೆ ಇದನ್ನು ಹೋಲಿಸಬಾರದು. ಕಾಂಗ್ರೆಸ್‌ಗೆ ಮುಸ್ಲಿಮರ ಓಟು ಬೇಕೆಂದು ಹೀಗೆ ಮಾಡಲಾಗಿದೆ. ರೈತರ ವಿರುದ್ಧದ ಪ್ರಕರಣ ವಾಪಸ್ ಪಡೆಯಲು ಸಿ.ಟಿ.ರವಿ ಮನವಿ ಮಾಡಿದ್ದರೂ ಅದಕ್ಕೆ ಸರಕಾರ ಸ್ಪಂದಿಸಿಲ್ಲ ಎಂದು ದೂರಿದರು.

ಅಖಂಡ ಶ್ರೀನಿವಾಸಮೂರ್ತಿ ಮನೆ ಮೇಲೆ ದಾಳಿ ಮಾಡಿದಾಗಲೂ ಇದೇ ರೀತಿ ಮಾಡಿದ್ದಾರೆ. ಇವರು ಯಾರೂ ಸ್ವಾತಂತ್ರ್ಯ ಹೋರಾಟಗಾರರಲ್ಲ. ಮುಡಾ, ವಾಲ್ಮೀಕಿ ನಿಗಮದ ಹಗರಣದಿಂದ ತಪ್ಪಿಸಿಕೊಳ್ಳಲು ಈ ತಂತ್ರ ಮಾಡಿರಬಹುದು. ಆದರೆ ಬಿಜೆಪಿಯಿಂದ ಈ ಎರಡೂ ಹಗರಣಗಳ ವಿರುದ್ಧ ಹೋರಾಟ ಮುಂದುವರಿಯಲಿದೆ. ಇದರ ಜೊತೆಗೆ ಕೇಂದ್ರ ಸರಕಾರ ಅನುದಾನ ತಾರತಮ್ಯ ಮಾಡಿದೆ ಎಂಬ ಸುಳ್ಳು ಹಬ್ಬಿಸುತ್ತಿದ್ದಾರೆ. ಮೆಟ್ರೋ, ಜಲಜೀವನ್ ಮಿಷನ್, ಉಪನಗರ ರೈಲು ಮೊದಲಾದ ಯೋಜನೆಗಳಿಗೆ ಪ್ರಧಾನಿ ನರೇಂದ್ರ ಮೋದಿ ಹೆಚ್ಚು ಅನುದಾನ ನೀಡಿದ್ದಾರೆ. ಅಷ್ಟು ಆರೋಪ ಮಾಡುವುದಾದರೆ ಶ್ವೇತಪತ್ರ ಬಿಡುಗಡೆಗೊಳಿಸಿ ಎಷ್ಟು ಅನುದಾನ ನೀಡಲಾಗಿದೆ ಎಂದು ತಿಳಿಸಲಿ ಎಂದು ಸವಾಲೆಸೆದರು.

ಮುಸ್ಲಿಮರ ಋಣ ತೀರಿಸುವ ಕೆಲಸಕ್ಕೆ ಕಾಂಗ್ರೆಸ್ ಮುಂದಾಗಿದೆ. ಒಂದು ಕಡೆ ಸಿದ್ದರಾಮಯ್ಯ ಸೈಟು ವಾಪಸ್ ಕೊಟ್ಟರೆ, ಮತ್ತೊಂದೆಡೆ ಮಲ್ಲಿಕಾರ್ಜುನ ಖರ್ಗೆ ಸೈಟು ವಾಪಸ್ ನೀಡಿದ್ದಾರೆ. ಇನ್ನೊಂದೆಡೆ ಸರಕಾರ ಪ್ರಕರಣ ವಾಪಸ್ ಪಡೆದಿದೆ. ಹಿಂದೂಗಳನ್ನು ಟಾರ್ಗೆಟ್ ಮಾಡುವ ಜೊತೆಗೆ ಕ್ರಿಮಿನಲ್‌ಗಳ ಪ್ರಕರಣ ವಾಪಸ್ ಪಡೆದಿದ್ದಾರೆ. ಕನ್ನಡ ಹೋರಾಟಗಾರ ನಾರಾಯಣಗೌಡರನ್ನು ಜೈಲಿಗೆ ಹಾಕಿದ್ದರು. ಆದರೆ ಭಯೋತ್ಪಾದಕರಿಗೆ ಮಾತ್ರ ಪರೋಕ್ಷವಾಗಿ ಬೆಂಬಲ ನೀಡಲಾಗುತ್ತಿದೆ. ಡಿಜೆ ಹಳ್ಳಿ ಗಲಭೆಯಲ್ಲಿ ಭಾಗಿಯಾದವರು ಕಾಂಗ್ರೆಸ್‌ನ ಪದಾಧಿಕಾರಿಗಳಾಗಿದ್ದಾರೆ. ರಾಮೇಶ್ವರಂ ಕೆಫೆಯ ಬಾಂಬ್ ಸ್ಫೋಟ ಪ್ರಕರಣ ಮುಚ್ಚಿಹಾಕುವ ಕೆಲಸ ಮಾಡಿದ್ದಾರೆ ಎಂದು ದೂರಿದರು. ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮಾಜಿ ಉಪ ಮುಖ್ಯಮಂತ್ರಿ ಗಳಾದ ಗೋವಿಂದ ಕಾರಜೋಳ, ಡಾ. ಸಿ.ಎನ್.ಅಶ್ವತ್ಥನಾರಾಯಣ್, ಶಾಸಕ ವಿಶ್ವನಾಥ್, ವಿಧಾನ ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಸಿ.ಟಿ. ರವಿ, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಬಿಬಿಎಂಪಿ ಮಾಜಿ ಸದಸ್ಯರು ಉಪಸ್ಥಿತರಿದ್ದರು.

ಮತಬ್ಯಾಂಕ್‌ಗಾಗಿ, ಹಗರಣಗಳನ್ನು ಮರೆಮಾಚಲು ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಕಾಂಗ್ರೆಸ್ ಸರಕಾರ ಮುಂದಾಗಿದೆ ಎಂದು ಆರೋಪಿಸಿ ಬಿಜೆಪಿ ಶಾಸಕರು, ಮುಖಂಡರೊಂದಿಗೆ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ ದೂರು ಪತ್ರ ಸಲ್ಲಿಸಿದರು.

ದೇಶದ್ರೋಹಿಗಳನ್ನು ರಕ್ಷಿಸುವ ಕೆಲಸ: ವಿಜಯೇಂದ್ರ

ರಾಜ್ಯದಲ್ಲಿ ಹಿಂದೂಗಳ ವಿರೋಧಿ ಸರಕಾರವಿದ್ದು, ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ ದೇಶದ್ರೋಹಿಗಳನ್ನು ರಕ್ಷಿಸುವ ಕೆಲಸ ಕಾಂಗ್ರೆಸ್ ಸರಕಾರ ಮಾಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಹೇಳಿದ್ದಾರೆ. ಪ್ರತಿಭಟನೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಹುಬ್ಬಳ್ಳಿ ಘಟನೆ ವಿಷಯದಲ್ಲಿ ಎನ್‌ಐಎ ತನಿಖೆ ನಡೆಯುತ್ತಿದೆ. ಮುಖ್ಯಮಂತ್ರಿಗಳ ಕುರ್ಚಿ ಅಲ್ಲಾಡುತ್ತಿದೆ ಎಂದು ಯಾವ ಮಟ್ಟಕ್ಕೆ ಹೋಗಲು ಕೂಡ ಕಾಂಗ್ರೆಸ್ ಸರಕಾರ ಹೇಸುವುದಿಲ್ಲ ಎಂದರು. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವುದು ನಿಶ್ಚಿತ. ಅವರು, ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ.

ಸಿದ್ದರಾಮಯ್ಯನವರು ಐದು ವರ್ಷ ಮುಖ್ಯಮಂತ್ರಿ ಎಂದು ನಿಮ್ಮ ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರಿಂದ ಹೇಳಿಸಿ ನೋಡೋಣ ಎಂದು ಸವಾಲೆಸೆದರು.

ಪ್ರಕರಣ ಹಿಂಪಡೆದ ಕುರಿತು ಸರಕಾರದ ವಿರುದ್ಧ ರಾಜ್ಯಪಾಲರಿಗೆ ದೂರು ಪತ್ರ ಸಲ್ಲಿಸಲಾಗಿದೆ. ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆದ ಬಗ್ಗೆ ಸರಕಾರದ ಬಳಿ ಸ್ಪಷ್ಟನೆ ಕೇಳಲಾಗುವುದು ಎಂದು ರಾಜ್ಯಪಾಲರು ತಿಳಿಸಿದ್ದಾರೆ. ಸರಕಾರದ ಈ ಕ್ರಮದ ವಿರುದ್ಧ ಹುಬ್ಬಳ್ಳಿಯಲ್ಲಿ ದೊಡ್ಡ ಮಟ್ಟದ ಪ್ರತಿಭಟನೆ ಮಾಡಲಾಗುವುದು.

ಆರ್.ಅಶೋಕ, ಪ್ರತಿಪಕ್ಷದ ನಾಯಕ

ಹುಬ್ಬಳ್ಳಿಯಲ್ಲಿ ದೇಶದ್ರೋಹಿಗಳ ಕೇಸನ್ನು ವಾಪಸ್ ಪಡೆದ ಸಿದ್ದರಾಮಯ್ಯನವರು ಪ್ರೋತ್ಸಾಹಿಸುವ ಕೆಲಸ ಮಾಡಿದ್ದಾರೆ. ಸಿದ್ದರಾಮಯ್ಯನವರ ಸಚಿವ ಸಂಪುಟದ ಎಲ್ಲ ಸಹೋದ್ಯೋಗಿಗಳೂ ಭಯೋತ್ಪಾದಕರನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದ್ದು, ಇದು ಖಂಡನೀಯ

-ಗೋವಿಂದ ಕಾರಜೋಳ, ಸಂಸದ

ಹುಬ್ಬಳ್ಳಿ ಗಲಭೆ, ಕಾನೂನು ಕೈಗೆ ತೆಗೆದುಕೊಂಡ ಘಟನೆ ಹಿನ್ನೆಲೆಯಲ್ಲಿ ದಾಖಲಾಗಿದ್ದ ಕೇಸನ್ನು ಹಿಂಪಡೆದುದು ಖಂಡನಾರ್ಹ. ಕಾನೂನನ್ನು ಗೌರವಿಸದ ಕಾಂಗ್ರೆಸ್ ಸರಕಾರ ಎಡವಟ್ಟಿನ ಸರಕಾರವಾಗಿದೆ.

-ಡಾ. ಸಿ.ಎನ್.ಅಶ್ವತ್ಥನಾರಾಯಣ್, ಮಾಜಿ ಉಪಮುಖ್ಯಮಂತ್ರಿ

ಕ್ರಿಮಿನಲ್ ಪ್ರಕರಣಗಳನ್ನು ಹಿಂಪಡೆಯಲು ಕಾಂಗ್ರೆಸ್ ಸರಕಾರ ಮುಂದಾಗಿದೆ ಎಂದು ಆರೋಪಿಸಿ ಬಿಜೆಪಿ ನಾಯಕರು ಪ್ರತಿಭಟನೆ ನಡೆಸಿದರು.

ಬೈಕ್ ಡಿಕ್ಕಿ: ಬಾಲಕಿ ಸಾವು

ಹುಣಸೂರು: ಆಸ್ಪತ್ರೆಗೆ ತೆರಳುತ್ತಿದ್ದ ತಂದೆ ಮಗಳಿಗೆ ಬೈಕ್ ಡಿಕ್ಕಿ 7 ವರ್ಷದ ಬಾಲಕಿ ಮೃತಪಟ್ಟು, ಬಾಲಕಿಯ ತಂದೆ ಹಾಗೂ ಬೈಕ್ ಸವಾರಗಂಭೀರ ಗಾಯಗೊಂಡಿರುವ ಘಟನೆ ನಗರದ ಬೈಪಾಸ್ ರಸ್ತೆಯಲ್ಲಿ ನಡೆದಿದೆ. ಹುಣಸೂರು ತಾಲ್ಲೂಕಿನ ಎರಡನೇ ಪಕ್ಷಿರಾಜಪುರ ಗ್ರಾಮದ ಬಾಲಕಿ ಅರೋವಿ (7 ವರ್ಷ) ಮೃತ ಬಾಲಕಿ. ಅರೋವಿ ಜ್ವರದೊಂಡ ಬಳಲುತ್ತಿದ್ದ ಹಿನ್ನೆಲೆಯಲ್ಲಿ ಅವರ ತಂದೆ ಪಿಲಿಪ್ ಜೊತೆಯಲ್ಲಿ ಕಾವೇರಿ ಆಸ್ಪತ್ರೆಗೆ ನಡೆದು ಹೋಗುವ ವೇಲೆ ಹೆದ್ದಾರಿಯಲ್ಲಿ ರಸ್ತೆ ದಾಟುತ್ತಿದ್ದ ಸಂದರ್ಭ ಮೈಸೂರು ಕಡೆಯಿಂದ ಬಂದ ಬೈಕ್ ತಂದೆ, ಮಗಳಿಗೆ ಡಿಕ್ಕಿ ಹೊಡೆದಿದೆ ಪರಿಣಾಮ ಬಾಲಕಿ ಗಂಭೀರ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದರೆ. ತಂದೆ ಹಾಗೂ ಬೈಕ್ ಸವಾರನಿಗೆ ಗಾಯಗಳಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ದನದ ಮಾಂಸ ಸಾಗಾಟ: ಬಂಧನ

ಕುಂದಾಪುರ: ಸ್ಕೂಟಿಯಲ್ಲಿ ದನದ ಮಾಂಸ ಸಾಗಾಟ ಮಾಡುತ್ತಿದ್ದ ರಫೀಕ್ ಎಂಬಾತನನ್ನು ಕುಂದಾಪುರ ಪೊಲೀಸರು ಕೋಣಿ ಗ್ರಾಮದ ಕಟ್ಕೇರಿ ಬೈಲ್ ಬಳಿ ಸೋಮವಾರ ವಶಕ್ಕೆ ಪಡೆದಿದ್ದಾರೆ. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಆತ ಕೋಡಿಯ ಮೊಹಮ್ಮದ್ ಅಶ್ಫಕ್ ಎಂಬಾತನಿಂದ ದನದ ಮಾಂಸ ತೆಗೆದುಕೊಂಡು ಹಾಲಾಡಿ ಕಡೆಗೆ ಮಾರಾಟ ಮಾಡಲು ಹೋಗುತ್ತಿರುವುದಾಗಿ ತಿಳಿಸಿದ್ದಾನೆ. ಸ್ಕೂಟಿಯಲ್ಲಿದ್ದ 15 ಕೆಜಿ ದನದ ಮಾಂಸ, ಮೊಬೈಲ್ ಫೋನ್ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕುಂದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶೀಘ್ರ ರಾಜಕೀಯ ಮುಖಂಡರು ಲೈನ್‌ನಲ್ಲಿ ನಿಲ್ಲುವ ಕಾಲ ಬರುತ್ತೆ

ಹಾಸನ: ಕೆಲವೇ ದಿನಗಳಲ್ಲಿ ಕೆಲವು ರಾಜಕೀಯ ಮುಖಂಡರು ಲೈನ್‌ನಲ್ಲಿ ನಿಲ್ಲುವ ಕಾಲ ಬರುತ್ತದೆ ಎಂದು ಪರೋಕ್ಷವಾಗಿ ಸಿಎಂ ಸಿದ್ದರಾಮಯ್ಯ ವಿರುದ್ಧ ಮಾಜಿ ಸಚಿವ ಎಚ್.ಡಿ. ರೇವಣ್ಣ ಕಿಡಿಕಾರಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪೊಲೀಸ್ ಅಧಿಕಾರಿಗಳನ್ನು ಇಟ್ಟುಕೊಂಡು ನನ್ನನ್ನು ಹೆದರಿಸಬೇಕು ಎಂದುಕೊಂಡಿದ್ದರೆ ಅದನ್ನು ಕನಸು ಎಂದು ತಿಳಿದುಕೊಳ್ಳಬೇಕಾಗುತ್ತದೆ. ಮುಂದೆ ಒಂದಲ್ಲ ಒಂದು ದಿನ ರಿವರ್ಸ್ ಹೊಡೆಯುವ ಕಾಲ ಬರುತ್ತದೆ. ಇವತ್ತು ಯರ್ಯಾರು ಏನೇನು ಮಾಡಿದ್ದಾರೆ? ನಮ್ಮ ತಂದೆ-ತಾಯಿ ಕಣ್ಣೀರು ಹಾಕುವಂತೆ ಮಾಡಿದವರು ಅನುಭವಿಸುತ್ತಾರೆ. ಕೆಲವೇ ದಿನಗಳಲ್ಲಿ ಕೆಲವು ರಾಜಕೀಯ ಮುಖಂಡರು ಲೈನ್‌ನಲ್ಲಿ ನಿಲ್ಲುವ ಕಾಲ ಬರುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಚ್.ಡಿ. ಕುಮಾರಸ್ವಾಮಿ ಕೇಸ್ ಮತ್ತೇ ಓಪನ್ ಮಾಡಿಸಿದರ ಕುರಿತು ಮಾತನಾಡಿದ ಅವರು, ಕುಮಾರಣ್ಣರ ವಿರುದ್ಧ ಹತ್ತು ವರ್ಷದ ಕೇಸ್ ಇವತ್ತು ಮತ್ತೆ ಓಪನ್ ಮಾಡಿಸಿದ್ದಾರೆ. ಅವರು ಅಧಿಕಾರದಲ್ಲಿದ್ದಾಗ ಅದನ್ನು ಕ್ಲೋಸ್ ಮಾಡಿಸಬಹುದಿತ್ತು. ಆ ಪಾಪದ ಕೆಲಸವನ್ನು ಅವರು ಮಾಡಲಿಲ್ಲ. ಕುಮಾರಣ್ಣ ನಲವತ್ತು ಜನ ಎಂಜಿನಿಯರ್‌ಗಳಿಗೆ ಪ್ರಮೋಷನ್ ಕೊಟ್ಟಿದ್ದಾರೆ. ಈ ರಾಜ್ಯಕ್ಕೆ ಅವರ ಕೊಡುಗೆ ತುಂಬಾ ಇದೆ. ಯಾರಾದರೂ ಒಬ್ಬರು ಎಂಜಿನಿಯರ್ ಕುಮಾರಣ್ಣ, ರೇವಣ್ಣ ಐದು ರೂಪಾಯಿ ತೆಗೊಂಡಿದ್ದಾರೆ ಎಂದು ಹೇಳಿದರೆ ನಾನು ರಾಜಕೀಯ ಬಿಟ್ಟು ಹೋಗುತ್ತೇವೆ ಎಂದು ಹೇಳಿದರು.

ಜಿಹಾದಿಗಳನ್ನು ಸಾಕುವ ಪಕ್ಷ ಕಾಂಗ್ರೆಸ್

ವಿಜಯಪುರ: ಖರ್ಗೆಯವರ ಕುಟುಂಬ ಕೆಐಎಡಿಬಿಯಿಂದ ನಿವೇಶನಗಳನ್ನು ಮೊದಲು ತೆಗೆದುಕೊಂಡಿದ್ದೆ ತಪ್ಪು. ಮಲ್ಲಿಕಾರ್ಜುನ ಖರ್ಗೆಯವರು ಹಿರಿಯ ರಾಜಕಾರಣಿ. ಅವರು ದಿನದಿಂದ ದಿನಕ್ಕೆ ಹಾದಿ ತಪ್ಪಿ ಮಾತನಾಡುತ್ತಿದ್ದಾರೆ. ಬಿಜೆಪಿ ಎಂದರೆ ಭಯೋತ್ಪಾದಕರ ಪಕ್ಷ ಎಂದು ಮೊನ್ನೆ ಹೇಳಿದ್ದಾರೆ. ಕಾಂಗ್ರೆಸ್ ಜಿಹಾದಿಗಳ ಪಕ್ಷ ಎಂದು ನಾನು ಹೇಳುತ್ತೇನೆ. ಜಿಹಾದಿಗಳನ್ನು ಸಾಕುವ ಪಕ್ಷ ಕಾಂಗ್ರೆಸ್ ಆಗಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಕಾಂಗ್ರೆಸ್ ವಿರುದ್ಧ ಕಾರಿದರು. ಸಿದ್ಧಾರ್ಥ ವಿಹಾರ ಟ್ರಸ್ಟಿಗೆ ಮಂಜೂರಾಗಿದ್ದ ಕೆಐಎಡಿಬಿಯಿಂದ ಪಡೆದಿದ್ದ ನಿವೇಶನ ವಾಪಸ್ ನೀಡಿದ ಖರ್ಗೆ ಕುಟುಂಬ ವಿಚಾರಕ್ಕೆ

ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಹಾಗೂ ಎಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವೇಶನಗಳನ್ನು ವಾಪಸ್ ಕೊಟ್ಟಿದ್ದಾರೆ. ಯಾಕೆ ವಾಪಸ್ ಕೊಟ್ಟಿದ್ದು. ವಾಪಸ್ ಕೊಡುವ ಮೂಲಕ ತಪ್ಪು ಮಾಡಿದಂತಲ್ಲವೇ, ನಾವು ತಪ್ಪೇ ಮಾಡಿಲ್ಲ ಎಂದು ಇಷ್ಟು ದಿನ ನೆಗೆಯುತ್ತಿದ್ದೀರಿ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ತಪ್ಪಿ ಮಾಡಿಲ್ಲ ಎಂದು ಹೇಳುತ್ತಿದ್ದರು. ಖರ್ಗೆಯವರು ನಿವೇಶನಗಳನ್ನು ಯಾಕೆ ವಾಪಸ್ ಕೊಟ್ಟಿದ್ದು ಎಂದು ಎಂಬಿ ಪಾಟೀಲರಿಗೆ ಕೇಳುತ್ತೇನೆಂದರು. ಯಾಕೆ ಭೂಮಿಯನ್ನ ವಾಪಸ್ ಕೊಟ್ಟಿದ್ದು ಅದನ್ನ ಕೊಡಬಾರದಾಗಿತ್ತು. ತಪ್ಪೇ ಮಾಡಿಲ್ಲ ಎಂದರೆ ವಾಪಸ್ ಕೊಡುವುದು ಯಾಕೆ..? ಫಸ್ಟ್ ಲೈನ್ ಲೀಡರ್ ಗಳದ್ದು ಎಲ್ಲವೂ ತನಿಖೆ ಆಗಬೇಕೆಂದು ಯತ್ನಾಳ ಒತ್ತಾಯಿಸಿದರು.

ಒಬ್ಬರದೇ ಅಲ್ಲ ಬಹಳ ಜನ ಸರಕಾರಿ ಭೂಮಿಯನ್ನು ಗುಳುಂ ಮಾಡಿದ್ದಾರೆ. ವಕ್ಫ್ ಆಸ್ತಿಯನ್ನು ಕೂಡ ಫಸ್ಟ್ ಲೈನ್ ಲೀಡರ್ ಗಳು ಗುಳುಂ ಮಾಡಿದ್ದಾರೆ. ನಮ್ಮ ಸರಕಾರದ ಅವಧಿಯಲ್ಲಿ ವಕ್ಫ್ ಗಾಗಿಯೇ ಒಂದು ಕಮಿಟಿ ನೇಮಿಸಿತ್ತು. ವಕ್ಫ್ ಆಸ್ತಿಯನ್ನು ಕಾಂಗ್ರೆಸ್‌ನ ಎಲ್ಲಾ ಮುಖಂಡರು ಗುಳುಂ ಮಾಡಿದ್ದಾರೆ. ಹಾಗಾಗಿ ಖರ್ಗೆ ಅವರಿಗೆ ನೈತಿಕತೆ ಇದ್ದರೆ ಅವರ ಸ್ಥಾನಕ್ಕೆ ರಾಜೀನಾಮೆ ನೀಡಬೇಕು.

-ಬಸನಗೌಡ ಪಾಟೀಲ್ ಯತ್ನಾಳ, ಶಾಸಕ

ಧಾರಾಕಾರ ಮಳೆ: ರಸ್ತೆ ಸಂಪರ್ಕ ಬಂದ್

ಗದಗ/ಧಾರವಾಡ: ಜಿಲ್ಲೆಯಲ್ಲಿ ಸುರಿದ ಧಾರಾಕಾರ ಮಳೆಯಿಂದ ಬೆಣ್ಣೆಹಳ್ಳ ಭೋರ್ಗರೆಯುತ್ತಿದೆ. ರೋಣ ತಾಲೂಕಿನ ಯಾವಗಲ್ ಬಳಿ ರಸ್ತೆ ಸಂಪರ್ಕ ಸಂಪೂರ್ಣ ಬಂದ್ ಆಗಿದೆ. ಪ್ರವಾಹದಿಂದ ಬೆಳೆ ಕಳೆದುಕೊಂಡ ರೈತರು ಕಣ್ಣೀರಲ್ಲಿ ಕೈತೊಳೆಯುವಂತಾಗಿದೆ.

ನರಗುಂದನಿಂದ ಯಾವಗಲ್ ಮಾರ್ಗವಾಗಿ ರೋಣ, ಗಜೇಂದ್ರಗಡ, ಕುಷ್ಟಗಿ ಮಾರ್ಗವಾಗಿ ಸಿಂಧನೂರು ಸಂಪರ್ಕಿಸುವ ರಾಜ್ಯ ಹೆದ್ದಾರಿ ಬಂದ್ ಆಗಿದ್ದು, ಸೇತುವೆ ಮೇಲ್ಭಾಗದಲ್ಲಿ ಅಪಾಯದ ಮಟ್ಟ ಮೀರಿ ನೀರು ಹರಿಯುತ್ತಿದೆ. ಇದರಿಂದ ಕಳೆದ ಮೂರು-ನಾಲ್ಕು ದಿನಗಳಿಂದ ಪ್ರಯಾಣಿಕರು, ರೈತರು ಪರದಾಡುವಂತಾಗಿದೆ. ಜನರು ಹಳ್ಳ ದಾಟದಂತೆ ಭದ್ರತಾ ಸಿಬ್ಬಂದಿಗಳನ್ನು ಸಹ ನೇಮಿಸಲಾಗಿದೆ.

1971-72ರಲ್ಲಿ ನಿರ್ಮಾಣವಾದ ಈ ಕಿರಿದಾದ ಸೇತುವೆ ಮೇಲ್ದರ್ಜೆಗೆ ಏರಿಸಬೇಕು. ಬೆಣ್ಣೆಹಳ್ಳ ಒತ್ತುವರಿ ತೆರವುಗೊಳಿಸಬೇಕು. ಪದೇಪದೆ ಪ್ರವಾಹ ಹಾಗೂ ಬೆಳೆ ಹಾನಿ ಆಗುವುದನ್ನು ತಪ್ಪಿಸಬೇಕು ಎಂಬುದು ಈ ಭಾಗದ ಜನರ ಕೂಗಾಗಿದೆ. ಬೆಣ್ಣೆಹಳ್ಳ ಪ್ರವಾಹದಿಂದ ಬೆಳೆ ಕಳೆದುಕೊಂಡ ರೈತರು ಕಣ್ಣೀರಲ್ಲಿ ಕೈತೊಳೆಯುವಂತಾಗಿದೆ.

ಟಿಟಿ ವಾಹನ ಪಲ್ಟಿ: 9 ಮಂದಿಗೆ ಗಾಯ

ಚಿಕ್ಕಮಗಳೂರು: ಚಾಲಕನ ನಿಯಂತ್ರಣ ತಪ್ಪಿದ ಟಿಟಿ ವಾಹನವೊಂದು ರಸ್ತೆಯ ಮಧ್ಯೆಯೇ ಪಲ್ಟಿಯಾದ ಘಟನೆ ಮೂಡಿಗೆರೆ ತಾಲೂಕಿನ ಸಂಪಿಗೆಖಾನ್ ಬಳಿ ಸೋಮವಾರ ನಡೆದಿದೆ. ಟಿಟಿ ವಾಹನದಲ್ಲಿ 15 ಜನ ಪ್ರಯಾಣಿಕರಿದ್ದರು ಎನ್ನಲಾಗಿದ್ದು 9 ಜನರಿಗೆ ಗಾಯಗಳಾಗಿವೆ, ಗಾಯಾಳುಗಳನ್ನು ಕಳಸ, ಮೂಡಿಗೆರೆ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಬೆಂಗಳೂರಿನಿಂದ ಹೊರನಾಡಿಗೆ ಬಂದಿದ್ದ ಟಿಟಿ ವಾಹನ ಅನ್ನಪೂರ್ಣೇಶ್ವರಿ ದರ್ಶನ ಮುಗಿಸಿ ವಾಪಸು ಹೊರಟಿತ್ತು ಈ ವೇಳೆ ವಾಹನ ಸಂಪಿಗೆಖಾನ್ ಬಳಿ ಬರುತ್ತಿದ್ದಂತೆ ತಿರುವಿನಲ್ಲಿ ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾಗಿದೆ. ಕಳಸ ಭಾಗದಲ್ಲಿ ಕಳೆದ ಎರಡು ದಿನಗಳಿಂದ ನಿರಂತರ ಮಳೆ ಸುರಿಯುತ್ತಿದ್ದು ಚಾಲಕನ ನಿಯಂತ್ರಣ ತಪ್ಪಲು ಇದು ಕೂಡ ಕಾರಣ ಎನ್ನಲಾಗಿದೆ. ಘಟನೆ ಸಂಬಂಧ ಬಾಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಂಚನೆ: ಹೆಸರು ಬಹಿರಂಗಪಡಿಸಿ

ಮಂಗಳೂರು: ಉದ್ಯಮಿಗಳು ರಾಷ್ಟ್ರದ ವಿವಿಧ ಬ್ಯಾಂಕ್‌ಗಳಿಗೆ 4 ಲಕ್ಷ ಕೋಟಿ ರೂ ವಂಚಿಸಿದ್ದು, ಇವರ ಹೆಸರನ್ನು ಕೇಂದ್ರ ಸರಕಾರ ಬಹಿರಂಗಪಡಿಸಬೇಕು ಎಂದು ಎಐಬಿಇಎ (ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ) ರಾಷ್ಟ್ರೀಯ ಕಾರ್ಯದರ್ಶಿ ಸಿ.ಎಚ್.ವೆಂಕಟಾಚಲಂ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾಲ್ಕು ಲಕ್ಷ ಕೋಟಿ ಹಣ ಬಾಕಿ ಇದೆ ಎಂದು ಸಂಸತ್ತಿಗೆ ಸರಕಾರ ಹೇಳಿದೆ. ಕಳೆದ 10 ವರ್ಷದಲ್ಲಿ ಇಷ್ಟು ಹಣ ವಂಚಿಸಲಾಗಿದೆ ಎಂದು ಕಿಡಿ ಕಾರಿದರು.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ರಾಮಕೃಷ್ಣಾಶ್ರಮ ರಸ್ತೆ ಅಮರಜ್ಯೋತಿ ನಗರ, ತುಮಕೂರು-572105 0816 – 2200209
ಬಿಡ್ ಆಹ್ವಾನ ಪ್ರಕಟಣೆ (Government e-Market Place(Gem) ಪೋರ್ಟಲ್ ಮೂಲಕ ಮಾತ್ರ)
1) ಕಾಮಗಾರಿ ಹೆಸರು: ಕನನೀಸ ಮತ್ತು ಒಚ ಮಂಡಳಿ ವಿಭಾಗ ತುಮಕೂರು ಕಛೇರಿಗೆ 3 ಸಂಖ್ಯೆ (MFP-A3) ಪ್ರಿಂಟರ್ ಖರೀದಿ.
ಬಿಡ್ ಸಂಖ್ಯೆ: GEM/2024/B/5475090
ಬಿಡ್ ಮೊತ್ತ: ರೂ.7.965ಲಕ್ಷಗಳು. (including all taxes).
ಬಿಡ್ ವಿವರ: 1) ಬಿಡ್ ಪ್ರಾರಂಭ ದಿನಾಂಕ: 08.10.2024. 2) ಬಿಡ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 18-10-2024 ರಂದು ಮಧ್ಯಾಹ್ನ 02.00 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು https;// gem.gov.in/website ನಲ್ಲಿ ಪಡೆಯುವುದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಕನನೀಸ ಮತ್ತು ಒಚ ಮಂಡಳಿ ವಿಭಾಗ, ತುಮಕೂರು.
DIPR/TUM/368/KSMCA/2024-25

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಕ.ನೀ.ನಿ.ನಿ., ನಂ.6, ಕಾಲುವೆ ವಿಭಾಗ, ಬಳ್ಳಾರಿ.
ಅಲ್ಪಾವದಿ ಟೆಂಡರ್ ಪ್ರಕಟಣೆ
ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 1134 ದಿನಾಂಕ:05.10.2024.
ಉಲ್ಲೇಖದಲ್ಲಿನ ಈ ಕಛೇರಿಯ ವ್ಯಾಪ್ತಿಯಲ್ಲಿ ಬರುವ ಮಾನವ ಸಂಪನ್ಮೂಲ ಕಾಮಗಾರಿಗಳಿಗಾಗಿ ಲೆ.ಶೀ2701 ಅಡಿಯಲ್ಲಿ ರೂ.36.40 ಲಕ್ಷಗಳಿಂದ 103.85 ಲಕ್ಷಗಳವರೆಗಿನ 05 ಕಾಮಗಾರಿಗಳಿಗೆ (Supply of manpower) Two Cover ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕವನ್ನು 18.10.2024 ರ ಸಂಜೆ: 4.30 ಗಂಟೆಯವರೆಗೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕವನ್ನು 19.10.2024 ರಂದು ಸಂಜೆ: 5.00 ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು 21.10.2024 ರಂದು ನಿಗದಿಪಡಿಸಲಾಗಿರುತ್ತದೆ, ಅಥವಾ ತಾಂತ್ರಿಕ ಅನುಮೋದನೆ ನೀಡಿದ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು. ಹೆಚ್ಚಿನ ವಿವರಗಳಿಗೆ ಇ-ಪ್ರಕ್ಯೂರ್‌ಮೆಂಟ್ kppp.karnataka.gov.in/#/portal/portal-home ವೆಬ್‌ಸೈಟ್‌ನಲ್ಲಿ / ಸದರಿ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದು.
ಮುಂದುವರೆದು ಇನ್ನಿತರೆ ಯಾವುದಾದರೂ ತಿದ್ದುಪಡಿ, ಮಾರ್ಪಾಡು ಅಥವಾ ಇತರೆ ಬದಲಾವಣೆಗಳಿದ್ದಲ್ಲಿ kppp.karnataka.gov.in/#/portal/portal-home ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು
ಸಹಿ/-ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ನಂ:6 ಕಾಲುವೆ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/525/ಕೆಎಸ್‌ಎಂಸಿಎ/2024-25

ಕೋಲಾರ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ, ಕೋಲಾರ ತಾಲ್ಲೂಕು, ಕೋಲಾರ ಜಿಲ್ಲೆ -563101
ಇ-ಮೇಲ್ ವಿಳಾಸ: gpmudinuru@gmail.com
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸರಬರಾಜು ಟೆಂಡರ್ ಪ್ರಕಟಣೆ ಸಂಖ್ಯೆ: 01/2024-25 ದಿ: 10.10.2024
ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KG-1 ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಕೆ.ಪಿ.ಪಿ.ಪಿ ದ್ವಿ-ಲಕೋಟೆ ಪದ್ಧತಿಯಲ್ಲಿ (Two Cover System) ಸೂಕ್ತ ದರ್ಜೆಯಲ್ಲಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಸರಬರಾಜುದಾರರಿಂದ ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು ಮದನಹಳ್ಳಿ ಗ್ರಾಮ ಪಂಚಾಯಿತಿಗೆ ಸಂಬಂಧಪಟ್ಟಂತೆ 1 ಸಂಖ್ಯೆ ರೂ 9.30 ಲಕ್ಷಗಳನ್ನು ನಿರ್ಮಾಣ ಕಾಮಗಾರಿಗೆ ಸಾಮಗ್ರಿ ಪೂರೈಕೆ ಮಾಡಲು ಸರಬರಾಜು ಟೆಂಡರುಗಳನ್ನು ಆಹ್ವಾನಿಸುತ್ತಿದ್ದು ಇ.ಎಂ.ಡಿ. ಮತ್ತು ಕಾಮಗಾರಿ ಪೂರ್ಣಗೊಳಿಸುವ ಕಾಲಾವಧಿ ಮುಂತಾದ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ https:// kppp.karnataka.gov.in ಮುಖಾಂತರ ಪಡೆದು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಕೆ.ಪಿ.ಪಿ.ಪೋರ್ಟಲ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್-ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಅಪ್‌ಲೋಡ್ ಸಲ್ಲಿಸಲು ಕೊನೆಯ ದಿನಾಂಕ: 10.10.2024 ರಿಂದ 24.10.2024ರ ಸಂಜೆ 4.00 ಗಂಟೆಯವರೆಗೆ. (2) ಟೆಂಡರ್‌ಗಳನ್ನು ಕೆ.ಪಿ.ಪಿ.ಪೋರ್ಟಲ್‌ನಲ್ಲಿ ತೆರೆಯುವ ದಿನಾಂಕ: 25.10.2024 ರಂದು ಸಂಜೆ: 4.30 ಗಂಟೆಯಿಂದ ನಿಗದಿ ಪಡಿಸಲಾಗಿದೆ. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಕೆ.ಪಿ.ಪಿ ಸಹಾಯವಾಣಿ ದೂರವಾಣಿ ಸಂಖ್ಯೆ: +91-8046010000, +91-8068948777 ಅನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/-ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲ್ಲೂಕು ಪಂಚಾಯಿತಿ, ಕೋಲಾರ ತಾಲ್ಲೂಕು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:282/ಕೆಎಸ್‌ಎಂಸಿಎ/2024-25

ಕರ್ನಾಟಕ ಸರಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ.
ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ. ಫೋ.ನಂ. 08372-220307
ಕ್ರ.ಸಂ:ಜಿ.ಆ.ಕು.ಕ.ಸೋ.ಗ/ಎನ್.ಹೆಚ್.ಎಮ್/ಮಾ.ಸ.ಅ.ಇ-ಟೆಂಡರ್/173/2024-25 ದಿನಾಂಕ:14/10/2024
ಟೆಂಡರ ಪ್ರಕಟಣೆ
ಎನ್.ಎಚ್.ಎಮ್ ಹಾಗೂ ವಿವಿಧ ರಾಷ್ಟ್ರೀಯ ಕಾರ್ಯಕ್ರಮಗಳಡಿಯಲ್ಲಿ ಹೊರಗುತ್ತಿಗೆ ಮೇಲೆ ವಿವಿಧ ವೃಂದದ ಸಿಬ್ಬಂದಿಗಳನ್ನು ಮಾನವ ಸಂಪನ್ಮೂಲ ಹೊರಗುತ್ತಿಗೆ ಸಂಸ್ಥೆಯಿಂದ ಹೊರಗುತ್ತಿಗೆ ಮೇಲೆ ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮರು ಅಲ್ಪಾವಧಿ ಟೆಂಡರ್ (DHFWS/2024-25/SE0690/CALL-2) ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.205.12 ಲಕ್ಷಗಳು. ಇ.ಎಮ್.ಡಿ ಮೊತ್ತ ರೂ.3,07,692/- ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ: ದಿನಾಂಕ:14.10.2024 ರಿಂದ 23.10.2024 ಮಧ್ಯಾಹ್ನ 12:00 ಗಂಟೆಯವರೆಗೆ. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ:25.10.2024 ಸಂಜೆ 04:00 ಗಂಟೆ. ಆರ್ಥಿಕ ಲಕೋಟೆ ತೆರೆಯುವ ದಿನಾಂಕ:30.10.2024 ಬೆಳಿಗ್ಗೆ 11:00 ಗಂಟೆ.
ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಅಥವಾ dhogadag@gmail.com/rchogadag@gmail.com ಸಂಪರ್ಕಿಸಬಹುದಾಗಿದೆ.
ಸಹಿ/- ಉಪಾಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಗದಗ
ವಾ.ಸಾ.ಇ/ಗದಗ/290/ ದೇಶಾಂತರಪಟ್ಟಿ/2024-25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಾಮರಾಜನಗರ
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ : 13/2024-25 ದಿನಾಂಕ: 07-10-2024 (02ನೇ ಕರೆ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು ಲೆಕ್ಕ ಶೀರ್ಷಿಕೆ: ನರೇಗಾ ಯೋಜನೆಯಡಿ ಕರೆಯಲು ಕಾಮಗಾರಿಗಳನ್ನು KG-1 & KG-2 (Standard Tender Document) ಪ್ರಕಾರ KPPP ಮುಖಾಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮಗಳು KTPP Act 1999 and KTPP Rule 2000 ರಲ್ಲಿ ಸಿವಿಲ್ ಗುತ್ತಿಗೆದಾರರುಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕರೆಯಲಾಗಿದೆ. ಅಂದಾಜು ಮೊತ್ತ ರೂ. 576.66 ಲಕ್ಷಗಳ ಒಟ್ಟು 18 ಟೆಂಡರ್ ಆಹ್ವಾನಿಸಲಾಗಿದೆ. ಆನ್‌ಲೈನ್ ಟೆಂಡರ್ ಅಪ್‌ಲೋಡ್ ಮಾಡುವ ದಿನಾಂಕ :08-10-2024 ಕೊನೆಯ ದಿನಾಂಕ: 23-10-2024 ಸಂಜೆ 17.00 ಗಂಟೆಯ ವರೆಗೆ, ಹಾಗೂ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 25-10-2024 ಇನ್ನುಳಿದ ಹೆಚ್ಚಿನ ಮಾಹಿತಿಗಳನ್ನು KPPP website www.kppp.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಚೇರಿ ದೂರವಾಣಿ ಸಂಖ್ಯೆ: 08226-223019ಕ್ಕೆ ಸಂಪರ್ಕಿಸಬಹುದು.
ಕಾರ್ಯಪಾಲಕ ಇಂಜಿನಿಯರ್
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ
ಚಾಮರಾಜನಗರ
ವಾ.ಸಾ.ಸಂ.ಇ:ಚಾಮರಾಜನಗರ:332:2024-25

ಬೆಂಗಳೂರು ವಿಶ್ವವಿದ್ಯಾಲಯ
Accredited by NAAC with A++
ಜ್ಞಾನಭಾರತಿ, ಬೆಂಗಳೂರು – 560056.
ಸಂಖ್ಯೆ:ಪಿ.ವಿ-4/ಪಿ.ಜಿ/ಪ್ರವೇಶ/2024-25 ದಿನಾಂಕ: 10.10.2024
ಪ್ರವೇಶಾತಿ ಅಧಿಸೂಚನೆ
ವಿಷಯ: 2024-25ನೇ ಶೈಕ್ಷಣಿಕ ಸಾಲಿಗೆ ಪ್ರವೇಶಕ್ಕಾಗಿ ಖಾಲಿ ಉಳಿದಿರುವ ಸ್ನಾತಕೋತ್ತರ ಪ್ರವೇಶಾತಿಗಾಗಿ ಅರ್ಜಿಯನ್ನು ಆಹ್ವಾನಿಸುವ ಬಗ್ಗೆ.
ಜ್ಞಾನಭಾರತಿ ಆವರಣದಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗ, ಸ್ನಾತಕೋತ್ತರ ಕೇಂದ್ರ, ರಾಮನಗರ, ಸರ್ಕಾರಿ ಕಾಲೇಜುಗಳು ಹಾಗೂ ಸಂಯೋಜಿತ ಕಾಲೇಜುಗಳಲ್ಲಿ 2024-25ನೇ ಶೈಕ್ಷಣಿಕ ಸಾಲಿನ ಖಾಲಿ ಉಳಿದಿರುವ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಸೀಟುಗಳ ಪ್ರವೇಶಾತಿಗಾಗಿ ಅರ್ಜಿಗಳನ್ನು UUCMS ಆನ್‌ಲೈನ್ ಪೋರ್ಟಲ್ https://uucms.karnataka. gov.in/Login/Index ಮುಖಾಂತರ ದಿನಾಂಕ 17.10.2024 ರೊಳಗೆ ಸಲ್ಲಿಸಬಹುದಾಗಿದೆ.
• ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಅರ್ಜಿಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು UUCMS ಆನ್‌ಲೈನ್ ಪೋರ್ಟಲ್ https://uucms.karnataka.gov.in /Login/Index ಮುಖಾಂತರ ಅರ್ಜಿಗಳನ್ನು ಸಲ್ಲಿಸುವುದು.
• ಅರ್ಜಿ ಶುಲ್ಕ ರೂ.300/- (ಕರ್ನಾಟಕ ನಿವಾಸಿಯಾದ ಪ.ಜಾತಿ/ಪ.ಪಂಗಡ/ ಪ್ರವರ್ಗ-1 ಮತ್ತು ತೃತೀಯ ಲಿಂಗಿಗಳಿಗೆ ರೂ.150/-ಮಾತ್ರ) ಗಳನ್ನು ಆನ್‌ಲೈನ್ ಲಿಂಕ್‌ನ್ನು ಬಳಸಿ ಪಾವತಿಸುವುದು.
• ಕೋರ್ಸ್‌ಗಳವಾರು ಖಾಲಿ ಉಳಿದಿರುವ ಸೀಟುಗಳ ವಿವರ (ಸೀಟ್ ಮ್ಯಾಟ್ರಿಕ್ಸ್) ಅರ್ಹತೆ, ಕೋರ್ಸ್‌ಗಳ ಶುಲ್ಕ, ಇತ್ಯಾದಿ ವಿವರಗಳ ಬಗ್ಗೆ ಬೆಂಗಳೂರು ವಿಶ್ವವಿದ್ಯಾಲಯ ಅಂತರ್ಜಾಲ https://bangaloreuniversity.karnataka.gov.in ನಲ್ಲಿ ನೋಡಬಹುದು.
ಸಹಿ/-, ಕುಲಸಚಿವರು
DIPR/CP/RO2512/AAPL/2024-25

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಬೆಳಗಾವಿ
ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ ಇಂಜನೀಯರಿಂಗ್ ವಿಭಾಗ ಚಿಕ್ಕೋಡಿ
Email :preckdeegmail.com ಕಚೇರಿ ದೂರವಾಣಿ/ಫ್ಯಾಕ್ಸ್ ಸಂಖ್ಯೆ: 08338-272131
ಕ್ರ.ಸಂ.:ಕಾನಿಅ/ಪಂರಾಇಂ/ಚಿವಿ/ಡಿಬಿ/ಕೆಪಿಪಿಪಿ/2024-25/2461 ದಿನಾಂಕ : 10-10-2024
(ಕೆಪಿಪಿಪಿ ಅಲ್ಪಾವಧಿ ಟೆಂಡರ ಪ್ರಕಟಣೆ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಚಿಕ್ಕೋಡಿ ಇವರು KW-1 to 4 (Standard Tender Document) ನಿಬಂಧನೆಗೊಳಪಟ್ಟಂತೆ ಪಂಚಾಯತ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಸಿವಿಲ್ ನೊಂದಾಯಿತ ಹಾಗೂ ಇ-ಗುತ್ತಿಗೆ ಕುರಿತು ಕೆಪಿಪಿಪಿ ಇವರಿಂದ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ ವಿವಿಧ ಯೋಜನೆ ಅಡಿಯಲ್ಲಿಯ ಕಾಮಗಾರಿಗಳಿಗೆ ಐಟಂವಾರು ಟರ್ನಕೀ ಆಧಾರದ ಮೇಲೆ ಟೆಂಡರ್ ಆಹ್ವಾನಿಸಲಾಗಿದೆ.

1	Last date of request for issue of blank E-bid document through e-Procurment Date: Other works (SI. No. 1 to 4 works only)	10-10-2024 To 25-10-2024
2	Bid Closing & Submission Date: (SI. No. 1 to 4 works only)	25-10-2024 AT 04:00 PM
3	Financial Bid Opening Date: (SI. No. 1 to 4 works only)	28-10-2024 AT 11:00 AM
4	Pre Bid Meeting Date: (KW-4 Sl. No.1 Work Only)	22-10-2024 AT 05:00 PM
5	Techanical Bid Opening Date: (KW-4 SI. No.1 Work Only)	28-10-2024 AT 11:00 AM
6	Financial Bid Opening Date: (KW-4 SI. No.1 Work Only)	30-10-2024 AT 11:00 AM
	General Works Indent No's:	9470, 9543, 9541, 9542
1	Last date of request for issue of blank E-bid document through e-Procurment Date: Other works (SI. No. 5 to 50 works only)	10-10-2024 To 30-10-2024
2	Bid Closing & submission Date: (SI. No. 5 to 50 works only)	30-10-2024 AT 04:00 PM
3	Financial Bid Opening Date: (SI. No. 5 to 50 works only)	01-11-2024 AT 11:00 AM

General Works Indent No's:	8481, 8483, 8484, 8476, 8478, 8490, 8491, 8492, 8493, 8495, 8496, 8499, 8489, 8659, 8677, 8673, 8668, 8670, 7233, 8726, 8988, 7801, 9392, 5991, 7409, 7878, 7879, 7128, 1271, 7130
SC Works Indent No's:	8477,8497,8501,9382, 9395, 4224, 8669, 8727, 6524, 7235
ST Works Indent No's:	8482, 8480, 8658, 7134, 8946, 6190

ಕಾಮಗಾರಿಗಳ ವಿವರ, ಷರತ್ತು ನಿಬಂಧನೆಗಳಿಗಾಗಿ ಈ ಕಚೇರಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಹಾಗೂ ವೆಬ್ ಸೈಟ್ https://kppp.karnataka.gov.in/ಸಂಪರ್ಕಿಸಬಹುದಾಗಿದೆ.
ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು
ಪಂ.ರಾಜ್ ಇಂ.ವಿಭಾಗ ಚಿಕ್ಕೋಡಿ
ಸಂ:ವಾಸಾಸಂಇ/ಬೆಳಗಾವಿ/973/2024-25

ಟ್ವೀಟೂ-ಖಾರಾ



ಬಸವರಾಜ ಬೊಮ್ಮಾಯಿ, ಸಂಸದ

ಹುಬ್ಬಳ್ಳಿಯ ಪೊಲೀಸ್ ಠಾಣೆಯ ಮೇಲೆ ನಡೆದ ದಾಳಿ ರಾಜದ್ರೋಹದ ಕೆಲಸ. ಗಂಭೀರವಾದ ಪ್ರಕರಣ ಇದಾಗಿದ್ದು, NIA ತನಿಖೆ ನಡೆಯುತ್ತಿದೆ. ಪ್ರಕರಣದ ತನಿಖೆ ನಡೆಸುತ್ತಿರುವಾಗ, ಸರಕಾರ ಅದನ್ನು ಕೈಬಿಡುವುದು ಸರಿಯಲ್ಲ. ರಾಜ್ಯ ಸರಕಾರ ಈ ಮೂಲಕ ತಪ್ಪು ಸಂದೇಶ ನೀಡಿದೆ. ಕಾಂಗ್ರೆಸ್ ಸರಕಾರ ಓಲೈಕೆ ರಾಜಕಾರಣಕ್ಕಾಗಿ ದೇಶದ್ರೋಹಿಗಳ ಮೇಲಿನ ಕೇಸ್‌ಗಳನ್ನು ವಾಪಸ್ ಪಡೆದಿದೆ.



ಆಕಾಶ್‌ಕುಮಾರ್

BJP4Karnataka ನಾಚಿಕೆ ಆಗಬೇಕು ನಿಮಗೆ. ಯಾರ ಕಾರಣದಿಂದ ಇಂದು ಬಿಜೆಪಿ ಕರ್ನಾಟಕದಲ್ಲಿ ಇಂತಹ ಹೀನಾಯ ಸ್ಥಿತಿಗೆ ತಲುಪಿದೆ ಅವರಿಂದಲೇ ಹೇಳಿಕೆ ಕೊಡಿಸುತ್ತಿದ್ದಿರಲ್ಲ, BSBommai ಯವರು ಮುಖ್ಯಮಂತ್ರಿ ಯಾಗಿದ್ದಲಾಗಲೇ ತಾನೇ ಬಾರಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಹೇಳಿ ನಂತರ ನರ ಹೇಡಿಗಳ ಹಾಗೆ ಓಡಿ ಹೋದದ್ದು ನೀವೇ ಅಲ್ಲವೇ.

ಸಂಡೂರಿನಲ್ಲಿ ಉಪ ಚುನಾವಣೆಗೆ ರಣ ಕಹಳೆ ಮೊಳಗಿಸಿದ ಸಿಎಂ ಸಿದ್ದರಾಮಯ್ಯ

ಉಪಚುನಾವಣೆಯಲ್ಲಿ ಬಿಜೆಪಿ ಸೋಲಿಸಿ

ಬಳ್ಳಾರಿ: ರಾಜ್ಯ ಸರಕಾರದ ಬಳಿ ಹಣವಿಲ್ಲ ಎಂದು ಬಿಜೆಪಿಯ ಪೆದ್ದ ಶಿಖಾಮಣಿಗಳು ಸುಳ್ಳುಗಳ ಹೇಳುತ್ತಾ ಕುಳಿತ್ತಿದ್ದಾರೆ. ಸರಕಾರದಲ್ಲಿ ಹಣವಿಲ್ಲದಿದ್ದರೆ ಬರೀ ಸಂಡೂರಿನ ಅಭಿವೃದ್ಧಿಗಾಗಿಯೇ ಕಳೆದ ಒಂದು ವರ್ಷದಲ್ಲಿ ಈ.ತುಕಾರಾಮ್ 1,200 ಕೋಟಿ ರು. ಅನುದಾನ ತರಲು ಸಾಧ್ಯವಾಗುತ್ತಿತ್ತೇ?. ಪಿತೂರಿ ನಡೆಸುತ್ತಿರುವ ಬಿಜೆಪಿಯನ್ನು ಉಪ ಚುನಾವಣೆಯಲ್ಲಿ ಸೋಲಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಸಂಡೂರು ತಾಲೂಕಿನಲ್ಲಿ ಸರಕಾರದ ಸಾಧನಾ ಸಮಾವೇಶ ಉದ್ಘಾಟಿಸಿ, ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿ ಸುಮಾರು 400 ಕೋಟಿ ರು. ಅಧಿಕ ಮೊತ್ತದ ಯೋಜನೆಗಳ ಸಂಡೂರು ಜನತೆಗೆ ಅರ್ಪಿಸಿ ಮಾತನಾಡಿ, ಈ.ತುಕಾರಾಮ್ ಈ ಬಾರಿ ಶಾಸಕರಾದ ಬಳಿಕ 1,200 ಕೋಟಿ ಅನುದಾನ ಸಂಡೂರು ಜನತೆಗಾಗಿ ತಂದಿದ್ದಾರೆ. ಅಭಿವೃದ್ಧಿ ಎಂದರೆ ತುಕಾರಾಮ್. ತುಕಾರಾಮ್ ಎಂದರೆ ಅಭಿವೃದ್ಧಿ ಎನ್ನುವ ಮೂಲಕ ಉಪ ಚುನಾವಣೆಯಲ್ಲಿ ನೂರಕ್ಕೆ ನೂರರಷ್ಟು ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಲು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ತೆರಿಗೆ ಹಣಕ್ಕೆ ಕೇಂದ್ರ ಸರಕಾರದಿಂದ ನಿರಂತರ ವಂಚನೆ: ಸಂಡೂರಿನ ಜನತೆ ಸೇರಿದಂತೆ ರಾಜ್ಯದ ಜನತೆಗೆ ಐದೈದು ಗ್ಯಾರಂಟಿಗಳನ್ನು 56,000 ಕೋಟಿ ವೆಚ್ಚದಲ್ಲಿ ಯಶಸ್ವಿಯಾಗಿ ಜಾರಿ ಮಾಡಿದ್ದೇವೆ. ಬಿಜೆಪಿಯವರು ಮಾತ್ರ ಸುಳ್ಳುಗಳ ಎರಚುತ್ತಾ ಕುಳಿತಿದ್ದಾರೆ. ಸಂಡೂರಿನ ಜನರ ತೆರಿಗೆ ಹಣಕ್ಕೆ, ರಾಜ್ಯದ ಜನರ ತೆರಿಗೆ ಹಣಕ್ಕೆ ಕೇಂದ್ರ ಸರಕಾರ ನಿರಂತರವಾಗಿ ವಂಚಿಸುತ್ತಿದೆ. ನಿಮಗೆ, ನಮಗೆ ಕೇಂದ್ರದಿಂದ ಬರಬೇಕಾದ ಹಣ ಕೊಡಿ ಎಂದು ಮೋದಿಗೆ ಕೇಳುವ ಧೈರ್ಯ ಬಿಜೆಪಿಗೆ, ವಿಜಯೇಂದ್ರಗೆ ಇಲ್ಲ. ಇದು ಸಂಡೂರು ಹಾಗೂ ರಾಜ್ಯದ ಜನತೆಗೆ ಬಗೆದ ದ್ರೋಹ ಅಲ್ಲವೇ? ತೆರಿಗೆ ಕಟ್ಟುವುದರಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಆದರೆ ನಮ್ಮ ಪಾಲು ವಾಪಸ್ ಕೊಡುವುದರಲ್ಲಿ ಕೇಂದ್ರ ಸರಕಾರ ಕೊನೆ ಸ್ಥಾನದಲ್ಲಿದೆ ಎಂದು ಸಿಎಂ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನಲ್ಲಿ ನಡೆದ ಸರಕಾರದ ಸಾಧನಾ ಸಮಾವೇಶವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವರಾದ ಜಮೀರ್ ಅಹಮದ್ ಖಾನ್, ಸಂತೋಷ್ ಎಸ್ ಲಾಡ್, ಸತೀಶ್ ಜಾರಕಿಹೊಳಿ , ಸಂಸದ ಈ.ತುಕಾರಾಂ ಸೇರಿದಂತೆ ಹಲವರು ಇದ್ದರು.

ಫಲಾನುಭವಿಗಳಿಗೆ ಮನೆ ಹಂಚಿಕೆ ಪತ್ರ ವಿತರಣೆ

ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಪ್ರಧಾನಮಂತ್ರಿ ಆವಾಸ್ ಯೋಜನೆ ಸರ್ವರಿಗೂ ಸೂರು ಯೋಜನೆಯಡಿ ಬಳ್ಳಾರಿ ಜಿಲ್ಲೆಯ ಸಂಡೂರಿನ ಸ್ಕಂದಗಿರಿ ಬಡಾವಣೆಯಲ್ಲಿ ನಿರ್ಮಾಣಗೊಳ್ಳುತ್ತಿರುವ 2,172 ಮನೆಗಳ ಪೈಕಿ ಮೊದಲ ಹಂತದಲ್ಲಿ ಪೂರ್ಣಗೊಂಡಿರುವ ಮನೆಗಳ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಲೋಕಾರ್ಪಣೆಗೊಳಿಸಿ, ಫಲಾನುಭವಿಗಳಿಗೆ ಮನೆ ಹಂಚಿಕೆ ಪತ್ರ ವಿತರಿಸಿದರು.

- ಸಂಡೂರು ತಾಲೂಕಿನಲ್ಲಿ ನಾನಾ ಕಾಮಗಾರಿಗಳ ಶಂಕುಸ್ಥಾಪನೆ
- ಮೋದಿ , ವಿಜಯೇಂದ್ರ ವಿರುದ್ಧ ಸಿಎಂ ಕಿಡಿ
- ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲ್ಲಿಸಲು ಸಿಎಂ ಮನವಿ

ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಿ

ಸಂಡೂರಿನಲ್ಲಿ 12 ಸಾವಿರ ಮನೆಗಳ ಕಟ್ಟಿ ಕ್ಷೇತ್ರದ ಜನರಿಗೆ ಹಂಚಿಕೆ ಮಾಡಿರುವುದರ ಶ್ರೇಯಸ್ಸು ಸಂತೋಷ್ ಲಾಡ್- ಈ. ತುಕಾರಾಮ್ ಜೋಡಿಗೆ ಸಲ್ಲಬೇಕು. ಈ. ತುಕಾರಾಮ್ ನನ್ನ ಬಲವಂತಕ್ಕೆ, ಪಕ್ಷದ ಮಾತಿಗೆ ಬೆಲೆ ಕೊಟ್ಟು ಲೋಕಸಭೆಗೆ ಸ್ಪರ್ಧಿಸಿದರು. ಈ.ತುಕರಾಮ್ ಸಂಡೂರು ಜನತೆಯ ಮೇಲೆ ಬಹಳ ಪ್ರೀತಿ, ವಿಶ್ವಾಸವಿಟ್ಟುಕೊಂಡಿದ್ದಾರೆ. ಈ.ತುಕಾರಾಮ್ ರಂತಹ ಕಾಯಕ ನಾಯಕ ನಿಮಗೆ ಬೇರೆಲ್ಲೂ ಸಿಗಲ್ಲ. ಹೀಗಾಗಿ ಸಂಡೂರು ಉಪಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗೆಲ್ಲಿಸುವ ಮೂಲಕ ನಿಮ್ಮ ಆಶೀರ್ವಾದ ಹೀಗೇ ಮುಂದುವರಿಯಲಿ ಎಂದು ಸಿಎಂ ಸಿದ್ದರಾಮಯ್ಯ ವಿನಂತಿಸಿದರು.

ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಆಕ್ರೋಶ

ಗೌರಿ ಹತ್ಯೆ ಆರೋಪಿಗಳನ್ನು ಸನ್ಮಾನಿಸುವುದು ಹೇಯ ಕೃತ್ಯ

ವಿಜಯಪುರ: ಗೌರಿ ಹತ್ಯೆಯ ಆರೋಪಿಗಳಿಗೆ ಹಿಂದೂಪರ ಹೋರಾಟಗಾರ ಉಮೇಶ್ ವಂದಾಲ್ ಹಾಗೂ ಕಂಪನಿ ಸನ್ಮಾನ ಮಾಡಿದ್ದನ್ನು ಮಾಧ್ಯಮಗಳಲ್ಲಿ ನೋಡಿದ್ದೇನೆ. ಯಾರ ಜೀವ ತೆಗೆದುಕೊಳ್ಳಲು ಯಾರಿಗೂ ಅಧಿಕಾರ ಇಲ್ಲ ಎಂಬುದನ್ನು ಇವರು ಅರಿತು ಕೊಳ್ಳ ಬೇಕು. ಎಂ ಎಂ ಕಲಬುರ್ಗಿ ಅವರು ವಿಜಯ ಪುರ ಜಿಲ್ಲೆಯ ಹೆಮ್ಮೆಯ ಪುತ್ರ. ಇಂಥ ಮಹಾನ್ ವ್ಯಕ್ತಿಗಳ ಹತ್ಯೆ ಮಾಡಿದ ಆರೋಪಿಗಳಿಗೆ ಸನ್ಮಾನ ಮಾಡುವುದು ಹೇಯ ಕೃತ್ಯವಾಗಿದೆ ಎಂದು ಸಚಿವ ಡಾ.ಎಂ.ಬಿ.ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಈ ರೀತಿ ಗೌರಿ ಲಂಕೇಶ್ ಹಾಗೂ ಇತರ ಚಿಂತಕರ ಹತ್ಯೆಯ ಆರೋಪಿಗಳಿಗೆ ಸನ್ಮಾನ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಲು ಚಿಂತನೆ ಮಾಡಲಾಗುತ್ತದೆ ಎಂದರು.

ಕೆಐಎಡಿಬಿಗೆ ಜಮೀನು ವಾಪಸ್ ನೀಡಿದ ಖರ್ಗೆ ಕುಟುಂಬ ವಿಚಾರ ಕುರಿತು ಸಚಿವರು ಪ್ರತಿಕ್ರಿಯಿಸಿ, ನನಗೆ ಗೊತ್ತಿಲ್ಲ, ಅಮೆರಿಕ ಪ್ರವಾಸ ಬಳಿಕ ನೇರವಾಗಿ ಬೆಂಗಳೂರಿಗೆ ಹೋಗದೆ ವಿಜಯಪುರಕ್ಕೆ ಬಂದಿದ್ದೇನೆ. ನಾಳೆ, ನಾಡಿದ್ದು ಬೆಂಗಳೂರಿಗೆ ಹೋದ ಬಳಿಕ ಆ ಕುರಿತು ನೋಡುತ್ತೇನೆ. ಈ ಕುರಿತು ನೋಡದೆ ನಾ ಏನು ಹೇಳಲ್ಲ ಎಂದು ಹೇಳಿಕೆ ನೀಡಿದರು.

ಮುಡಾ ಹಗರಣ ವಿಚಾರದಲ್ಲಿ ಸಿಎಂ ವಿಚಾರಣೆಯಾಗಬೇಕು, ಬಂಧನವಾಗಬೇಕೆಂಬ ದೂರುದಾರ ಸ್ನೇಹಮಯಿ ಕೃಷ್ಣ ಒತ್ತಾಯ ವಿಚಾರಕ್ಕೆ ಪ್ರತಿಕ್ರಿಯಿಸಿ, ಯಾವುದಕ್ಕೆ ಬಂಧನವಾಗಬೇಕು. ದೂರುದಾರರಿಗೆ ರಕ್ಷಣೆ ನೀಡಲು ನಮ್ಮ ಇಲಾಖೆ ಇದೆ. ಮುಖ್ಯಮಂತ್ರಿ ಆಗಲಿ, ಸರಕಾರವಾಗಲಿ ದೂರುದಾರರಿಗೆ ಬೆದರಿಕೆ ಹಾಕುವ ಕೆಲಸ ಮಾಡಲ್ಲ. ದೂರುದಾರರು ನಿರ್ಭೀತಿಯಿಂದ ಇರಬಹುದು, ದೂರುದಾರರಿಗಾಗಿ ಬಂಧನ ಮಾಡಬೇಕಾ ಎಂದು ಹೇಳಿದರು.

ಬಿಜೆಪಿ ವಿರುದ್ಧ ವಾಗ್ದಾಳಿ

ಕರ್ನಾಟಕ ರಾಜ್ಯದಲ್ಲಿ ಅಜಾನ್, ಹಲಾಲ್, ಹಿಜಾಬ್ ಎಂದು ನಾಲ್ಕು ವರ್ಷಗಳ ಕಾಲ ಬಿಜೆಪಿಯವರು ಅಧಿಕಾರ ನಡೆಸಿ 40% ವೊಂದನ್ನು ಬಿಟ್ಟು ಏನೂ ಅಭಿವೃದ್ಧಿ ಮಾಡಲಿಲ್ಲ. ಅಲ್ಲಾ ಅಜಾನ್ ವಿವಾದ ಮಾಡಿದ್ದು ಪ್ರೋತ್ಸಾಹ ಕೊಡುವಂತದ್ದಲ್ಲವೇ.? ನಮ್ಮ ಕಾಂಗ್ರೆಸ್ ಪಕ್ಷ ಹಿಂದೂಗಳನ್ನು ಗೌರವಿಸುತ್ತದೆ. ಹಿಂದೂಗಳಿಗೂ, ಮುಸಲ್ಮಾನರಿಗೂ, ಜೈನ್, ಸಿಖ್ ಹೀಗೆ ಎಲ್ಲಾ ಜಾತಿ, ಧರ್ಮದವರನ್ನು ಗೌರವಿಸುತ್ತೇವೆ, ಪ್ರೋತ್ಸಾಹ ನೀಡುತ್ತೇವೆ. ಎಲ್ಲರನ್ನೂ ರಕ್ಷಣೆ ಮಾಡುತ್ತೇವೆ. ಬಿಜೆಪಿಯವರ ಹಾಗೆ ಒಡೆದಾಳುವ ನೀತಿಯನ್ನು ನಾವು ಮಾಡಲ್ಲ ಎಂದು ಸಚಿವ ಎಂ.ಬಿ.ಪಾಟೀಲ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಸಮಾಚಾರ ಸಣ್ಣದಲ್ಲ

ಹಣ ಪಡೆದ ದಾಖಲೆ ನೀಡಲು ಸಿದ್ಧ

ಮಾಗಡಿ: ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ರವರು ಮುಖ್ಯಮಂತ್ರಿಗಳಾಗಿದ್ದಾಗ ಹಣ ಪಡೆದು ಕಡತಕ್ಕೆ ಸಹಿ ಹಾಕಿದ್ದಾರೆ ಎಂದು ನಾನು ರಾಮನಗರದ ಚಾಮುಂಡೇಶ್ವರಿ ದೇವಸ್ಥಾನದ ಮುಂದೆ ಕರ್ಪೂರ ಹಚ್ಚುತ್ತೇನೆ, ಎಚ್‌ಡಿಕೆ ಪರವಾಗಿ ಯಾರಾದರೂ ಬಂದು ಅವರು ಹಣ ಪಡೆದಿಲ್ಲ ಎಂದು ದೇವಸ್ಥಾನದಲ್ಲಿ ಆಣೆ ಮಾಡುತ್ತಾರಾ ಎಂದು ಶಾಸಕ ಎಚ್.ಸಿ. ಬಾಲಕೃಷ್ಣ ಸವಾಲು ಹಾಕಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎಚ್‌ಡಿಕೆ ಒಂದೇ ಒಂದು ಕಡತಕ್ಕೆ ಹಣ ಪಡೆಯದೆ ಸಹಿ ಹಾಕಿದ್ದಾರೆ ಎಂದು ಅವರ ಪರವಾಗಿ ಯಾರಾದರೂ ಪ್ರಮಾಣ ಮಾಡಲಿ. ಅವರು ದುಡ್ಡು ತೆಗೆದುಕೊಂಡೇ ಸಹಿ ಮಾಡಿದ್ದಾರೆ ಎಂದು ನಾನು ಕರ್ಪೂರ ಹಚ್ಚುತ್ತೇನೆ. ಕುಮಾರಸ್ವಾಮಿ ಈ ರೀತಿ ಉಡಾಫೆ ಮಾತುಗಳನ್ನು ನಿಲ್ಲಿಸಬೇಕು. ಬೇರೆಯವರ ವಿರುದ್ಧ ಸುಮ್ಮನೇ ಆರೋಪ ಮಾಡುವುದು ಸೂಕ್ತವಲ್ಲ. ಸಾಕ್ಷಿ ಸಮೇತ ಎಚ್.ಡಿ. ಕುಮಾರಸ್ವಾಮಿ ಹಣ ಪಡೆದ ಬಗ್ಗೆ ದಾಖಲೆ ನೀಡಲು ಸಿದ್ಧನಿದ್ದೇನೆ ಎಂದು ಬಾಲಕೃಷ್ಣ ತಿಳಿಸಿದರು.

ಲಾರಿ-ಕಾರು ಡಿಕ್ಕಿ: ಮೂವರು ಸಾವು

ಸಿರವಾರ: ತಾಲೂಕಿನ ಕಲ್ಲೂರು ಸಮೀಪ ಲಾರಿ ಮತ್ತು ಕಾರಿನ ನಡುವೆ ಸೋಮವಾರ ಸಂಜೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಕಾರಿನಲ್ಲಿದ್ದ ಮೂವರು ಸ್ಥಳದಲ್ಲೇ ದಾರುಣವಾಗಿ ಮೃತಪಟ್ಟಿದ್ದಾರೆ. ಮಾನ್ವಿ ನಗರದ ಕೋನಪೂರು ಪೇಟೆಯ ಅರ್ಫಾಜ್ , ಸಕ್ಸ್, ಮಕ್ಬುಲ್ ಮೃತ ಪಟ್ಟವರು. ಅಪಘಾತದ ಬಳಿಕ ಲಾರಿ ಚಾಲಕ ಸ್ಥಳದಿಂದ ಪರಾರಿಯಾಗಿದ್ದಾನೆ. ಸಿರವಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಿರವಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಬಿಜೆಪಿ ಮುಖಂಡ ಸುಗೂರೆ ನಾಪತ್ತೆ

ಬೀದರ್: ಹಣಕಾಸಿನ ವ್ಯವಹಾರ ವಿಚಾರಕ್ಕೆ ಮನನೊಂದು ಬಿಜೆಪಿ ಮುಖಂಡ ಹಾಗೂ ಉದ್ಯಮಿ ನಾಪತ್ತೆಯಾಗಿರುವ ಘಟನೆ ಬೀದರ್ ಜಿಲ್ಲೆಯ ಬಸವಕಲ್ಯಾಣ ಪಟ್ಟಣದಲ್ಲಿ ನಡೆದಿದೆ. ಬಿಜೆಪಿ ಮುಖಂಡ ಹಾಗೂ ಬಸವಕಲ್ಯಾಣ ಶಾಸಕ ಶರಣು ಸಲಗರ್ ಆಪ್ತರಾಗಿರುವ ಸಂಜೀವಕುಮಾರ್ ಸುಗೂರೆ ನಾಪತ್ತೆಯಾಗಿದ್ದು, ಜಿಲ್ಲಾ ಹಾಗೂ ರಾಜ್ಯ ಬಿಜೆಪಿಯ ಪ್ರಮುಖ ನಾಯಕರ ಜೊತೆ ಸುಗೂರೆ ಉತ್ತಮ ಒಡನಾಟ ಹೊಂದಿದ್ದಾರೆ. ಅ.13 ಭಾನುವಾರದಿಂದ ತಮ್ಮ ಮನೆಯಿಂದಲೇ ನಾಪತ್ತೆಯಾಗಿದ್ದಾರೆ. ಹಣಕಾಸಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ನಾಲ್ಕೈದು ಜನರ ಹೆಸರು ಉಲ್ಲೇಖಿಸಿ ಪತ್ರ ಬರೆದಿದ್ದಾರೆ. ಮೊಬೈಲ್, ಕಾರು ಸೇರಿದಂತೆ ಯಾವುದನ್ನು ತೆಗೆದು ಕೊಂಡು ಹೋಗದೇ ನಡೆದುಕೊಂಡು ಹೋಗಿರುವ ಶಂಕೆ ವ್ಯಕ್ತವಾಗಿದೆ.

ಸರೋಜಿನಿ ಪಾಟೀಲ ವಿರುದ್ಧ ಕುಟುಂಬಸ್ಥರ ಆಕ್ರೋಶ

ವೈದ್ಯೆ ನಿರ್ಲಕ್ಷ್ಯ:ಬಾಣಂತಿ ಸಾವು

ಶಹಾಪುರ: ಸರಕಾರಿ ಆಸ್ಪತ್ರೆಯ ವೈದ್ಯರ ಕರ್ತವ್ಯದಲ್ಲಿ ನಿರ್ಲಕ್ಷ್ಯತನದಿಂದ ಹೆರಿಗೆ ಮಾಡಿಸಿದ್ದ ಪರಿಣಾಮ ಬಾಣಂತಿಯೊಬ್ಬಳು ಮೃತಪಟ್ಟಿರುವ ಕುರಿತು ಆರೋಪವೊಂದು ಕೇಳಿಬಂದಿದೆ. ಜಿಲ್ಲೆಯ ದೋರನಹಳ್ಳಿ ಗ್ರಾಮದ ಭವಾನಿ ಎಂಬ ಯುವತಿ ಮೃತ ದುರ್ದೈವಿ. ಈ ಬಾಣಂತಿ ಸಾವಿಗೆ ಶಹಾಪುರ ತಾಲೂಕು ಆಸ್ಪತ್ರೆಯ ವೈದ್ಯೆ ಸರೋಜಿನಿ ಪಾಟೀಲ ಅಜಾಗರೂಕತೆಯೇ ಕಾರಣವೆಂದು ಕುಟುಂಬಸ್ಥರು ದೂರಿದ್ದಾರೆ.

ಆಗಿರೋದೇನು?: ಶಹಾಪುರ ತಾಲೂಕು ಆಸ್ಪತ್ರೆಗೆ ಯುವತಿಯನ್ನು ಹೆರಿಗೆಗೆಂದು ಕುಟುಂಬಸ್ಥರು ಕರೆದುಕೊಂಡು ಬಂದಿದ್ದಾರೆ. ಈ ವೇಳೆ ಕರ್ತವ್ಯದಲ್ಲಿದ್ದ ವೈದ್ಯೆ ಸರೋಜಾ ಪಾಟೀಲ, ರಕ್ತ ತಪಾಸಣೆ ನಡೆಸಿ ವರದಿ ಬಂದ ನಂತರ ಹೆರಿಗೆ ಮಾಡಿಸುವ ಬದಲು ರಿಪೋರ್ಟ್ ಬರುವ ಮುನ್ನವೇ ಸಿಜೆರಿಯನ್ ಹೆರಿಗೆ ಮಾಡಿಸಿದ್ದು, ಇದಾದ ನಂತರ ಬಂದ ರಕ್ತ ತಪಾಸಣೆ ವರದಿಯಲ್ಲಿ ಬಾಣಂತಿಗೆ ಕಾಮಾಲೆ ಇರುವುದು ಗೊತ್ತಾಗಿದೆ.ಹೀಗಾಗಿ ಹೆರಿಗೆಯಾದ ಒಂದು ಗಂಟೆ ಬಳಿಕ ತೀವ್ರ ರಕ್ತಸ್ರಾವದಿಂದ ಬಾಣಂತಿ ಅಸ್ವಸ್ಥಳಾಗಿದ್ದಾಳೆ. ಇದರಿಂದ ಬಾಣಂತಿಯನ್ನು ತಕ್ಷಣ ಕಲಬುರಗಿಯ ಖಾಸಗಿ ಆಸ್ಪತ್ರೆಯೊಂದಕ್ಕೆ ರವಾನಿಸಲು ಸೂಚನೆ ನೀಡಿ ಸ್ವತಃ ವೈದ್ಯರೇ ದಾಖಲಿಸಿದ್ದಾರೆ. ಅಲ್ಲಿಯೂ ಕೂಡಾ ಆಪರೇಷನ್ ಮಾಡಲು 10 ಲಕ್ಷ ಬಿಲ್ ಪಾವತಿ ಮಾಡಿದರು ಸಹಿತ ಯುವತಿ ಆರೋಗ್ಯದಲ್ಲಿ ಚೇತರಿಕೆ ಕಾಣಲಿಲ್ಲ. ಬಳಿಕ ಮಹಾರಾಷ್ಟ್ರದ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿತ್ತು. ಇದಾದ ನಂತರ ಭಾನುವಾರ ಹೊಟ್ಟೆ ನೋವಿನಿಂದ ಬಳಲುತ್ತಿದ್ದ ಕಾರಣ ಶಹಾಪುರ ತಾಲೂಕು ಆಸ್ಪತ್ರೆಗೆ ಕರೆ ತಂದರೂ ಸೋಮವಾರ ನಸುಕಿನ ಜಾವ ಚಿಕಿತ್ಸೆ ಫಲಕಾರಿಯಾಗದೇ ಬಾಣಂತಿ ಮೃತಪಟ್ಟಿದ್ದಾಳೆ.

ಮಸೀದಿ ಎದುರು ಹಾಡು ಹಾಕಿದ್ದಕ್ಕೆ ಹಿಂದೂ ಯುವಕನ ಮೇಲೆ ಹಲ್ಲೆ

ದುರ್ಗಾದೇವಿ ಮೆರವಣಿಗೆ ವೇಳೆ ಕೋಮುಗಲಭೆ

ಬೆಳಗಾವಿ/ಹುಕ್ಕೇರಿ: ದುರ್ಗಾದೇವಿ ಮೂರ್ತಿ ವಿಸರ್ಜನೆ ವೇಳೆ ಮಸೀದಿ ಮುಂದೆ ಹಾಡು ಹಾಕಿದ್ದ ಕಾರಣಕ್ಕೆ ಮುಸ್ಲಿಂ ಯುವಕರು ಹಿಂದೂ ಯುವಕರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಲ್ಲದೆ ವಾಹನಗಳ ಮೇಲೆ ಕಲ್ಲು ಎಸೆದ ಘಟನೆ ಹುಕ್ಕೇರಿ ತಾಲೂಕಿನ ಸೊಲ್ಲಾಪುರ ಗ್ರಾಮದಲ್ಲಿ ನಡೆದಿದೆ.

ಭಾನುವಾರ ರಾತ್ರಿ ಸೊಲ್ಲಾಪುರ ಗ್ರಾಮದಲ್ಲಿ ದುರ್ಗಾದೇವಿ ಮೂರ್ತಿ ವಿಸರ್ಜನಾ ಮೆರವಣಿಗೆ ನೆರವೇರಿತ್ತು. ಗ್ರಾಮದ ಮಸೀದಿ ಬಳಿ ಮೆರವಣಿಗೆ ಬಂದ ಸಂದರ್ಭದಲ್ಲಿ ಹಾಡು ಬಂದ್ ಮಾಡುವಂತೆ ಮುಸ್ಲಿಂ ಯುವಕರು ತಕರಾರು ತೆಗೆದಿದ್ದಾರೆ. ಪರಿಸ್ಥಿತಿ ತಿಳಿಗೊಳಿಸಿ ಮೆರವಣಿಗೆ ಮುಂದೆ ಸಾಗಿದೆ. ನಂತರ ದೇವಿ ಪ್ರಸಾದ ಮುಗಿಸಿಕೊಂಡು ವಾಪಸ್ ಮರಳುವ ಸಂದರ್ಭದಲ್ಲಿ ಯುವಕ ಅಮಿತ ನಾಯಿಕ ಜೊತೆ ಫೈರೋಜ್ ಎಂಬಾತ ಜಗಳ ಮಾಡಿದ್ದಾನೆ.

ಅಷ್ಟಕ್ಕೆ ಸುಮ್ಮನಾಗದ ಫೈರೋಜ್ ತನ್ನ ಜೊತೆಗೆ 15 ಮುಸ್ಲಿಂ ಯುವಕರನ್ನು ಕರೆದುಕೊಂಡು ಬಂದು ಅಮಿತ್ ಮೇಲೆ ಹಲ್ಲೆ ಮಾಡಿದ್ದಾರೆ. ನಂತರ ಇನ್ನೂ ಹಲವಾರು ಮುಸ್ಲಿಂ ಯುವಕರು ಸೇರಿಕೊಂಡು ಸಿಕ್ಕ ಕಡೆಗಳಲ್ಲಿ ಕಲ್ಲು ತೂರಾಟ ನಡೆಸಿದ್ದಾರೆ. ಈ ಸಂದರ್ಭದಲ್ಲಿ ಎರಡು ಬೈಕ್ ಹಾಗೂ ಕಾರು ಜಖಂ ಕೊಂಡಿದ್ದು ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ.

ಘಟನೆ ನಂತರ ಸಂಕೇಶ್ವರ ಪಟ್ಟಣದಲ್ಲಿ ಪೊಲೀಸರು ಹಿಂದು, ಮುಸ್ಲಿಂ ಸಮುದಾಯದ ಮುಖಂಡರ ಶಾಂತಿ ಸಭೆ ನಡೆಸಿದ್ದಾರೆ. ಈ ವೇಳೆ ಸಭೆಯಲ್ಲಿ ಮುಸ್ಲಿಂ ಸಮುದಾಯದ ವಿರುದ್ಧ ಮಹಿಳೆಯರು ಆಕ್ರೋಶ ಹೊರಹಾಕಿದ್ದಾರೆ. ಹಲ್ಲೆಕೋರರನ್ನು ಬಂಧಿಸುವ ಬದಲು ಶಾಂತಿ ಸಭೆ ನಡೆಸುತ್ತಿದ್ದೀರಿ ಎಂದು ಪೊಲೀಸರ ವಿರುದ್ಧ ಮಹಿಳೆಯರು ಅಸಮಾಧಾನ ಹೊರಹಾಕಿದ್ದಾರೆ. ಗಲಾಟೆಯಿಂದಾಗಿ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದ್ದು, ಎರಡು ಕೆಎಸ್‌ಆರ್ ಪಿ ತುಕುಡಿ ನಿಯೋಜನೆ ಮಾಡಲಾಗಿದೆ.

ಗಲಾಟೆಯಲ್ಲಿ ಬೈಕ್ ಜಖಂಗೊಡಿರುವುದು.

ಮೈಕ್‌ನಲ್ಲಿ ಗಲಾಟೆಗೆ ಕರೆ ಕೊಟ್ಟ ಯುವಕರು

ಹುಕ್ಕೇರಿ ತಾಲೂಕಿನ ಸೊಲ್ಲಾಪುರ ಗ್ರಾಮದಲ್ಲಿ ದುರ್ಗಾದೇವಿ ಮೂರ್ತಿ ವಿಸರ್ಜನಾ ಮೆರಣಿಗೆ ಗಲಾಟೆಗೆ ಮಸೀದಿ ಮೈಕ್ ನಲ್ಲಿ ಕರೆ ಕೊಟ್ಟಿರುವುದೇ ಪ್ರಮುಖ ಕಾರಣ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ಹಿಂದೂ ಯುವಕರ ಜೊತೆ ಗಲಾಟೆ ಪ್ರಾರಂಭವಾಗುತ್ತಿ ದ್ದಂತೆ ಕೆಲ ಮುಸ್ಲಿಂ ಕಿಡಿಗೇಡಿಗಳು ತಕ್ಷಣ ಮಸೀದಿ ಮೈಕ್ ನಲ್ಲಿ ನಮ್ಮ ಮೇಲೆ ಹಲ್ಲೆ ನಡೆದಿದ್ದು ಎಲ್ಲರೂ ಮಸೀದಿಗೆ ಬರುವಂತೆ ಕರೆ ಕೊಟ್ಟಿದ್ದಾರೆ. ಮಸೀದಿ ಮೈಕ್ ನಲ್ಲಿ ಕರೆ ಕೊಟ್ಟ ತಕ್ಷಣ ಹಲವಾರು ಮುಸ್ಲಿಂ ಯುವಕರು ಮಸೀದಿಗೆ ಧಾವಿಸಿದ್ದಲ್ಲೆ ಸಿಕ್ಕ, ಸಿಕ್ಕ ಕಡೆಗಳಲ್ಲಿ ಕಲ್ಲು ತೂರಾಟ ನಡೆಸಿದ್ದಾರೆ. ಇನ್ನು ಹಿಂದು ಯುವಕರನ್ನ ಟಾರ್ಗೆಟ್ ಮಾಡಿದ ಮುಸ್ಲಿಮರು,ಕೇಸರಿ ಶಾಲು ಧರಿಸಿದ್ದ ಯುವಕರ ಮೇಲೆ ಕಲ್ಲು, ಕಬ್ಬಿಣದ ರಾಡ್‌ಗಳ ಮೂಲಕ ಹಲ್ಲೆ ಮಾಡಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಹಲ್ಲೆಗೊಳಗಾದ ಐವರು ಗಂಭೀರವಾಗಿ ಗಾಯಗೊಂಡಿದ್ದು ಸಂಕೇಶ್ವರ ಸರಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತಪ್ಪು ಮಾಡಿದ್ದಕ್ಕೆ ಭೂಮಿ ವಾಪಸ್ ಕೊಟ್ಟಿದ್ದಾರೆ: ಶೆಟ್ಟರ್ ಆರೋಪ

ಮಲ್ಲಿಕಾರ್ಜುನ ಖರ್ಗೆಗೆ ಸರಕಾರಿ ಭೂಮಿ ಮೇಲೆ ಯಾಕೆ ಪ್ರೀತಿ?

ಹುಬ್ಬಳ್ಳಿ: ಖರ್ಗೆ ಅವರೊಬ್ಬ ಹಿರಿಯ ರಾಜಕಾರಣಿಗಳು. ಅವರಿಗೆ ಯಾಕೆ ಸರಕಾರಿ ಭೂಮಿ ಮೇಲೆ ಯಾಕೆ ಪ್ರೀತಿ ಗೊತ್ತಿಲ್ಲ. ಸ್ವಂತ ಭೂಮಿ ಖರೀದಿಸಿ ಟ್ರಸ್ಟ್ ನಡೆಸಬಹುದಿತ್ತು. ಅವರು ತಪ್ಪು ಮಾಡಿದಕ್ಕೆ ಭೂಮಿಯನ್ನು ವಾಪಾಸ್ ಕೊಟ್ಟಿದ್ದಾರೆ. ಇಲ್ಲದೇ ಹೋದಲ್ಲಿ ಹೆದರುವ ಅವಶ್ಯಕತೆ ಇರಲಿಲ್ಲ ಎಂದು ಜಗದೀಶ್ ಶೆಟ್ಟರ್ ಆರೋಪಿ ಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಅಲ್ಪಸಂಖ್ಯಾತರ ತುಷ್ಟೀಕರಣಕ್ಕಾಗಿ ಕಾಂಗ್ರೆಸ್ ಪಕ್ಷ ಎಲ್ಲ ರೀತಿಯ ಕಾನೂನು ಬಾಹಿರ ಚಟುವಟಿಕೆಗಳನ್ನು ಮಾಡಲು ಸಿದ್ಧವಾಗಿದೆ. ನಿಜವಾದ ಭಯೋತ್ಪಾದಕರು ಬೇರೆಡೆ ಇದ್ದಾರೆ. ಆದರೆ ಸಿಎಂ ಸಿದ್ದರಾಮಯ್ಯ ಆಡುವ ಮಾತುಗಳು ಯಾಕೆ ಕೆಳಮಟ್ಟಕ್ಕೆ ಹೋಗಿದೆ ಗೊತ್ತಾಗುತ್ತಿಲ್ಲ ಎಂದರು.

ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ಕೇಂದ್ರದಲ್ಲಿ ಮೋದಿ ಭಯೋತ್ಪಾದಕರನ್ನು ಹತ್ತಿಕ್ಕುವ ಕೆಲಸ ಮಾಡಿದ್ದಾರೆ. ರಾಜಕೀಯ ನಾಯಕರ ನಡುವೆ ಭಯೋತ್ಪಾದಕ ಪದ ಬಳಕೆ ಸರಿಯಲ್ಲ. ಹಳೇಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿ ಕಠಿಣ ಕಾನೂನುಗಳನ್ನು ಹಾಕಲಾಗಿತ್ತು. ಕಡಿಮೆ ಸಮಯದಲ್ಲಿ ಸಾವಿರಾರು ಜನ ಸೇರಿ ಗಲಭೆ ಮಾಡಿದ್ದರು. ಆಗಿನ ಕಮಿಷನರ್ ಲಾಬೂರಾಮ್ ಅವರು ಸ್ಥಳಕ್ಕೆ ದೌಡಾಯಿಸಿ ನಿಯಂತ್ರಣ ಮಾಡಿ, ಅನಾಹುತ ತಪ್ಪಿಸಿದ್ದಾರೆ. ಇದೊಂದು ಪೂರ್ವ ನಿಯೋಜಿತ ಕೃತ್ಯವಾಗಿದೆ. ಇದೀಗ ಕಾಂಗ್ರೆಸ್ ಪಕ್ಷ ಗಲಭೆ ಪ್ರಕರಣವನ್ನು ವಾಪಾಸ್ ಪಡೆದು ಸಂವಿಧಾನಕ್ಕೆ ಅಗೌರವ ಕೊಡುತ್ತಿದೆ. ಮತಬ್ಯಾಂಕ್‌ಗೆ ಸಮಾಜದ ವ್ಯವಸ್ಥೆ ಹಾಳು ಮಾಡುತ್ತಿದೆ ಎಂದು ಹರಿಹಾಯ್ದರು.

> **ಕಾಂಗ್ರೆಸ್ ಸರಕಾರದ ನಿರ್ಧಾರಗಳು ಮುಂದೆ ಕಾನೂನು ಸುವ್ಯವಸ್ಥೆ ಹದಗೆಡಲು ಕಾರಣವಾಗುತ್ತದೆ. ಜಾತಿಗಳ ನಡುವೆ ಹೋರಾಟ ನಡೆಯಲು ಕಾರಣವಾಗುತ್ತದೆ. ಈ ನಿರ್ಧಾರವನ್ನು ಕಾಂಗ್ರೆಸ್ ಕೈಬಿಡಬೇಕು. ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ವಾಪಾಸ್ ಪಡೆಯಲು ಸಾಧ್ಯವೇಯಿಲ್ಲ. ಆದರೆ ಕಾಂಗ್ರೆಸ್ ಕಾನೂನು ಬಾಹಿರವಾಗಿ ಪ್ರಕರಣವನ್ನು ವಾಪಾಸ್ ಪಡೆಯುವ ಕೆಲಸ ಮಾಡಿದೆ. ಈ ಪ್ರಕರಣವನ್ನು ಕೋರ್ಟ್ ವಜಾ ಮಾಡಲು ನಿರ್ಧಾರ ಮಾಡಬೇಕು.**
>
> **-ಜಗದೀಶ್ ಶೆಟ್ಟರ್,** ಸಂಸದ

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿಕೆ

ಚನ್ನಪಟ್ಟಣಕ್ಕೆ ಎನ್‌ಡಿಎ ಅಭ್ಯರ್ಥಿ ವಾರದಲ್ಲಿ ಅಂತಿಮ

ಹೊಳೆನರಸೀಪುರ: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಎನ್‌ಡಿಎ ಅಭ್ಯರ್ಥಿಯನ್ನು ಕಣಕ್ಕಿಳಿಸಲಾಗುವುದು. ದೆಹಲಿಯಲ್ಲಿ ಬಿಜೆಪಿ ನಾಯಕರ ಜೊತೆಗೆ ಚರ್ಚಿಸಿ ವಾರದಲ್ಲಿ ಅಂತಿಮಗೊಳಿಸಲಾಗುವುದು ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅಭ್ಯರ್ಥಿಯಾದರೆ ನಾನೂ ಅಭ್ಯರ್ಥಿ ಆಗಲೇಬೇಕಲ್ಲ? ಇನ್ನೂ ಹಲವರ ಹೆಸರುಗಳಿವೆ ಎಂದರು. ಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿ, ಕೆಲವು ಎನ್‌ಐಎ ವ್ಯಾಪ್ತಿಯ ಪ್ರಕರಣವೂ ಇದ್ದು ಅದನ್ನು ಹಿಂಪಡೆಯಲಾಗುವುದಿಲ್ಲ. ಅಮಾಯಕರಿದ್ದರೆ ವಾಪಸ್ ಪಡೆಯಲು ನಮ್ಮ ಅಭ್ಯಂತರವಿಲ್ಲ. ಸಮಾಜಘಾತುಕ ಹಿನ್ನೆಲೆಯವರಿಗೆ ರಕ್ಷಣೆ ಕೊಡುವುದು ಮಹಾ ಅಪರಾಧವಾಗುತ್ತದೆ. ಸರಕಾರ ಏನೇನು ಮಾಡುತ್ತದೆಯೋ ನೋಡೋಣ ಎಂದು ಹೇಳಿದರು.

500 ಕೋಟಿ ಕಟ್ಟಿಸಿಕೊಂಡು ದೇವಗಿರಿಯಲ್ಲಿ ಗಣಿಗಾರಿಕೆಗೆ ಕುದುರೆಮುಖ ಕಬ್ಬಿಣ ಮತ್ತು ಅದಿರು ಕಂಪನಿಗೆ ಸರಕಾರವೇ ಅನುಮತಿ ನೀಡಿದೆ. ಅದಿರು ಉತ್ಪಾದನೆಯಾದ ಮೇಲೆ ಅರಣ್ಯೀಕರಣ ಮಾಡಲು 190 ಕೋಟಿ ಕಟ್ಟಿಸಿಕೊಂಡಿದ್ದಾರೆ. ಇದೆಲ್ಲವೂ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಗೊತ್ತಿಲ್ಲವೇ ಎಂದು ಕೇಳಿದರು. ಗಣಿಗಾರಿಕೆಯನ್ನು ಎಲ್ಲಿ ನಿಷೇಧಿಸಿದ್ದಾರೆ, ಎಲ್ಲೂ ಗಣಿಗಾರಿಕೆಗೆ ಅನುಮತಿ ಕೊಡುತ್ತಿಲ್ಲವೆ, ಪರಿಸರ ಉಳಿಸಿಕೊಂಡಿದ್ದೀರಾ ಎಂದು ದೂರಿದರು.

ಸಾಮಾಜಿಕ ಜಾಲತಾಣದಲ್ಲಿ ಪೋಟೊ, ವಿಡಿಯೊ ವೈರಲ್

ಕಲಬುರಗಿ ಕಾರಾಗೃಹದಲ್ಲಿ ಕೈದಿಗಳಿಗೆ ಬಿಂದಾಸ್ ಜೀವನ

ಕಲಬುರಗಿ: ಇತ್ತೀಚೆಗೆ ನಟ ದರ್ಶನ್ ಬೆಂಗಳೂರಿನ ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನಲ್ಲಿದ್ದಾಗ ಅಲ್ಲಿನ ಕೈದಿಗಳ ಜೊತೆಗಿನ ರಾಜಾತಿಥ್ಯದ ಬಗ್ಗೆ ಬೆಳಕಿಗೆ ಬಂದಿತ್ತು. ಅದರ ಬೆನ್ನಲ್ಲೇ ಇದೀಗ ಕಲಬುರಗಿಯಲ್ಲೂ ಕೈದಿಗಳು ಬಿಂದಾಸ್ ಲೈಫ್ ನಡೆಸುತ್ತಿದ್ದಾರೆ.

ಇಲ್ಲಿ ಹಣ ಕೊಟ್ರೆ ಸ್ಮಾರ್ಟ್ ಫೋನ್, ಗಾಂಜಾ, ಎಣ್ಣೆ ಸೇರಿದಂತೆ ಮಾರಕಾಸ್ತ್ರಗಳ ಸೌಲಭ್ಯವೂ ಸಿಗುತ್ತಿರುವ ಮಾಹಿತಿ ಹೊರಬಿದ್ದಿದೆ. ಸ್ವತಃ ಅಲ್ಲಿನ ಕೈದಿಗಳೇ ಎಣ್ಣೆ ಹೊಡೆಯೋ, ಗಾಂಜಾ ಸೇದೋ ವಿಡಿಯೊವನ್ನು ವೈರಲ್ ಮಾಡುತ್ತಿದ್ದು, ಕಾರಾಗೃಹದ ಕೈದಿಗಳ ಹೈಫೈ ಲೈಫ್‌ನ ಹಲವು ಫೋಟೊ ವಿಡಿಯೊ ವೈರಲ್ ಆಗಿವೆ.

ಕೈದಿಗಳಾದ ವಿಶಾಲ, ಸಾಗರ ಹಾಗು ಸೋನು ಎಂಬ ಕೈದಿಗಳ ಹೈ ಫೈ ಜೀವನ ಫೋಟೊ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ. ಯಾವ ಜೈಲು ಅನ್ನೋ ವಿಚಾರದಲ್ಲಿ ಶಿವಮೊಗ್ಗ- ಕಲಬುರಗಿ ಜೈಲು ಕೈದಿಗಳ ಮಧ್ಯೆ ಕಚ್ಚಾಟ ಆರಂಭವಾಗಿದ್ದು, ಇದೇ ಕಾರಣಕ್ಕೆ ಜೈಲಿನ ಹೈಫೈ ವಿಡಿಯೊ ಎಕ್ಸ್‌ಪೋಸ್ ಆಗಿದೆ ಎಂದು ತಿಳಿದು ಬಂದಿದೆ.

ಕಾರಾಗೃಹ ಸಿಬ್ಬಂದಿಗೆ ತಲೆನೋವು

ಫೆ.22, 2024 ರಂದು ಇದೇ ಕಾರಾಗೃಹದಲ್ಲಿ ಗಲಾಟೆ ನಡೆದಿತ್ತು. ಕಾರಾಗೃಹದಲ್ಲಿ ಕೈದಿಗಳು ಫೋನ್ ಬಳಸುವುದು, ಜೂಜಾಟ, ಗಾಂಜಾ ಹಾಗೂ ಮನಿಲಾಂಡ್ರಿಂಗ್ ದಂಥೆ ಸೇರಿದಂತೆ ಹಲವು ಆರೋಪಗಳು ಈಗಾಗಲೇ ಸುದ್ದಿಯಲ್ಲಿದ್ದು, ಇದೀಗ ಕೈದಿಗಳ ನಡುವೆ ಹೊಡೆದಾಟ, ಗಲಾಟೆಗಳಂತಹ ಪ್ರಸಂಗಗಳು ಸದ್ದಿಲದೇ ನಡೆಯುತ್ತಿರುವುದು ಕಾರಾಗೃಹ ಸಿಬ್ಬಂದಿಗಳಿಗೆ ಮತ್ತೊಂದು ತಲೆನೋವಾಗಿ ಪರಿಣಮಿಸಿದೆ.

ಕಾನೂನು ಸಚಿವ ಎಚ್.ಕೆ. ಪಾಟೀಲ ಪ್ರಶ್ನೆ

ಅಲ್ಪಸಂಖ್ಯಾತರ ಕಲ್ಯಾಣ ಮಾಡುವುದು ತಪ್ಪೇ?

ಹುಬ್ಬಳ್ಳಿ: ಬಿಜೆಪಿ ಅನಾವಶ್ಯಕ ರಾಜಕಾರಣ ಮಾಡುತ್ತಿರುವುದು ಸೂಕ್ತವಲ್ಲ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಳೇಹುಬ್ಬಳ್ಳಿ ಗಲಭೆ ಪ್ರಕರಣವು ರಾಜಕೀಯ ಪ್ರೇರಿತವಾಗಿದೆ. ಈ ಹಿನ್ನೆಲೆ ಸರಕಾರ ಪರಮಾರ್ಶೆ ಮಾಡಿತು. ಈ ವಿಚಾರ ಸಚಿವ ಸಂಪುಟದ ಉಪ ಸಮಿತಿ, ಅಧಿಕಾರಿಗಳ ಅಭಿಪ್ರಾಯ ಸಂಗ್ರಹ ಹಾಗೂ ಸಚಿವ ಸಂಪುಟದಲ್ಲಿ ನಿರ್ಧಾರ ಕೈಗೊಳ್ಳುವಂತದಾಗಿದೆ ಎಂದು ಹೇಳಿದರು. ನಾವು ಅಲ್ಪಸಂಖ್ಯಾತ ಓಲೈಕೆ ಮಾಡುತ್ತಿಲ್ಲ. ಬಿಜೆಪಿ ಆ ರೀತಿ ಬಿಂಬಿಸುವ ಕೆಲಸ ಮಾಡುತ್ತಿದೆ. ಅಲ್ಪಸಂಖ್ಯಾತ ಕಲ್ಯಾಣ ಮಾಡವುದು ತಪ್ಪಾ ಎಂದು ಪ್ರಶ್ನಿಸಿದರು.



ನಮಗೆಲ್ಲರೂ ಭಾರತೀಯರೇ. ಸಮಾಜ ಒಡೆದಾಳುವ ಮಾತುಗಳಿಂದ ರಾಷ್ಟ್ರಕಟ್ಟಲು ಆಗಲ್ಲ. ಬಿಜೆಪಿ ತಮ್ಮ ಕಾಲದಲ್ಲಿ ಎಷ್ಟು ಕೇಸ್ ವಾಪಸು ಪಡೆದಿದ್ದಾರೆ. ರಾಜಕೀಯ ಪ್ರೇರಿತ ಕೇಸ್ ದಾಖಲಾಗಿದ್ದರೆ ಅವುಗಳನ್ನು ವಿಮರ್ಶೆ ಮಾಡಿ ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ವಾಪಸು ಪಡೆಯುವ ಅವಕಾಶವಿದೆ. ಅನಾವಶ್ಯಕವಾಗಿ ರಾಜಕೀಯ ಮಾಡುತ್ತಿರುವುದು ಸೂಕ್ತವಲ್ಲ ಎಂದರು.

ಕಲ್ಯಾಣ ವೃಷ್ಟಿ ಮಹಾಭಿಯಾನ ಸ್ತೋತ್ರ ಸಮರ್ಪಣೆ ಮಹೋತ್ಸವ ನಾಳೆ

ಭಾರತೀ ತೀರ್ಥರ ಸುವರ್ಣ ಭಾರತಿ ಕಾರ್ಯಕ್ರಮ

ಬೆಂಗಳೂರು: ಶೃಂಗೇರಿಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಸನ್ಯಾಸ ಸ್ವೀಕಾರದ ಸುವರ್ಣ ಮಹೋತ್ಸವ ಸಂದರ್ಭವನ್ನು ಸುವರ್ಣ ಭಾರತಿ ಹೆಸರಿನಲ್ಲಿ ಅನೇಕ ಲೋಕಕ್ಷೇಮಾರ್ಥ ಕಾರ್ಯ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮಗಳ ಮೂಲಕ ಆಚರಿಸಲು ತೀರ್ಮಾನಿಸಲಾಗಿದೆ.



ಈ ಹಿನ್ನೆಲೆಯಲ್ಲಿ ಶಂಕರಮಠ ಧಾರವಾಡ ಶಾಖೆಯಿಂದ ಜಿಲ್ಲಾಮಟ್ಟದ ಕಲ್ಯಾಣ ವೃಷ್ಟಿ ಮಹಾಭಿಯಾನ ಸ್ತೋತ್ರ ಸಮರ್ಪಣೆ ಮಹೋತ್ಸವ ಅ.16 ರಂದು ಶ್ರೀ ವಿದ್ಯಾಭಾರತೀ ಸಭಾಭವನ ಶ್ರೀ ಶೃಂಗೇರಿ ಶಂಕರಮಠ ಧಾರವಾಡದಲ್ಲಿ ಅತಿ ವಿಜೃಂಭಣೆಯಿಂದ ಆಚರಿಸಲು ಸಿದ್ಧತೆ ನಡೆಸಲಾಗಿದೆ.

ವಿಶೇಷ ಫಲ ನೀಡುವ ಸ್ತೋತ್ರ: ಶ್ರೀ ಮಠದ ಶ್ರೀ ಶಂಕರ ತತ್ವ ಪ್ರಸಾರ ಅಭಿಯಾನ ಮತ್ತು ವೇದಾಂತ ಭಾರತೀ ಸಂಸ್ಥೆ ಕಲ್ಯಾಣ ವೃಷ್ಟಿಸ್ತವ, ಶಿವಪಂಚಾಕ್ಷರ ನಕ್ಷತ್ರ, ಮಾಲಾಸ್ತೋತ್ರ, ಮತ್ತು ಲಕ್ಷ್ಮೀ ನರಸಿಂಹ ಕರಾವಲಂಬ ಸ್ತೋತ್ರಗಳ ವಿಶೇಷ ಮಹಾಭಿಯಾನ ಕೈಗೊಂಡಿದೆ. ಶ್ರೀ ಶಂಕರ ಭಗವತ್ಪಾದರಿಂದ ರಚಿತವಾದ ಈ ಮೂರು ಸ್ತೋತ್ರಗಳು ಪ್ರತಿಯೊಬ್ಬರಿಗೂ ಅತ್ಯಂತ ಪುಣ್ಯವನ್ನುಂಟು ಮಾಡಿ, ವಿಶೇಷ ಫಲಗಳನ್ನು ನೀಡುವ ಸಾಮರ್ಥ್ಯವುಳ್ಳದ್ದಾಗಿವೆ.

ಕಾರ್ಯಕ್ರಮಕ್ಕೆ ಶೃಂಗೇರಿ ಜಗದ್ಗುರುಗಳ ಪ್ರತಿನಿಧಿಯಾಗಿ ಉಮೇಶ್ ಹರಿಹರ್, ಶ್ರೀ ಶಂಕರತತ್ವ ಪ್ರಸಾರ ಅಭಿಯಾನದ ಜಿಲ್ಲಾಧ್ಯಕ್ಷ ರವಿ ದೇಶಪಾಂಡೆ, ಮುಖ್ಯ ಅತಿಥಿಯಾಗಿ ಧಾರವಾಡ ಶೃಂಗೇರಿ ಶಾಕಾಮಠದ ವ್ಯವಸ್ಥಾಪಕ ವಿಠ್ಠಲ್ ನಾರಾಯಣ ಶೆಟ್ಟಿ ಹಾಗೂ ವಿವಿಧ ಮಹಿಳಾ ಮಂಡಳಿ ಸದಸ್ಯರು ಉಪಸ್ಥಿತರಿರುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹತ್ತು ಹಲವಾರು ಕಾರ್ಯಕ್ರಮ

ಈಗಾಗಲೇ ಎಲ್ಲಾ ಶಾಖಾ ಮಠದಲ್ಲಿ ಸುವರ್ಣ ಭಾರತಿ ಮಹೋತ್ಸವದ ಅಡಿಯಲ್ಲಿ ಅನೇಕ ಸಾಮಾಜಿಕ ಸೇವೆ ಕೈಗೊಳ್ಳಲಾಗಿದೆ. ಅದರಂತೆ ಶ್ರೀ ಶೃಂಗೇರಿ ಶಂಕರಮಠ ಧಾರವಾಡ ಶಾಖ ಮಠವು ವಿದ್ಯಾರ್ಥಿಗಳಿಗೆ ಶಾಲಾ ವೆಚ್ಚ, ಪುಸ್ತಕ ವಿತರಣೆ, ಆರೋಗ್ಯ ಶಿಬಿರ, ವನಮಹೋತ್ಸವ, ಅನಾಥಾಶ್ರಮದ ಮಕ್ಕಳಿಗೆ ಫುಡ್‌ಕಿಟ್, ಪ್ರವಚನ ಮಾಲಿಕೆ, ವಿವಿಧ ಮಹಿಳಾ ಮಂಡಳಿಯಿಂದ ಭಜನಾ ಸಮರ್ಪಣೆ ಹಾಗೂ ವಾನ ಪ್ರಸ್ತಾಶ್ರಮಕ್ಕೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಸೇರಿದಂತೆ ಹತ್ತು ಹಲವಾರು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಸೇವೆ ಮಾಡಲು ತೀರ್ಮಾನಿಸಲಾಗಿದೆ.

- ಧಾರವಾಡದ ಶೃಂಗೇರಿ ಶಂಕರಮಠದಲ್ಲಿ ಕಾರ್ಯಕ್ರಮ ಆಯೋಜನೆ
- ನಾನಾ ಗಣ್ಯರ ಆಗಮನ

ಅ.18ರಂದು ಸಿಎಂ ಸಭೆ ಮಾಡದಿದ್ದರೆ ಹೋರಾಟ

ಬೆಳಗಾವಿ: ಕೊಟ್ಟ ಮಾತಿನಂತೆ ಸಿಎಂ ಪಂಚಮಸಾಲಿ ಸಮುದಾಯದ ಮುಖಂಡರ ಜೊತೆ ಸಭೆ ನಡೆಸಬೇಕೆಂದು ಆಗ್ರಹಿಸಿ ಅ.18 ರಂದು ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಕುಳಿತು ಸರಕಾರದ ಗಮನ ಸೆಳೆಯಲಾಗುವುದು ಎಂದು ಕೂಡಲಸಂಗಮ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಪಂಚಮಸಾಲಿ ಸಮಾಜಕ್ಕೆ 2 ಎ ಮೀಸಲು ಸಿಗುವ ನಿಟ್ಟಿನಲ್ಲಿ ಏಳು ಹಂತದಲ್ಲಿ ಹೋರಾಟ ಮಾಡಲಾಗಿದೆ. ಆದರೆ ಕಳೆದೊಂದು ವರ್ಷದಿಂದ ಸರಕಾರ ನಮ್ಮ ಹೋರಾಟಕ್ಕೆ ನ್ಯಾಯ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸೆ.22 ರಂದು ವಕೀಲರ ರಾಜ್ಯಮಟ್ಟದ ಸಮಾವೇಶದಲ್ಲಿ ಅಂದು ಸಿಎಂ ದೂರವಾಣಿ ಕರೆ ಮಾಡಿ ಅ .15ಕ್ಕೆ ಸಭೆ ನಡೆಸುವುದಾಗಿ ಭರವಸೆ ನೀಡಿದ್ದರು. ಜಿಲ್ಲಾಧಿಕಾರಿಗಳು ಆಗಮಿಸಿ ಪ್ರತಿಭಟನೆ ನಡೆಸದಂತೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ನಾವು ಹೋರಾಟ ಹಿಂಪಡೆದಿದ್ದೇವು. ಆದರೆ ಸಿಎಂ ಕಚೇರಿಯಿಂದ ಈವರೆಗೆ ಯಾವುದೇ ಸಭೆಯ ಕುರಿತು ಮಾಹಿತಿ ಬಂದಿಲ್ಲ. ಈ ಹಿನ್ನೆಲೆಯಲ್ಲಿ ಅ. 18 ರಂದು ಸಮಾಜದ ಮುಖಂಡರು ವಿಧಾನಸೌಧದ ಮುಂಭಾಗ ಬರಬೇಕು ಎಂದರು.

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ಆರ್.ವಿ. ಪಾಟೀಲ್, ಶಿವಾನಂದ ತುಬಾಕಿ, ರಾಜು ಮಗದುಮ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ವಿಶ್ವವಾಣಿ

ಸಂಪಾದಕೀಯ

ಕ್ರಿಮಿನಲ್ ಕಾರಸ್ಥಾನಗಳಾಗದಿರಲಿ

ನ್ಯಾಯಾಲಯದಲ್ಲಿ ಶಿಕ್ಷೆ ಸಾಬೀತಾಗಿ ಶಿಕ್ಷೆಗೊಳಗಾದವರು ಮತ್ತು ಅಪರಾಧ ಪ್ರಕರಣಗಳಲ್ಲಿ ಸಿಲುಕಿ ವಿಚಾರಣೆ ಎದುರಿಸುತ್ತಿದ್ದವರನ್ನು ಜೈಲಿಗೆ ಕಳುಹಿಸುವುದು ಸಾಮಾನ್ಯ ಪ್ರಕ್ರಿಯೆ. ಕಾರಾಗೃಹವು ತಪ್ಪಿತಸ್ಥರು ಶಿಕ್ಷೆ ಅನುಭವಿಸುವ ಮತ್ತು ಮುಂದೆ ಉತ್ತಮ ಮನುಷ್ಯರಾಗಿ ಬಾಳಲು ಮನಪರಿವರ್ತನೆ ಮಾಡಿಕೊಳ್ಳುವ ಸ್ಥಳ. ಆದರೆ ರಾಜ್ಯದ ಜೈಲುಗಳು ಕ್ರಿಮಿನಲ್‌ಗಳಿಗೆ ಸುರಕ್ಷಿತ ತಾಣವಾದಂತಿವೆ. ಇವರು ಜೈಲಿನಲ್ಲಿದ್ದುಕೊಂಡೇ ಹೊರಪ್ರಪಂಚದಲ್ಲಿ ಅಕ್ರಮ ಚಟುವಟಿಕೆಗಳನ್ನು ಮುಂದುವರಿಸಬಹುದು. ಅಲ್ಲಿಂದಲೇ ಉದ್ಯಮಿಗಳಿಗೆ ಮೊಬೈಲ್ ಮೂಲಕ ಬೆದರಿಸಿ ಹಫ್ತಾ ವಸೂಲಿ ಮಾಡಬಹುದು. ಜೈಲನ್ನೇ ವಿಳಾಸಿ ತಾಣವಾಗಿಸಿಕೊಂಡು ತಮಗೆ ಬೇಕಾದಂತೆ ಪಾರ್ಟಿ ಮಾಡಬಹುದು. ಸಹಕೈದಿಗಳ, ಅಧಿಕಾರಿಗಳ ಕೈಯಲ್ಲೂ ಸೇವೆ ಮಾಡಿಸಿಕೊಳ್ಳಬಹುದು. ರಾಜ್ಯದ ಜೈಲುಗಳಲ್ಲಿ ಪದೇ ಪದೆ ವರದಿಯಾಗುತ್ತಿರುವ ಚಿತ್ರಣವಿದು. ನಟ ದರ್ಶನ್‌ಗೆ ಪರಪ್ಪನ ಅಗ್ರಹಾರ ಜೈಲಲ್ಲಿ ವಿಶೇಷ ಆತಿಥ್ಯ ನೀಡಿದ ಫೋಟೋ ವೈರಲ್ ಆಗುತ್ತಿದ್ದಂತೆ ನಮ್ಮ ಜೈಲುಗಳಲ್ಲಿ ನಡೆಯುತ್ತಿರುವ ಅಕ್ರಮ ಕೂಟಗಳ ಚರ್ಚೆ ಮುನ್ನೆಲೆಗೆ ಬಂದಿತ್ತು. ದರ್ಶನ್‌ಗೆ ವಿಶೇಷ ಆತಿಥ್ಯ ನೀಡಿದವರು ಹಲವು ಕ್ರಿಮಿನಲ್ ಪ್ರಕರಣಗಳಲ್ಲಿ ಶಿಕ್ಷೆಗೆ ಒಳಗಾದವರು. ಇವರು ಜೈಲನ್ನು ತಮ್ಮ ಸ್ವಾಧೀನಕ್ಕೆ ಪಡೆದಿರುವುದು ಸ್ಪಷ್ಟವಾಗಿತ್ತು. ದುಡ್ಡಿನಾಸೆಗಾಗಿ ಅಧಿಕಾರಿಗಳು ಇವರ ಜತೆ ಕೈ ಜೋಡಿಸಿದ್ದಾರೆ ಎಂದು ತನಿಖಾ ವರದಿಯಲ್ಲೂ ತಿಳಿಸಲಾಗಿದೆ. ಇದಾದ ಬಳಿಕ ದರ್ಶನ್ ಸೇರಿದಂತೆ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳನ್ನು ರಾಜ್ಯದ ಬೇರೆ ಬೇರೆ ಜೈಲುಗಳಿಗೆ ಕಳುಹಿಸಲಾಗಿತ್ತು. ಜೈಲು ಅಕ್ರಮಗಳ ಬಗ್ಗೆ ಕಠಿಣ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಗಳು, ಗೃಹ ಸಚಿವರು ಉನ್ನತಾಧಿಕಾರಿಗಳಿಗೆ ಸೂಚಿಸಿದ ಬಳಿಕ ಪರಪ್ಪನ ಅಗ್ರಹಾರ ಜೈಲಿಗೆ ಪೊಲೀಸರು ದಾಳಿ ನಡೆಸಿ ಹತ್ತಾರು ಮೊಬೈಲ್, ಮಾದಕ ದ್ರವ್ಯವನ್ನು ವಶಪಡಿಸಿಕೊಂಡಿದ್ದರು. ಹಲವು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿತ್ತು. ಇಷ್ಟಾದ ಬಳಿಕವೂ ರೌಡಿಯೊಬ್ಬ ಜೈಲಿನಿಂದಲೇ ಸಾಕ್ಷಿದಾರರಿಗೆ ಕರೆ ಮಾಡಿ ಬೆದರಿಸಿರುವುದು ವರದಿಯಾಗಿದೆ. ಜೈಲುಗಳಲ್ಲಿ ಪ್ರಾಮಾಣಿಕ ಅಧಿಕಾರಿಗಳನ್ನು ನೇಮಿಸದ ಹೊರತು, ಇವು ಕ್ರಿಮಿನಲ್‌ಗಳ ಶಕ್ತಿಕೇಂದ್ರವಾಗಿಯೇ ಮುಂದುವರಿಯುವುದು ಖಚಿತ.

ಸೊಂಪಾದಕೀಯ

ಪಿಂಚಣಿಗೂ ಕೊಕ್ಕೆ

ನಮ್ಮ ಸಮಾಜದಲ್ಲಿ ಆಗಾಗ ಕೇಳಿಬರುವ, ಅದರಲ್ಲೂ ಮಹಿಳೆಯರ ವಿಷಯ ಬಂದಾಗೆಲ್ಲ ತೇಲಿಬರುವ ಪದಪುಂಜ ಅಂದ್ರೆ, 'ಇದು ಪುರುಷ ಪ್ರಧಾನ ಸಮಾಜ' ಅನ್ನೋದು. ಆದರೆ ಸಮಾಜದಲ್ಲಿರುವ ಕೆಲವು ಕಟ್ಟಳೆ, ಕಾನೂನು ಸವಲತ್ತುಗಳನ್ನು ನೋಡಿದರೆ ಗಂಡಸರಿಗೆ ಅದ್ಯಾವ ಸೀಮೆ ಪ್ರಾಮುಖ್ಯ ಸಿಗುತ್ತಿದೆ ಅನ್ನೋ ಪ್ರಶ್ನೆ ಮೂಡೋದು ಸಹಜ. ವಿಚ್ಛೇದನ ಪ್ರಕರಣಗಳಲ್ಲಂತೂ ಪುರುಷನೇ ನಿಜವಾದ ಶೋಷಿತ. ಸಂಸಾರ ಹದಗೆಟ್ಟಾಗ ಗಂಡ ಹೆಂಡತಿ ಬೇರೆ ಆಗ್ತಾರೆ. ಅದು ಒಂಥರಾ ಮಾನಸಿಕ ನೋವು. ಆದರೆ ಅದಕ್ಕೆ ಸಮಾಧಾನಕರ ಬಹುಮಾನ ಎಂಬಂತೆ ಮಹಿಳೆಯರಿಗೆ ಜೀವನಾಂಶ ಸಿಗುತ್ತದೆ. ಆದರೆ ಪುರುಷ ಆ ಜೀವನಾಂಶ ಕೊಡಬೇಕಾಗಿರೋದ್ರಿಂದ ಅವನಿಗೆ ಮಾನಸಿಕ ಸಂಕಷ್ಟದ ಜತೆಗೆ ಆರ್ಥಿಕ ಸಂಕಷ್ಟ ಕೂಡ ಎದುರಾಗುತ್ತದೆ. ಇನ್ನು ಹೆಂಡತಿಯ ಮಾತು ಕೇಳದಿದ್ದರೆ ಸಾಕು, ಗಂಡನ ಮೇಲೆ ವರದಕ್ಷಿಣೆ ಕೇಸು ಗ್ಯಾರಂಟಿ. ಅಲ್ಲೂ ಗಂಡು ಶೋಷಿತನೇ. ಇದೆಲ್ಲಾ ಸಾಲದೆಂಬಂತೆ ಸರಕಾರಗಳಿಂದ ಬರುವ ಸವಲತ್ತುಗಳಲ್ಲೂ ಮಹಿಳೆಯರಿಗೇ ಆದ್ಯತೆ. ನಮ್ಮ ಕಾಂಗ್ರೆಸ್ ಸರಕಾರವಂತೂ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಗೃಹಲಕ್ಷ್ಮಿ ಯೋಜನೆಯಡಿ ಹಣ ಎನ್ನುತ್ತಾ ಗಂಡಸರನ್ನು ಮರೆತೇಬಿಟ್ಟಿದೆ. ಈಗ ಒಂದು ಹೆಜ್ಜೆ ಮುಂದೆ ಹೋಗಿ ಮಹಿಳೆಯರ ಪಿಂಚಣಿ ಹಣದಲ್ಲೂ ಪುರುಷರನ್ನು ಕಡೆಗಣಿಸಲಾಗುತ್ತಿದೆ. ಗಂಡನಿಗೆ ಪಿಂಚಣಿ ಬರುತ್ತಿದ್ದು ಆತ ನಿಧನ ಹೊಂದಿದರೆ ಆ ಹಣ ಹೆಂಡತಿಗೆ ಸೇರುತ್ತದೆ. ಹಾಗೆಯೇ, ಹೆಂಡತಿಗೆ ಪಿಂಚಣಿ ಬರುತ್ತಿದ್ದರೆ ಅದು ಗಂಡನಿಗೆ ಇಷ್ಟು ದಿನ ಸೇರುತ್ತಿತ್ತು. ಆದರೆ ಈಗ ಮಹಿಳೆಯರ ಪಿಂಚಣಿ ಹಣವನ್ನು ಗಂಡನಿಗೆ ಕೊಡೋದರ ಬದಲು ಅದನ್ನು ಮಕ್ಕಳಿಗೆ ಕೊಡಬೇಕು ಅಂತ ಹೊಸ ಕಾನೂನು ಬರ್ತಾ ಇದೆಯಂತೆ. ಅಲ್ಲೂ ಗಂಡು ಮಕ್ಕಳಿಗೆ ಸಿಗುತ್ತೋ ಇಲ್ವೋ ಗೊತ್ತಿಲ್ಲ. ಅಂತೂ ಪಾಪ ಇಲ್ಲೂ ಪಾಪಿ ಪುರುಷ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾನೆ. ಇದನ್ನೆಲ್ಲಾ ನೋಡಿದ ಮೇಲೆ 'ಈ ದೇಶ ಗಂಡಸರಿಗಲ್ಲ ಬಿಡಿ' ಅನ್ನೋ 'ಎದ್ದೇಳು ಮಂಜುನಾಥ'ನ ಶೈಲಿಯಲ್ಲಿ ಗಂಡಸರು ನಿಟ್ಟುಸಿರು ಬಿಡುತ್ತಿದ್ದಾರೆ. ಒಟ್ಟಿನಲ್ಲಿ ದುಡಿದು, ಕಡಿದು ಗುಡ್ಡೆ ಹಾಕಿ ಸಂಸಾರವನ್ನು ಸಾಕೋ ಜವಾಬ್ದಾರಿ ಮಾತ್ರ ಪುರುಷನ ಪಾಲಿಗೆ. ಆದರೆ ಸವಲತ್ತು-ಸೌಕರ್ಯಗಳ ವಿಷಯದಲ್ಲಿ ಮಾತ್ರ ಗಂಡಸು ಅಕ್ಷರಶಃ ಪರದೇಸಿ ಅನ್ನಿಸಿದರೆ ಅದರಲ್ಲಿ ತಪ್ಪೇನಿಲ್ಲ ಬಿಡಿ.

ಸಂಪಾದಕರ ಸದ್ಯಶೋಧನೆ

ರಾಜೀವ್-ವಿ.ಪಿ.ಸಿಂಗ್ ಮಾತುಕತೆ

1987ರ ಜೂನ್. ಪ್ರಧಾನಿ ರಾಜೀವ್ ಗಾಂಧಿ ಮತ್ತು ಅವರ ಸಂಪುಟ ಸಹೋದ್ಯೋಗಿ ವಿ.ಪಿ.ಸಿಂಗ್ ಸಂಬಂಧ ಹಳಸಿತ್ತು. ರಾಜೀವ್ ಸಂಪುಟದಿಂದ ಹೊರಬಿದ್ದ ಆರೀಫ್ ಮಹಮ್ಮದ್ ಖಾನ್, ಅರುಣ್ ನೆಹರು, ವಿ.ಸಿ.ಶುಕ್ಲ ಮುಂತಾದವರು ಸಿಂಗ್ ಬಣ ಸೇರಿದ್ದರು. ಅಂದಿನ ರಾಷ್ಟ್ರಪತಿ ಜೈಲ್‌ಸಿಂಗ್ ರಾಜೀವ್ ವಿರೋಧಿ ಬಣದವರೊಂದಿಗೆ ಸಂಪರ್ಕದಲ್ಲಿದ್ದರು. ಜೈಲ್‌ಸಿಂಗ್ ರಾಜೀವ್ ಸಂಪುಟವನ್ನು ಕಿತ್ತೆಸೆಯುವ ಸಾಧ್ಯತೆಯಿದೆ ಎಂಬ ಗುಲ್ಲೆದ್ದಿತ್ತು. ರಾಜೇಶ್ ಪೈಲಟ್‌ರು ರಾಜೀವರ ಪರವಾಗಿ ಸಿಂಗ್‌ರನ್ನು ಭೇಟಿ ಮಾಡಿ ಇಬ್ಬರ ನಡುವಿನ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಯತ್ನಿಸಿದ್ದರು. ಈ ಮಧ್ಯೆ ರಾಜೀವ್ ಮತ್ತು ಸಿಂಗ್ 2 ಬಾರಿ ಭೇಟಿ ಮಾಡಿದ್ದರು. ಆದರೆ ಮನಸ್ಸಿನಲ್ಲಿ ಹಳೆಯ ಘಟನೆಗಳೇ ಮೆಲುಕು ಹಾಕುತ್ತಿದ್ದರೆ, ಸಂಬಂಧ ಸುಧಾರಿಸುವ ಬದಲು ಹಾಳಾಗುತ್ತದೆ ಎಂಬುದಕ್ಕೆ ಅವರಿಬ್ಬರ ಭೇಟಿಯೇ ನಿದರ್ಶನ. ಮೊದಲ ಸಲ ಭೇಟಿಯಾದಾಗ ಸಿಂಗ್, 'ನಾವಿಬ್ಬರು ನಮ್ಮ ನಮ್ಮ ಹುದ್ದೆ ಮರೆತು, ನಾನು ವಿಶ್ವನಾಥ ಆಗಿ, ನೀವು ರಾಜೀವ್ ಆಗಿ ಮಾತಾಡೋಣ. ನಾನು ಸಿಐಎ ಏಜೆಂಟ್ ಎಂದು ಪ್ರತಿದಿನ ಕಲ್ಪನಾಥ ರೈ ಮತ್ತು ಕೆ.ಕೆ.ತಿವಾರಿ ಹೇಳಿಕೆ ನೀಡುತ್ತಿದ್ದಾರೆ, ಏನಿದು ಅಸಹ್ಯ?' ಎಂದು ಖಾರವಾಗಿಯೇ ಕೇಳಿದರು. ಅದಕ್ಕೆ ರಾಜೀವ್, 'ಪಕ್ಷದಲ್ಲಿ ವಿಪರೀತ ಆಕ್ರೋಶವಿದೆ. ಅದು ಆ ಆಕ್ರೋಶದ ಅಭಿವ್ಯಕ್ತಿಯಷ್ಟೇ' ಎಂದರು. ಇದರಿಂದ ಕ್ರುದ್ಧರಾದ ಸಿಂಗ್, 'ನಾನು ಇದನ್ನೆಲ್ಲ ನಿಮ್ಮ ತಾಯಿಯ ಕಾಲದಿಂದ ನೋಡುತ್ತಾ ಬಂದಿದ್ದೇನೆ. ಯಾವ ನಟ್-ಬೋಲ್ಟ್ ಯಾವ ತಂತಿಗೆ ಜಾಯಿನ್ ಆಗಿದೆ ಎಂಬುದು ನನಗೆ ಗೊತ್ತು. ತಿವಾರಿ ಮತ್ತು ರೈ ಲೌಡ್ ಸ್ಪೀಕರುಗಳು. ಈ ರೂಮಿನಲ್ಲಿ ಮೈಕ್ರೋಫೋನ್‌ಗಳನ್ನು ಅಳವಡಿಸಲಾಗಿದೆ ಎಂಬುದು ಗೊತ್ತು' ಎಂದರು. ಸಿಂಗ್‌ರಿಂದ ಅಂಥ ತೀಕ್ಷ್ಣ ಪ್ರತಿಕ್ರಿಯೆ ನಿರೀಕ್ಷಿಸದ ರಾಜೀವ್, 'ಅವರಿಬ್ಬರಿಗೆ ವಾಲ್ಯೂಮ್ ಕಡಿಮೆ ಮಾಡಿ ಎಂದು ಹೇಳುತ್ತೇನೆ' ಎಂದರು. 'ವಾಲ್ಯೂಮ್ ಕಡಿಮೆ ಮಾಡಿ ಅಂದ್ರೆ ಏನರ್ಥ? ರಾಜೀವ್, ನೀವು ನನ್ನೊಂದಿಗೆ ಆಟವಾಡಲು ಬಯಸಿದರೆ, ನಮ್ಮಿಬ್ಬರ ಮಧ್ಯೆ ಫಲಪ್ರದ ಮಾತುಕತೆ ಸಾಧ್ಯವಿಲ್ಲ. ನೀವು ನನ್ನನ್ನು ನಿಷ್ಪ್ರಯೋಜಕ ಮಂತ್ರಿ/ನಾಯಕ ಎನ್ನಿ, ತಕರಾರಿಲ್ಲ. ಆದರೆ ನೀವು ನನ್ನ ರಾಷ್ಟ್ರಪ್ರೇಮವನ್ನು ಪ್ರಶ್ನಿಸಿದರೆ ನಾನು ಸುಮ್ಮನಿರುವುದಿಲ್ಲ. ಮುಂದೇನಾಗುತ್ತದೋ ಆಗಲಿ. ನಾನು ಅವಕ್ಕೆಲ್ಲ ತಲೆ ಕೆಡಿಸಿಕೊಳ್ಳುವುದಿಲ್ಲ' ಎಂದರು. ಮರುದಿನದ ಪತ್ರಿಕೆಗಳಲ್ಲಿ ಸಿಂಗ್ ಅವರೇ ದುಂಬಾಲು ಬಿದ್ದು ರಾಜೀವ್‌ರನ್ನು ಭೇಟಿಯಾದರು ಎಂದು ಬರೆಯಿಸಲಾಯಿತು. ಈ ವಿಷಯದಲ್ಲಿ ಪ್ರಧಾನಿ ಕಾರ್ಯಾಲಯದಲ್ಲಿನ ವ್ಯಕ್ತಿಗಳು ಸುಳ್ಳುಸುದ್ದಿ ಹಬ್ಬಿಸಿದರು. ಕೆಲ ದಿನಗಳ ಬಳಿಕ ಖುದ್ದು ರಾಜೀವರೇ ತಮ್ಮ ನಿವಾಸಕ್ಕೆ ಆಗಮಿಸುವಂತೆ ಸಿಂಗ್‌ರನ್ನು ಕರೆದರು. ಆಗ ರಾತ್ರಿ 11 ಗಂಟೆ. ಆ ವೇಳೆ ರಾಜೀವ್ ಹಳೆ ಘಟನೆಯನ್ನೇ ಮುಖ್ಯವಾಗಿ ಪ್ರಸ್ತಾಪಿಸಿದರು. '1977ರಲ್ಲಿ ಇಂದಿರಾ ಗಾಂಧಿಯವರು ಸೋತಾಗ, ನೀವು ಅವರನ್ನು ತೊರೆದಿರಿ' ಎಂದು ರಾಜೀವ್ ಹೇಳಿದ್ದಕ್ಕೆ ಸಿಂಗ್, 'ನಿಮ್ಮ ಸುಳ್ಳುಗಳನ್ನು ಕೇಳಿದರೆ, ಭೂಮಿ ಬಾಯಿ ತೆರೆಯಬಹುದು' ಎಂದರು ವ್ಯಂಗ್ಯವಾಗಿ. ಜತೆಗೆ 'ನಾವು ನಿತ್ಯವೂ ಅವರ ವಿಲ್ಲಿಂಗ್ಡನ್ ಕ್ರೆಸೆಂಟ್ ನಿವಾಸಕ್ಕೆ ಹೋಗುತ್ತಿದ್ದೆವು. ಆಗ ಸಂಜಯ್ ಇರುತ್ತಿದ್ದರು. ಆದರೆ ನಿಮ್ಮನ್ನು ನಾನಲ್ಲಿ ಎಂದೂ ನೋಡಿಲ್ಲ. ನಾನು ಅವರ ಜತೆಯಲ್ಲಿರಲಿಲ್ಲ ಎಂದು ಈಗ ಹೇಳುತ್ತಿದ್ದೀರಿ' ಎಂದರು ತೀಕ್ಷ್ಣವಾಗಿ. ಆಗ ರಾಜೀವ್ ನಿರುತ್ತರರಾದರು. 'ನೀವು ನನ್ನ ಬಗ್ಗೆ ಹೀಗೆ ಯೋಚಿಸುತ್ತೀರಿ ಎಂದಾದರೆ, ನಿಮ್ಮ ಪಾಲಿಗೆ ವಿಶ್ವನಾಥ ಸತ್ತ ಎಂದೇ ತಿಳಿಯಿರಿ' ಎಂದ ಸಿಂಗ್ ಹೊರಡಲು ಎದ್ದು ನಿಂತರು. 'ನೋ..ನೋ.. ವಿಶ್ವನಾಥ... ಕುಳಿತುಕೊಳ್ಳಿ' ಎಂದ ರಾಜೀವ್, 'ಕಾಂಗ್ರೆಸ್ ಇಲ್ಲದೇ 3 ತಿಂಗಳು ಸಹ ನಿಮಗೆ ಕಳೆಯುವುದು ಕಷ್ಟ' ಎಂದು ಹೇಳಿದರು. ಸಿಂಗ್ 'ರಾಜೀವ್ ಜೀ, ಕಾಂಗ್ರೆಸ್ ಸಹಾಯವಿಲ್ಲದೇ 3 ತಿಂಗಳು ಕಳೆದರೆ ಜೀವನವಿಡೀ ನನಗೆ ಅದರ ಅಗತ್ಯವಿಲ್ಲ' ಎಂದವರೇ ಅಲ್ಲಿಂದ ನಿರ್ಗಮಿಸಿದರು. ಸಿಂಗ್ ನುಡಿದಂತೇ ಆಯಿತು. ಈ ವಿಷಯವನ್ನು ಪತ್ರಕರ್ತೆ ನೀರಜಾ ಚೌಧುರಿ ತಮ್ಮ ಪುಸ್ತಕ (How Prime Ministers Decide) ದಲ್ಲಿ ಬರೆದಿದ್ದಾರೆ.

ಅತಿಯಾದ ಆತ್ಮವಿಶ್ವಾಸ ಕಂಟಕವಾದೀತು!

ಅತಿಯಾದ ಆತ್ಮವಿಶ್ವಾಸದಿಂದಾಗಿ ಕಾಂಗ್ರೆಸ್‌ನ ಕೈತಪ್ಪಿದ ರಾಜ್ಯಗಳಲ್ಲಿ ಹರಿಯಾಣವೇ ಮೊದಲನೆಯದಲ್ಲ. ಕಳೆದ ವರ್ಷದ ಪಂಚರಾಜ್ಯ ವಿಧಾನಸಭಾ ಚುನಾವಣೆಯಲ್ಲೂ ಪಂಜಾಬ್ ಮತ್ತು ಗುಜರಾತ್‌ನಲ್ಲಿ ಕ್ಲೀನ್ ಸ್ವೀಪ್ ಆಗಿದ್ದರ ಹಿಂದೆಯೂ ಇದೇ ತಪ್ಪು ಹೆಜ್ಜೆಗಳಿದ್ದವು.

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿ 5 ವರ್ಷಕ್ಕೊಮ್ಮೆ ನಡೆಯುವ ಚುನಾವಣಾ ಹಬ್ಬದಲ್ಲಿ ಗೆಲುವು ಸೋಲಿಗೆ ಕಾರಣಗಳು ನೂರಾರಿರುತ್ತವೆ. ಆದರೆ ಅಂತಿಮ ಫಲಿತಾಂಶವನ್ನು ಹಿಡಿದು ಅಧಿಕಾರದ ಗದ್ದುಗೆ ಏರುವುದಕ್ಕೆ ಮಾತ್ರ ಒಂದೇ ಮಾನದಂಡ. ಅದುವೇ 'ಸಂಖ್ಯಾಬಲ'. ಜನರಿಂದ ಆಯ್ಕೆಯಾದ ಪ್ರತಿನಿಧಿಗಳ ತಲೆ ಎಣಿಕೆಯ ಮೇಲೆಯೇ ಮುಂದಿನ 5 ವರ್ಷ ರಾಜ್ಯ, ಕೇಂದ್ರವನ್ನು ಯಾರು ನಡೆಸಬೇಕು ಎನ್ನುವುದು ತೀರ್ಮಾನವಾಗುತ್ತದೆ.

ಭಾರತದ ಚುನಾವಣಾ ಪದ್ಧತಿಯಲ್ಲಿ ಶೇಕಡಾವಾರು ಮತಕ್ಕಿಂತ, ಜನಪ್ರತಿನಿಧಿಗಳ ತಲೆ ಎಣಿಕೆಗೆ ಹೆಚ್ಚಿನ ಮಹತ್ವ. ಒಂದೇ ಕ್ಷೇತ್ರದಲ್ಲಿ 4 ಲಕ್ಷ ಮತಗಳ ಅಂತರದಿಂದ ಗೆಲ್ಲುವುದಕ್ಕಿಂತ 4 ಕ್ಷೇತ್ರದಲ್ಲಿ 4 ಮತಗಳ ಅಂತರದಿಂದ ಗೆದ್ದರೂ ಸಾಕೆನ್ನುವ ಮನಸ್ಥಿತಿಯಲ್ಲಿ ಎಲ್ಲ ಪಕ್ಷಗಳಿರುತ್ತವೆ. ಚುನಾವಣೆಯಲ್ಲಿ ಲಕ್ಷ ಅಂತರದಿಂದ ಗೆಲುವು ಸಾಧಿಸಿದ್ದರೂ ಅಷ್ಟೇ, ಒಂದೇ ಒಂದು ಮತದ ಅಂತರದಿಂದ ಗೆಲುವು ಸಾಧಿಸಿದ್ದರೂ ಅಷ್ಟೇ. ಈ ಕಾರಣಕ್ಕಾಗಿಯೇ ಅದೆಷ್ಟೋ ಬಾರಿ ಶೇಕಡಾವಾರು ಮತಗಳನ್ನು ಒಂದು ಪಕ್ಷ ಹೆಚ್ಚುವರಿ ಪಡೆದಿದ್ದರೂ, ಅಧಿಕಾರದ ಗದ್ದುಗೆ ಏರುವುದಕ್ಕೆ ಸಾಧ್ಯವಾಗಿರುವುದಿಲ್ಲ.

ಇತ್ತೀಚೆಗೆ ನಡೆದ ಜಮ್ಮು-ಕಾಶ್ಮೀರ ಚುನಾವಣೆ ಇದಕ್ಕೆ ಉತ್ತಮ ಉದಾಹರಣೆ. ಜಮ್ಮು-ಕಾಶ್ಮೀರದಲ್ಲಿ ಅತ್ಯಧಿಕ ಸ್ಥಾನವನ್ನು ನ್ಯಾಷನಲ್ ಕಾನ್ಫರೆನ್ಸ್ ಪಕ್ಷ ಗಳಿಸಿದ್ದರೂ, ಮತಗಳಿಕೆ ವಿಷಯದಲ್ಲಿ ಹಿಂದಿದೆ. ಬಿಜೆಪಿ ಶೇ.25.64ರಷ್ಟು ಮತ ಗಳಿಸಿದ್ದರೆ, ಎನ್‌ಸಿ ಶೇ.23.43ರಷ್ಟು ಮತ ಗಳಿಸಲಷ್ಟೇ ಸಾಧ್ಯವಾಗಿದೆ. ಇತರರು ಮತ್ತು ಪಕ್ಷೇತರರ ಮತಗಳಿಕೆಯೂ (ಶೇ.24.83) ನ್ಯಾಷನಲ್ ಕಾನ್ಫರೆನ್ಸ್‌ಗಿಂತ ಅಧಿಕವಾಗಿದೆ. ಆದರೂ ಅಧಿಕಾರದ ಗದ್ದುಗೆ ಏರಿದ್ದು ಮಾತ್ರ ನ್ಯಾಷನಲ್ ಕಾನ್ಫರೆನ್ಸ್!

ಆದರೆ ಈ ಮತಗಳಿಕೆಯ ಬಗ್ಗೆ ಚರ್ಚಿಸುವುದಕ್ಕಿಂತ ಮೊದಲು 'ಅತಿಯಾದ ಆತ್ಮವಿಶ್ವಾಸ'ದಿಂದ ಹರಿಯಾಣದಲ್ಲಿ ಕೈಗೆ ಬಂದ ತುತ್ತನ್ನು ಕಾಂಗ್ರೆಸ್ ಯಾವ ರೀತಿಯಲ್ಲಿ ಕಳೆದುಕೊಂಡಿದೆ ಎನ್ನುವ ಬಗ್ಗೆ ಪ್ರಸ್ತಾಪಿಸಬೇಕಿದೆ. ಕಳೆದ ಮಂಗಳವಾರ, ರಾಜಕೀಯ ಅಸ್ತಿತ್ವದ ಕಾರಣಕ್ಕೆ ತೀವ್ರ ಕುತೂಹಲ ಮೂಡಿಸಿದ್ದ ಜಮ್ಮು-ಕಾಶ್ಮೀರ ಹಾಗೂ ಹರಿಯಾಣ ವಿಧಾನಸಭಾ ಚುನಾವಣಾ ಫಲಿತಾಂಶಗಳು ಪ್ರಕಟವಾಗಿವೆ. ಜಮ್ಮು-ಕಾಶ್ಮೀರದಲ್ಲಿ ನಿರೀಕ್ಷೆಯಂತೆ ನ್ಯಾಷನಲ್ ಕಾನ್ಫರೆನ್ಸ್ ಹಾಗೂ ಕಾಂಗ್ರೆಸ್ ಅಧಿಕಾರದ ಗದ್ದುಗೆಯನ್ನು ಹಿಡಿದವು. ಆದರೆ ಹರಿಯಾಣದ ವಿಷಯದಲ್ಲಿ ಬಹುತೇಕ ಸಮೀಕ್ಷೆಗಳಲ್ಲಿ ಸ್ಪಷ್ಟ ಬಹುಮತ ಪಡೆದಿದ್ದ ಕಾಂಗ್ರೆಸ್, ಫಲಿತಾಂಶದ ವೇಳೆ ರಾಜ್ಯದಲ್ಲಿ ನೆಲ ಕಚ್ಚಿತ್ತು. ಚುನಾವಣಾ ದಿನದ ಆರಂಭಿಕ ಮತ ಎಣಿಕೆ ವೇಳೆ ಭಾರಿ ಮುನ್ನಡೆ ಸಾಧಿಸಿದ್ದ ಕಾಂಗ್ರೆಸ್, ಮತ ಎಣಿಕೆ ಆರಂಭಗೊಂಡ ಎರಡೇ ಗಂಟೆಗೆ 25ರ ಆಸುಪಾಸಿಗೆ ಕುಸಿದಿತ್ತು. ಈ ಕುಸಿತದಿಂದ ಮೇಲೇಳಲು ಭಾರಿ ಪ್ರಯುತ್ನಪಟ್ಟರೂ, ಅದರಿಂದ ಚೇತರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದ್ದರಿಂದ ಮೂರನೇ ಬಾರಿಗೆ ಬಿಜೆಪಿ ಅಧಿಕಾರದ ಗದ್ದುಗೆಯನ್ನು ಹಿಡಿಯುವಲ್ಲಿ ಯಶ ಕಂಡಿತು.

ಹರಿಯಾಣದಲ್ಲಿ ಚುನಾವಣಾ ದಿನಾಂಕದ ಘೋಷಣೆಯ ದಿನದಿಂದಲೂ 'ಗೆಲ್ಲುವ ನೆಚ್ಚಿನ ಕುದುರೆ'ಯಾಗಿ ಕಾಂಗ್ರೆಸ್ ಕಾಣಿಸಿತ್ತು. ಸತತ 2 ಬಾರಿ ಆಡಳಿತ ನಡೆಸಿದ್ದ ಬಿಜೆಪಿಯು, ಆಡಳಿತ ವಿರೋಧಿ ಅಲೆ, ರೈತರು, ಜಾಟ್ ಸಮುದಾಯದ ವಿರೋಧದಿಂದಾಗಿ ಈ ಬಾರಿ ಗೆಲ್ಲುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತುಗಳು ಬಲವಾಗಿ ಕೇಳಿಬಂದಿದ್ದವು. ಈ ಹಂತದಲ್ಲಿ ಕಾಂಗ್ರೆಸ್ ನಾಯಕರು, ಮೈತ್ರಿಪಕ್ಷಗಳೊಂದಿಗೆ ಚುನಾವಣೆಗೆ ಹೋಗಿ ಮೈತ್ರಿ ಸರಕಾರ ನಡೆಸುವುದಕ್ಕಿಂತ ಸ್ವಂತ ಬಲದಲ್ಲಿ ಅಧಿಕಾರದ ಗದ್ದುಗೆ ಏರಬಹುದು ಎನ್ನುವ ಲೆಕ್ಕಾಚಾರಕ್ಕೆ ಮುಂದಾಗಿದ್ದರು. ಆದ್ದರಿಂದ ಆಮ್ ಆದ್ಮಿ ಪಕ್ಷ ಕೇಳಿದ 10 ಸೀಟಿನ ಬದಲಿಗೆ 5 ಸೀಟು ನೀಡುವುದಾಗಿ ಹೇಳಲಾಗಿತ್ತು. ಇದಕ್ಕೆ ಮುನಿಸಿಕೊಂಡ 'ಆಪ್' ಸ್ವಂತಬಲದ ಮೇಲೆ ಚುನಾವಣೆ ಎದುರಿಸಲು ಮುಂದಾಗಿತ್ತು. ಇದರೊಂದಿಗೆ ಹರಿಯಾಣ ಕಾಂಗ್ರೆಸ್‌ನಲ್ಲಿನ 'ಬಣ' ರಾಜಕೀಯದ ಬಡಿದಾಟ, ಅವರು ಹೋದಕಡೆ ನಾವು ಹೋಗುವುದಿಲ್ಲ ಎನ್ನುವ ಸಂಘರ್ಷದ ಫಲವಾಗಿ ಗೆಲುವಿನ ಸನಿಹಕ್ಕೆ ಬಂದು ಕಾಂಗ್ರೆಸ್ ವಾಪಸು ಹೋಗಬೇಕಾಯಿತು ಎನ್ನುವ ಮಾತುಗಳಿವೆ. ಆದರೆ ಈ ಸೋಲಿನ ಅಂತರವನ್ನು ಗಮನಿಸಿದರೆ, ಆಪ್‌ನೊಂದಿಗೆ ಮೈತ್ರಿ ಮಾಡಿಕೊಂಡಿದ್ದರೆ ಬಣ ಬಡಿದಾಟದ ನಡುವೆಯೂ ಬಿಜೆಪಿಯ ಹ್ಯಾಟ್ರಿಕ್ ಗೆಲುವಿಗೆ ಬ್ರೇಕ್ ಹಾಕಬಹುದಾಗಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

ಏಕೆಂದರೆ, ಈ ಬಾರಿ ಹರಿಯಾಣದಲ್ಲಿ ಶೇ.0.80 ಮತಗಳ ಅಂತರದಲ್ಲಿ ಕಾಂಗ್ರೆಸ್ ಹಲವು ಕ್ಷೇತ್ರಗಳನ್ನು ಬಿಟ್ಟುಕೊಟ್ಟಿದೆ. ಆಡಳಿತ ವಿರೋಧಿ ಅಲೆ ನಡುವೆಯೂ ಬಿಜೆಪಿ ಶೇ.39.89 ಮತಗಳೊಂದಿಗೆ 48 ಕ್ಷೇತ್ರದಲ್ಲಿ ಗೆಲುವಿನ ನಗೆ ಬೀರಿದ್ದರೆ, ಕಾಂಗ್ರೆಸ್ ಶೇ.39.08ರಷ್ಟು ಮತಗಳನ್ನು ಪಡೆದುಕೊಂಡಿದೆ. ಅಂದರೆ ಮತಗಳಿಕೆಯ ಅಂತರ ಕೇವಲ ಶೇ.0.80 ಮಾತ್ರ. ಆದರೆ ಹರಿಯಾಣದಲ್ಲಿ ಆಮ್ ಆದ್ಮಿ ಪಕ್ಷ ಪಡೆದಿರುವ ಮತ ಶೇ.1.79ರಷ್ಟು. ಒಂದು ವೇಳೆ ಕಾಂಗ್ರೆಸ್ ಹಾಗೂ ಆಪ್ ಮೈತ್ರಿ ಮಾಡಿಕೊಂಡು ಚುನಾವಣೆಯನ್ನು ಎದುರಿಸಿದ್ದರೆ, ಒಟ್ಟು ಮತಗಳಿಕೆಯ ಪ್ರಮಾಣ ಶೇ.40.87ರಷ್ಟಿರುತ್ತಿತ್ತು. ಇದು ಕಾಂಗ್ರೆಸ್‌ಗೆ ಬೇಕಿದ್ದ 'ಬಹುಮತ'ವನ್ನು ಪಡೆಯುವುದಕ್ಕೆ ಸಾಕಾಗುತ್ತಿತ್ತು ಎನ್ನುವುದು ಸ್ಪಷ್ಟ. ಆದರೆ ಅತಿಯಾದ ಆತ್ಮವಿಶ್ವಾಸದಿಂದ 'ಆಪ್' ಅನ್ನು ದೂರವಿಟ್ಟ ಕಾಂಗ್ರೆಸ್, ಬಿಜೆಪಿಯು ದಾಖಲೆ ಪ್ರಮಾಣದಲ್ಲಿ ಗೆಲುವು ಸಾಧಿಸುವುದಕ್ಕೆ ಅನುವುಮಾಡಿಕೊಟ್ಟು, ಮುಂದಿನ 5 ವರ್ಷಗಳ ಕಾಲ ಪ್ರತಿಪಕ್ಷವಾಗಿಯೇ ಕೂರಬೇಕಾದ ಪರಿಸ್ಥಿತಿಯನ್ನು ತಂದುಕೊಂಡಿದೆ.

ಹಾಗೆ ನೋಡಿದರೆ, ಅತಿಯಾದ ಆತ್ಮವಿಶ್ವಾಸದಿಂದ ಕಾಂಗ್ರೆಸ್ ಕಳೆದುಕೊಳ್ಳುತ್ತಿರುವ ರಾಜ್ಯಗಳ ಪಟ್ಟಿಯಲ್ಲಿ ಹರಿಯಾಣವೇ ಮೊದಲಲ್ಲ. ಕಳೆದ ವರ್ಷ ನಡೆದ ಪಂಚರಾಜ್ಯ ಚುನಾವಣೆಯಲ್ಲಿಯೂ ಪಂಜಾಬ್ ಹಾಗೂ ಗುಜರಾತ್‌ನಲ್ಲಿ ಕ್ಲೀನ್ ಸ್ವೀಪ್ ಆಗುವುದರ ಹಿಂದೆಯೂ ಇದೇ ತಪ್ಪು ಹೆಜ್ಜೆಗಳಿದ್ದವು. ಈ ರೀತಿಯ ಅತಿಯಾದ ಆತ್ಮವಿಶ್ವಾಸ ಹೊಂದಿರುವಾಗ ಬಹುತೇಕ ಪಕ್ಷಗಳು ಜನರ ಮನಸ್ಸನ್ನು ಅರ್ಥೈಸಿಕೊಳ್ಳುವಲ್ಲಿ ಸಂಪೂರ್ಣ ವಿಫಲವಾಗುತ್ತವೆ. ಇದು ಕೇವಲ ಕಾಂಗ್ರೆಸ್‌ಗೆ ಸೀಮಿತವಾದ ಸಮಸ್ಯೆಯಲ್ಲ. ಅನೇಕ ಚುನಾವಣೆಯಲ್ಲಿ ಹಲವು ಪಕ್ಷಗಳು ಮಕಾಡೆ ಮಲಗುವುದಕ್ಕೆ ಈ ನಡೆ ಕಾರಣವಾಗಿರುತ್ತದೆ.

ಇನ್ನು 2024ರ ಲೋಕಸಭಾ ಚುನಾವಣೆಯಲ್ಲಿನ 'ಅಚ್ಚರಿಯ' ಫಲಿತಾಂಶಕ್ಕೂ ಇದೇ ಅತಿಯಾದ ಆತ್ಮವಿಶ್ವಾಸವೇ ಕಾರಣ ಎಂದರೆ ತಪ್ಪಾಗುವುದಿಲ್ಲ. ಚುನಾವಣೋತ್ತರ ಸಮೀಕ್ಷೆಗಳೆಲ್ಲ ಬಿಜೆಪಿಗೆ ಸ್ಪಷ್ಟ ಬಹುಮತವೆಂದರೆ, ಕೆಲ ಸಮೀಕ್ಷೆಗಳು 400+ ನಿಶ್ಚಿತ ಎನ್ನುವ ಷರಾ ಬರೆದಿದ್ದವು. ಬಿಜೆಪಿಯೂ ಇದೇ ವಿಶ್ವಾಸದಲ್ಲಿದ್ದ ಕಾರಣಕ್ಕೆ '400+'ನ ನಿರೀಕ್ಷೆಯಲ್ಲಿತ್ತು. ಅದಕ್ಕೆ ಪೂರಕವಾಗಿ ಮೋದಿ ನಾಯಕತ್ವಕ್ಕೆ ಎದುರಾಳಿ ನಾಯಕತ್ವದ ಕೊರತೆ, 'ಇಂಡಿಯ' ಮೈತ್ರಿಕೂಟದಲ್ಲಿದ್ದ ಹತ್ತು ಹಲವು ಗೊಂದಲ, ಟಿಕೆಟ್ ಹಂಚಿಕೆಯಲ್ಲಿನ ಭಿನ್ನಾಭಿಪ್ರಾಯ ಹಾಗೂ ಬಿಜೆಪಿ ವಿರುದ್ಧ 'ಬಹಿರಂಗ'ವಾಗಿ ಕಾಣಿಸಿಕೊಳ್ಳದ ಆಡಳಿತ ವಿರೋಧಿ ಅಲೆ, ಈ ಎಲ್ಲದರೊಂದಿಗೆ ಉತ್ತರ ಪ್ರದೇಶದಲ್ಲಿ ಕಳೆದ ಬಾರಿಯಂತೆ 'ಮೋದಿ-ಯೋಗಿ' ಅಲೆಯಲ್ಲಿ ಕ್ಲೀನ್ ಸ್ವೀಪ್‌ನ ಗುರಿ, ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಪಶ್ಚಿಮ ಬಂಗಾಳದಲ್ಲಿ ಹೆಚ್ಚಿನ ಸ್ಥಾನದ ಲೆಕ್ಕಾಚಾರದಲ್ಲಿನ ಸೋಲು ಬಿಜೆಪಿಯ ಹಿನ್ನಡೆಗೆ ಕಾರಣವಾಗಿದ್ದವು.

ಇದರೊಂದಿಗೆ ಈ ಬಾರಿ ಹರಿಯಾಣದಲ್ಲಿ ಕಾಂಗ್ರೆಸ್ ಸೋಲಿಗೆ ಯಾವ ರೀತಿಯಲ್ಲಿ ಶೇ.1ಕ್ಕಿಂತ ಕಡಿಮೆ ಮತಗಳು ಚದುರಿದ್ದು ಕಾರಣವಾಗಿತ್ತೋ, ಬಿಜೆಪಿಗೂ ಅದೇ ರೀತಿಯಾಗಿತ್ತು. ಅದು ಸುಮಾರು 32 ಸ್ಥಾನಗಳಲ್ಲಿ ಸೋಲುವಂತೆ ಮಾಡಿದ್ದು ಕೇವಲ 6,09,639 ಮತಗಳು. ಅದರಲ್ಲಿಯೂ 16 ಕ್ಷೇತ್ರಗಳಲ್ಲಿ ಸಾವಿರಕ್ಕೂ ಕಡಿಮೆ ಅಂತರದಲ್ಲಿ ಸೋಲಾಗಿತ್ತು. ಐದಾರು ಸಾವಿರ ಮತಗಳ ಅಂತರದಲ್ಲಿ ನಾಲ್ಕೈದು ಕ್ಷೇತ್ರಗಳನ್ನು ಬಿಜೆಪಿ ಕಳೆದುಕೊಂಡಿತ್ತು. ಒಟ್ಟಾರೆ ಕೇವಲ ಶೇ. 0.7 ಮತ ಕಡಿಮೆ ಬಿದ್ದ ಕಾರಣ ಬರೋಬ್ಬರಿ 63 ಸೀಟುಗಳನ್ನು ಬಿಜೆಪಿ ಕಳೆದುಕೊಂಡಿತ್ತು. ತೀವ್ರ ಹಣಾಹಣಿಯಿದ್ದ, ಬಿಜೆಪಿಗೆ 'ಫೇವರ್' ಆಗಿದ್ದ ಈ ಕ್ಷೇತ್ರಗಳಲ್ಲಿ ಬಿಜೆಪಿ ಸೋಲುವುದಕ್ಕೆ ಪ್ರಮುಖ ಕಾರಣವೇನೆಂದು ನೋಡಿದರೆ, ಈ ಎಲ್ಲ ಕ್ಷೇತ್ರಗಳಲ್ಲಿಯೂ ಗೆಲುವು ನಿಶ್ಚಿತ ಎನ್ನುವ ಕಾರಣಕ್ಕೆ 'ನಿರಾಳ'ವಾಗಿದ್ದುದು, ಮೈಮರೆತಿದ್ದುದು ಎನ್ನುವುದು ಸ್ಪಷ್ಟ.

ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯು ಪ್ರತಿಪಕ್ಷಗಳ ಮೈತ್ರಿಕೂಟದ ಶಕ್ತಿ ಅರಿಯುವಲ್ಲಿ ವಿಫಲವಾದರೆ, ಅದಕ್ಕೂ ಕೆಲವೇ ತಿಂಗಳ ಮೊದಲು ನಡೆದಿದ್ದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಅತಿಯಾದ 'ಅವಲಂಬನೆ'ಯಿಂದ ರಾಜ್ಯವನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡಬೇಕಾಯಿತು. ಕರ್ನಾಟಕ ಬಿಜೆಪಿಯಲ್ಲಿನ ಒಳಜಗಳ, ಆಡಳಿತ ವಿರೋಧಿ ಅಲೆ, ಭ್ರಷ್ಟಾಚಾರದ ಆರೋಪಗಳನ್ನು ಮೀರಿ, 'ಮೋದಿ ಬಲವೊಂದೇ ಸಾಕು' ಎನ್ನುವ ಮನಸ್ಥಿತಿಯಲ್ಲಿ ಪಕ್ಷದ ಅಂದಿನ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕೂತಿದ್ದರು. ರಾಜ್ಯ ಬಿಜೆಪಿಯಲ್ಲಿನ ಒಳಜಗಳವನ್ನು ಪಕ್ಷದ ವರಿಷ್ಠರು ನಿಭಾಯಿಸುತ್ತಾರೆ ಹಾಗೂ ರಾಜ್ಯ ಬಿಜೆಪಿ ಸರಕಾರದ ವಿರುದ್ಧವಿದ್ದ ಆಡಳಿತ ವಿರೋಧಿ ಅಲೆಯನ್ನು 'ಮೋದಿ ಹವಾ' ನಿಯಂತ್ರಿಸುತ್ತದೆ. ಇದರೊಂದಿಗೆ ಕೆಲವೆಡೆ 'ಹೊಸಮುಖ' ಪ್ರಯೋಗ ಪಕ್ಷದ ಎಲ್ಲ ಲೋಪಗಳನ್ನು ಮುಚ್ಚಿ ಹಾಕಿ ನೂರರ ಗಡಿಗೆ ಸಂಖ್ಯಾಬಲ ತಲುಪಲಿದೆ. ಆಗ ಜೆಡಿಎಸ್‌ನಿಂದ ಬೆಂಬಲ ಪಡೆದು ಸರಕಾರವನ್ನು ರಚಿಸಬಹುದು ಎನ್ನುವ ದೂರಾಲೋಚನೆಯಲ್ಲಿ ಬಿಜೆಪಿ ನಾಯಕರಿದ್ದರು.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ 5 ವರ್ಷದಲ್ಲಿ ಒಂದು ಬಾರಿ ಪ್ರಜೆ ಪ್ರಭುವಾಗಿದ್ದರೂ, ಆ ಒಂದು ದಿನ ಮುಂದಿನ 5 ವರ್ಷ ಏನಾಗಬೇಕು ಎಂದು ತೀರ್ಮಾನಿಸುವ 'ಹಕ್ಕು' ಪ್ರತಿ ಮತದಾರನಿಗೆ ಇರುತ್ತದೆ. ಗೆಲುವು ಸಾಧಿಸಿದ ಬಳಿಕ ತನಗೂ, ಜನರಿಗೂ ಸಂಬಂಧವಿಲ್ಲವೆಂದು ತಿರುಗಾಡುವ ಅನೇಕ 'ಜನಪ್ರತಿನಿಧಿ'ಗಳನ್ನು ಮತದಾರ ಐದೇ ವರ್ಷದಲ್ಲಿ ಯಾವ ರೀತಿ ಮಕಾಡೆ ಮಲಗಿಸಿದ್ದಾನೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಅದೇ ರೀತಿ 'ಪ್ರತಿಪಕ್ಷ'ಕ್ಕೆ ಜನಬಲವಿಲ್ಲವೆಂದು ಅಹಂಕಾರದಲ್ಲಿ ಮೆರೆಯುವ ಪಕ್ಷಗಳಿಗೆ ಪದೇಪದೆ ಪಾಠ ಕಲಿಸುತ್ತಿರುವುದು ಇತ್ತೀಚಿನ ಪ್ರತಿ ಚುನಾವಣೆಯಲ್ಲಿ ಒಂದಿಲ್ಲೊಂದು ಪಕ್ಷಕ್ಕೆ ತಿಳಿಸಿರುವುದನ್ನು ಫಲಿತಾಂಶವೇ ಹೇಳುತ್ತದೆ. ಈ ಎರಡನ್ನೂ ಮೀರಿ, ರಾಜಕೀಯದ ಒಳಸುಳಿ ಅರಿಯುವಲ್ಲಿ ವಿಫಲವಾಗಿ ರಾಜ್ಯಗಳನ್ನು ಬಿಟ್ಟುಕೊಡುತ್ತಿರುವ ಕಾಂಗ್ರೆಸ್ ಇನ್ನಾದರೂ ಪಾಠ ಕಲಿಯಬೇಕಿದೆ. ಇನ್ನಾರು ತಿಂಗಳಲ್ಲಿ ಮಹಾರಾಷ್ಟ್ರ, ಜಾರ್ಖಂಡ್, ದೆಹಲಿಯ ಚುನಾವಣೆಗಳು ಎದುರಾಗಲಿದ್ದು, ಈ ಚುನಾವಣೆಯಲ್ಲಿ ಅದು 'ಮೈತ್ರಿ' ಪಕ್ಷಗಳೊಂದಿಗೆ ಕೈಜೋಡಿಸಿ ಆಡಳಿತ ಪಕ್ಷದಲ್ಲಿ ಕೂರುವ ಆಲೋಚನೆ ಮಾಡುವುದೋ ಅಥವಾ ಏನಾದರೂ ಆಗಲಿ ಸ್ವತಂತ್ರವಾಗಿಯೇ ವಿಧಾನಸಭಾ ಚುನಾವಣೆಗಳನ್ನು ಎದುರಿಸಬೇಕು ಎನ್ನುವ ಮನಸ್ಥಿತಿಯನ್ನು ಮುಂದುವರಿಸುವುದೋ ಎಂಬ ಪ್ರಶ್ನೆಗೆ ಕಾಲವೇ ಉತ್ತರಿಸಬೇಕಿದೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಆಕಳಿಕೆ-ಅಭಿಪ್ರಾಯ

ಶ್ರೀವತ್ಸ ಜೋಶಿ ಅವರು ತಮ್ಮ 'ತಿಳಿರು ತೋರಣ' ಅಂಕಣದಲ್ಲಿ (ವಿಶ್ವವಾಣಿ ಅ.13) ಆಕಳಿಕೆಯ ಬಗ್ಗೆ ವಿಶೇಷ ಮಾಹಿತಿ ನೀಡಿದ್ದಾರೆ. ಪೃಥ್ವಿಯ ಮೇಲೆ ಜೀವಿಸಿರುವ ಪ್ರತಿಯೊಂದು ಪ್ರಾಣಿಯೂ ಆಕಳಿಸದೇ ಇರಲು ಸಾಧ್ಯವಿಲ್ಲ, ಯಾಕಂದ್ರೆ ಅದೊಂದು ನೈಸರ್ಗಿಕ ಕ್ರಿಯೆ ಎಂಬ ಅವರ ಅಭಿಪ್ರಾಯ ಒಪ್ಪುವಂಥದ್ದೇ. ಹೇಳದೇ ಕೇಳದೇ ಬರುವ ಈ ಆಕಳಿಕೆಯು ಸಮಯ-ಸಂದರ್ಭವನ್ನು ನೋಡುವುದೇ ಇಲ್ಲ. ಆದರೆ ಅದು ಪೂರ್ಣಗೊಂಡಾಗ ಸಿಗುವ ಸಮಾಧಾನ ಅಳೆಯಲಾಗದಷ್ಟು. ಮಾತ್ರವಲ್ಲ, ಅದು 'ಇನ್ನು ನಿದ್ರೆಗೆ ಹೊರಡು' ಎಂದು ಕೊಡುವ ಮುನ್ಸೂಚನೆಯೂ ಹೌದು. ಲೇಖಕರ ಮಾತಿನಂತೆ, ಅದೊಂದು ಮುಕ್ತ ಅಭಿಪ್ರಾಯ ಕೂಡ. ಅತ್ಯಂತ ವಿರಳ ಎನ್ನಬಹುದಾದ ವಿಷಯಗಳ ಬಗ್ಗೆ ಅಂಕಣ ಬರೆಯುವ ಮೂಲಕ ಶ್ರೀವತ್ಸ ಜೋಶಿಯವರು ಬರಹಗಾರರ ಸಾಲಿನಲ್ಲಿ ವಿಭಿನ್ನರಾಗಿ ನಿಲ್ಲುತ್ತಾರೆ. Yawn a more Roman way..ಈ ವಾಕ್ಯವೇ ಅವರ ಜಾಣ್ಮೆಗೆ ಸಾಕ್ಷಿ. ಇದು ನಿರಂತರವಾಗಿರಲಿ. ಶ್ರೀವತ್ಸ ಜೋಶಿಯವರಿಗೆ ಮತ್ತು 'ವಿಶ್ವವಾಣಿ'ಗೆ ನನ್ನ ಅಭಿನಂದನೆಗಳು.

- ಲಕ್ಷ್ಮೀಕಾಂತ ಪಾಟೀಲ, ಮೈಸೂರು

ಅನ್ಯಾಯ-ಅಪಾಯ!

ಕೇಂದ್ರದಿಂದ ಬರಬೇಕಾದ ತೆರಿಗೆಯ ಪಾಲಿನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿದೆ ಎನ್ನುತ್ತಾ ಮುಖ್ಯಮಂತ್ರಿಯವರು ಉಲ್ಲೇಖಿಸಿರುವ ಅಂಕಿ-ಅಂಶಗಳಲ್ಲಿ ಸತ್ಯಾಂಶವಿದೆಯೆಂಬುದು ವಿವಿಧ ಪತ್ರಿಕೆಗಳಲ್ಲಿ ಈ ಹಿಂದೆ ಪ್ರಕಟಗೊಂಡಿರುವ ಹಲವು ಸಾಧಾರ ವರದಿಗಳಿಂದ ವೇದ್ಯವಾಗಿದೆ. 'ಒಂದು ದೇಶ, ಒಂದು ತೆರಿಗೆ' ಎಂಬ ಕಣ್ಕಟ್ಟಿನಿಂದ ಜಾರಿಗೊಂಡ ಜಿಎಸ್‌ಟಿ ಪದ್ಧತಿಯ ದ್ವಾರಾ ದೇಶದ ಅರ್ಥವ್ಯವಸ್ಥೆಯ ಕೇಂದ್ರೀಕರಣವು ಕರ್ನಾಟಕಕ್ಕೆ ಎಸಗುತ್ತಿರುವ ಅನ್ಯಾಯವಿದು.

ಮುಂದೆ, 'ಒಂದು ದೇಶ, ಒಂದು ಚುನಾವಣೆ' ಎಂಬ ಬ್ರಹ್ಮಾಸ್ತ್ರದ ಪ್ರಯೋಗವಾದಾಗ, ಅಧಿಕಾರ ಕೇಂದ್ರೀಕರಣವು ದಾಂಗುಡಿಯಿಟ್ಟು, ಪ್ರಜಾಪ್ರಭುತ್ವದ ಬೇರುಗಳೇ ಅಲ್ಲಾಡತೊಡಗುವ ಅಪಾಯ ನಿರೀಕ್ಷಿತ. ನಮ್ಮ ರಾಜಕೀಯ ಪಕ್ಷಗಳ ಗುಣ ನಮಗೆ ಗೊತ್ತಿಲ್ಲದ್ದೇನಲ್ಲ. ದೇವರು-ಧರ್ಮಗಳ ಹೆಸರಿನಲ್ಲಿ ದೇಶಾದ್ಯಂತ ಹಬ್ಬಿಸಲಾಗುತ್ತಿರುವ ಕಿಚ್ಚನ್ನು ಜ್ಯೋತಿಯೆಂದು ಭಾವಿಸಿ, ಆ 'ಬೆಳಕು' ತೋರಿಸುವ ತಪ್ಪು ಹಾದಿಯಲ್ಲಿ ಸಾಗುವ ಮತದಾರರು, ವಿಶೇಷತಃ ದೊಡ್ಡ ಗಾತ್ರದ ಯುವಸಮೂಹ, ಇನ್ನಾದರೂ ವಾಸ್ತವವನ್ನು ಅರಿಯದಿದ್ದರೆ ಮುಂದೆ ಅವರೂ ಎಲ್ಲರಂತೆ ನಾನಾ ಕ್ಷೋಭೆಗಳಿಗೆ ಈಡಾಗಬೇಕಾಗುತ್ತದಷ್ಟೆ.

- ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಇನ್ನು ನೆನಪು ಮಾತ್ರ

ರತನ್ ಟಾಟಾ ದೇಶದ ನಿಜವಾದ ರತ್ನ. ದೇಶಕಂಡ ಆದರ್ಶ ಉದ್ಯಮಿ, ಉದಾರಿ ಮತ್ತು ಮಾನವತಾವಾದಿ; ದೇಶಕ್ಕಾಗಿ ಎಲ್ಲ ವನ್ನೂ ತ್ಯಾಗ ಮಾಡಲು ಸಿದ್ಧವಿದ್ದ ಧೀಮಂತ ವ್ಯಕ್ತಿ. 'ನನ್ನ ದೇಶ ಕಷ್ಟಕ್ಕೆ ಸಿಲುಕಿದರೆ ನನ್ನ ಇಡೀ ಆಸ್ತಿಯನ್ನು ಮುಡಿ ಪಾಗಿಟ್ಟು ದೇಶವನ್ನು ಕಟ್ಟುತ್ತೇನೆ' ಎಂಬ ಅವರ ಮಾತುಗಳು ಎಂದೆಂದಿಗೂ ಉಳಿಯುವಂಥವು. ನಿಜಾರ್ಥದ ಶ್ರೀಮಂತ ಅತ್ಯಂತ ಸರಳ ಜೀವನ ನಡೆಸುತ್ತಾನೆ, ಪರಿತ್ಯಾಗಿ ಆಗಿರುತ್ತಾನೆ ಎಂಬುದಕ್ಕೆ ರತನ್ ಟಾಟಾ ಸಾಕ್ಷಿಯಾಗಿದ್ದರು. ಈಗ ದಂತಕಥೆಯಾಗಿರುವ ಅವರು ನಮ್ಮ ಮಕ್ಕಳ ಪಠ್ಯಪುಸ್ತಕದಲ್ಲಿ ಸೇರಬೇಕಾದ ವ್ಯಕ್ತಿ.

- ರಂಜಿತ ಎಚ್.ಕೆ., ಹಾಸನ

ಭಯ ಹುಟ್ಟಿಸಬಹುದು

ಮೈಸೂರು-ದರ್ಭಂಗಾ ಎಕ್ಸ್‌ಪ್ರೆಸ್ ಅಪಘಾತದಿಂದಾಗಿ ರೈಲು ಪ್ರಯಾಣದ ಸುರಕ್ಷತೆ ಮತ್ತು ಭದ್ರತೆಯ ಬಗ್ಗೆ ಮತ್ತೆ ಪ್ರಶ್ನೆಗಳು ಏಳುತ್ತಿವೆ. ಕಳೆದ 5 ವರ್ಷಗಳಲ್ಲಿ ದೇಶಾದ್ಯಂತ 200ಕ್ಕೂ ಅಧಿಕ ರೈಲು ಅಪಘಾತಗಳು ಸಂಭವಿಸಿ ಗಣನೀಯ ಸಂಖ್ಯೆಯ ಜನರು ಪ್ರಾಣ ಕಳೆದುಕೊಂಡಿರುವುದು ದುರದೃಷ್ಟಕರ. ಇಂದಿನ ಆಧುನಿಕ ತಂತ್ರಜ್ಞಾನದ ಸಮಯದಲ್ಲೂ ಈ ರೀತಿ ಪದೇ ಪದೆ ಅಪಘಾತಗಳು ಸಂಭವಿಸುತ್ತಿರುವುದು ನೋಡಿದರೆ, ತಪ್ಪಾಗುತ್ತಿರುವುದೆಲ್ಲಿ ಎಂಬುದರ ಅವಲೋಕನಕ್ಕೆ ಸುರಕ್ಷತೆಯ ಹೊಣೆಹೊತ್ತವರು ಮುಂದಾಗಬೇಕಿದೆ ಎನಿಸುತ್ತದೆ. ಏಕೆಂದರೆ, ದೇಶದಲ್ಲಿ ಅತಿಹೆಚ್ಚು ಜನರು ಪ್ರಯಾಣಕ್ಕಾಗಿ ನೆಚ್ಚಿರುವುದು ರೈಲು ವ್ಯವಸ್ಥೆಯನ್ನೇ; ಹೀಗೆ ಮತ್ತೆ ಮತ್ತೆ ಅಪಘಾತಗಳು ಸಂಭವಿಸುತ್ತಿದ್ದರೆ ಜನರಿಗೆ ರೈಲು ಪ್ರಯಾಣವೇ ಭಯ ಹುಟ್ಟಿಸಬಹುದು.

- ಸುರೇಂದ್ರ ಪೈ, ಭಟ್ಕಳ

ಬೆಂಗಳೂರಿನ ಹಳ್ಳಿಗಳಿಗೆ ಬರಲಿದ್ದಾಳೆ ಕಾವೇರಿ ಮಾತೆ

ಗಂಗಾವತರಣ
ಡಿ.ಕೆ.ಶಿವಕುಮಾರ್
vveditoped@gmail.com

ಬೆಂಗಳೂರು ನಗರ ದಿನೇದಿನೆ ವೇಗವಾಗಿ ಬೆಳೆಯುತ್ತಿದೆ. ಈ ವೇಗಕ್ಕೆ ತಕ್ಕಂತೆ ಮೂಲಭೂತ ಅಗತ್ಯತೆಗಳನ್ನು ಪೂರೈಸುವುದು ಸವಾಲಿನ ಕೆಲಸವಾಗಿದೆ. ಬೆಂಗಳೂರಿನ ಜನರು ದಿನವೊಂದಕ್ಕೆ 2,600 ಮಿಲಿಯನ್ ಲೀಟರ್ ನೀರನ್ನು ಬಳಸುತ್ತಾರೆ. ಇದರಲ್ಲಿ 1,450 ಎಂಎಲ್‌ಎಡಿ ನೀರು ಕಾವೇರಿ ನದಿಯಿಂದ ಪೂರೈಕೆಯಾದರೆ ಉಳಿದ 650 ಎಂಎಲ್‌ಡಿ ನೀರು ಅಂತರ್ಜಲದಿಂದ ಪೂರೈಕೆಯಾಗುತ್ತದೆ. ಆದರೂ ಬೆಂಗಳೂರಿಗೆ ಪೂರೈಸಲು 500 ಎಂಎಲ್‌ಡಿಗಳಷ್ಟು ನೀರಿನ ಕೊರತೆ ಇದೆ. 2018ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನೀರಿನ ತೀವ್ರ ಅಭಾವ ಎದುರಾದಾಗ, ಜಾಗತಿಕವಾಗಿ ಅನೇಕ ಮಹಾನಗರಗಳೂ ಇದೇ ಪರಿಸ್ಥಿತಿಯನ್ನು ಎದುರಿಸಲಿವೆ ಎಂದು ಎಚ್ಚರಿಸಲಾಗಿತ್ತು. ಆದರೆ ಮಹಾನಗರಿ ಬೆಂಗಳೂರಿಗೂ ಜಲಕ್ಷಾಮ ಇಷ್ಟು ವೇಗವಾಗಿ ಬಂದು ಅಪ್ಪಳಿಸುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಕಳೆದ ಬಿರುಬೇಸಗೆಯಲ್ಲಿ ಬೆಂಗಳೂರಿನ ಜನರಿಗೆ ನೀರಿನ ಸಮಸ್ಯೆ ಬಹಳ ಕಾಡಿತ್ತು.

ಬೆಂಕಿ ಬಿದ್ದ ಮೇಲೆ ಬಾವಿ ತೋಡುವುದರ ಬದಲು, ಬೆಂಗಳೂರಿನ ನೀರಿನ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ಕರ್ನಾಟಕ ರಾಜ್ಯ ಸರಕಾರ ಹಾಗೂ ಬೆಂಗಳೂರು ಜಲಮಂಡಳಿ, ಅನೇಕ ಜಲಸಂರಕ್ಷಣಾ ಕಾರ್ಯಗಳು ಮತ್ತು ಸಮರ್ಪಕ ನೀರಿನ ಪೂರೈಕೆಯ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿವೆ. ಈ ಪೈಕಿ, ನನ್ನ ಮುಂದಾಳತ್ವದಲ್ಲಿ, 'ಮನೆಮನೆಗೂ ಕಾವೇರಿ ನೀರು- ಇದು ಸಮೃದ್ಧ ಬೆಂಗಳೂರು' ಎಂಬ ಧ್ಯೇಯದಡಿ ಅನುಷ್ಠಾನಗೊಳ್ಳುತ್ತಿರುವ, ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಜಲಸಂಪರ್ಕ ಯೋಜನೆ ಬಹಳ ಮುಖ್ಯವಾಗಿದೆ. ಇದರಿಂದ ಬೆಂಗಳೂರಿನ 110 ಹಳ್ಳಿಗಳ ಜಲಕ್ಷಾಮ ನೀಗಲಿದೆ. 4 ಲಕ್ಷ ನೀರಿನ ಸಂಪರ್ಕ, 50 ಲಕ್ಷ ಜನರಿಗೆ ಕಾವೇರಿ ನೀರನ್ನು ಪೂರೈಸಲಿರುವ ಈ ಮಹತ್ವಾಕಾಂಕ್ಷಿ ಯೋಜನೆ ಇತಿಹಾಸವನ್ನು ಸೃಷ್ಟಿಸಲಿದೆ.

ಮನೆಮನೆಗಳಲ್ಲೂ ಹರಿಯಲಿದ್ದಾಳೆ ಕಾವೇರಿ ಮಾತೆ:

2007ರಲ್ಲಿ ಬಿಬಿಎಂಪಿ ವ್ಯಾಪ್ತಿಗೆ ಸೇರಿದ 110 ಗ್ರಾಮಗಳ ಅಭ್ಯುದಯಕ್ಕೆ ನನ್ನ ನೇತೃತ್ವದಲ್ಲಿ ಕಾಯಕಲ್ಪ ದೊರೆತಿದೆ. ದೇಶದಲ್ಲೇ ಅತ್ಯಾಧುನಿಕ ಹಾಗೂ ಬೃಹತ್ ನೀರಿನ ಸಂಸ್ಕರಣಾ ಘಟಕವು ಮಂಡ್ಯದ ಮಳವಳ್ಳಿಯ ತೊರೆಕಾಡನಹಳ್ಳಿಯಲ್ಲಿ ನಿರ್ಮಾಣವಾಗಿದೆ. ನೆಟ್ಟಕಲ್ ಸಮತೋಲನ ಅಣೆಕಟ್ಟಿನಿಂದ ನೀರೆತ್ತಿ, ಟಿ.ಕೆ. ಹಳ್ಳಿ, ಹಾರೋಹಳ್ಳಿ, ತಾತಗುಣಿ ಪಂಪಿಂಗ್ ಸ್ಟೇಷನ್‌ಗಳ ಮೂಲಕ ಒಟ್ಟು 775 ಎಂಎಲ್‌ಡಿ ನೀರನ್ನು ಬೆಂಗಳೂರಿಗೆ ಸರಬರಾಜು ಮಾಡಲಾಗುತ್ತದೆ. ಯಶವಂತಪುರ ವಿಧಾನಸಭಾ ಕ್ಷೇತ್ರದ 13 ಹಳ್ಳಿಗಳಲ್ಲಿ 48,000 ಸಂಪರ್ಕ, ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ 6 ಹಳ್ಳಿಗಳಲ್ಲಿ 37,500 ಸಂಪರ್ಕ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ 26 ಹಳ್ಳಿಗಳಲ್ಲಿ 73,500 ಸಂಪರ್ಕ, ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ 32 ಹಳ್ಳಿಗಳಲ್ಲಿ 96,750 ಸಂಪರ್ಕ, ಮಹದೇವಪುರ ಕ್ಷೇತ್ರದ 33 ಹಳ್ಳಿಗಳಲ್ಲಿ 93,100 ನೀರಿನ ಸಂಪರ್ಕ, ರಾಜರಾಜೇಶ್ವರಿ ನಗರ, ಬೊಮ್ಮನಹಳ್ಳಿ ಹಾಗೂ ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ವಿವಿಧ ಹಳ್ಳಿಗಳಿಗೆ ನೀರಿನ ಸಂಪರ್ಕ ಸಿಗಲಿದ್ದು, ಮನೆಮನೆಗೂ ಕಾವೇರಿ ನೀರು ಸರಬರಾಜು ಆಗಲಿದೆ.

ಮಾಡರ್ನ್ ಎಂಜಿನಿಯರಿಂಗ್ ಮಾರ್ವೆಲ್

ಜಪಾನ್ ಯಂತ್ರೋಪಕರಣಗಳು ಹಾಗೂ ಫ್ರೆಂಚ್ ತಂತ್ರಜ್ಞಾನಗಳನ್ನು ಬಳಸಿ ಈ ಮಹತ್ವಾಕಾಂಕ್ಷೆಯ ಯೋಜನೆಯ ಗುಣಮಟ್ಟವನ್ನು ಕಾಯ್ದುಕೊಳ್ಳಲಾಗಿದೆ. 2.4 ಕೋಟಿ ಮಾನವ ಗಂಟೆಗಳ ಶ್ರಮ ಈ ಯೋಜನೆಯ ಹಿಂದಿದೆ. 1,45,000 ಎಂಟಿ ಸ್ಟೀಲ್ ಪ್ಲೇಟ್‌ಗಳನ್ನು ಬಳಸಲಾಗಿದೆ. 450 ಮೀಟರ್ ಎತ್ತರಕ್ಕೆ ನೀರು ಹಾಯಿಸಲಾ ಗುತ್ತದೆ. ಅಂದರೆ ಇದು ಐಫೆಲ್ ಟವರ್‌ಗಿಂತ ಹೆಚ್ಚಿನ ಎತ್ತರವನ್ನು ಹೊಂದಿದೆ. ಹಾಗಾಗಿ ಈ ಯೋಜನೆಯನ್ನು 'ಮಾಡರ್ನ್ ಎಂಜಿನಿಯರಿಂಗ್ ಮಾರ್ವೆಲ್' ಎಂದೇ ಕರೆಯಬಹುದು.

4,336 ಕೋಟಿ ರು. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆಗೆ ಜಪಾನಿನ ಸಂಸ್ಥೆ ಜೈಕಾದಿಂದ ಸಾಲ ಸೌಲಭ್ಯವನ್ನು ಪಡೆದುಕೊಳ್ಳಲಾಗಿದೆ. ಮುಂದಿನ ಹತ್ತು ವರ್ಷಗಳ ಅವಧಿಯಲ್ಲಿ ಜಲಮಂಡಳಿಯ ವಿವಿಧ ಆದಾಯ ಮೂಲಗಳಿಂದ ಈ ಸಾಲವನ್ನು ತೀರಿಸಲಾಗುವುದು.

ಅಕ್ರಮ ನೀರಿನ ಸಂಪರ್ಕಗಳಿಗೆ ತಡೆ

ಕಾವೇರಿ ನೀರು ಸಂಪರ್ಕ ಪಡೆಯುವ ಪ್ರಕ್ರಿಯೆಯು ಜಲಮಂಡಳಿ ಅಧ್ಯಕ್ಷರಾದ ಡಾ.ರಾಮ್ ಪ್ರಸಾತ್ ಮನೋಹರ್ ಅವರ ಸುಪರ್ದಿಯಲ್ಲಿ ನಡೆಯುತ್ತಿದೆ. ಜಲಮಂಡಳಿ ಅಧಿಕಾರಿಗಳು ಕಾವೇರಿ ನೀರು ಸಂಪರ್ಕ ನೋಂದಣಿಗಾಗಿ ಮನೆ ಬಾಗಿಲಿಗೆ ಬರಲಿದ್ದು, ಜನರು ಅಗತ್ಯ ಮಾಹಿತಿಯನ್ನು ನೀಡಿ ಇದರ ಪ್ರಯೋಜನ ಪಡೆದುಕೊಳ್ಳಬಹುದು. ಆನ್‌ಲೈನ್ ಮೂಲಕವೂ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಈ ಯೋಜನೆ ಸಾಕಾರವಾದರೆ ಈಗಿರುವ ಅಕ್ರಮ ಜಲಸಂಪರ್ಕಗಳಿಗೆ ತಡೆ ಬೀಳಲಿದೆ ಹಾಗೂ ಅನಧಿಕೃತವಾಗಿ ಬೋರ್‌ವೆಲ್‌ಗಳನ್ನು ಕೊರೆಸುವುದೂ ನಿಲ್ಲಲಿದೆ. ಹಾಗಾಗಿ ಸುಸ್ಥಿರವಾದ ನೀರಿನ ಬಳಕೆಯಿಂದಾಗಿ ಬೇಸಿಗೆ ಕಾಲದಲ್ಲಿ ನೀರಿನ ಸಮಸ್ಯೆ ಉಂಟಾಗುವುದನ್ನು ಸಮರ್ಥವಾಗಿ ಎದುರಿಸಬಹುದು. ಬೆಂಗಳೂರನ್ನು 'ವಾಟರ್ ಸರ್ಪ್ಲಸ್' ಆಗಿಸುವುದು ಈ ಯೋಜನೆಯ ಪ್ರಮುಖ ಉದ್ದೇಶ.

ಕೋವಿಡ್ ಕಾರಣದಿಂದ ನಿಧಾನಗತಿಯತ್ತ ಸಾಗಿದ್ದ ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆಯು ನನ್ನ ಮುತುವರ್ಜಿಯಿಂದಾಗಿ ಮತ್ತೆ ಹುರುಪನ್ನು ಪಡೆದುಕೊಂಡಿದೆ. ಕಾವೇರಿ, ಮಹದಾಯಿ, ಮೇಕೆದಾಟು ಯೋಜನೆಗಳ ವಿಚಾರಗಳಲ್ಲಿ ಸದಾ ಕನ್ನಡಿಗರ ಪರ ಧ್ವನಿ ಎತ್ತುತ್ತಾ ಬಂದಿರುವ ನಾನು, ಇತ್ತೀಚೆಗಷ್ಟೇ ಎತ್ತಿನಹೊಳೆ ಯೋಜನೆಯ ಮೊದಲನೇ ಹಂತವನ್ನು ಲೋಕಾರ್ಪಣೆಗೊಳಿಸಿದ್ದು ನಿಮಗೆ ಗೊತ್ತಿರುವ ಸಂಗತಿಯೇ. ಇದಕ್ಕಾಗಿ ಜನರು ನನ್ನನ್ನು 'ಬಯಲುಸೀಮೆಯ ಭಗೀರಥ' ಎಂದು ಕರೆದಿದ್ದೂ ಉಂಟು. ಈಗ ಬೆಂಗಳೂರಿನ ವಿವಿಧ ಹಳ್ಳಿಗಳ ಮನೆಬಾಗಿಲಿಗೆ ಕಾವೇರಿ ನೀರನ್ನು ಕೊಳವೆಗಳ ಮೂಲಕ ಹರಿಸುವ ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆಯ ಕನಸೂ ನನಸಾಗುತ್ತಿದೆ. ಇದರಿಂದಾಗಿ, ಬೆಂಗಳೂರನ್ನು ಕಾಡುತ್ತಿರುವ ನೀರಿನ ಬವಣೆಗೆ ಪರಿಹಾರ ದೊರೆಯಲಿದೆ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಅಕ್ಟೋಬರ್ 16ರಂದು ಕಾವೇರಿ ಐದನೇ ಹಂತದ ಕುಡಿಯುವ ನೀರಿನ ಯೋಜನೆಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಹಾಗೂ ನಾನು ಟಿ.ಕೆ. ಹಳ್ಳಿಯಲ್ಲಿ ಚಾಲನೆ ನೀಡಲಿದ್ದೇವೆ. ಬನ್ನಿ, ಬೆಂಗಳೂರನ್ನು ಸಮೃದ್ಧವಾಗಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕೈಜೋಡಿಸೋಣ.

(ಲೇಖಕರು ಕರ್ನಾಟಕದ ಉಪಮುಖ್ಯಮಂತ್ರಿಗಳು)

ಭಟ್ಟರ್ ಸ್ಕಾಚ್

- ರಂಗದೊರೆ, ಮೇಲುಕೋಟೆ
ಭಟ್ರೇ, ಯದುವೀರರು ಅರಮನೆ ದಸರಾ ಆಯುಧಪೂಜೆಗೆ ಪ್ರತಾಪಸಿಂಹರನ್ನು ಆಹ್ವಾನಿಸಿದ್ದರಂತೆ?
- ತಮಗೆ ಸೀಟು ಬಿಟ್ಟುಕೊಟ್ಟವರಿಗೆ ಅಷ್ಟೂ ಮಾಡದಿದ್ದರೆ ಹೇಗೆ?!

- ಪೂರ್ಣಯ್ಯ, ಮೈಸೂರು
ಭಟ್ರೇ, 'ಸಕಾಲ'ದಲ್ಲಿ ಮದುವೆ ಆಗಬೇಕಪ್ಪ ಅಂತ ಹೇಳಿ ಮುತ್ತಜ್ಜಿ ಹೋಗಿಬಿಟ್ಟರು. ವಿವರಣೆ ಕೇಳಲು ಅವರಿಲ್ಲ?
- ಇಂಥ ವಿಷಯಗಳಿಗೂ ಯಾಕಪ್ಪ ಬೇಕು ವಿವರಣೆ?!

- ಸಿ.ರಾಘುರಾಯ, (ಇಮೇಲ್ ಮೂಲಕ)
'ಹನಿ' ಆಸೆಗೆ 'ಟ್ರ್ಯಾಪ್' ಆಗುತ್ತಿರುವ ಮಂತ್ರಿಗಳನ್ನು ನೋಡಿ ನೀವು ಗುನುಗಿದ ಆ ಹಾಡು ಯಾವುದು ಭಟ್ರೇ?
- 'ಹನಿ ಹನಿ ಗೂಡಿದ್ರೆ ಹಳ್ಳ... ದೊಡ್ಡೋರು ಹೇಳೋ ಮಾತೆಲ್ಲಾ ಸುಳ್ಳಲ್ಲ ಕಣಣ್ಣ ಜಾಣ ಕೇಳಣ್ಣ'!

- ಅಮಾಸೆ ಸುಬ್ಬು, ಮೈಸೂರು
ಸರ್, ಸ್ವರ್ಗದಂತೆ ಸಿಂಗರಿಸಿಕೊಂಡಿರುವ ಮೈಸೂರಿನಲ್ಲಿ ವಿಹರಿಸಬಯಸುವ ಯುವಕರ ಕನಿಷ್ಠ ಬಯಕೆಗಳೇನು?
- ಓಡಿಸಲು ಒಂದು ಬೈಕು, ಒರಗಿಕೂಡಲು ಒಬ್ಬ ಸಂಗಾತಿ!

- ಹೇಮಂತ ಲೋಖಂಡೆ, (ಇಮೇಲ್ ಮೂಲಕ)
ಭಟ್ರೇ, ಆರ್.ಜಿ.ಹಳ್ಳಿ ನಾಗರಾಜ ಬಲಪಂಥೀಯನಾದರೆ?
- ತಿರುಪತಿಗೆ ಹೋಗಿ ಕೂದಲು ಕೊಟ್ಟು ಬರ್ತಾ ಇದ್ದ!

- ಎಲ್.ವಿ.ಸತೀಶ್, ಮೈಸೂರು
ಭಟ್ರೇ, ಹಳೆ ಸಿನಿಮಾಗಳಲ್ಲಿ ಬ್ಲಾಂಕ್ ಚೆಕ್ ಕೊಟ್ಟು ನಿಂಗೆ ಬೇಕಾದಷ್ಟು ಬರೆದುಕೋ ಎನ್ನುತ್ತಿದ್ದ ನಾಯಕಿಯ ಅಪ್ಪಂದಿರು ಈಗ ಎಲ್ಲಿ?
- ಚೆಕ್ ಬೌನ್ಸ್ ಕೇಸ್ ಆಗಿ ಜೈಲಿನಲ್ಲಿರಬಹುದಾ?!

- ಶಿವಲಿಂಗಪ್ಪ ಸಿಂಗಸೆಟ್ಟಿ, ಕಲಬುರ್ಗಿ
ಭಟ್ರೇ, ಸೋನಿಯಾ ಗಾಂಧಿ ಆತ್ಮಕಥೆಯಲ್ಲಿ ಮಧ್ಯಮಧ್ಯ ಖಾಲಿ ಪುಟ ಕಂಡರೆ ಏನೆಂದುಕೊಳ್ಳಬೇಕು?
- ಅದು ಡಾ.ಮನಮೋಹನ ಸಿಂಗ್ ಕುರಿತು ಬರೆದಿದ್ದು ಎಂದರ್ಥ!

ಬಹುಕೋಟಿ ಡಾಲರ್ ವ್ಯವಹಾರದ ಗೇಮಿಂಗ್!

ವಿಶ್ವರಂಗ

ರಂಗಸ್ವಾಮಿ ಮೂಕನಹಳ್ಳಿ
vveditoped@gmail.com

ಜಾರ್ಜಿಯಾ ಎನ್ನುವ ದೇಶ ಮೊದಲಿಗೆ ಯುಎಸ್ಎಸ್ಆರ್‌ನ ಭಾಗವಾಗಿತ್ತು. ಅಮೆರಿಕ ಮತ್ತು ರಷ್ಯಾ ನಡುವಿನ ಶೀತಲ ಸಮರದಲ್ಲಿ ಕೊನೆಗೂ ಕಮ್ಯುನಿಸ್ಟ್ ರಷ್ಯಾ ಸೋಲುತ್ತದೆ, ಸೋವಿಯತ್ ಯೂನಿಯನ್ ಛಿದ್ರವಾಗುತ್ತವೆ. ಹೀಗೆ ಛಿದ್ರವಾಗಿ ಅನೇಕ ಹೊಸ ರಾಷ್ಟ್ರಗಳ ಉದಯವಾಗುತ್ತದೆ. ಜಾರ್ಜಿಯಾ ಅದರಲ್ಲಿ ಒಂದು. ತೂಬಿಲಿಸಿ ಜಾರ್ಜಿಯಾದ ರಾಜಧಾನಿ. ಮಧ್ಯಮ ಯುಗದ ಜಾರ್ಜಿಯಾ ಸಮೃದ್ಧವಾಗಿತ್ತು. ಕಪ್ಪು ಸಮುದ್ರವನ್ನ ನೋಡಲು ಬರುವ ಜನರ ಆರೈಕೆಯಲ್ಲಿ ಟೂರಿಸಂ ಬಹಳ ಚೆನ್ನಾಗೇ ಅಭಿವೃದ್ಧಿ ಹೊಂದಿತ್ತು. ಮ್ಯಾಂಗನೀಸ್ ಮತ್ತು ತಾಮ್ರವನ್ನ ಗಣಿಗಾರಿಕೆ ಮಾಡಿ ಕೂಡ ಸಾಕಷ್ಟು ಹಣವನ್ನ ಸರಕಾರ ಗಳಿಸುತ್ತಿತ್ತು. ಜತೆಗೆ ಸಿಟ್ರಸ್ ಜಾತಿಯ ಹಣ್ಣುಗಳನ್ನ ಬೆಳೆಯುವುದು ಕೂಡ ಸಾಕಷ್ಟು ಲಾಭ ತಂದುಕೊಡುವ ಉದ್ಯಮವಾಗಿತ್ತು. ಅಲ್ಲದೆ ಟೀ ಮತ್ತು ದ್ರಾಕ್ಷಿ ಹಣ್ಣು ಬೆಳೆಸುವುದು ಕೂಡ ಲಾಭದಾಯಕ ಉದ್ದಿಮೆಯಾಗಿತ್ತು. ಇವೆಲ್ಲವುಗಳ ಜತೆಗೆ ಕೈಗಾರಿಕೀಕರಣ ಕೂಡ ಬಹಳವಲ್ಲದಿದ್ದರೂ ಸಾಕಷ್ಟು ಇತ್ತು. ಮೆಟಲ್, ಮಷಿನರಿ, ಕೆಮಿಕಲ್ ಮತ್ತು ಟೆಕ್ಸ್‌ಟೈಲ್ ಕೈಗಾರಿಕೆಗಳು ಕೂಡ ಸರಕಾರದ ಖಜಾನೆ ತುಂಬಿಸುವ ಆದಾಯದ ಮೂಲವಾಗಿದ್ದವು.

ಜನ ಸಾಕಷ್ಟು ನೆಮ್ಮದಿಯಿಂದ ಬದುಕುತ್ತಿದ್ದರು. ಜನರ ನೆಮ್ಮದಿಯನ್ನ ಎಂದೂ ಗಣನೆಗೆ ತೆಗೆದುಕೊಳ್ಳದ ಒಂದಷ್ಟು ಶಕ್ತಿ ಕೇಂದ್ರಗಳು ಜಾಗತಿಕವಾಗಿ ಪ್ರಬಲ ಶಕ್ತಿಯಾಗಲು ಹೊಡೆದಾಟ ನಡೆಸುತ್ತಲೇ ಬಂದಿವೆ. ಅಮೆರಿಕ ಜತೆಗಿನ ಶೀತಲ ಸಮರದಲ್ಲಿ ರಷ್ಯಾ ಛಿದ್ರವಾಗುತ್ತೆ. ಅದರೊಂದಿಗೆ ಜಗತ್ತು ಬದುಕುವ ರೀತಿ ಕೂಡ ಬದಲಾಗುತ್ತೆ. ಆನಂತರ ಒಂದೂವರೆ ದಶಕಗಳ ಕಾಲ ಅಮೆರಿಕಕ್ಕೆ ಸೆಡ್ಡು ಹೊಡೆಯುವವರು ಯಾರೂ ಇರಲಿಲ್ಲ ಎನ್ನಬಹುದು. ಚೀನಾದ ಪ್ರವೇಶದೊಂದಿಗೆ ಅಮೆರಿಕ ಮತ್ತೆ ಪ್ರಬಲ ಪೈಪೋಟಿಗೆ ಮುಖ ಮಾಡಿದೆ. ಚೀನಾ ಜತೆಗೆ ಭಾರತ ಕೂಡ ಅಮೆರಿಕದ ಸಾರ್ವಭೌಮತ್ವಕ್ಕೆ ಸವಾಲಾಗಿ ನಿಂತಿದೆ. ಈ ಸಮಯದಲ್ಲಿ ಟೆಕ್ನಾಲಜಿ ಎನ್ನುವುದು ಊಹಿಸಲಾಗದ ವೇಗದಲ್ಲಿ ಜಗತ್ತನ್ನ ಮತ್ತು ಜನರನ್ನ ಆಕ್ರಮಿಸಿದೆ. ತಿಂಗಳುಗಳು ತೆಗೆದುಕೊಳ್ಳುತ್ತಿದ್ದ ಕೆಲಸಗಳು ದಿನಗಳಲ್ಲಿ ಅಥವಾ ಗಂಟೆಗಳಲ್ಲಿ ಮುಗಿದು ಹೋಗುವ ವೇಗ ಪಡೆದುಕೊಂಡಿವೆ. ತಂತ್ರಜ್ಞಾನ ಬಳಕೆ ಮಾಡಿಕೊಂಡು ಬಹಳಷ್ಟು ದೇಶಗಳು ಅತ್ಯಂತ ವೇಗವಾಗಿ ಅಭಿವೃದ್ಧಿ ಹೊಂದಿವೆ. ಒಂದು ನಾಣ್ಯಕ್ಕೆ ಎರಡು ಮುಖವಿರುವಂತೆ ತಂತ್ರಜ್ಞಾನ ತನ್ನೊಂದಿಗೆ ಒಂದಷ್ಟು ಘಾತುಕ ವಿಷಯಗಳನ್ನ ಕೂಡ ಹೊತ್ತು ತಂದಿದೆ. ಜಪಾನ್ ದೇಶ ಆನ್‌ಲೈನ್ ಆಟಗಳಿಗೆ ಅಡಿಕ್ಟ್ ಆಗಿರುವುದು ಮತ್ತು ಜನರು ವರ್ಚುಯಲ್ ವರ್ಲ್ಡ್‌ನಲ್ಲಿ ಮುಳುಗಿರುವುದು ತಿಳಿದ ವಿಷಯ; ಜಾರ್ಜಿಯಾ ಕೂಡ ತಂತ್ರಜ್ಞಾನದ ಸೈಡ್ ಎಫೆಕ್ಟ್‌ನಿಂದ ಜರ್ಜರಿತವಾಗಿದೆ. ಇವೆಲ್ಲಾ ಏನು, ಎತ್ತ? ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡೋಣ.

ಜಾರ್ಜಿಯಾದ ಜನಸಂಖ್ಯೆ 38 ಲಕ್ಷ. ಯುಎಸ್ಎಸ್ಆರ್ ಭಾಗವಾಗಿ ಹೊಸ 15 ದೇಶಗಳ ಉಗಮವಾಗುತ್ತದೆ. ಅದರಲ್ಲಿ ಜಾರ್ಜಿಯಾ ಕೂಡ ಒಂದು. 80 ಪ್ರತಿಶತ ಕ್ರಿಶ್ಚಿಯನ್, 11 ಪ್ರತಿಶತ ಮುಸ್ಲಿಂ ಮತ್ತು ಉಳಿದ ಧರ್ಮದ ಜನ ಇಲ್ಲಿದ್ದಾರೆ. 40 ಲಕ್ಷಕ್ಕೂ ಕಡಿಮೆ ಜನಸಂಖ್ಯೆಯ ಜಾರ್ಜಿಯಾ ಸುಖವಾಗೇ ಇತ್ತು- ಎಲ್ಲಿವರೆಗೆ ಆನ್‌ಲೈನ್ ಜೂಜಾಟ ಇರಲಿಲ್ಲವೋ ಅಲ್ಲಿವರೆಗೆ. ಇದೀಗ ಇಲ್ಲಿನ 7 ಲಕ್ಷ ಜನರು ಈ ಜೂಜಾಟದ ದಾಸರಾಗಿದ್ದಾರೆ. ಇಂಥ ಆಟವನ್ನ ಆಡಲು 18 ವರ್ಷ ತುಂಬಿರಬೇಕು. ಇದಕ್ಕೆ ಯುರೋಪಿನ ದೇಶಗಳಲ್ಲಿ 21 ಅಥವಾ 23ರ ವಯೋಮಿತಿ ಇದೆ. ಆದರೆ ಜಾರ್ಜಿಯಾದ ಯುವಜನತೆಗೆ ಇದೊಂದು ತರಹದ ಹುಚ್ಚು ಹಿಡಿದಿದೆ. 2021ರಲ್ಲಿ ಈ ವಯೋಮಿತಿಯನ್ನು 21 ವರ್ಷಕ್ಕೆ ಏರಿಸಲಾಗಿದೆ. ಜತೆಗೆ ಈ ಸಮಸ್ಯೆ ಮುಂದುವರಿದರೆ ಅದನ್ನು 25ಕ್ಕೆ ಏರಿಸುವ ಯೋಚನೆ ಕೂಡ ಇದೆ ಎನ್ನಲಾಗುತ್ತದೆ. ಬಹಳಷ್ಟು ಯುವ ಜನರು ತಮ್ಮ ಪೋಷಕರ ಗುರುತನ್ನ ಬಳಸಿ ಇಂಥ ಆನ್‌ಲೈನ್ ಅಡ್ಡಗಳಲ್ಲಿ ಆಟ ಆಡಲು ಬರುತ್ತಾರೆ. ಇದು ಅವರ ಮುಂದಿನ ದಾರಿಯನ್ನ ಮುಚ್ಚಿಬಿಟ್ಟಿದೆ. ಮಧ್ಯಮ ವಯಸ್ಸಿನ ಜನ ಇದರಿಂದ ಸಂಸಾರದಲ್ಲಿ ಬಿರುಕು ತಂದುಕೊಂಡಿದ್ದಾರೆ. ಜಾರ್ಜಿಯಾ ಇಂದು ಒಡೆದ ಮನೆ. ಜನರಲ್ಲಿ ಮಾನಸಿಕ ಕಾಯಿಲೆಗಳು ಹೆಚ್ಚಾಗುತ್ತಿವೆ. ಇದು ಈಗ ರಾಷ್ಟ್ರೀಯ ಸಮಸ್ಯೆಯಾಗಿ ಅಲ್ಲಿನ ಸಂಸದರು ಇದಕ್ಕೆ ಪರಿಹಾರ ಹುಡುಕುತ್ತಿದ್ದಾರೆ. ಇದರ ಫಲವಾಗಿ ಇಂಥ ಆಟಗಳ ಮೇಲಿನ ತೆರಿಗೆಯನ್ನ ದುಪ್ಪಟ್ಟುಗೊಳಿಸಲಾಯಿತು. ಇದರಿಂದ ಸರಕಾರದ ಖಜಾನೆಗೆ ಹೇರಳವಾಗಿ ಹಣ ಹರಿದುಬರುತ್ತಿದೆ. 2016ರ ಅಂಕಿ-ಅಂಶಕ್ಕೆ ಹೋಲಿಸಿದರೆ 2017-2018ರಲ್ಲಿ ಮತ್ತು 2024ರಲ್ಲಿ ಸಂಗ್ರಹವಾದ ಹಣದ ಮೊತ್ತ ಅಚ್ಚರಿಗೊಳಿಸುತ್ತದೆ. ಸರಕಾರಕ್ಕೇ ಇಷ್ಟು ಹಣ ಬರುತ್ತಿರಬೇಕಾದರೆ, ಇಂಥ ಕ್ಯಾಸಿನೊ ನಡೆಸುವ ಜನರಿಗೆ ಎಷ್ಟು ಬರುತ್ತಿರಬಹುದು? ಹೀಗೆ ಬಹಳ ಹಣ ಸಂಪಾದಿಸಿರುವ ಈ ಜನ ಕ್ಯಾಸಿನೊ ಮುಚ್ಚಲು ಬಿಡದೆ ಲಾಬಿ ಮಾಡುತ್ತಿದ್ದಾರೆ. ಹೇಗಾದರೂ ಸರಿಯೇ ಜನರನ್ನ ದಾಸರನ್ನಾಗಿಸುವ ಈ ಆನ್‌ಲೈನ್ ಕ್ಯಾಸಿನೊಗಳನ್ನ ಮುಚ್ಚಿಸಬೇಕು ಎಂದು ಅಲ್ಲಿನ ಕನ್ಸರ್ವೇಟಿವ್ ಪಕ್ಷದ ಕೆಲವರು ನಡೆಸುತ್ತಿರುವ ಹೋರಾಟಕ್ಕೆ ಜಯ ಸಿಕ್ಕಿಲ್ಲ. ತೂಬಿಲಿಸಿ ನಗರದಲ್ಲಿ ಸ್ವರ್ಗವನ್ನ ನಾಚಿಸುವ ಕ್ಯಾಸಿನೊಗಳು ಹೆಜ್ಜೆ ಹೆಜ್ಜೆಗೂ ಕಾಣಸಿಗುತ್ತವೆ. ಇಲ್ಲಿ ಆಡಲು ಬಂದವರು ನಶೆಗೆ ಒಳಗಾದವರಂತೆ ಮತ್ತೆ ಮತ್ತೆ ಇಲ್ಲಿಗೆ ಬರುತ್ತಾರೆ. ಸೋಲು ಅವರನ್ನ ಸಾಲದ ಸುಳಿಗೆ ತಳ್ಳುತ್ತದೆ. ಇಂಥವರ ಸಂಖ್ಯೆಯೂ ಅಸಂಖ್ಯ. ವಿದ್ಯಾಭ್ಯಾಸ ಮುಂದುವರಿಸಲಾಗದ ಯುವಜನರು, ಕೆಲಸ ಮಾಡಲಾಗದ ಜನರು, ಸಂಸಾರವನ್ನ ಕಳೆದುಕೊಂಡ ಜನರು ಹೀಗೆ ಜಾರ್ಜಿಯಾ ಹೊಸದೊಂದು ಸಮಸ್ಯೆಯ ಸುಳಿಯಲ್ಲಿದೆ.

ದೇಶದ ಇತರ ನಾಗರಿಕರಿಗೆ ಈ ವೈರಸ್ ಹರಡುವ ಮುಂಚೆ, ಹೀಗೆ ವ್ಯಸನಕ್ಕೆ ತುತ್ತಾದವರನ್ನು ಆ ಕೂಪದಿಂದ ಹೊರತರಲು ಸರಕಾರವು ಮನಶ್ಶಾಸ್ತ್ರಜ್ಞರ ಮೊರೆಹೋಗಿದೆ. ಇಲ್ಲಿನ ಮನಶ್ಶಾಸ್ತ್ರಜ್ಞರ ಪ್ರಕಾರ ಹೀಗೆ ವ್ಯಸನಕ್ಕೆ ಸಿಕ್ಕ ಜನತೆಯನ್ನ ಮರಳಿ ದಾರಿಗೆ ತರಲು ಸಮಯ ಬೇಕು. ಹಾಗೊಮ್ಮೆ ಈ ವ್ಯಸನದಿಂದ ಹೊರಬಂದ ವ್ಯಕ್ತಿ ಹೆಜ್ಜೆ ಹೆಜ್ಜೆಗೂ ಕಾಣುವ, ಕಣ್ಣು ಕೋರೈಸುವ ಕ್ಯಾಸಿನೊ ಬಲೆಗೆ ಬೀಳುವುದು ಕಷ್ಟವೇನಲ್ಲ. 'ಕ್ಯಾಸಿನೊ ಬೇಡ' ಎನ್ನುವವರ ಸಂಖ್ಯೆ ಕಡಿಮೆಯೇನಿಲ್ಲ; ಆದರೆ ಅವರ ಸದ್ದು ಮಾತ್ರ ಎಷ್ಟಿರಬೇಕೋ ಅಷ್ಟಿಲ್ಲ. ಕ್ಯಾಸಿನೊ ಪರವಾಗಿ ಲಾಬಿ ಮಾಡುವ ಜನರು ಮಾತ್ರ ವರ್ಷದಿಂದ ವರ್ಷಕ್ಕೆ ಹೆಚ್ಚು ಹಣ ಮಾಡಿಕೊಂಡು ನಗುತ್ತಿದ್ದಾರೆ. ಇಂಥ ಸಮಸ್ಯೆಯನ್ನ ಕೂಡ ಸರಕಾರ ಹಲವಾರು ವರ್ಷದಿಂದ ಮುಂದೂಡಿಕೊಂಡು ಬಂದಿದೆ ಎಂದರೆ ಲಾಬಿಕೋರರ ಶಕ್ತಿ ಎಷ್ಟಿರಬಹುದು? ಕೊನೆಗೆ ಒತ್ತಾಯ ತಡೆಯಲಾಗದ ಸರಕಾರ 'ಕ್ಯಾಸಿನೊ ಬೇಕೋ ಬೇಡವೋ ಎನ್ನುವುದನ್ನ ಜನರು ಮತ ಚಲಾಯಿಸಿ ನಿರ್ಧರಿಸಲಿ' ಎಂದು ಹೇಳಿ ಕೈ ತೊಳೆದುಕೊಂಡಿದೆ.

2014ರಲ್ಲಿ, 'ಯುರೋಪಿಯನ್ ಇಕನಾಮಿಕ್ ಝೋನ್'ನಲ್ಲಿ ಜಾರ್ಜಿಯಾ ಸದಸ್ಯತ್ವ ಪಡೆಯಿತು. ಅಂದರೆ ಇಲ್ಲಿ ಫ್ರೀ ಟ್ರೇಡ್‌ಗೆ ಅವಕಾಶವಿದೆ. ಹೆಚ್ಚಿನ ತೆರಿಗೆ ಮತ್ತು ಪೇಪರ್‌ವರ್ಕ್ ಇಲ್ಲದೆ ವ್ಯಾಪಾರ ಮಾಡಬಹುದು. ಹೀಗಾಗಿ 'ಯುರೋಪಿಯನ್ ಯೂನಿಯನ್' ಜಾರ್ಜಿಯಾದ ಮುಖ್ಯ ಟ್ರೇಡ್ ಪಾರ್ಟ್‌ನರ್. ಯುರೋಪಿನಲ್ಲಿ ಸದ್ಯಕ್ಕೆ ಇರುವ ಸಮಸ್ಯೆಗಳಿಗೆ ಅವರು ಉತ್ತರ ಹುಡುಕುತ್ತಿದ್ದಾರೆ. 2007ರಲ್ಲಿ ಅಮೆರಿಕದಲ್ಲಿ ಶುರುವಾದ ಹಣಕಾಸು ಮುಗ್ಗಟ್ಟು 2009ರಲ್ಲಿ ಯುರೋಪನ್ನ ಆಕ್ರಮಿಸಿತ್ತು. ಅಂದಿನಿಂದ ಇಂದಿನವರೆಗೆ ಅಂದರೆ 2024ರಲ್ಲಿ ಕೂಡ ಯುರೋಪ್ ಚೇತರಿಸಿಕೊಳ್ಳುವ ಹಂತದಲ್ಲೇ ಇದೆ. ಕಳೆದ ಎರಡು ವರ್ಷದಿಂದ ಯುರೋಪಿನ ಮುಖ್ಯ ಎಂಜಿನ್ ಜರ್ಮನಿ ಕೂಡ ಸ್ವಲ್ಪ ನಿಧಾನಗತಿ ಕಂಡಿದೆ. ಬಹುತೇಕ ಐರೋಪ್ಯ ದೇಶಗಳು ಹೇಳಿಕೊಳ್ಳುವ ಅಭಿವೃದ್ಧಿ ಕಾಣುತ್ತಿಲ್ಲ, ಜಾರ್ಜಿಯಾಗೆ ಯುರೋಪಿನ ಅವಲಂಬನೆಯಲ್ಲಿ ಬದುಕಬೇಕಾದ ಸ್ಥಿತಿಯಿದೆ. ಪರಿಸ್ಥಿತಿ ಹೀಗಿದ್ದೂ ಜಾರ್ಜಿಯಾ ಆಂತರಿಕವಾಗಿ ಬದಲಾಗದೆ ಸಮಸ್ಯೆಯಿಂದ ಬಳಲುತ್ತಿದೆ. ಆನ್‌ಲೈನ್‌ನಲ್ಲಿ ಆಡುವ ಕ್ಯಾಸಿನೊಗಳಲ್ಲಿ ಆಟಗಾರನಿಗೆ 70 ಪ್ರತಿಶತ ವಾಪಸ್ ನೀಡಬೇಕು ಎನ್ನುವ ರೀತಿಯಲ್ಲಿ ಆಟವನ್ನ ನಿರ್ಮಿಸಲಾಗಿದೆ. ಅಂದರೆ ಆಟಗಾರ 100 ರುಪಾಯಿಯನ್ನ ಆಟದಲ್ಲಿ ತೊಡಗಿಸಿದರೆ 70 ರುಪಾಯಿ ಆತನಿಗೆ ವಾಪಸ್ ಹೋಗಬೇಕು ಎನ್ನುವ ರೀತಿಯಲ್ಲಿ ಆಟವನ್ನ ನಿರ್ಮಿಸಲಾಗಿದೆ. ಅಂದರೆ ಆತ ಪೂರ್ಣ ಹಣವನ್ನ ಕಳೆದುಕೊಂಡರೆ ಆತನಿಗೆ ಆಟದಲ್ಲಿ ಮತ್ತೆ ಸ್ಫೂರ್ತಿ ಹುಟ್ಟುವುದಿಲ್ಲ. ಹೀಗಾಗಿ ಒಂದಷ್ಟು ವಾಪಸ್ ಕೊಡಬೇಕು, ಮತ್ತೆ ಮತ್ತೆ ಆಡುವಂತೆ ಆತನನ್ನ ಪ್ರೇರೇಪಿಸಬೇಕು. ಇದರ ಜತೆಗೆ ಲೈವ್ ಕ್ಯಾಸಿನೊದಲ್ಲಿ ಅಳವಡಿಸಿಕೊಂಡಿರುವ 'ಮುಂದಿನ ಬಾರಿ ಗೆಲುವು ನನ್ನದೇ' ಎನ್ನುವ ಭಾವದ ತಂತ್ರವನ್ನು ಇಲ್ಲೂ ಅಳವಡಿಸಿಕೊಳ್ಳಲಾಗಿದೆ. ಹೀಗಾಗಿ ಸೋಲು ಸೋಲಲ್ಲ ಎನ್ನುವ ಭಾವನೆ ಆಟಗಾರರಲ್ಲಿ ಉಂಟಾಗುತ್ತದೆ. ಮುಂದಿನ ಆಟದಲ್ಲಿ ಗೆಲ್ಲುವ ಉಮೇದಿನಲ್ಲಿ ಸಾಲ ಮಾಡಿಯಾದರೂ ಸರಿಯೇ ಅವರು ಆಟವನ್ನ ಆಡಲು ಮತ್ತೆ ಬರುತ್ತಾರೆ. ಗ್ಯಾಂಬ್ಲಿಂಗ್ ಸಾಮಾಜಿಕ ಪಿಡುಗಾಗಿ ಮಾರ್ಪಾಡಾಗಲು ಇದು ಬಹುಮುಖ್ಯ ಕಾರಣ. ಅಂದರೆ, ಇಲ್ಲಿ ಸೋಲಿನ ಭ್ರಮನಿರಸನ ಒಮ್ಮೆಲೇ ನಿಮ್ಮನ್ನ ಆವರಿಸಿಕೊಳ್ಳಲು ಬಿಡುವುದಿಲ್ಲ; ನಿಧಾನವಾಗಿ ವ್ಯಸನಕ್ಕೆ ದೂಡಿ ನಿಮ್ಮಲ್ಲಿದ್ದ ಸರ್ವಸ್ವವನ್ನೂ ಇದು ಕಸಿದುಕೊಳ್ಳುತ್ತದೆ.

ಕೊನೇಮಾತು: ಜಾರ್ಜಿಯಾ ಇಂದಿಗೆ ಇಂದೇ ಸಮಸ್ಯೆಯ ಸುಳಿಯಿಂದ ಹೊರಬಂದರೂ ಆರ್ಥಿಕವಾಗಿ ಸಬಲವಾಗಲು ಸಮಯ ಬೇಕು. ಜಗತ್ತಿನ ಕೆಲವು ಬಲಿಷ್ಠ ಮನೆತನಗಳು ಮತ್ತಷ್ಟು ಹಣವಂತರಾಗಲು ಜಗತ್ತಿನ ಮೇಲೆ ಮತ್ತಷ್ಟು ಹಿಡಿತ ಸಾಧಿಸಲು ಆಡುವ ಆಟದಲ್ಲಿ ಒಂದು ವರ್ಗದ ಜನರು, ಒಂದು ತಲೆಮಾರಿನವರು ಭವಿಷ್ಯವೇ ಇಲ್ಲದೆ ಜೀವವಿರುವ ಶವಗಳಾಗಿ ಹೇಗೆ ಕಳೆದುಹೋಗುತ್ತಾರೆ ಎನ್ನುವುದು ಆಶ್ಚರ್ಯ ಹುಟ್ಟಿಸುತ್ತದೆ. ಅದರ ಜತೆಜತೆಗೆ, ಕಣ್ಣ ಮುಂದಿರುವ 'ಟ್ರ್ಯಾಪ್/ಬಲೆಯನ್ನ' ಗಮನಿಸದೆ ಅಷ್ಟೊಂದು ದೊಡ್ಡ ಸಂಖ್ಯೆಯ ಜನ ಹೇಗೆ ಬಲಿಯಾಗುತ್ತಾರೆ ಎನ್ನುವುದು ಕೂಡ ಕುತೂಹಲದ ಪ್ರಶ್ನೆ. ಜಗತ್ತಿನ ಮೇಲೆ ಹಿಡಿತ ಸಾಧಿಸುವ ಹೊಡೆದಾಟದಲ್ಲಿ ರಷ್ಯಾ ಛಿದ್ರವಾದ ಹಾಗೆ ಆಕಸ್ಮಾತ್ ಚೀನಾ ಛಿದ್ರವಾದರೆ? ನಿಮ್ಮ ಮನೆಯಲ್ಲಿ ಮುಸುರೆ ತಿಕ್ಕಲು ನಿಂಗಮ್ಮ, ಗಂಗಮ್ಮರ ಜಾಗದಲ್ಲಿ ಚೀನಿ ಹುಡುಗಿ ಇರುತ್ತಾಳೆ, ಖಂಡಿತ!

ಪಂಥ ಶ್ರೇಷ್ಠತೆಯ ಕಸರತ್ತಿನಲ್ಲಿ ಅಸ್ಮಿತೆಗಾಗಿ ನಡೆದ ಹೋರಾಟ

ಬಸವ ಮಂಟಪ

ರವಿ ಹಂಜ್
vveditoped@gmail.com

ಭಾಗ-2

ವೀರಶೈವದ ಮೂಲದ ಕುರಿತು ಇತಿಹಾಸವು ಆಧಾರಸಮೇತವಾಗಿ ಏನು ಹೇಳುತ್ತದೆ ಎಂಬುದನ್ನು ನಿನ್ನೆಯ ಸಂಚಿಕೆಯಲ್ಲಿ ಅವಲೋಕಿಸಿದೆವಲ್ಲವೇ? ಈಗ ವೀರಶೈವರ ಸಾಮಾಜಿಕ ವಿಕಾಸದತ್ತ ಕೊಂಚ ಗಮನಹರಿಸೋಣ.

ಕಾನಿಷ್ಕನ ಆಳ್ವಿಕೆಯಿದ್ದ ಕ್ರಿ.ಶ.127ರ ಕಾಲಾವಧಿಯ ನಂತರ, ಮಾನವ ವಿಕಾಸದ ವಿವಿಧ ಕಾಲಘಟ್ಟಗಳಲ್ಲಿ ಈ ಶೈವರು ಕಾಲಾನುಕ್ರಮವಾಗಿ ಅತಿಮಾರ್ಗಿಗಳು ಮತ್ತು ಮಂತ್ರಮಾರ್ಗಿಗಳು ಎಂದು ವಿಭಜನೆಗೊಂಡರು. ಮಂತ್ರಮಾರ್ಗಿಗಳು ನಿಗೂಢವಾಗಿರುತ್ತಿದ್ದರು. ತಮ್ಮ ಸ್ವಂತ ಸುಖ ಲೋಲುಪತೆ ಅವರ ಗುರಿಯಾಗಿತ್ತು. ಮಂತ್ರಮಾರ್ಗಿಗಳಲ್ಲಿನ ಪಂಗಡಗಳು- ಕಾಪಾಲಿಕ ಮತ್ತು ಅಘೋರಿ. ಈ ಪಂಥಗಳ ನಿಗೂಢತೆ, ಸಮಾಜ ವಿಕ್ಷಿಪ್ತತೆಯನ್ನು ಈಗಲೂ ಕಾಣಬಹುದು. ಆದರೆ ಅತಿಮಾರ್ಗಿಗಳು ಇದಕ್ಕೆ ವ್ಯತಿರಿಕ್ತವಾಗಿ ಜನಾನುರಾಗಿಗಳು, ಸಮಾಜಮುಖಿಗಳು ಮತ್ತು ಸದಾ ಸಂಚಾರಿಗಳು. ಶೈವಧರ್ಮ ಪ್ರಸಾರ ಇವರ ಗುರಿ. ಇವರು ಒಂದು ನಿಶ್ಚಿತ ಸಮಾಜ ವ್ಯವಸ್ಥೆಯನ್ನು ಸಂಘಟಿಸಿ, ಅದನ್ನು ವಿಕಸಿತಗೊಳಿಸುತ್ತಾ ನಡೆದರು. ತಾವು ಎಲ್ಲೆಲ್ಲಿ ಸಂಚರಿಸುತ್ತಾ ಹೋದರೋ ಅಲ್ಲೆಲ್ಲ ಅತಿಮಾರ್ಗಿಗಳು ಮಠಗಳನ್ನು ಕಟ್ಟುತ್ತಾ ನಡೆದರು. ಮತ್ತದೇ ಶೈವ-ಬೌದ್ಧರ ಕರಂಡಕ-ಕರಡಿಗೆ ಚಿಂತನೆಯ ಕೊಡುಕೊಳ್ಳುವಿಕೆಯಂತೆ ಮಠಗಳನ್ನು ಕಟ್ಟುವ ಚಿಂತನೆ ಸಹ ಪರಸ್ಪರ ಅಳವಡಿಕೆಯಾಗಿರುವುದು ಕುತೂಹಲಕರ.

ಕಾಲಾನುಕ್ರಮದಲ್ಲಿ ಈ ಅತಿಮಾರ್ಗಿಗಳು ಅಧಿಕೃತವಾಗಿ ಪಾಶುಪತ, ಲಾಕುಳ ಮತ್ತು ಕಾಳಾಮುಖರೆಂದು ಕರೆಯಲ್ಪಟ್ಟರು. ಬ್ರಿಟಿಷ್ ವಿದ್ವಾಂಸ ಗ್ಯಾವಿನ್ ಫ್ಲಡ್‌ನ 'ಆ್ಯನ್ ಇಂಟ್ರೊಡಕ್ಷನ್ ಟು ಹಿಂದೂಯಿಸಂ' ಸಂಶೋಧನಾ ಕೃತಿಯ ಪ್ರಕಾರ ಕ್ರಿ.ಶ. ಒಂದನೇ ಶತಮಾನದಲ್ಲೇ ಅತಿಮಾರ್ಗಿಗಳು ಕಾಳಾಮುಖ ಪಾಶುಪತರೆಂದು ಗುರುತಿಸಲ್ಪಟ್ಟಿದ್ದರು. ಈ ಸಂಚಾರಿ ಜಂಗಮರು ತಮ್ಮದೇ ಆದ ಒಂದು ವಲಸೆಯ ಪರಿಯನ್ನು ಅಳವಡಿಸಿಕೊಂಡಿದ್ದರು. ತಾವು ಪ್ರತಿಸಾರಿ ಸಂಚರಿಸುವ ಸ್ಥಳಗಳಲ್ಲಿ ಮಠಗಳನ್ನು ನಿರ್ಮಿಸಿಕೊಂಡು ಅಲ್ಲಲ್ಲೇ ನಿರ್ದಿಷ್ಟ ಕಾಲ ಬೀಡುಬಿಡುತ್ತಿದ್ದರು. ಈ ಮಠಗಳು ಶೈವಪಂಥದ ಶಾಲೆಗಳಂತೆ ಕಾರ್ಯ ನಿರ್ವಹಿಸುತ್ತಿದ್ದವು ಎಂದು ಡೇವಿಡ್ ಲೊರೆಂಜೆನ್ ತಮ್ಮ 'ದಿ ಕಾಪಾಲಿಕಾಸ್ ಆ್ಯಂಡ್ ಕಾಳಾಮುಖಾಸ್: ಟು ಲಾಸ್ಟ್ ಶೈವೈಟ್ ಸೆಕ್ಟ್ಸ್' ಎಂಬ ಸಂಶೋಧನ ಕೃತಿಯಲ್ಲಿ ವಿವರಿಸಿದ್ದಾರೆ.

ಕಾಲಕ್ಕನುಗುಣವಾಗಿ ಮಾನವಸಮಾಜ ವಿಕಾಸಗೊಂಡಂತೆ (ಅಲೆಮಾರಿತನದಿಂದ ನೆಲೆಮಾರಿಗಳಾದಂತೆ) ಜಂಗಮ ಕಾಳಾಮುಖರಲ್ಲಿ ಕೆಲವರು ಒಂದೆಡೆ ನೆಲೆ ನಿಲ್ಲಬಯಸಿರಬಹುದು. ಈ ರೀತಿ ನೆಲೆ ನಿಂತವರನ್ನೇ ಅವರವರ ಕಾಯಕಗಳಿಂದ ಗುರುತಿಸಿ ಒಕ್ಕಲಿಗ, ಗಾಣಿಗ, ಅಗಸ, ಕ್ಷೌರಿಕ, ಚಮ್ಮಾರ, ಕಮ್ಮಾರ, ಕುಂಬಾರ, ಗುಡಿಕಾರ, ಅಕ್ಕಸಾಲಿ ಮತ್ತಿತರೆಯಾಗಿ ಕರೆಯಲ್ಪಟ್ಟರು. ಈ ರೀತಿಯ ವಿಕಾಸವು ಕೇವಲ ಭಾರತದಲ್ಲಷ್ಟೇ ಅಲ್ಲದೆ ಮಾನವಜನಾಂಗವು ಎಲ್ಲೆಲ್ಲಿ ಇದ್ದಿತ್ತೋ ಅಲ್ಲೆಲ್ಲಾ ಜಾಗತಿಕವಾಗಿ ಆಗಿದೆ. ಉದ್ಯೋಗಗಳು ಅಥವಾ ವೃತ್ತಿಗಳು ವರ್ಣಗಳ ವಿಶಾಲಾರ್ಥದೊಳಗೇ ವಿಂಗಡಣೆಗೊಂಡು ವೃತ್ತಿಜಾತಿಗಳಾಗಿ ರೂಪುಗೊಳ್ಳುತ್ತಾ ಸಾಗಿದವು. ಏಕೆಂದರೆ ಸಾಕಷ್ಟು ಭಾರತೀಯ ಜಾತಿಗಳು ಕುಶಲಕರ್ಮ ಅಥವಾ ವೃತ್ತಿಗಳೊಂದಿಗೆ ಸಂಯೋಗಗೊಂಡಿವೆ. ಅದೇ ರೀತಿ ಇತರೆ ನಾಗರಿಕತೆಗಳಲ್ಲಿ ಈ ವೃತ್ತಿಗಳು ಕುಲನಾಮವಾದವು. ಪುರೋಹಿತ-ಪ್ರೀಸ್ಟ್, ವೈಶ್ಯ-ಮರ್ಚಂಟ್/ಸ್ಮಿತ್, ಕ್ಷತ್ರಿಯ-ವಾರಿಯರ್, ಕುರುಬ-ಶೆಪರ್ಡ್, ಚಮ್ಮಾರ-ಶೂಮಾಕರ್, ಮಠ-ಮೊನ್ಯಾಸ್ಟ್ರಿ, ಮಾಲಿ-ಗಾರ್ಡನರ್, ಕಮ್ಮತ-ಫಾರ್ಮರ್/ಫೌಲ್ಕನರ್/ಗ್ರೋವರ್, ಬಡಿಗೇರ್-ವುಡ್‌ಮನ್/ವುಡ್‌ಸ್ಮಿತ್, ಈಡಿಗ-ಬ್ರ್ಯೂವರ್, ಗಾರೆ-ಮೇಸನ್ ಮುಂತಾದವು. ಈ ರೀತಿಯ ಕುಲನಾಮಗಳು ಬ್ರಿಟಿಷರಲ್ಲಿ ಮಾತ್ರವಲ್ಲದೆ ಸ್ಪ್ಯಾನಿಷ್, ಪೋರ್ಚುಗೀಸ್, ಆಫ್ರಿಕನ್ನರು, ಅರೇಬಿಯನ್ನರು ಮುಂತಾದವರಲ್ಲೂ ವಿಕಾಸಗೊಂಡಿವೆ.

ಅದೇ ರೀತಿ ಮಾತಾ-ಪಿತೃನಾಮವನ್ನು ಕುಲನಾಮವಾಗಿಸಿದ ಕಮಲಕ್ಕನವರ್, ವಿರೂಪಣ್ಣಾವರ್ ಎಂಬುವು ಜಾಗತಿಕವಾಗಿ ಮೆಕ್ ಡಾನಲ್ಡ್/ಡಾನಾಲ್ಡ್‌ಸ್ಕಿ/ಲೌರಾನ್ಸ್ಕಿ ಯಾದರೆ, ಮೂಲ ಸ್ಥಳಗಳ ಕುಲನಾಮಗಳು ಹುಬ್ಳೀಕರ್, ಮೈಸೂರುಮಠ, ಲಾಹೋರಿ, ಬಿಹಾರಿ ಮುಂತಾದವು. ಒಟ್ಟಾರೆ ಉದ್ಯೋಗ ಅಥವಾ ಮಾತಾಪಿತ ಅಥವಾ ಮೂಲಸ್ಥಳಗಳು ಜನಾಂಗೀಯ ಗುರುತಿನ ಸ್ಥಾನ ಗಳಿಸಿದವು. ನಾಗರಿಕತೆಗಳ ಜಾಗತೀಕರಣ ಮಾನವ ವಿಕಾಸದೊಂದಿಗೇ ಬೆಸೆದುಕೊಂಡಿದ್ದಿತು. ಜಾಗತೀಕರಣವನ್ನು ವಿರೋಧಿಸುವವರು ಮಾನವವಿಕಾಸ ಮತ್ತು ಇತಿಹಾಸವನ್ನು ಅರಿಯಬೇಕು. ಏಕೆಂದರೆ ಇತಿಹಾಸ ಎಲ್ಲಾ ನಾಗರಿಕತೆಗಳ ಮೂಲ. ಇತಿಹಾಸವಿಲ್ಲದೆ ನಾಗರಿಕತೆ ಇಲ್ಲ. ವಿದೇಶಿ ನಾಗರಿಕತೆಗಳಲ್ಲಿ ಹುಟ್ಟಿನಿಂದ ಕುಲನಾಮವಿಟ್ಟುಕೊಳ್ಳುವ ಪದ್ಧತಿ ಇದ್ದಿತೇ ಹೊರತು, ಅದೇ ವೃತ್ತಿಯಲ್ಲೇ ಇರಬೇಕೆಂಬ ನಿಯಮವೇನೂ ಇರಲಿಲ್ಲ. ಅಂತೆಯೇ ಹಿಂದೂ ಸಂಸ್ಕೃತಿಯಲ್ಲಿ ಕೂಡ ಹುಟ್ಟು ಏನಾಗಿದ್ದರೂ ವೃತ್ತಿಯು ವರ್ಣವನ್ನು ನಿರ್ಧರಿಸುತ್ತಿದ್ದಿತು. ಕ್ರಮೇಣ ವೃತ್ತಿಗಳು ಜಾತಿಯೆಂದು ಗುರುತಿಸಿಕೊಳ್ಳುತ್ತ ಸಾಗಿದರೂ, ಅದೇ ವೃತ್ತಿಗಳಲ್ಲೇ ತೊಡಗಿಕೊಳ್ಳಬೇಕೆಂಬ ನಿಯಮಗಳೇನೂ ಇರಲಿಲ್ಲ. ಹೀಗೆ ಸಮಾಜದ ವಿಕಾಸಕ್ಕನುಗುಣವಾಗಿ ವೃತ್ತಿಗಳಿಂದ ವ್ಯಕ್ತಿಗಳು ಗುರುತಿಸಿಕೊಳ್ಳಲಾರಂಭಿಸಿ ಭಾರತದಲ್ಲಿ ಜಾತಿವಿಕಾಸಕ್ಕೆ ಮುನ್ನುಡಿಯಾಯಿತು. ಕಾಳಾಮುಖ ಸಹ ಇದಕ್ಕೆ ಹೊರತಾಗಿರಲಿಲ್ಲ. ವೃತ್ತಿಯೇತರವಾಗಿ ಕಾಳಾಮುಖರೆಲ್ಲರೂ ಒಂದೇ ಆಗಿದ್ದರು.

ತಾತ್ವಿಕ ವಿಕಾಸ: ಇನ್ನು ಶೈವದ ಲಕುಲೀಶ ಎಂದರೆ ಒಂದು ಲಾಕುಲ (ಕೂಟ)ದ ಮುಖಂಡನೇ ಈಶ ಅಥವಾ ದೊಣ್ಣೆ (ತ್ರಿಶೂಲ)ಯನ್ನು ಹಿಡಿದವ ಎಂದು ಸಂಶೋಧಕರು ಗುರುತಿಸಿದ್ದಾರೆ. ಸಂಶೋಧಕ ಎಚ್.ಎಚ್.ಡ್ಯಾನಿಯಲ್ ಇಂಗಲ್ಸ್ ಅರವತ್ತರ ದಶಕದಲ್ಲೇ ಹರ್ಕ್ಯೂಲಿಸ್ ಮತ್ತು ಲಕುಲೀಶ ಪದಗಳ ಮತ್ತವುಗಳ ಶಬ್ದಾರ್ಥದ ಸಾಮ್ಯತೆಯ ಮೇಲೆ ಎರಡೂ ಒಂದೇ ಎಂಬ ಅನುಮಾನವನ್ನು ವ್ಯಕ್ತಪಡಿಸಿದ್ದಾರಲ್ಲದೆ ಗ್ರೀಕ್ ಸಿನಿಕರಿಗೂ ಮತ್ತು ಪಾಶುಪತರಿಗೂ ಇರುವ ತಾತ್ವಿಕ ಸಾಮ್ಯತೆಯನ್ನು ಗುರುತಿಸುತ್ತಾರೆ. ಹಿಂದೂಗಳ ಮೇಲೆ ಗ್ರೀಕರ ಪ್ರಭಾವವಿದ್ದಂತೆ ಲಕುಲೀಶನ ಪ್ರಭಾವ ಗ್ರೀಕ್ ಸಂಸ್ಕೃತಿಯ ಮೇಲಾಗಿ ಹರ್ಕ್ಯೂಲಿಸ್ ಅನಾವರಣಗೊಂಡಿರಬಹುದು ಎಂದು ತಮ್ಮ ವಾದವನ್ನು ಮಂಡಿಸಿದ್ದಾರೆ. ಇದಕ್ಕೆ ಪೂರಕವಾಗಿ ಹೂಣರು ತಮ್ಮ ನಾಣ್ಯಗಳ ಮೇಲಿನ ಹರ್ಕ್ಯೂಲಿಸ್ ಅನ್ನು ತೆಗೆದು ಶಿವನನ್ನು ಟಂಕಿಸಿದ ಉದಾಹರಣೆಯನ್ನು ಕೊಟ್ಟು ತಮ್ಮ ವಾದವನ್ನು ಸಮರ್ಥಿಸಿಕೊಂಡಿದ್ದಾರೆ. ಹೆಚ್ಚಿನ ಓದಿಗೆ ಹಾರ್ವರ್ಡ್ ಥಿಯಾಲಾಜಿಕಲ್ ರಿವ್ಯೂ 1962ರಲ್ಲಿ ಪ್ರಕಟಿಸಿರುವ 'ಸಿನಿಕ್ಸ್ ಆ್ಯಂಡ್ ಪಾಶುಪತಾಸ್: ದಿ ಸೀಕಿಂಗ್ ಆಫ್ ಡಿಸ್‌ಆನರ್' ಲೇಖನವನ್ನು ಗಮನಿಸಬಹುದು.

ಅದಲ್ಲದೆ ಭಾರತೀಯ ತರ್ಕಶಾಸ್ತ್ರವಾದ 'ನ್ಯಾಯ ಸೂತ್ರ'ವನ್ನು ರಚಿಸಿದ ಗೌತಮ ಸಹ ಭರೂಚದಲ್ಲಿ ವಾಸವಿದ್ದು ಅಲ್ಲಿದ್ದ ಗ್ರೀಕರ ಸಿನಿಕ್ ಪಂಥದಿಂದ ಪ್ರಭಾವಿತಗೊಂಡಿರಬಹುದು ಎಂದು ಫರ್ರಾಂಡ್ ಸಾಯ್ಸ್ 1938ರಲ್ಲಿ ಪ್ರಕಟಿಸಿದ ತಮ್ಮ 'ಡೈಯೋಜೀನ್ಸ್ ಆಫ್ ಸಿನೋಪ್: ಎ ಸ್ಟಡಿ ಆಫ್ ಗ್ರೀಕ್ ಸಿನಿಸಿಸಂ' ಕೃತಿಯಲ್ಲಿ ಹೇಳಿದ್ದಾರೆ. ಈ ಭರೂಚ ಪ್ರದೇಶವೇ ಲಕುಲೀಶರ ಆಡುಂಬೊಲ ಸಹ ಆಗಿತ್ತು. ಅದಲ್ಲದೆ ಕಾಳಾಮುಖ ಮತ್ತು ಪಾಶುಪತಗಳೆರಡೂ ನ್ಯಾಯ ಮತ್ತು ವೈಶೇಷಿಕ ಆಧ್ಯಾತ್ಮಿಕತೆಗೆ ಹೆಚ್ಚು ಹತ್ತಿರವಿದ್ದವು ಎಂದು ಈಗಾಗಲೇ ಸಾಕಷ್ಟು ಸಂಶೋಧನೆಗಳು ಸಾಬೀತುಪಡಿಸಿವೆ.

ಸಂಶೋಧಕರಾದ ಎಸ್.ಎನ್.ದಾಸ್ 'ಹಿಸ್ಟರಿ ಆಫ್ ಇಂಡಿಯನ್ ಫಿಲಾಸಫಿ' ಕೃತಿಯಲ್ಲಿ ಕಾಳಾಮುಖ ಅಥವಾ ಪಾಶುಪತದ ಹರದತ್ತನ 'ಪಾಶುಪತ ಗಣಕಾರಿಕಾ'ವೇ ಪರಿಷ್ಕೃತಗೊಂಡು 'ಸಿದ್ಧಾಂತ ಶಿಖಾಮಣಿ' ಆಗಿದೆ ಎಂದಿದ್ದಾರೆ. ಕಾಳಾಮುಖರ ಬೊಂತೇಯಮುನಿ 'ಕರ್ತೃ'ವು ನಿರಾಕಾರನೂ ನಿರಾಮಯನೂ ಆಗಿದ್ದಾನೆ ಎಂದಿದ್ದಾನೆ. ಬೊಂತೇಯಮುನಿಯ ಸ್ಥಾವರ-ಕರ್ತೃ ವಾದವು ಪಾಶುಪತದಲ್ಲಿ 'ಕಾರ್ಯಕಾರಣ ಸ್ಥಾವರ' ಅಂದರೆ ಲೌಕಿಕ ಪ್ರಪಂಚದ ಕಾರಣ ಸ್ಥಾವರ ಬೇಕು ಎಂದಾಗಿದೆ. ಇನ್ನು ಕರ್ತೃ, ಸ್ಥಾವರ, ನಿರಾಕಾರ, ನಿರಾಮಯಗಳು ವಚನಗಳಲ್ಲಿ ಹಾಸುಹೊಕ್ಕಾಗಿವೆ. ಈ ಪಂಥಗಳು ತರ್ಕಶಾಸ್ತ್ರ, ಯೋಗ, ತಂತ್ರವನ್ನು ತಮ್ಮ ಆಧ್ಯಾತ್ಮಿಕ ತತ್ವಗಳಲ್ಲಿ ಅಳವಡಿಸಿಕೊಂಡಿವೆ. ತಾಂತ್ರಿಕ ಕುಂಡಲಿನೀ ಕ್ರಿಯೆಯ ವರ್ಣನೆಯನ್ನು ಅಲ್ಲಮನಲ್ಲದೇ ಅಕ್ಕಮಹಾದೇವಿ, ಚೆನ್ನಬಸವಣ್ಣ ಮತ್ತಿತರೆ ವಚನಕಾರರ ವಚನಗಳಲ್ಲಿ ಕಾಣಬಹುದು. ಹೀಗೆ 'ಸಿದ್ಧಾಂತ ಶಿಖಾಮಣಿ' ಗ್ರಂಥಕ್ಕೆ ಐತಿಹಾಸಿಕ ಪುರಾವೆಯ ಬೆಂಬಲ ಸಿಗುತ್ತದೆ.

ಇನ್ನು 'ಶಕ್ತಿವಿಶಿಷ್ಟಾದ್ವೈತ'ದ 'ಶಕ್ತಿ' ಎಂಬುದು ಕಾಳಾಮುಖರ ಛಾಪಾಗಿತ್ತು. ಕರ್ನಾಟ ಸಾಮ್ರಾಜ್ಯಸ್ಥಾಪನೆಗೆ ಮಾರ್ಗದರ್ಶನ ನೀಡಿದ್ದ ಕ್ರಿಯಾ'ಶಕ್ತಿ', ಹೊಂಬಳದಲ್ಲಿನ ಕ್ರಿ.ಶ. 1189ರ ದತ್ತಿ ಶಾಸನದಲ್ಲಿನ ರುದ್ರ'ಶಕ್ತಿ', ಬಳ್ಳಿಗಾವೆ ಕೇದಾರೇಶ್ವರ ದೇವಸ್ಥಾನದ ಶಾಸನದಲ್ಲಿರುವ ಕೇದಾರ'ಶಕ್ತಿ', ವಾಮ'ಶಕ್ತಿ', ಜ್ಞಾನ'ಶಕ್ತಿ' ಹೀಗೆ ಕಾಳಾಮುಖ ಸಾಧಕರ ಶಕ್ತಿ ಪಟ್ಟಿ ಬೆಳೆಯುತ್ತದೆ. ಈ ಎಲ್ಲಾ 'ಶಕ್ತಿ'ಗಳನ್ನು ಶಾಸನಗಳಲ್ಲಿ ಜಂಗಮ, ಲಿಂಗಾವತಾರ ಎಂದೂ ಕರೆಯಲಾಗಿದೆ. 'ಜಂಗಮವೇ ಲಿಂಗವೆಂದರಿಯದವರ ತೋರದಿರು' ಎಂದು ವಚನಕಾರರೇ ಜಂಗಮವನ್ನು ಮಾನ್ಯ ಮಾಡಿದ್ದಾರೆ. ಬಿಜ್ಜಳರಾಯಚರಿತಗಳಲ್ಲಿ ಬಸವಣ್ಣನು ಮತಪ್ರಚಾರಕ್ಕಾಗಿ ಜಂಗಮರಿಗೆ ಸಾಕಷ್ಟು ಹಣವನ್ನು ಚೆಲ್ಲಿ ಕೋಶವನ್ನು ಖಾಲಿ ಮಾಡಿದ್ದನು ಎಂದಿದೆ. ಈ ಹಿನ್ನೆಲೆಯಲ್ಲಿ 'ಮತಪ್ರಚಾರಕ್ಕಾಗಿ ಕೋಶ' ಎಂಬ ಇಂದಿನ ಪ್ರಜಾಪ್ರಭುತ್ವದ ಬುನಾದಿಯ ಅಳವಡಿಕೆಯು ಸಹ ಪ್ರಪಂಚದ ಪ್ರಥಮ ಸಂಸತ್ತಿನಲ್ಲೇ ಕಂಡುಕೊಂಡ ನಿಯಮವಿರಬಹುದೇ ಎಂಬ ಕುಚೋದ್ಯ ಸಂಕಥನ ಮನದಲ್ಲಿ ಸುಳಿದರೆ ಅದು ತಪ್ಪಲ್ಲ.

''ಕಾಳಾಮುಖ ಸಂಪ್ರದಾಯದ ಗುರುಗಳು ನ್ಯಾಯ ಮತ್ತು ವೈಶೇಷಿಕ ತತ್ವಶಾಸ್ತ್ರಗಳಲ್ಲಿ ವಿಶೇಷ ಪರಿಣತರಾಗಿದ್ದರು. ಅವರು ತಮ್ಮ ಹೆಸರುಗಳ ಕೊನೆಯಲ್ಲಿ 'ಪಂಡಿತ', 'ಪಂಡಿತದೇವ' ಎಂಬ ವಿಶೇಷಣಗಳನ್ನು ಹಚ್ಚಿಕೊಳ್ಳುವುದು ವಾಡಿಕೆ. ಅವರು ಸಂಸ್ಕೃತದಲ್ಲಿ ಉದ್ದಾಮ ಪಂಡಿತರಾಗಿರುತ್ತಿದ್ದರು. ಮಠ-ಮಂದಿರಗಳಿಗೆ ಅಧಿಪತಿಗಳಾಗಿರುತ್ತಿದ್ದರು. ಅವರು ಉಳಿದ ವೈದಿಕ ಪುರೋಹಿತರಂತೆ ಇರಲಿಲ್ಲ, ಅವರು ಆಜೀವ ಬ್ರಹ್ಮಚಾರಿಗಳಾಗಿರುತ್ತಿದ್ದರು. 'ಪರಮ ನೈಷ್ಠಿಕ'ರೆಂದೂ, 'ತಪೋಧನ'ರೆಂದೂ ಪ್ರಸಿದ್ಧಿ ಪಡೆದಿದ್ದರು. ಅಪವಾದಕ್ಕೆ ಕೆಲವರು ಸಂಸಾರಿಗಳಾಗಿದ್ದರೆಂದೂ ತಿಳಿದುಬರುತ್ತದೆ. ಲಭ್ಯವಿದ್ದ ಬಸವಪೂರ್ವ ಶಾಸನಗಳಲ್ಲಿ ಅವರಿಗೆ 'ಮಾಹೇಶ್ವರ'ರೆಂದು, 'ಜಂಗಮ'ರೆಂದು ಕರೆಯಲಾಗಿದೆ. ಬಸವಣ್ಣನವರು ತಮ್ಮ ವಚನಗಳಲ್ಲಿ ಬಳಸಿದ 'ಜಂಗಮರು' ಎಂಬ ಪದವು ಈ ಕಾಳಾಮುಖ ಜಂಗಮರನ್ನೇ ನಿರ್ದೇಶಿಸುತ್ತದೆ. ಸಮಾಜ ಸುಧಾರಣೆಯ ಕಳಕಳಿಯುಳ್ಳವರಾದ ಕಾಳಾಮುಖರು (ಜಂಗಮರು) ಬಸವಣ್ಣನವರ ಪೂರ್ವದಲ್ಲಿ ಸಂಘಟಿತರಾಗಿದ್ದರು. ಬಸವಣ್ಣನವರ ಸಮಾಜ ಸುಧಾರಣೆಯಲ್ಲಿ ಇವರು ಸಹಕರಿಸಿದರು (ಪುಟ-241). ಬಸವಣ್ಣನವರ ಪೂರ್ವದಲ್ಲಿ ಮತ್ತು ತದನಂತರ ಕೆಲವು ವರುಷ ಕಾಳಾಮುಖರು ಕರ್ನಾಟಕದ ಉತ್ತರ ಭಾಗದಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿದ್ದರು. ಶಿವಮೊಗ್ಗ, ಧಾರವಾಡ, ಬೆಳಗಾವಿ ಜಿಲ್ಲೆಗಳಲ್ಲೂ, ಆಂಧ್ರಪ್ರದೇಶದ ಉಸ್ಮಾನಾಬಾದ್ ಜಿಲ್ಲೆಯಲ್ಲೂ ಅವರ ಮಠಗಳಿದ್ದವು. ಶಾಸನಗಳ ಆಧಾರದ ಮೇಲೆ ಹೇಳುವುದಾದರೆ ಕ್ರಿ.ಶ 1250ರ ಹೊತ್ತಿಗೆ ಕಾಳಾಮುಖರ ಎಲ್ಲ ಮಠಗಳು ವೀರಶೈವ ಮಠಗಳಾಗಿ ಪರಿವರ್ತಿತವಾದದ್ದು ಸ್ಪಷ್ಟವಾಗಿ ತಿಳಿದು ಬರುತ್ತದೆ (ಪುಟ-239)'' ಎಂದು ಡೇವಿಡ್ ಲೋರೆಂಜನ್ ಸ್ಪಷ್ಟವಾಗಿ ದಾಖಲೆ ಸಮೇತ ತಮ್ಮ 'ದಿ ಕಾಪಾಲಿಕಾಸ್ ಆ್ಯಂಡ್ ಕಾಳಾಮುಖಾಸ್: ಟು ಲಾಸ್ಟ್ ಶೈವೈಟ್ ಸೆಕ್ಟ್ಸ್' ಸಂಶೋಧನ ಕೃತಿಯಲ್ಲಿ ವಿವರಿಸಿದ್ದಾರೆ.

ವಿಸ್ತರಣೆ: ಪಂಥ ವಿಸ್ತರಣೆಯು ಅಂದಿನ ಎಲ್ಲಾ ಪಂಥಗಳ ಗುರಿಯಾಗಿದ್ದಂತೆಯೇ ಕಾಳಾಮುಖರ ಪ್ರಮುಖ ಗುರಿಯೂ ಪಂಥ ವಿಸ್ತರಣೆಯಾಗಿತ್ತು. ಅಂದಿನ ಸಾಕಷ್ಟು ಶೈವಪ್ರಭುತ್ವಗಳ (ಅದರಲ್ಲೂ ದಕ್ಷಿಣ ಭಾರತದ) ಆಧಿಪತ್ಯ ವಿಸ್ತರಣೆಯಲ್ಲಿ ಕಾಳಾಮುಖರು ತಮ್ಮದೇ ಆದ ರೀತಿಯಲ್ಲಿ ಸಾಕಷ್ಟು ಸೇವೆಯನ್ನು ಸಲ್ಲಿಸಿದ್ದಾರೆ. ಯುದ್ಧಗಳಲ್ಲಿ ನೇರವಾಗಿ ಮತ್ತು ಪರೋಕ್ಷವಾಗಿ ವೀರೋಚಿತವಾಗಿ ಭಾಗವಹಿಸಿದ್ದಾರೆ. ರಾಜಗುರುಗಳೆಂದೂ ಮಾನ್ಯತೆ ಪಡೆದಿದ್ದಾರೆ. ಕಾಳಾಮುಖರು ತಮ್ಮ ಪಂಥವಿಸ್ತರಣೆಗೆ ಆಕ್ರಮಣಕಾರಿ ಪದ್ಧತಿಯನ್ನು ತುಸು ಹೆಚ್ಚಾಗಿಯೇ ಅನುಸರಿಸುತ್ತಿದ್ದರು. ಇದರಲ್ಲಿ ಸವಾಲುವಾದ ಮತ್ತು ದಂಡನೆ ತಂತ್ರಗಳು ಪ್ರಮುಖವಾಗಿದ್ದವು. ಶೈವರಲ್ಲದವರಿಗೆ ಈ ಕಾಳಾಮುಖ ಶೈವರು ತಮ್ಮ ದೇವರುಗಳಿಗೆ ತಮ್ಮ ದೇಹದ ಅಂಗಾಂಗಗಳನ್ನು ಅರ್ಪಿಸುವ ಸವಾಲನ್ನು ಹಾಕುತ್ತಿದ್ದರು. ನಾವು ನಮ್ಮ ಕೈ, ಕಾಲು, ತಲೆಗಳನ್ನು ಶಿವನಿಗೆ ಅರ್ಪಿಸುವೆವು. ನೀವು ಕೂಡ ನಿಮ್ಮ ನಿಮ್ಮ ದೇವರುಗಳಿಗೆ ನಿಮ್ಮ ಅಂಗಾಂಗಗಳನ್ನು ಅರ್ಪಿಸಿ ಇಲ್ಲವೇ ಶೈವತ್ವವನ್ನು ಒಪ್ಪಿ ಎಂದು ಶೈವತ್ವವನ್ನು ಬಲವಂತವಾಗಿ ಹೇರುತ್ತಿದ್ದರು. ಏಳನೇ ಶತಮಾನದಲ್ಲಿ ಬಂದಿದ್ದ ಚೀನಿ ಯಾತ್ರಿಕ ಹುಯೆನ್ ತ್ಸಾಂಗ್ ಸಹ ಇಂಥ ಕಾಳಾಮುಖನೊಬ್ಬ ತನಗೆ ಸವಾಲು ಹಾಕಿ ಸೋತಿದ್ದನೆಂದು ದಾಖಲಿಸಿದ್ದಾನೆ. ಈ ಸವಾಲುವಾದದ ಕೈ ಕತ್ತರಿಸಿಕೊಳ್ಳುತ್ತಿರುವ, ತಲೆ ಕತ್ತರಿಸಿಕೊಳ್ಳುತ್ತಿರುವ ಮೂರ್ತ ಸ್ವರೂಪಗಳನ್ನು ಶ್ರೀಶೈಲದ ದೇವಸ್ಥಾನವಲ್ಲದೆ ಶೈವ ಪರಂಪರೆಯ ಅನೇಕ ಗುಡಿಗಳ ಸುತ್ತಲೂ ಈಗಲೂ ನೋಡಬಹುದು. ಹಾವೇರಿ ಜಿಲ್ಲೆಯ ಅಬಲೂರಿನ ಬ್ರಹ್ಮೇಶ್ವರ ದೇವಸ್ಥಾನದಲ್ಲಿ ಕೆತ್ತಿರುವ ಏಕಾಂತರಾಮನು ಜೈನರಿಗೆ ಸವಾಲೊಡ್ಡಿ ತನ್ನ ಶಿರಚ್ಛೇದ ಮಾಡಿಕೊಂಡು ಸವಾಲು ಗೆದ್ದ ಕತೆಯ ಶಿಲ್ಪ ಮತ್ತು ಶಾಸನ ಕಾಳಾಮುಖ-ವೀರಶೈವ-ಲಿಂಗಾಯತದ ಪ್ರಮುಖ ಕೊಂಡಿಯಾಗಿದೆ. ಅಬಲೂರಿನ ಬ್ರಹ್ಮೇಶ್ವರ ದೇವಸ್ಥಾನವು ಕಾಳಾಮುಖ ಆಚಾರ್ಯನ ಮೂರನೇ ಕೊನೆಯ ಸಂತತಿಯ ಅಧಿಕಾರದಲ್ಲಿತ್ತು ಎಂದು ಅಲ್ಲಿನ ಶಾಸನವೇ ತಿಳಿಸುತ್ತದೆ. ಅಬಲೂರು ಶಾಸನ ಮತ್ತು ಚೆನ್ನಬಸವ ಪುರಾಣದಲ್ಲಿ ಬಂದಿರುವ ಏಕಾಂತ ರಾಮಯ್ಯನೇ ಏಕೋರಾಮರಾಧ್ಯ ಎನ್ನಲಾಗಿದೆ! ಶರಣ ಚಳವಳಿಯ ವಚನಗಳಲ್ಲಿಯೂ ಈ ಸವಾಲುವಾದ ಅತ್ಯಂತ ಢಾಳಾಗಿ ಕಾಣಸಿಗುತ್ತದೆ. ಇತಿಹಾಸದ ಅನೇಕ ಶೈವ ಪರಂಪರೆಯ ಪ್ರಭುತ್ವಗಳು ಈ ಕಾಳಾಮುಖ ಶೈವರಿಂದ ಸಾಕಷ್ಟು ಸಹಾಯವನ್ನು ಪಡೆದಿವೆ. ಚೋಳರು ಇವರ ಗೌರವಾರ್ಥವಾಗಿ ಒಂದು ನೌಕೆಗೆ ಕಾಳಾಮುಖ ಎಂದು ಹೆಸರಿಸಿದ್ದರು ಎನ್ನಲಾಗುತ್ತದೆ. ಮಣಿರತ್ನಂರ ಇತ್ತೀಚಿನ ಸರಣಿಚಿತ್ರ 'ಪೊನ್ನಿಯಿನ್ ಸೆಲ್ವನ್1/2'ರಲ್ಲಿ ಬರುವ ಕಾಳಾಮುಖ ಪಾತ್ರಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಇದು ಅಂದು ಪ್ರತಿಯೊಂದು ಮತಪಂಥಗಳು ತಮ್ಮ ತಮ್ಮ ಪಂಥವನ್ನು ಉಳಿಸಿಕೊಳ್ಳಲು ಮಾಡಲೇಬೇಕಿದ್ದ ಧರ್ಮಯುದ್ಧವಾಗಿತ್ತು. ಕೇವಲ ವೀರಶೈವ ಪಂಥವಲ್ಲದೆ ಹಿಂದೂ, ಜೈನ, ಬೌದ್ಧ, ವೈಷ್ಣವ ಮತ್ತೆಲ್ಲಾ ಪಂಥಗಳೂ ಹೀಗೆ ಪಂಥಶ್ರೇಷ್ಠತೆಯ ಯುದ್ಧದಲ್ಲಿ ಅಸ್ತಿತ್ವಕ್ಕಾಗಿ, ಅಸ್ಮಿತೆಗಾಗಿ ಹೋರಾಡತೊಡಗಿದ್ದವು ಎಂಬುದು ಭಾರತದ ಇತಿಹಾಸದಾದ್ಯಂತ ಮೇಲ್ನೋಟಕ್ಕೇ ಕಾಣುವ ಐತಿಹಾಸಿಕ ಸತ್ಯ.

(ಲೇಖಕರು ಶಿಕಾಗೊ ನಿವಾಸಿ ಹಾಗೂ ಸಾಹಿತಿ)

ತನ್ನಿಮಿತ್ತ

ಸುರೇಂದ್ರ ಪೈ, ಭಟ್ಕಳ

ಚೆಂದದ ಪಾಠ ಹೇಳಿದ ಕಲಾಂ

ನಿದ್ರೆ ಮಾಡುವಾಗ ಬರುವುದು ಕನಸಲ್ಲ, ನಿದ್ರೆ ಮಾಡಲು ಬಿಡದಿರುವುದು ನಿಜವಾದ ಕನಸು ಎಂಬ ಸಾಲನ್ನು ಕೇಳಿದಾಕ್ಷಣ ನೆನಪಾಗುವ ಮಹಾನ್ ಚೇತನ ಡಾ.ಎ.ಪಿ.ಜೆ.ಅಬ್ದುಲ್ ಕಲಾಂ. ದೇಶದ ಯುವಪೀಳಿಗೆಯನ್ನು ಪ್ರೇರೇಪಿಸಬಲ್ಲ ಪುಸ್ತಕ, ಕವನಗಳನ್ನು ಬರೆಯುತ್ತ, ಅಪ್ಪಟ ಮೇಷ್ಟ್ರಂತೆ ಪಾಠ ಹೇಳುತ್ತ, ಭೂಮಂಡಲದ ರಕ್ಷಣೆಯ ಸಂಕಲ್ಪವನ್ನು ಮಾಡಿಸುತ್ತ, ಪರಿಶ್ರಮ-ಪ್ರಾಮಾಣಿಕತೆಗಳಿಗೆ ಪರ್ಯಾಯ ರೂಪವಾಗಿದ್ದುಕೊಂಡು ನಮ್ಮೆಲ್ಲರ ಹೃದಯಗಳನ್ನು ಗೆದ್ದವರು ಡಾ.ಕಲಾಂ. ಅಕ್ಟೋಬರ್ 15 ಇವರ ಜನ್ಮದಿನ. ಈ ದಿನವನ್ನು ದೇಶಾದ್ಯಂತ 'ವಿಶ್ವ ವಿದ್ಯಾರ್ಥಿಗಳ ದಿನ'ವನ್ನಾಗಿ ಆಚರಿಸಲಾಗುತ್ತದೆ.

ಅಬ್ದುಲ್ ಕಲಾಂ ಹೆಸರು ಕೇಳಿದರೆ ಈಗಲೂ ಅದೇನೋ ರೋಮಾಂಚನವಾಗುತ್ತದೆ, ಸ್ಫೂರ್ತಿ ದೊರಕುತ್ತದೆ. ಅಪಾರ ಜ್ಞಾನ, ಸರಳತೆ, ಮಾನವೀಯ ಮೌಲ್ಯಗಳ ಗಣಿಯಾಗಿದ್ದ ಅವರು ವಿಜ್ಞಾನಿಗಳ ಪಾಲಿಗೆ 'ಮಿಸೈಲ್ ಮ್ಯಾನ್', ವಿದ್ಯಾರ್ಥಿಗಳ ಪಾಲಿಗೆ 'ಅತ್ಯುತ್ತಮ ಶಿಕ್ಷಕ', ಸಾರಸ್ವತ ಲೋಕದವರಿಗೆ 'ಅದ್ಭುತ ಲೇಖಕ' ಹೀಗೆ ಏನೆಲ್ಲಾ ಆಗಿದ್ದವರು. ಎಲ್ಲ ಜಾತಿ, ಧರ್ಮ, ಪಂಥದವರಿಂದಲೂ ಗೌರವಿಸಲ್ಪಟ್ಟವರು ಕಲಾಂ. ಅವರ ಹತ್ತನೇ ವಯಸ್ಸಿನಲ್ಲಿ ವಿಜ್ಞಾನ ಶಿಕ್ಷಕರು ಪಕ್ಷಿಗಳ ಬಗ್ಗೆ ಪಾಠ ಮಾಡಲು ರಾಮೇಶ್ವರಂ ಬೀಚ್‌ಗೆ ಕರೆದುಕೊಂಡು ಹೋಗಿದ್ದರಂತೆ; ಅವರ ಬೋಧನೆಯಿಂದ ಪ್ರೇರೇಪಣೆಗೊಂಡ ಕಲಾಂ ಭವಿಷ್ಯದಲ್ಲಿ ತಾವೊಬ್ಬ ಏರೋನಾಟಿಕಲ್ ವಿಜ್ಞಾನಿಯಾಗಬೇಕೆಂದು ಕನಸು ಕಂಡು, ಅದನ್ನೇ ಬೆನ್ನತ್ತಿ 'ಮದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ'ಯಿಂದ ಏರೋನಾಟಿಕಲ್ ಎಂಜಿನಿಯರಿಂಗ್ ಪದವಿ ಪಡೆದರು.



1960ರಲ್ಲಿ 'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ'ಯ (ಡಿಆರ್‌ಡಿಒ) ವೈಮಾನಿಕ ವಿಜ್ಞಾನ ಅಭಿವೃದ್ಧಿ ವಿಭಾಗದಲ್ಲಿ ವಿಜ್ಞಾನಿಯಾಗಿ ವೃತ್ತಿಜೀವನ ಆರಂಭಿಸಿದ ಕಲಾಂ, ತರುವಾಯದಲ್ಲಿ ಹೆಸರಾಂತ ಬಾಹ್ಯಾಕಾಶ ವಿಜ್ಞಾನಿ ವಿಕ್ರಂ ಸಾರಾಭಾಯ್ ಅವರ ಮೇಲ್ವಿಚಾರಣೆಯಿದ್ದ 'ಇನ್ಕೋಸ್ಪಾರ್' ಸಮಿತಿಯ ಭಾಗವಾಗಿದ್ದರು. ಭಾರತದ ಮೊದಲ ಉಪಗ್ರಹ ಉಡಾವಣಾ ವಾಹನವಾದ 'ಎಸ್‌ಎಲ್‌ವಿ-3'ರ ಅಭಿವೃದ್ಧಿಯ ಮೇಲ್ವಿಚಾರಣೆ ಮಾಡಿದರು. 1970ರ ದಶಕದಲ್ಲಿ ನಡೆದ ಬ್ಯಾಲಿಸ್ಟಿಕ್ ಕ್ಷಿಪಣಿಗಳ ರಚನೆ-ಅಭಿವೃದ್ಧಿ, 1980ರಲ್ಲಿ ರೋಹಿಣಿ ಉಪಗ್ರಹವನ್ನು ಭೂಕಕ್ಷೆಗೆ ಸೇರಿಸುವಿಕೆ, 'ಅಗ್ನಿ' ಮತ್ತು 'ಪೃಥ್ವಿ' ಸೇರಿದಂತೆ 1982ರಲ್ಲಿ ಹಲವಾರು ಯಶಸ್ವಿ ಕ್ಷಿಪಣಿಗಳ ಅಭಿವೃದ್ಧಿ ಮುಂತಾದ ಮೈಲಿಗಲ್ಲುಗಳಲ್ಲಿ ಡಾ.ಕಲಾಂ ಅವರ ಯೋಗದಾನವಿತ್ತು. ಈ ಎಲ್ಲ ಸಾಧನೆಗಳ ಫಲವಾಗಿಯೇ 'ಮಿಸೈಲ್ ಮ್ಯಾನ್ ಆಫ್ ಇಂಡಿಯಾ' ಎಂಬ ಕೀರ್ತಿ ಅವರ ಹೆಗಲೇರಿತು. 1998ರಲ್ಲಿ ಪೋಖ್ರಾನ್‌ನಲ್ಲಿ 'ಪರಮಾಣು ಪರೀಕ್ಷೆ' ಯಶಸ್ವಿಯಾಗುವಲ್ಲಿ ಕಲಾಂ ಅವರ ಪರಿಶ್ರಮವಿತ್ತು ಮತ್ತು ಇದು ಭಾರತವು ವಿಶ್ವ ಮಟ್ಟದಲ್ಲಿ ಪರಮಾಣು ಶಕ್ತಿ ರಾಷ್ಟ್ರವಾಗಿ ಹೊಮ್ಮಲು ಕಾರಣವಾಯಿತು.

ರಾಜಕೀಯ ಹಿನ್ನೆಲೆಯಿಲ್ಲದ ಡಾ.ಕಲಾಂ ಅವರು 2002ರಲ್ಲಿ ಭಾರತದ 11ನೇ ರಾಷ್ಟ್ರಪತಿಯಾಗಿ ಆಯ್ಕೆಯಾದಾಗ, ಆ ಹೊಣೆಗಾರಿಕೆಯನ್ನು ಅವರು ಹೇಗೆ ನಿಭಾಯಿಸುತ್ತಾರೆ ಎಂಬ ಕುತೂಹಲ ಸಾಕಷ್ಟು ಜನರಲ್ಲಿತ್ತು. ಆದರೆ ಆ ಹುದ್ದೆಯನ್ನು ಅವರು ಸಮರ್ಥವಾಗಿ ನಿರ್ವಹಿಸಿದ್ದನ್ನು ಕಂಡು ಮನಸೋತ ಜನರೇ ಕಲಾಂರನ್ನು 'ಪೀಪಲ್ಸ್ ಪ್ರೆಸಿಡೆಂಟ್' ಎಂದು ಕರೆದು ಶ್ಲಾಘಿಸಿದರು. ಆರೋಗ್ಯ ರಕ್ಷಣೆಯು ಡಾ.ಕಲಾಂ ಅವರ ಅಚ್ಚುಮೆಚ್ಚಿನ ಕ್ಷೇತ್ರಗಳಲ್ಲಿ ಒಂದಾಗಿತ್ತು. ಹೃದ್ರೋಗ ತಜ್ಞ ಡಾ.ಸೋಮರಾಜು ಅವರ ಜತೆಗೂಡಿ 'ಕಲಾಂ-ರಾಜು ಸ್ಟೆಂಟ್' ಅಭಿವೃದ್ಧಿಪಡಿಸಿದ್ದು, 2012ರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಉತ್ತಮ ಆರೋಗ್ಯ ಆಡಳಿತ ನೀಡುವುದಕ್ಕೆ ಅನುವು ಮಾಡಿಕೊಡುವ 'ಕಲಾಂ-ರಾಜು ಟ್ಯಾಬ್ಲೆಟ್ ಕಂಪ್ಯೂಟರ್'ಗೆ ಚಾಲನೆ, ನಗರ ಪ್ರದೇಶಗಳಲ್ಲಿರುವಂಥ ಮೂಲಸೌಕರ್ಯ ಮತ್ತು ಸೇವೆಗಳನ್ನು ಗ್ರಾಮೀಣ ಪ್ರದೇಶಗಳಲ್ಲೂ ಒದಗಿಸುವ ಸಂಕಲ್ಪದಡಿ ರೂಪುಗೊಂಡ 'ಪುರ ಯೋಜನೆ' ಮುಂತಾದವು ಕಲಾಂ ಅವರಲ್ಲಿದ್ದ 'ಜನಕಲ್ಯಾಣದ ದೂರದೃಷ್ಟಿ'ಗೆ ಒಂದಷ್ಟು ನಿದರ್ಶನಗಳು.

ಕನಸು ಕಾಣುವುದನ್ನು ಕಲಿಸಿದ್ದು ಮಾತ್ರವಲ್ಲದೆ, ಕಂಡ ಕನಸುಗಳನ್ನು ನನಸಾಗಿಸಿಕೊಳ್ಳುವ ಪರಿಯನ್ನೂ ತಮ್ಮ ಕಾರ್ಯಗಳ ಮೂಲಕ ತೋರಿಸಿದ್ದು ಡಾ.ಕಲಾಂ ಅವರ ಹೆಗ್ಗಳಿಕೆ. ಅವರು ಹುಟ್ಟಿದ್ದು ಇಸ್ಲಾಂ ಧರ್ಮದಲ್ಲಾದರೂ, ಎಲ್ಲಾ ಧರ್ಮಗಳ ಆಚಾರ-ವಿಚಾರಗಳನ್ನು, ಧರ್ಮಗ್ರಂಥಗಳನ್ನು ಅಧ್ಯಯನ ಮಾಡಿ ಅಪಾರ ಪಾಂಡಿತ್ಯವನ್ನು ಸಂಪಾದಿಸಿದ್ದರು. ಮಹಾಭಾರತದಲ್ಲಿ ಬರುವ ವಿದುರನ ಪಾತ್ರ ಕಲಾಂರಿಗೆ ಬಲು ಇಷ್ಟವಾಗಿತ್ತು. ಯಾರೊಬ್ಬರೂ ಕಲಾಂರನ್ನು ಧರ್ಮದ ಆಧಾರದ ಮೇಲೆ ಗುರುತಿಸಲಿಲ್ಲ, ಕಲಾಂ ಅವರು ಕೂಡ ಯಾವೊಂದು ಧರ್ಮದ/ಜನಾಂಗದ ವಿರೋಧವನ್ನು ಕಟ್ಟಿಕೊಳ್ಳಲಿಲ್ಲ. ಹೀಗಾಗಿ ಅವರು ನಿಜಾರ್ಥದಲ್ಲಿ ಒಬ್ಬ 'ವಿಶ್ವಮಾನವ' ಎಂದರೆ ಅತಿಶಯೋಕ್ತಿಯಲ್ಲ.

ಕೆಲವರಿಗೆ ಕೈಗೊಂದಿಷ್ಟು ಅಧಿಕಾರ ಸಿಕ್ಕರೆ ಸಾಕು ಅಹಂಕಾರವೂ ಹೆಗಲೇರಿಬಿಡುತ್ತದೆ. 'ನಮ್ಮ ಹಿಂದೆ-ಮುಂದೆ ಸದಾ ಹತ್ತಾರು ಜನರಿರಬೇಕು, ವಾಸಿಸಲು ದೊಡ್ಡ ಬಂಗಲೆ ಬೇಕು, ಸಾಕಷ್ಟು ಹಣ ಮಾಡಬೇಕು' ಎಂಬಿತ್ಯಾದಿ ಆಲೋಚನೆಗಳು ಇಂಥವರಲ್ಲಿ ಸುಳಿಯುವುದು ಸಾಮಾನ್ಯ. ಆದರೆ ಡಾ.ಕಲಾಂ ಇದಕ್ಕೆ ಅಪವಾದವಾಗಿದ್ದರು. ಅವರು ರಾಷ್ಟ್ರಪತಿಯಾಗಿದ್ದ ಅವಧಿಯಲ್ಲಿ ಕೂಡ ಆಡಂಬರಕ್ಕೆ ಮೊರೆಹೋಗದೆ ಸರಳತೆ-ಸಜ್ಜನಿಕೆಯನ್ನು ಕಾಯ್ದುಕೊಂಡಿದ್ದರು. ''ನನಗೆ ಯಾರಾದರೂ ಕೊಡುಗೆ ನೀಡಿದರೆ ಅದನ್ನು ಮ್ಯೂಸಿಯಂಗೆ ಕಳುಹಿಸಿ, ನನ್ನ ಕೊಠಡಿಗೆ ತರಬೇಡಿ'' ಎನ್ನುತ್ತಿದ್ದ ಕಲಾಂ ತಮ್ಮ ಅಂಗರಕ್ಷಕರಿಂದ ಮೊದಲ್ಗೊಂಡು ಹೂದೋಟದಲ್ಲಿ ಕೆಲಸ ಮಾಡುವ ಮಾಲಿಯವರೆಗೆ ಪ್ರತಿಯೊಬ್ಬರನ್ನೂ ಪ್ರೀತ್ಯಾದರಗಳೊಂದಿಗೆ ಮಾತನಾಡಿಸುತ್ತಿದ್ದರು. ''ಅಧಿಕಾರವೆಂಬುದು ಭಗವಂತನ ಕೃಪಾಕಟಾಕ್ಷ, ಅದನ್ನು ಜನಕಲ್ಯಾಣಕ್ಕಾಗಿ ಬಳಸಿಕೊಳ್ಳಬೇಕು'' ಎನ್ನುತ್ತಿದ್ದ ಕಲಾಂ, ತಮಗಿರುವ ವಿಶೇಷ ಭದ್ರತೆಯ (ಝಡ್ ಪ್ಲಸ್) ಬಗ್ಗೆ ಹಲವು ಸಲ ಬೇಸರ ವ್ಯಕ್ತಪಡಿಸುತ್ತಿದ್ದುದುಂಟು. ರಾಷ್ಟ್ರಪತಿ ಭವನದ ಸಿಬ್ಬಂದಿಯೊಬ್ಬರ ತಾಯಿಯ ಸಾವಿನ ವಿಚಾರ ತಿಳಿದು ಸ್ವತಃ ಅವರ ಮನೆಗೆ ತೆರಳಿ ಸಾಂತ್ವನ ಹೇಳಿದ್ದು, ಸಭೆಯಲ್ಲಿನ ಕೇಳುಗರೊಂದಿಗೆ ಸಂವಾದ ನಡೆಸುವಾಗ ತಲ್ಲೀನರಾಗಿ ಎಷ್ಟೋ ಸಲ ಆಸನವನ್ನು ಬಿಟ್ಟು, ವೇದಿಕೆಯ ಕೆಳಗಡೆ ಬಂದು ಕುಳಿತಿದ್ದು ಮುಂತಾದ ಘಟನೆಗಳು ಅವರ ಸರಳತೆಗೆ ದ್ಯೋತಕ.

ಯುವಶಕ್ತಿಯಲ್ಲಿ ಅಪಾರ ನಂಬಿಕೆಯಿಟ್ಟಿದ್ದ ಕಲಾಂ, ಯುವಕರ ಸಬಲೀಕರಣಕ್ಕೆ ಪ್ರೋತ್ಸಾಹಿಸುತ್ತಿದ್ದರು. 2020ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿ ಪರಿವರ್ತಿಸುವ 'ವಿಷನ್ 2020' ಎಂಬ ಪರಿಕಲ್ಪನೆಯ ನೀಲಿನಕ್ಷೆಯನ್ನು ಸಜ್ಜುಗೊಳಿಸಿದ ದೂರದೃಷ್ಟಿಯ ನಾಯಕ ಡಾ.ಕಲಾಂ, ಈ ಗುರಿಯನ್ನು ಸಾಧಿಸುವಲ್ಲಿ ಶಿಕ್ಷಣ, ತಂತ್ರಜ್ಞಾನ ಮತ್ತು ಸುಸ್ಥಿರ ಅಭಿವೃದ್ಧಿಗಿರುವ ಮಹತ್ವವನ್ನು ಒತ್ತಿಹೇಳಿದ್ದರು. ಮಕ್ಕಳೊಂದಿಗೆ ಸಂವಾದ ನಡೆಸುವುದು ಅವರಿಗೆ ಬಲು ಇಷ್ಟದ ಬಾಬತ್ತಾಗಿತ್ತು. ಹೀಗೆ ಪ್ರತಿಬಾರಿ ಮಕ್ಕಳೊಂದಿಗೆ ಮಾತಿಗಿಳಿದಾಗಲೂ, ''ನಿಮ್ಮ ಕನಸೇನು? ನೀವು ಏನಾಗಬೇಕೆಂದಿರುವಿರಿ?'' ಎಂದು ಪ್ರಶ್ನಿಸುತ್ತಿದ್ದರು. ಅದಕ್ಕೆ ಮಕ್ಕಳಿಂದ ಬರುವ ಉತ್ತರವನ್ನು ಕೇಳಲು ಉತ್ಸುಕರಾಗಿರುತ್ತಿದ್ದರು. ''ಕನಸು, ನಿರಂತರ ಜ್ಞಾನ ಸಂಪಾದನೆ, ಕಠಿಣ ಪರಿಶ್ರಮ ಹಾಗೂ ಸವಾಲುಗಳಿಗೆ ಸೋಲದೆ ಹೋರಾಡುವ ಛಲ ಈ ನಾಲ್ಕು ಅಂಶಗಳೇ ಯಶಸ್ಸಿನ ಸೂತ್ರಗಳು'' ಎಂದು ಮಕ್ಕಳಿಗೆ ತಿಳಿಹೇಳುತ್ತಿದ್ದ ಕಲಾಂ, ಆ ಸಾಲನ್ನು ಮಕ್ಕಳು ಪುನರುಚ್ಚರಿಸುವಂತೆ ಮಾಡುತ್ತಿದ್ದರು. ಹೀಗೆ ಮಾಡಿದರೆ ಯಶಸ್ಸಿನ ಆ ಸೂತ್ರಗಳು ಮಕ್ಕಳ ಮನಸ್ಸಿನಲ್ಲಿ ಆಳವಾಗಿ ನೆಲೆಯೂರುತ್ತವೆ ಎಂಬುದು ಕಲಾಂ ಅವರ ನಂಬಿಕೆಯಾಗಿತ್ತು. ''ನನಗೆ ಜೀವನದಲ್ಲಿ ಎಲ್ಲಕ್ಕಿಂತ ಹೆಚ್ಚು ತೃಪ್ತಿ ನೀಡಿದ್ದು ಬೋಧನೆ ಮತ್ತು ಸಂಶೋಧನೆ; ಮನುಷ್ಯನಲ್ಲಿ ಹುದುಗಿರುವ ಜ್ಞಾನವೇ ಅವನಿಗೆ ಧೈರ್ಯವನ್ನು ನೀಡುತ್ತದೆ; ಯಾವ ವ್ಯಕ್ತಿ ಅಸಾಧ್ಯವಾದುದನ್ನು ಸಾಧಿಸುವ ಛಲವನ್ನು ಹೊಂದಿರುತ್ತಾನೋ ಅವನು ಮಾತ್ರವೇ ಸಾಧನೆಯ ಎಲ್ಲಾ ಮಿತಿಗಳನ್ನೂ ದಾಟಬಲ್ಲ'' ಎಂಬುದು ಕಲಾಂ ಅವರು ಹರಿಸುತ್ತಿದ್ದ ಜ್ಞಾನಧಾರೆಯ ಒಂದಷ್ಟು ಹನಿಗಳಾಗಿದ್ದವು. ಪರಿಸರ ಮತ್ತು ಭೂಮಿಯ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದ ಕಲಾಂ ಅವರ ಕೊನೆಯ ಭಾಷಣವು 'ವಾಸಯೋಗ್ಯ ಭೂಮಿಯನ್ನು ರೂಪಿಸುವುದು' ಎಂಬ ವಿಷಯದ ಕುರಿತಾಗಿತ್ತು. ''ಪರಿಸರ ಮಾಲಿನ್ಯದಷ್ಟೇ ಮಾನವನು ಕೂಡ ವಾಸಯೋಗ್ಯ ಭೂಮಿಗೆ ದೊಡ್ಡ ಅಪಾಯವಾಗಿದ್ದಾನೆ. ಅವನ ಹಿಂಸಾಚಾರ ಮತ್ತು ಅಜಾಗರೂಕ ಪ್ರವೃತ್ತಿಗಳು ಹೀಗೆಯೇ ಮುಂದುವರಿದರೆ, ಮುಂದಿನ ಮೂವತ್ತು ವರ್ಷಗಳಲ್ಲಿ ಈ ಭೂಮಿಯನ್ನು ತೊರೆಯಬೇಕಾಗುತ್ತದೆ'' ಎಂಬ ಕಳವಳವನ್ನು ಆ ಭಾಷಣದಲ್ಲಿ ಕಲಾಂ ವ್ಯಕ್ತಪಡಿಸಿದ್ದರು. 'ಭಾರತ ರತ್ನ' ಸೇರಿದಂತೆ ಹತ್ತು ಹಲವು ಪ್ರಶಸ್ತಿ-ಪುರಸ್ಕಾರಗಳಿಗೆ ಪಾತ್ರರಾದ ಕಲಾಂ, ''ಇವೆಲ್ಲವೂ ಸಾಧ್ಯವಾಗಿದ್ದು ಜ್ಞಾನ ಸಂಪಾದನೆಯಿಂದ ಮಾತ್ರವೇ'' ಎನ್ನುತ್ತಿದ್ದುದುಂಟು. ''ವಿದ್ಯಾರ್ಥಿ ಸಮುದಾಯಕ್ಕೆ ನಿಮ್ಮ ಸಂದೇಶವೇನು?'' ಎಂದು ಕೇಳಿದಾಗ, ''ಕನಿಷ್ಠ ಪಕ್ಷ ಐವರು ಅನಕ್ಷರಸ್ಥರಿಗೆ ಅಕ್ಷರಗಳನ್ನು ಹೇಳಿಕೊಡಿ, ತಲಾ ಎರಡು ಸಸಿಗಳನ್ನು ನೆಡಿ, ಅಧ್ಯಯನದತ್ತ ಗಮನಹರಿಸಿ ಮತ್ತು ನಿಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಶುಚಿಯಾಗಿಟ್ಟುಕೊಳ್ಳಲು ನಿಮ್ಮ ಗೆಳೆಯರೊಂದಿಗೆ ಸೇರಿ ಕೆಲಸ ಮಾಡಿ'' ಎಂದಿದ್ದು ಕಲಾಂ ಅವರ ಹೆಗ್ಗಳಿಕೆ. ಆತ್ಮಕಥನ ಸೇರಿದಂತೆ ಹಲವು ಪುಸ್ತಕಗಳು, ಕವಿತೆಗಳನ್ನು ಬರೆದಿರುವ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ಅವರ ಬೋಧನೆಗಳು ಮತ್ತು ವಿಚಾರಧಾರೆಗಳು ಕೋಟ್ಯಂತರ ಮಂದಿಗೆ ಸ್ಫೂರ್ತಿಯ ಸೆಲೆಯಾಗಿವೆ. ಒಟ್ಟಾರೆಯಾಗಿ, ಅಂದದ ಬದುಕು ಕಟ್ಟಿಕೊಳ್ಳಲು ಚೆಂದದ ಪಾಠ ಹೇಳಿಕೊಟ್ಟ ಮಾಸ್ತರರು ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಎಂದರೆ ಅತಿಶಯೋಕ್ತಿಯಲ್ಲ.

(ಲೇಖಕರು ಶಿಕ್ಷಕರು)

ಅಚ್ಚುಕಟ್ಟು ಪ್ರದೇಶ
RNI no: 3918/59

VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ, ಮಂಗಳೂರು, ಬೆಳಗಾವಿ, ಕಲಬುರಗಿ, ದಾವಣಗೆರೆ
Vol:67, Issue: 159

ಸಮಾಚಾರ ಸಣ್ಣದಲ್ಲ

ನಾಗಪುರ ದೀಕ್ಷಾ ಯಾತ್ರೆಗೆ ಶಾಸಕಿ ಚಾಲನೆ

ಹರಪನಹಳ್ಳಿ: ತಾಲೂಕು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರು ದೀಕ್ಷೆ ಪಡೆದ ಮಹಾರಾಷ್ಟ್ರದ ನಾಗಪುರ ದೀಕ್ಷಾ ಭೂಮಿ ಯಾತ್ರೆಗೆ ಹೊರಟ 30 ಜನ ಅಂಬೇಡ್ಕರ್ ಅನುಯಾಯಿಗಳಿಗೆ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್ ಗುರುವಾರ ಪಟ್ಟಣದಲ್ಲಿ ಚಾಲನೆ ನೀಡಿ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಚೇರಿ ವ್ಯವಸ್ಥಾಪಕಿ ಯಾಸ್ಮೀನ್, ಎನ್.ಜಿ.ಬಸವರಾಜ, ಮತ್ತೂರು ಬಸವರಾಜ ಸೇರಿದಂತೆ ಅಂಬೇಡ್ಕರ್ ಅನುಯಾಯಿಗಳು ಇದ್ದರು.

ಹಾಲಸ್ವಾಮಿಗಳ ಜಾತ್ರಾ ಮಹೋತ್ಸವ

ಹರಪನಹಳ್ಳಿ: ಸರ್ವ ಧರ್ಮಗಳ ಭಾವೈಕತೆಯ ಸಾರುವ ಸದ್ಗುರು ಶ್ರೀಶಿವಯೋಗಿ ಹಾಲಸ್ವಾಮಿಗಳವರ ಜಾತ್ರಾ ಮಹೋತ್ಸವ. ಪಟ್ಟಣದ ವಾಲ್ಮೀಕಿ ನಗರದ ಸದ್ಗುರು ಶಿವಯೋಗಿ ಹಾಲಸ್ವಾಮಿಗಳವರ ಜಾತ್ರಾ ಮಹೋತ್ಸವವು ಸೋಮವಾರದಿಂದ ಮೂರು ದಿನಗಳ ಕಾಲ ಅತ್ಯಂತ ಸಡಗರ ಸಂಭ್ರಮದಿಂದ ನೆರವೇರಲಿದೆ ಎಂದು ಶ್ರೀ ಸಣ್ಣ ಹಾಲಸ್ವಾಮಿಗಳು ತಿಳಿಸಿದರು ದಿವ್ಯ ಸಾನ್ನಿಧ್ಯ ಷಬ್ರಶ್ರೀ ವರಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮಿಗಳು ತೆಗ್ಗಿನ ಮಠ ಸಂಸ್ಥಾನ ಹರಪನಹಳ್ಳಿ ಶ್ರೀಸದ್ಗುರು ಶಿವಯೋಗಿ ಶಿವಕುಮಾರ ಹಾಲಸ್ವಾಮಿಗಳವರು ಹಾಲಸ್ವಾಮಿ ಸಂಸ್ಥಾನಮಠ ಸುಕ್ಷೇತ್ರ ರಾಂಪುರ ವಹಿಸಿಲಿದ್ದಾರೆ. ಅ.14 ರಂದು ರಾತ್ರಿ 11 ಗಂಟೆಗೆ ಮುಳ್ಳು ಗದ್ದಿಗೆ ಉತ್ಸವ 15ರಂದು ಸಂಜೆ 5 ಗಂಟೆಗೆ ರಥೋತ್ಸವ ಜರುಗಲಿದ್ದು 16 ರ ಬುದುವಾರ ಸಂಜೆ 5 ಗಂಟೆಗೆ ಅಡ್ಡ ಪಲ್ಲಕ್ಕಿ ಉತ್ಸವ ನಡೆಯುತ್ತದೆ. ಹಾಗಾಗಿ ಸದ್ಭಕ್ತರು ಸಮಸ್ತ ಮೂರು ಕೇರಿಯ ದೈವಸ್ತರು ಸಮ್ಮುಖದಲ್ಲಿ ನೇರವೇರಲಿದೆ ಎಂದರು. ಸಂದರ್ಭದಲ್ಲಿ ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ ಉಚ್ಚೆಂಗೆಪ್ಪ ವಾಲ್ಮೀಕಿ ನಾಯಕ ಸಮಾಜದ ಉಪ ಅಧ್ಯಕ್ಷ ಸುರೇಶ್ ಮಂಡಕ್ಕಿ ಟಿ.ತಿರುಪತಿ ಪಟ್ನಮದ ಹಾಲ ಸಿದ್ದಪ್ಪ ನಿಟ್ಟೂರು ದೊಡ್ಡ ಹಾಲಪ್ಪ ರಾಯ ದುರ್ಗದ ದುರುಗಪ್ಪ ಕೆ ತಿಮ್ಮಪ್ಪ ರಾಜಪ್ಪ ಡಿ ಪರುಸಪ್ಪ ಗೋಕರ್ಣ.ಸಿ .ಚಂದ್ರು ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿವಿಧ ಯೋಜನೆಗಳ ಸೌಲಭ್ಯಕ್ಕಾಗಿ ಅರ್ಜಿ

ಹೊಸಪೇಟೆ: ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ 2024-25ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಅಕ್ಟೋಬರ್ 30 ಕೊನೆಯ ದಿನಾಂಕ ಆಗಿರುತ್ತದೆ. ಚರ್ಮ ಕುಶಲಕರ್ಮಿ ಕುಟುಂಬಗಳ ತರಬೇತಿ ಪಡೆಯಲು ಅಧ್ಯಯನ ಪ್ರವಾಸ, ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಕೌಶಲ್ಯಾಭಿವೃದ್ಧಿ ಯೋಜನೆಯಡಿ ಮೂರು ವರ್ಷಗಳ ಡಿಪ್ಲಮೋ ಇನ್ ಲೆದರ್ ಅಂಡ್ ಫ್ಯಾಷನ್ ಟೆಕ್ನಾಲಜಿ ಸ್ವಾವಲಂಭಿ ಸಂಚಾರಿ ಮಾರಾಟ ಮಳಿಗೆ, ನೇರ ಸಾಲ, ಚರ್ಮ ಶಿಲ್ಪಿ, ಮಹಿಳಾ ಕುಶಲಕರ್ಮಿಗಳಿಗೆ ಕಾಯಕ ಸ್ಪೂರ್ತಿ, ಪಾದುಕೆ ಕುಟೀರ, ಮಾರುಕಟ್ಟೆ ಸಹಾಯಧನ, ಡಾ.ಬಾಬು ಜಗಜೀವನರಾಂ ಚರ್ಮಕಾರರ ವಸತಿ ಯೋಜನೆಗಳಿಗೆ ಅರ್ಜಿ ಸಲ್ಲಿಸಬಹುದು. ಅರ್ಜಿಯನ್ನು ನಿಗಮದ ವೆಬ್‌ಸೈಟ್ https://suvidha.karnataka.gov.inನಲ್ಲಿ ಅರ್ಜಿ ಸಲ್ಲಿಸಿ ಸಲ್ಲಿಸಿದ ಅರ್ಜಿಯ ಪ್ರತಿಯನ್ನು ಜಿಲ್ಲಾ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08392-271741ಗೆ ಸಂಪರ್ಕಿಸಬಹುದು ಎಂದು ಲಿಡಕರ್‌ನ ಜಿಲ್ಲಾ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಲಾಖಾ ಪ್ರಗತಿ ಪರಿಶೀಲನಾ ಸಭೆ

ಹೊಸಪೇಟೆ: ಅಧಿಕಾರಿಗಳು ಸಾಮಾಜಿಕ ಕಾಳಜಿ ಹೊಂದಿ ಕಾರ್ಯನಿರ್ವಹಿಸಬೇಕು. ಆಯಾ ಇಲಾಖೆಗಳ ಯೋಜನೆಗಳ ಅನುಷ್ಠಾನಕ್ಕಾಗಿ ಬದ್ಧತೆಯಿಂದ ಕಾರ್ಯನಿರ್ವಹಿಸಬೇಕು ಎಂದು ವಸತಿ ಇಲಾಖೆಯ ಸರಕಾರದ ಪ್ರಧಾನ ಕಾರ್ಯದರ್ಶಿಗಳು ಆಗಿರುವ ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು. ಪಡಿತರ ವಿತರಣಾ ವ್ಯವಸ್ಥೆಯ ಬಗ್ಗೆ ಕೇಳಿ, ಪಡಿತರ ಆಹಾರ ಧಾನ್ಯಗಳು ಕಾಳಸಂತೆಯಲ್ಲಿ ಮಾರಾಟವಾಗದಂತೆ ನಿಗಾ ವಹಿಸಬೇಕು ಎಂದು ಆಹಾರ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಮಾತನಾಡಿ, ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು. ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳು ದೊರೆಯುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

{ಡಾ.ಜಿ.ಪರಮೇಶ್ವರ್} ಗೃಹ ಸಚಿವ

ಹುಬ್ಬಳ್ಳಿ ಗಲಭೆ ಪ್ರಕರಣದಲ್ಲಿ 43 ಕೇಸ್ ವಾಪಸ್ ಮಾಡುತ್ತಿದ್ದೇವೆ. ಇದರಲ್ಲಿ ಕೇವಲ ಅಲ್ಪಸಂಖ್ಯಾತರಷ್ಟೇ ಇಲ್ಲ, ವಿದ್ಯಾರ್ಥಿಗಳು, ರೈತರೂ ಇದ್ದಾರೆ ಕಣ್ಮುಚ್ಚಿಕೊಂಡು ಯಾವುದೇ ಕೇಸ್ ವಾಪಸ್ ಪಡೆಯಲ್ಲ. ನಿಯಮಾನುಸಾರ ವಾಪಸ್ ಪಡೆಯುತ್ತೇವೆ.

ಸಾಧನಾ ಸಮಾವೇಶ | ಸರ್ವರಿಗೂ ಸಮಬಾಳು, ಸಮಪಾಲು ತತ್ವ ನಮ್ಮದು: ಡಿಸಿಎಂ ಶಿವಕುಮಾರ್

ಸಂಡೂರು ಕ್ಷೇತ್ರಕ್ಕೆ 1200 ಕೋಟಿ ರು.ಅನುದಾನ

ಸಂಡೂರು: ಕ್ಷೇತ್ರದ ಜನ ಸದಾ ನಮಗೆ ಆಶೀರ್ವಾದ ಮಾಡಿಕೊಂಡು ಬಂದಿದ್ದೀರಿ. ಹೀಗಾಗಿ ಸಿಎಂ ಸಿದ್ದರಾಮಯ್ಯ ಅವರು ಕಳೆದ ಒಂದೂವರೆ ವರ್ಷದಲ್ಲಿ 1200 ಕೋಟಿ ಅನುದಾನವನ್ನು ಈ ಕ್ಷೇತ್ರಕ್ಕೆ ನೀಡಿದ್ದಾರೆ. ಆಮೂಲಕ ಸಂಡೂರಿನ ಬಡ ಜನರ ಬದುಕಿನಲ್ಲಿ ಬದಲಾವಣೆ ತರಲು ಮುಂದಾಗಿದ್ದೇವೆ. ಅದರ ಭಾಗವಾಗಿ ಹಲವು ಯೋಜನೆಗಳ ಶಂಕುಸ್ಥಾಪನೆ ಮಾಡಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಸಾಧನಾ ಸಮಾವೇಶದಲ್ಲಿ ಮಾತನಾಡಿ, 200 ಹಾಸಿಗೆಗಳ ಆಸ್ಪತ್ರೆ ಸೇರಿದಂತೆ ಇಲ್ಲಿರುವ ವಸತಿ ಯೋಜನೆ ಹಾಗೂ ಇತರೆ ಅಭಿವೃದ್ಧಿ ಕಾರ್ಯಕ್ರಮಗಳು ಕನಕಪುರದಲ್ಲಿಯೂ ಆಗಿಲ್ಲ. ಬದಲಿಗೆ ಸಂಡೂರಿನಲ್ಲಿ ಆಗಿವೆ ಎಂದು ಹೇಳಿದರು.

ಕಳೆದ ಒಂದೂವರೆ ವರ್ಷದಲ್ಲಿ ನಾನು ಕನಕಪುರಕ್ಕೆ ತೆಗೆದುಕೊಂಡು ಹೋಗಿರುವುದಕ್ಕಿಂತ ಹೆಚ್ಚಿನ ಅನುದಾನವನ್ನು ತುಕಾರಾಂ ಅವರು ಸಂಡೂರಿಗೆ ತಂದಿದ್ದಾರೆ. ಆಮೂಲಕ ಅವರು ನಿಮ್ಮ ಋಣ ತೀರಿಸುತ್ತಿದ್ದಾರೆ. 30 ಕೋಟಿ ವೆಚ್ಚದಲ್ಲಿ ಆಡಳಿತ ಸೌಧ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ನಮ್ಮ ಸರಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ನುಡಿದಂತೆ ನಡೆದು, ಕೊಟ್ಟ ಮಾತು ಉಳಿಸಿಕೊಂಡಿದೆ. ಈ ತಾಲೂಕಿನಲ್ಲಿ ಕೇವಲ 1,200 ಮನೆಗಳು ಮಾತ್ರ ವಿದ್ಯುತ್ ಬಿಲ್ ಕಟ್ಟುತ್ತಿದ್ದಾರೆ. ಉಳಿದ ಎಲ್ಲಾ ಮನೆಗಳಿಗೆ ಗೃಹಜ್ಯೋತಿ ಯೋಜನೆ ಮೂಲಕ 200 ಯೂನಿಟ್ ವರೆಗೂ ಉಚಿತ ವಿದ್ಯುತ್ ಪೂರೈಸಲಾಗುತ್ತಿದೆ. ಇನ್ನು ಶಕ್ತಿ ಯೋಜನೆ ಮೂಲಕ ರಾಜ್ಯದ ಮಹಿಳೆಯರು ಉಚಿತ ಬಸ್ ಪ್ರಯಾಣ ಮಾಡುತ್ತಿದ್ದಾರೆ. ಇನ್ನು ಗೃಹಲಕ್ಷ್ಮಿ ಯೋಜನೆ ಮೂಲಕ 1.21 ಕೋಟಿ ಮಹಿಳೆಯರಿಗೆ 2 ಸಾವಿರ ಹಣ ನೀಡಲಾಗುತ್ತಿದೆ. ಒಂದೆರಡು ತಿಂಗಳು ಹೆಚ್ಚು ಕಮ್ಮಿಯಾದರೂ ಕಳೆದ ಒಂದುವರೆ ವರ್ಷದಿಂದ ನೀಡಲಾಗುತ್ತಿದೆ. ಇಂತಹ ಯಾವುದಾದರೂ ಒಂದು ಕಾರ್ಯಕ್ರಮವನ್ನು ಬಿಜೆಪಿಯ ಯಡಿಯೂರಪ್ಪ, ಬೊಮ್ಮಾಯಿ ಅವರು ನೀಡಿದ್ದಾರೆ. ಈ ಎಲ್ಲಾ ಕಾರ್ಯಕ್ರಮವನ್ನು ನಮ್ಮ ನಾಯಕರಾದ ಸಿದ್ದರಾಮಯ್ಯ ಅವರು ನೀಡಿದ್ದಾರೆ ಎಂದು ಹೇಳಿದರು.

ಉಪಚುನಾವಣೆಯಲ್ಲಿ ಯಾರೇ ಅಭ್ಯರ್ಥಿಯಾದರೂ ಸಿದ್ದರಾಮಯ್ಯ, ತುಕಾರಾಂ ಅವರ ಕೈ ಬಲಪಡಿಸುತ್ತೀರಿ ಎಂಬ ಆತ್ಮವಿಶ್ವಾಸ ನಮಗಿದೆ. ನೀವು ಸರಳ, ಸಜ್ಜನ, ಅಭಿವೃದ್ಧಿಗೆ ಹೆಸರಾದ ನನ್ನ ಸಹೋದರನನ್ನು ವಿಧಾನಸಭೆಗೂ ಕಳಿಸಿದ್ದೀರಿ, ಮಂತ್ರಿ ಮಾಡಿದ್ದೀರಿ, ಈಗ ಲೋಕಸಭೆಗೆ ಕಳುಹಿಸಿದ್ದೀರಿ. ಮುಂದೆ ಅವರೇ ಈ ಕ್ಷೇತ್ರದ ಜವಾಬ್ದಾರಿ ತೆಗೆದುಕೊಂಡು ಮುಂದಿನ ಕೆಲಸ ಮಾಡಲಿದ್ದಾರೆ. ಸರ್ಕಾರದ ವಿವಿಧ ಕಾರ್ಯಕ್ರಮವನ್ನು ಅಖಂಡ ಬಳ್ಳಾರಿಗೆ ತಲುಪಿಸಿ ಶಕ್ತಿ ತುಂಬುತ್ತಿದ್ದಾರೆ. ಎಲ್ಲಾ ಕ್ಷೇತ್ರದಲ್ಲೂ ಅವರು ನಗುತ್ತಾ ಒಡನಾಟ ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಬಳ್ಳಾರಿಯಲ್ಲಿ ಆಗುತ್ತಿದ್ದ ಲೂಟಿಯನ್ನು ತಡೆಯಲು ನಾವು ಪಾದಯಾತ್ರೆ ಮಾಡಿದ್ದೆವು. ಈಗ ನೀವು ಶಾಂತಿಯಿಂದ ಬದುಕುತ್ತಿದ್ದೀರಿ. ಈಗ ಮತ್ತೆ ಕೆಲವರು ಪ್ರಯತ್ನ ಪಡುತ್ತಿದ್ದಾರೆ ಎಂಬ ವಿಚಾರ ತಿಳಿಯಿತು. ಯಾರೇ ಬರಲಿ, ನಾನು ಸಿದ್ದರಾಮಯ್ಯ ಹಾಗೂ ಸಚಿವರು ನಿಮ್ಮ ಜತೆ ನಿಂತು, ನಿಮಗೆ ಶಕ್ತಿಯಾಗಿ ನಿಮ್ಮ ಋಣ ತೀರಿಸುತ್ತೇವೆ. ಮುಂದಿನ ದಿನಗಳಲ್ಲಿ ಇನ್ನು ಹತ್ತು ಹಲವು ಕಾರ್ಯಕ್ರಮ ರೂಪಿಸುತ್ತೇವೆ ಎಂದು ಹೇಳಿದರು.

ಸಾಧನಾ ಸಮಾವೇಶದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಮಾತನಾಡಿದರು.

> ಮಹಾತ್ಮಾ ಗಾಂಧಿಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಬೆಳಗಾವಿ ಅಧಿವೇಶನಕ್ಕೆ ನೂರು ವರ್ಷಗಳು ಪೂರೈಸಲಾಗಿದೆ. ಗಾಂಧಿಜಿ ಅವರು ಸಂಡೂರಿಗೂ ಆಗಮಿಸಿ ದಕ್ಷಿಣದ ಕಾಶ್ಮೀರ ಎಂದು ಹೇಳಿದ್ದರು. ನಾವು ಉಪಚುನಾವಣೆಗಾಗಿ ಬಂದಿಲ್ಲ. ನಮಗೆ ನಿಮ್ಮ ಮೇಲೆ ವಿಶ್ವಾಸವಿದೆ. ನಿಮ್ಮ ಜತೆ ನಾವಿದ್ದೇವೆ ಎಂದು ಹೇಳಲು ಬಂದಿದ್ದೇವೆ.
> -ಡಿ.ಕೆ. ಶಿವಕುಮಾರ್, ಡಿಸಿಎಂ

ಮಾನಸಿಕ ಒತ್ತಡಕ್ಕೆ ಯೋಗ, ಧ್ಯಾನ ಸಹಕಾರಿ

ಬಳ್ಳಾರಿ: ಕೆಲಸ ಮಾಡುವ ಸ್ಥಳದಲ್ಲಿ ಮಾನಸಿಕ ಆರೋಗ್ಯ ಕಾಪಾಡಲು ಯೋಗ, ಧ್ಯಾನ, ಪ್ರಾಣಾಯಾಮದಂತಹ ಮುಂತಾದ ಚಟುವಟಿಕೆಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯರು ಹಾಗೂ ಜಿಲ್ಲಾ ಹಿರಿಯ ಸಿವಿಲ್ ನ್ಯಾಯಾಧೀಶ ರಾಜೇಶ್ ಎನ್.ಹೊಸಮನೆ ಹೇಳಿದರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಅಂಬೇಡ್ಕರ್ ಸಭಾಭವನದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗ ಹಾಗೂ ವಿವಿಯ ಎನ್‌ಎಸ್‌ಎಸ್ ಘಟಕದ ಜಂಟಿ ಸಹಭಾಗಿತ್ವದಲ್ಲಿ ಆಯೋಜಿಸಿದ್ದ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸೇವಾನಿರತ ಸಿಬ್ಬಂದಿ ಜತೆಗೆ ಮಕ್ಕಳಲ್ಲಿ ಮಾನಸಿಕ ಒತ್ತಡ ಹೆಚ್ಚುತ್ತಿದೆ. ಇವುಗಳನ್ನು ತಡೆಗಟ್ಟಲು ಎಲ್ಲರೂ ಮುಕ್ತ ಚರ್ಚೆ ಮಾಡಬೇಕು ಎಂದರು. ಜಿಲ್ಲಾ ಮನೋರೋಗ ತಜ್ಞ ಡಾ. ರೋಹನ್ ವನಗುಂದಿ ಮಾತನಾಡಿ, ವಾರಕ್ಕೊಂದು ದಿನ ಮೊಬೈಲ್ ಬಳಕೆ ನಿಲ್ಲಿಸಿದಲ್ಲಿ ಮಾನಸಿಕ ಆರೋಗ್ಯ ಸುಧಾರಣೆಯಾಗುತ್ತದೆ ಎಂದು ತಿಳಿಸಿದರು. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿ ಡಾ.ವೀರೇಂದ್ರ ಕುಮಾರ್ ಮಾತನಾಡಿ, 25-30 ಪ್ರತಿಶತ ಜನ ದೇಶದಲ್ಲಿ ಮಾನಸಿಕ ಖಾಯಿಲೆಯಿಂದ ಬಳಲುತ್ತಿದ್ದಾರೆ. 15-25 ವಯೋಮಾನದವರಲ್ಲೇ ಈ ವ್ಯಾಧಿ ಹೆಚ್ಚು. ಇದರಿಂದ ಆತ್ಮಹತ್ಯೆ ಪ್ರಕರಣಗಳು ಹೆಚ್ಚುತ್ತಿವೆ. ಇದನ್ನು ತಡೆಗಟ್ಟಲು ಟೆಲಿ ಸಹಾಯವಾಣಿ 14416 ಪ್ರಾರಂಭಿಸಿದೆ. ಸಹಾಯವಾಣಿಯು 24 ಗಂಟೆ ಕಾರ್ಯ ನಿರ್ವಹಿಸುತ್ತದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಮಾತನಾಡಿ, ಮಾನಸಿಕ ಆರೋಗ್ಯ ಕಾಪಾಡುವಲ್ಲಿ ದೇಶದಲ್ಲಿಯೇ ಪ್ರಥಮ ಸ್ಥಾನ ಪಡೆದ ಜಿಲ್ಲೆಯಾಗಿ ಬಳ್ಳಾರಿ ಹೊರಹೊಮ್ಮಿದೆ.

ಕಾರ್ಯಕ್ರಮದಲ್ಲಿ ವಿವಿಯ ಕುಲಸಚಿವ ರುದ್ರೇಶ್.ಎಸ್.ಎನ್, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ. ಪೂರ್ಣಿಮಾ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮರಿಯಂಬಿ.ವಿ.ಕೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಇಂದ್ರಾಣಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ್ ದಾಸಪ್ಪನವರ್, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಡಾ.ಕುಮಾರ್ ಸೇರಿದಂತೆ ವಿಶ್ವವಿದ್ಯಾಲಯದ ಬೋಧಕ-ಬೋಧಕೇತರ ಸಿಬ್ಬಂದಿ, ಆರೋಗ್ಯ ಇಲಾಖೆ ಸಿಬ್ಬಂದಿ, ವಿವಿಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಸಿವಿಲ್ ನ್ಯಾಯಾಧೀಶ ರಾಜೇಶ್ ಎನ್. ಹೊಸಮನೆ ಉದ್ಘಾಟಿಸಿದರು.

> ಮಾನವನು ದೈಹಿಕ ಆರೋಗ್ಯಕ್ಕೆ ನೀಡಿದಷ್ಟು ಪ್ರಾತಿನಿಧ್ಯತೆ ಮಾನಸಿಕ ಆರೋಗ್ಯಕ್ಕೆ ನೀಡುತ್ತಿಲ್ಲ. ಎಲ್ಲರ ಜೀವನವು ಸದಾ ಏರಿಳಿತಗಳಿಂದ ಕೂಡಿರುತ್ತದೆ. ಕೆಲಸದ ಸ್ಥಳ ಮತ್ತು ಕೌಟುಂಬಿಕ ಒಡನಾಟದಲ್ಲಿ ಸ್ಮಾರ್ಟ್‌ಫೋನ್‌ಗಳು ಸದ್ದಿಲ್ಲದೆ ಮನುಷ್ಯರ ಮೇಲೆ ಒತ್ತಡ ಹೆಚ್ಚಿಸುತ್ತಿವೆ.
> -ಡಾ.ರೋಹನ್ ವನಗುಂದಿ, ಜಿಲ್ಲಾ ಮನೋರೋಗ ತಜ್ಞ

ಅಂಬೇಡ್ಕರ್ ದೀಕ್ಷಾಭೂಮಿ ಯಾತ್ರೆಗೆ ಚಾಲನೆ

ನಾಗಪುರ ದೀಕ್ಷಾಭೂಮಿ ಯಾತ್ರೆ, ಅನುಯಾಯಿಗಳು ತೆರಳುವ ಬಸ್‌ಗಳಿಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಚಾಲನೆ ನೀಡಿದರು.

ಬಳ್ಳಾರಿ: ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರು ಬೌದ್ಧಧರ್ಮದ ದೀಕ್ಷೆ ಪಡೆದ ಸ್ಥಳವಾದ ಮಹಾರಾಷ್ಟ್ರದ ನಾಗಪುರ ದೀಕ್ಷಾಭೂಮಿ ಯಾತ್ರೆಗೆ ಅನುಯಾಯಿಗಳು ತೆರಳುವ ಬಸ್‌ಗಳಿಗೆ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಗುರುವಾರದಂದು ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್ ಚಾಲನೆ ನೀಡಿ, ಶುಭ ಹಾರೈಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಅನುಯಾಯಿಗಳಿಗೆ ಮಹಾರಾಷ್ಟ್ರ ನಾಗಪುರದ ದೀಕ್ಷಾ ಭೂಮಿ ಯಾತ್ರೆಗೆ ತೆರಳಲು ವ್ಯವಸ್ಥೆ ಮಾಡಲಾಗಿತ್ತು.

ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಬಿ.ಮಲ್ಲಿಕಾರ್ಜುನ ಮಾತನಾಡಿ, ಡಾ.ಅಂಬೇಡ್ಕರ್ ಅವರ ಅನುಯಾಯಿಗಳು ಪ್ರತಿ ವರ್ಷವೂ ಅಕ್ಟೋಬರ್ ತಿಂಗಳಿನಲ್ಲಿ ನಾಗಪುರದಲ್ಲಿ ನಡೆಯುವ ಪ್ರವರ್ತನಾ ದಿನ ಕಾರ್ಯಕ್ರಮಕ್ಕೆ ದೀಕ್ಷಾಯಾತ್ರೆ ಕೈಗೊಳ್ಳುವುದು ವಾಡಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬಾಬಾ ಸಾಹೇಬರ ಅನುಯಾಯಿಗಳನ್ನು ಪ್ರತಿ ವರ್ಷವೂ ದೀಕ್ಷಾಯಾತ್ರೆಗೆ ಕಳುಹಿಸಲಾಗುತ್ತಿದ್ದು, ಈ ವರ್ಷ ಜಿಲ್ಲೆಯ ವಿವಿಧ ತಾಲೂಕುಗಳಿಂದ 180 ಅನುಯಾಯಿಗಳನ್ನು ನಾಗಪುರ ದೀಕ್ಷಾಯಾತ್ರೆಗೆ ಕಳುಹಿಸುತ್ತಿರುವುದಾಗಿ ಅವರು ತಿಳಿಸಿದರು.

ಈ ವೇಳೆ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಪ್ರಥಮ ದರ್ಜೆ ಸಹಾಯಕ ಶಿವಪ್ಪ ಸೇರಿದಂತೆ ಇತರೆ ಅಧಿಕಾರಿಗಳು, ಸಿಬ್ಬಂದಿ ವರ್ಗದವರು, ಸಮಾಜದ ಮುಖಂಡರು ಇದ್ದರು.

ವಿಜಯನಗರ ಕಾಲದ ಅಪರೂಪದ ಮಾಸ್ತಿಕಲ್ಲು ಪತ್ತೆ

ಹೊಸಪೇಟೆ: ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಮುದ್ದಾಪುರದ ಮುದ್ದಾಪುರ ಆಂಜನೇಯ ದೇಗುಲದ ಸಮೀಪದ ಮಾರ್ಗ ಮದ್ಯೆದಲ್ಲಿ ಅಪರೂಪದ ಮಾಸ್ತಿಗಲ್ಲು ಮತ್ತು ಅಪೂರ್ಣವಾದ ಶಾಸನ ಕಲ್ಲನ್ನು ವಿಜಯನಗರ ತಿರುಗಾಟ ಸಂಶೋಧನ ತಂಡವು ಪತ್ತೆ ಮಾಡಿದೆ.

ಈ ಮಾಸ್ತಿಕಲ್ಲನ್ನು ಚಿದಾನಂದ ಅವರ ಸಹಕಾರದಿಂದ ಕನ್ನಡ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ಗೋವಿಂದ, ದೃಶ್ಯಕಲಾ ವಿಭಾಗದ ಡಾ. ಕೃಷ್ಣೆಗೌಡ, ಅಭಿವೃದ್ಧಿ ಅಧ್ಯಯನ ವಿಭಾಗದ ಡಾ. ಗೋವರ್ಧನ, ವಿಜಯಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪ್ರಾಧ್ಯಾಪಕ ಡಾ.ಎಚ್. ತಿಪ್ಪೇಸ್ವಾಮಿ, ಸಂಶೋಧಕ ಡಾ. ವೀರಾಂಜನೇಯ, ಎಚ್.ರವಿ ಶೋಧಿಸಿದ್ದಾರೆ.

ಮಾಸ್ತಿಕಲ್ಲುಗಳು ಬಹುತೇಕವಾಗಿ ಮಹಿಳೆಯೊಬ್ಬರು ಕೈಯಲ್ಲಿ ನಿಂಬೆಹಣ್ಣು ಹಿಡಿದಿರುವ, ಇಲ್ಲವೇ ಕೈಯನ್ನು ಮೇಲೆ ಎತ್ತಿರುವ ಚಿತ್ರಣ ಕಂಡುಬರುವುದು ಸಹಜ. ಆದರೆ ಈ ಮಾಸ್ತಿಕಲ್ಲು ತುಂಬಾ ಅಪರೂಪ ಹಾಗೂ ವಿಶೇಷವಾಗಿದೆ. ಶೈವಧರ್ಮದ ಪ್ರತೀಕವಾದ ಈ ಮಾಸ್ತಿಕಲ್ಲು ಎರಡು ಹಂತದಲ್ಲಿ ಕೆತ್ತಲಾಗಿದೆ. ರಾಜ ಪರಿವಾರ, ರಾಜನ ಇಲ್ಲವೇ ಪಾಳೆಯಗಾರನ ಪತ್ನಿ ಅಥವಾ ಉಪಪತ್ನಿಯು ಸತಿ ಹೋಗಿರಬೇಕೆಂದು ತಿಳಿಬರುತ್ತದೆ. ಏಕೆಂದರೆ ಚಿತ್ರದಲ್ಲಿ ಕೆತ್ತಿರುವ ಮಹಿಳೆಯು ನಿಂತಿರುವ ಭಂಗಿಯಲ್ಲಿರುವುದು ತುಂಬಾ ವಿಶೇಷವಾಗಿದೆ ಎಂದು ತಂಡದ ಸದಸ್ಯ ಡಾ.ಗೋವಿಂದ ತಿಳಿಸಿದ್ದಾರೆ.

ಮುದ್ದಾಲಾಪುರವು ಪುರಗಳ ಸಾಲಿನಲ್ಲಿ ಸೇರುತ್ತದೆ. ಇಲ್ಲಿ ದೊರಕಿರುವ ಈ ಮಾಸ್ತಿಕಲ್ಲು 5 ಅಡಿ ಎತ್ತರ, 2 ಅಡಿ ಅಗಲವಾಗಿದೆ. ಈಗಾಗಲೇ ಅಲ್ಲಲ್ಲಿ ದೊರಕಿರುವ ಶಾಸನಗಳಿಗಿಂತ ತುಂಬಾ ವಿಶೇಷವಾಗಿದೆ. ಸತಿ ಸಹಗಮನವಾದ ಮಹಿಳೆಯು ಸಹಗಮನ ಆಗಿರುವುದನ್ನು ಸೂಚಿಸುತ್ತದೆ. ಬಹುತೇಕ ಶಾಸನಗಳಲ್ಲಿ ಸತಿಹೋದ ಇಲ್ಲವೇ ವೀರಗಲ್ಲುಗಳಲ್ಲಿ ಆಯಾ ಧರ್ಮದ ಮೂರ್ತಿ ಎದುರಿಗೆ ಕೈ ಮುಗಿದು ಕುಳಿತಿರುವ ಚಿತ್ರಣ ಕಂಡುಬರುತ್ತಿತ್ತು. ಆದರೆ ಇಲ್ಲಿ ಮೇಲ್ಭಾಗದಲ್ಲಿ ಶಿವನಲಿಂಗಾಕಾರದ ಚಿತ್ರವಿದೆ. ಇದರಿಂದ ಈ ಮಾಸ್ತಿಕಲ್ಲು ಶೈವ ಧರ್ಮವನ್ನು ಪ್ರತಿನಿಧಿಸುತ್ತದೆ ಎಂದು ತಂಡದ ಮತ್ತೋರ್ವ ಸದಸ್ಯ ಪ್ರೊ.ಎಚ್.ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ಅಪೂರ್ಣ ಶಾಸನ ಕಲ್ಲು ಪತ್ತೆ: ಇದೇ ವೇಳೆ ಈ ಮಾಸ್ತಿಕಲ್ಲಿನ ಅನತಿ ದೂರದಲ್ಲಿಯೇ ಬೃಹದಾಕಾರದ ಅಪೂರ್ಣ ಶಿವಲಿಂಗ ಚಿತ್ರವುಳ್ಳ ಶಾಸನ ಕಲ್ಲು ಪತ್ತೆಯಾಯಿತು. 6 ಅಡಿ ಎತ್ತರ ಮತ್ತು 2 ಅಡಿ ಅಗಲವುಳ್ಳ ಶಾಸನಕಲ್ಲಿಗೆ ಯಾವುದೇ ಕೆತ್ತನೆಯು ಕಾಣಸಿಗಲಾರದು. ಆದರೂ ಈ ಕಲ್ಲಿನ ಮೇಲ್ಭಾಗದ ಎಡಕ್ಕೆ ಸೂರ್ಯನ, ಬಲಕ್ಕೆ ಚಂದ್ರನ ಚಿತ್ರವಿದೆ. ಇದರ ಕೆಳಗೆ ಸುಂದರವಾದ ಶಿವಲಿಂಗ ಚಿತ್ರವನ್ನು ಕೆತ್ತಲಾಗಿದೆ.

ಇಂತಹ ಅಪರೂಪದ ಕಲ್ಲುಗಳನ್ನು ಜಿಲ್ಲಾಡಳಿತ ಹಾಗೂ ಸಂಬಂದಿಸಿದ ಇಲಾಖೆಯು ಸಂರಕ್ಷಣೆ ಮಾಡಬೇಕಾಗಿದೆ ಎಂದು ವಿಜಯನಗರ ತಿರುಗಾಟ ಸಂಶೋಧನ ತಂಡವು ಒತ್ತಾಯಿಸುತ್ತದೆ.

ವಿಜಯನಗರ ಸಾಮ್ರಾಜ್ಯದ ಅಪರೂಪದ ಮಾಸ್ತಿಗಲ್ಲು ಮತ್ತು ಅಪೂರ್ಣವಾದ ಶಾಸನ ಕಲ್ಲುಗಳು ಪತ್ತೆಯಾಗಿರುವುದು.

ಪುರಗಳ ನಾಮಕರಣ

ವಿಜಯನಗರ ಸಾಮ್ರಾಜ್ಯದಲ್ಲಿ ಹೊಸಪೇಟೆಯ ಸಣ್ಣಕ್ಕಿ ವೀರಭದ್ರೇಶ್ವರ ಏರಿಯಾವನ್ನು ವರದರಾಜಮ್ಮನ ಪಟ್ಟಣ ಎಂದು ಕರೆಯುತ್ತಿದ್ದರು. ಚಿನ್ನಾಂಬಿಕೆಯ ನೆನಪಿಗಾಗಿ ಇಂದಿನ ಚಿತ್ತವಾಡಿಗಿಯನ್ನು ಚಿನ್ನಾಪುರ ಎಂತಲೂ, ಕೃಷ್ಣದೇವರಾಯನ ತಾಯಿ ನಾಗಲಾದೇವಿ ನೆನಪಿಗಾಗಿ ಈಗಿನ ನಾಗೇನಹಳ್ಳಿಯನ್ನು ನಾಗಲಾಪುರ ಎಂತಲೂ ಈಗ ದೊರಕಿರುವ ಶಾಸನಗಳಿಂದ ತಿಳಿದುಬರುತ್ತದೆ. ಈಗ ದೊರಕಿರುವ ಅಪ್ರಕಟಿತ ಶಾಸನವು ಸಹ ಮದ್ದಲಾಪುರ ಏರಿಯಾದಲ್ಲಿ ದೊರೆತಿರುವ ಶಾಸನವಾಗಿದೆ.

ರಾವಣ ದಹನ, ದಸರಾ ಆಚರಣೆ

ಬಳ್ಳಾರಿ: ಗಣಿ ನಾಡು ಬಳ್ಳಾರಿಯಲ್ಲಿ ದಶ ಮುಖ ರಾವಣನ ದಹನ ಮಾಡುವ ಮೂಲಕ ದಸರಾ ಹಬ್ಬದ ಆಚರಣೆ ಸಡಗರ ಸಂಭ್ರಮದಿಂದ ನಡೆಯಿತು. ಸ್ಥಳೀಯ ದುರ್ಗಮ್ಮ ದೇವಸ್ಥಾನದ ಆವರಣದಲ್ಲಿ ದೇವಸ್ಥಾನದ ಆಡಳಿತ ಮಂಡಳಿಯಿಂದ ಇದನ್ನು ಆಯೋಜಿಸಿತ್ತು. ದುರ್ಗಮ್ಮನ ಪಲ್ಲಕ್ಕಿ ಉತ್ಸವ ದೇವಸ್ಥಾನವನ್ನು ಮೂರು ಸುತ್ತು ಸುತ್ತಿ ಹೊರ ನಡೆದ ನಂರತ. ದಶ ದುಷ್ಟ ಶಕ್ತಿಗಳನ್ನು ಹೊಂದಿದ ದಶ ಮುಖ ರಾವಣ ದಹನ ಕಾರ್ಯಕ್ಕೆ ನಗರದ ಶಾಸಕ ಭರತ್ ರೆಡ್ಡಿ ಚಾಲನೆ ನೀಡಿದರು. 15 ಅಡಿ ಎತ್ತರದ ರಾವಣನ ಪ್ರತಿಕೃತಿಯನ್ನು ವಿವಿಧ ಚಿತ್ತಾರದ ಪಟಾಕಿಗಳನ್ನು ಸಿಡಿಸುವ ಮೂಲಕ ಸುಡಲಾಯಿತು. ದಸರಾ ಎಂದರೆ ದಶ ಹರಾ ಎಂದು ಹತ್ತು ಅವಗುಳಗನ್ನು ಸುಡುವುದು ಅದಕ್ಕೆ ಪ್ರತೀಕವಾಗಿ ದಶಮುಖನ ದಹನ ಮಾಡಲಾಗುತ್ತದೆ. ಇದನ್ನು ನೋಡುವ ಮೂಲಕ ನಮ್ಮಲ್ಲಿನ ದುಷ್ಟಗುಣಗಳನ್ನು ಸುಟ್ಟು ಹಾಕಬೇಕೆಂಬ ಉದ್ದೇಶದಿಂದ ಮತ್ತು ಪ್ರತಿ ವರ್ಷವು ಒಂದೊಂದು ಉದ್ದೇಶವನ್ನಿಟ್ಟುಕೊಂಡು ರಾವಣ ದಹನ ಕಾರ್ಯಕ್ರಮವನ್ನು ಇಲ್ಲಿ ಮಾಡಲಾಗುತ್ತಿದೆಂದು ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಹನುಮಂತಪ್ಪ ಹೇಳಿದರು. ರಾವಣನ ಸಂಹಾರ ಮಾಡುವ ಮೂಲಕ ನವದುರ್ಗೆಯರಿಂದ ನಮಗೂ ರಾವಣನಂತಹ ದುಷ್ಟರನ್ನು ಸಂಹಾರ ಮಾಡುವ ಶಕ್ತಿ ಕೊಡಲಿ. ದೇಶದಲ್ಲಿ ರಾವಣನಂತಹ ಶಕ್ತಿಗಳು ದಹಿಸಲಿ ತಾಲೂಕು ಪಂಚಾಯಿತಿ ಮಾಜಿ ಸದಸ್ಯ ಕೊರ್ಲಗುಂದಿ ಪಿ ತಿಮ್ಮಾರೆಡ್ಡಿ ಮೊದಲಾದವರು ಈ ವೇಳೆ ಉಪಸ್ಥಿತರಿದ್ದರು.

ಬಳ್ಳಾರಿ: ನಗರದ ಕಲ್ಯಾಣ ಸ್ವಾಮಿ ಮಠದಲ್ಲಿ ದಸರಾ ನವರಾತ್ರಿ ಮಹೋತ್ಸವದ ಅಂಗವಾಗಿ ಜರುಗಿದ ದೇವಿ ಪುರಾಣದ ಸಮಾರೋಪ ಸಮಾರಂಭದಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ ಬಳ್ಳಾರಿ ಜಿಲ್ಲಾ ಅಧ್ಯಕ್ಷ ಟಿ.ಎಚ್.ಎಂ.ಬಸವರಾಜ ಅವರು 'ಸಮಾಜದಲ್ಲಿ ಮಠಗಳ ಪಾತ್ರ'ಎಂಬ ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು.

ರಿಫ್ಲೆಕ್ಟಿವ್ ಡೈರಿ ಕುರಿತ ಉಪನ್ಯಾಸ

ಬಳ್ಳಾರಿ: ಸೋನಿಯಾ ಗಾಂಧಿ ಶಿಕ್ಷಣ ಮಹಾವಿದ್ಯಾಲಯದಲ್ಲಿ 5 ಈ ಮಾದರಿ ಮತ್ತು ರಿಫ್ಲೆಕ್ಟಿವ್ ಡೈರಿಯ ಬಗ್ಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮವನ್ನು ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿಯಾದ ನವೀನಾ.ಎನ್ ಅವರ ನಿರೂಪಣೆಯಲ್ಲಿ ಕಿರಾತ್‌ನ್ನು ರುಕ್ಸರ್ ಬಾನು ನಡೆಸಿ ದ್ದಾರೆ. ಪ್ರಾರ್ಥನಾ ಗೀತೆಯನ್ನು ರಾಜೇಶ್ವರಿಯವರು ನಡೆಸಿ ಕೊಟ್ಟಿದ್ದಾರೆ. ಈ ಕಾರ್ಯಕ್ರಮಕ್ಕೆ ಆಗಮಿಸಿದಂತಹ ಮುಖ್ಯಸ್ಥರನ್ನು ವೇದಿಕೆಗೆ ಸ್ವಾಗತಿಸುವುದಕ್ಕೆ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿ ಸರಸ್ವತಿ ಎಚ್.ಎಂ ಸ್ವಾಗತ ಕೋರಿದ್ದರು. ನಂತರ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸೋನಿಯಾ ಗಾಂಧಿ ಶಿಕ್ಷಣ ಮಹಾವಿದ್ಯಾಲಯ ಬಳ್ಳಾರಿ ಸಂಸ್ಥೆಯ ಪ್ರಾಚಾರ್ಯ ಡಾ. ವೀರ ಭದ್ರಪ್ಪ. ಎಚ್ ಅವರು ಅಧ್ಯಕ್ಷೀಯ ಭಾಷಣ ನೆರವೇರಿಸಿದರು. ವಂದನಾರ್ಪಣೆ ಬಿಇಡಿ ದ್ವಿತೀಯ ವರ್ಷದ ಪ್ರಶಿಕ್ಷಣಾರ್ಥಿ ಸುಧಾ.ಎಂ ಅವರು ನೆರವೇರಿಸಿದರು. ರೆಫ್ಲೆಕ್ಟಿವ್ ಡೈರಿ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮದ ಮುಖ್ಯ ಉದ್ದೇಶ ವೇನೆಂದರೆ ಇದರ ಸದುಪಯೋಗವನ್ನು ಎಲ್ಲಾ ಬಿಇಡಿ ವಿದ್ಯಾರ್ಥಿ ಗಳು ತಮ್ಮ ಬೋಧನಾ ವೃತ್ತಿ ಬದುಕಿನಲ್ಲಿ ಇದನ್ನು ಅಳವಡಿಸಿ ಕೊಳ್ಳುವುದರ ಮುಖಾಂತರ ತಮ್ಮ ಬೋಧನೆಯನ್ನು ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸುವುದರ ಮುಖಾಂತರ ಒಬ್ಬ ಉತ್ತಮ ಶಿಕ್ಷಕನಾಗಿ ಗುರುತಿಸಿಕೊಳ್ಳುವುದಕ್ಕೆ ಸಹಾಯಕವಾಗುತ್ತದೆ ಎಂಬುದು ಅಭಿಪ್ರಾಯ.

ರೇಣುಕಾಚಾರ್ಯರ ವೃತ್ತ ಸ್ಥಾಪನೆಗೆ ಮನವಿ

ಜಗದ್ಗುರು ರೇಣುಕಾಚಾರ್ಯರ ವೃತ್ತ ಹಾಗೂ ಶಿಲಾಮೂರ್ತಿಯನ್ನು ಸ್ಥಾಪಿಸಲು ನಗರದ ವೀರಶೈವ ಲಿಂಗಾಯತ ಸಮಾಜದ ಜನತೆ ಮೇಯರ್ ಮುಲ್ಲಂಗಿ ನಂದೀಶ್ ಅವರಿಗೆ ಮನವಿ ಮಾಡಿದ್ದಾರೆ.

ಬಳ್ಳಾರಿ: ನಗರದಲ್ಲಿ ವೀರಶೈವ ಧರ್ಮ ಸಂಸ್ಥಾಪಕ ಆದಿ ಜಗದ್ಗುರು ರೇಣುಕಾಚಾರ್ಯರ ವೃತ್ತ ಹಾಗೂ ಶಿಲಾಮೂರ್ತಿಯನ್ನು ಸ್ಥಾಪಿಸಲು ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಜಿಲ್ಲಾ ಘಟಕ ಹಾಗೂ ನಗರದ ವೀರಶೈವ ಲಿಂಗಾಯತ ಸಮಾಜದ ಜನತೆ ಮೇಯರ್ ಮುಲ್ಲಂಗಿ ನಂದೀಶ್ ಅವರಿಗೆ ಮನವಿ ಮಾಡಿದ್ದಾರೆ.

ಬಳ್ಳಾರಿ ನಗರದಲ್ಲಿ ತಮ್ಮ ಮಹಾನಗರ ಪಾಲಿಕೆಯಿಂದ ಅನೇಕ ವೃತ್ತಗಳಿಗೆ ಮಹನೀಯರ ಹೆಸರುಗಳನ್ನು ಇಡಲು ಹಾಗೂ ಮೂರ್ತಿಗಳನ್ನು ಸ್ಥಾಪಿಸಲು ನಿರ್ಧರಿಸಿದ್ದೀರಿ. ಅದಕ್ಕಾಗಿ ವೀರಶೈವ ಮತ ಸಂಸ್ಥಾಪಕರಾದ ಆದಿ ಜಗದ್ಗುರು ಶ್ರೀರೇಣುಕಾಚಾರ್ಯರ ಜಯಂತಿಯನ್ನು ಕರ್ನಾಟಕ ಸರಕಾರ ಕಳೆದ 2 ವರ್ಷಗಳಿಂದ ಆಚರಿಸುತ್ತಾ ಬಂದಿದ್ದು, ಇವರ ಹೆಸರನ್ನು ಹಾಗೂ ಶಿಲಾಮೂರ್ತಿಯನ್ನು ಬಳ್ಳಾರಿಯ ಬಸವೇಶ್ವರ ನಗರದ 2ನೇ ಮುಖ್ಯ ರಸ್ತೆಯ ವೃತ್ತಕ್ಕೆ ಇವರ ಹೆಸರು ನಾಮಕರಣ ಮಾಡಿ ಮತ್ತು ಮೂರ್ತಿಯನ್ನು ಪ್ರತಿಷ್ಠಾಪಿಸಬೇಕೆಂದು ಮನವಿ ಮಾಡಿದೆ.

ಈ ವೇಳೆ ಕಲ್ಯಾಣ ಮಠ, ಹರಗಿನದೋಣಿ, ಉಗರಗೋಳ ಮಠದ ಶ್ರೀಗಳು, ಜಂಗಮ ಒಕ್ಕೂಟದ ಜಿಲ್ಲಾ ಅಧ್ಯಕ್ಷ ಜೆ.ಎಂ. ಬಸವರಾಜ್ ಸ್ವಾಮಿ, ಸಮುದಾಯದ ಮುಖಂಡರಾದ, ಬಿ.ಎಂ.ಎರ್ರಿಸ್ವಾಮಿ, ಮೋರೊಗೇರಿ ಕೊಟ್ರಯ್ಯಸ್ವಾಮಿ, ಗೌರಿಶಂಕರ್, ಮೃತ್ಯುಂಜಯಸ್ವಾಮಿ, ನಟರಾಜ್ ಹಿರೇಮಠ್, ಷಡಕ್ಷರಯ್ಯಸ್ವಾಮಿ, ಕುಮಾರಗೌಡ, ತಾಳೂರು ರೋಡ್ ತಿಪ್ಪೇಸ್ವಾಮಿ, ಸಿದ್ದಮೂರ್ತಯ್ಯ, ಬಿ.ಎಂ.ತಿಪ್ಪೇಸ್ವಾಮಿ, ಕೆ.ಎಂ.ಶಿವಾನಂದ್ ಮೊದಲಾದವರು ಇದ್ದರು.

ಸುಮಂಗಲೆಯರಿಗೆ ಬಾಗಿನ ಅರ್ಪಣೆ

ಹಗರಿಬೊಮ್ಮನಹಳ್ಳಿ: ತಾಲೂಕಿನ ಕಾತಾಯಿನಿ ಮರಡಿ ಗ್ರಾಮದಲ್ಲಿ ದಸರಾ ಹಬ್ಬದ ಪ್ರಯುಕ್ತ ಚೌಡೇಶ್ವರಿ ಆರಾಧನೆ ಹಾಗೂ 61 ಮುತ್ತೈದೆಯರಿಗೆ ಬಾಗಿನ ಅರ್ಪಿಸುವ ಕಾರ್ಯಕ್ರಮ ವಿಜೃಂಭಣೆಯಿಂದ ನಡೆಯಿತು. ದೇವಸ್ಥಾನದಲ್ಲಿ ಬೆಳಗ್ಗೆಯಿಂದ ಪೂಜೆ ಪ್ರಸಾದ ಸಲ್ಲಿಸಲು ದೂರದ ಊರುಗಳಿಂದ ನೂರಾರು ಭಕ್ತಾದಿಗಳು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಉತ್ತಂಗಿ ಮಠದ ಸೋಮಶಂಕರ ಸ್ವಾಮೀಜಿ ಸಾನಿಧ್ಯ ವಹಿಸಿ ಮಾತನಾಡಿ, ನಾಡ ಹಬ್ಬ ದಸರಾ ಇಡೀ ದೇಶದ ತುಂಬಾ ಭಕ್ತಿಯಿಂದ ಆಚರಿಸುತ್ತಾರೆ. 9 ದಿನ ದೇವಿಯನ್ನು ಆರಾಧಿಸಿ ಪೂಜೆ ಸಲ್ಲಿಸುತ್ತಾರೆ. ಇಂತಹ ಒಂದು ಸಂದರ್ಭದಲ್ಲಿ ಗ್ರಾಮದ ಚೌಡೇಶ್ವರಿ ದೇವಿಯನ್ನು ಆರಾಧಿಸಿ 61 ಮುತ್ತೈದೆಯರಿಗೆ ಬಾಗಿನ ಸಮರ್ಪಣೆ ಮಾಡುತ್ತಿರುವ ಅಮ್ಮನವರಾದ ಗೌರಮ್ಮ ಜೋಗತಿಯವರ ಕಾರ್ಯ ಶ್ಲಾಘನೀಯ. ಇಂತಹ ಒಂದು ಭಕ್ತಿ ಆರಾಧನೆ ಸಮಾರಂಭದಲ್ಲಿ ತಾವೆಲ್ಲ ಭಾಗವಹಿಸಿರುವುದು ಪುಣ್ಯದ ಕೆಲಸ. ಆ ದೇವಿಯು ನಿಮ್ಮೆಲ್ಲರಿಗೆ ಆರೋಗ್ಯ, ಆಯಸ್ಸು ಕರುಣಿಸಲಿ ಎಂದರು. ಚೌಡೇಶ್ವರಿ ದೇವಿಯ ಅಮ್ಮನವರಾದ ಗೌರಮ್ಮ ಜೋಗತಿ, ಬಂದಂತಹ ಮುತ್ತೈದೆಯರಿಗೆ ಬಾಗಿನ, ಮತ್ತು ಭಕ್ತಾದಿಗಳಿಗೆ ಉಡಿ ತುಂಬುವ ಕಾರ್ಯನಿರ್ವಹಿಸಿ ದೇವಿಯ ಕೃಪೆಗೆ ಪಾತ್ರರಾದರು.ಈ ಸಂದರ್ಭದಲ್ಲಿ ಶಾಂತಮ್ಮ, ಗಂಗಮ್ಮ, ಪೂಜಾರಿ ಗಂಗಪ್ಪ, ಗ್ರಾಪಂ ಸದಸ್ಯರು ರಾಜೀವ್, ಕೆಂಚಮ್ಮ, ಕರಿಬಸಮ್ಮ, ಕೊಟ್ರೇಶ್, ರೇಣುಕಮ್ಮ, ವನಜಾಕ್ಷಿ ಇದ್ದರು.

ಸಮಾಚಾರ ಸಣ್ಣದಲ್ಲ

ಸಾಹಿತಿ ಅಲ್ಲದವರಿಗೂ ಸರ್ವಾಧ್ಯಕ್ಷ ಸ್ಥಾನ ನೀಡಿ

ಕೊಪ್ಪಳ: ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಸ್ಥಾನವನ್ನು ಸಾಹಿತಿ ಅಲ್ಲದಿದ್ದರೂ ಕನ್ನಡ, ನಾಡು-ನುಡಿಗೆ ಶ್ರಮಿಸಿದವರಿಗೆ ನೀಡಿ ಎಂದು ಕಸಾಪ ಆಜೀವ ಸದಸ್ಯ ಮಂಜುನಾಥ ಜಿ. ಗೊಂಡಬಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಾಹಿತಿ ಸ್ವಂತಕ್ಕೆ ಬರೆಯುತ್ತಾನೆ. ಕನ್ನಡ ಕಟ್ಟುವ ವ್ಯಕ್ತಿ ಇಡೀ ಸಾಹಿತ್ಯ, ಸಂಸ್ಕೃತಿ ಹಾಗೂ ಸಾಂಸ್ಕೃತಿಕ ಲೋಕಕ್ಕೆ ಕೆಲಸ ಮಾಡುತ್ತಾನೆ. ಈ ಹಿನ್ನೆಲೆ ಸಾಹಿತ್ಯ ರಚನೆ ಮಾಡದವರಿಗೂ ಅವಕಾಶ ಸಿಗಬೇಕು. ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ರಾಜಕೀಯ ಮಿತಿಮೀರಿದೆ. ಜಾತಿಯ ಜಾಡ್ಯ ಹೆಚ್ಚಿದೆ. ಪರಿಷತ್ ಅಥವಾ ಸಮ್ಮೇಳನಾಧ್ಯಕ್ಷತೆಗೆ ಹಾಲಿ ಸರಕಾರಿ ನೌಕರರಿಗೆ ಅವಕಾಶ ಕೊಡಬಾರದು. ಒಂದೋ ಅವರು ತಮ್ಮ ನೌಕರಿಗೆ ಇಲ್ಲವೋ ಆಯ್ಕೆಯಾದ ಹುದ್ದೆಗೆ ಅನ್ಯಾಯ ಮಾಡುವುದು ಶತಸಿದ್ಧ. ಇದನ್ನು ಕೂಡಲೇ ಪರಿಷತ್ ನಿಯಮದಲ್ಲಿ ತರಬೇಕು ಎಂದು ಮಂಜುನಾಥ ಜಿ. ಗೊಂಡಬಾಳ ಒತ್ತಾಯಿಸಿದ್ದಾರೆ.

ತಾಯಿ, ಮಗಳು ನೀರು ಪಾಲು

ರಾಯಚೂರು: ಬಟ್ಟೆ ತೊಳೆಯಲು ಕಾಲುವೆಗೆ ಹೋಗಿದ್ದ ತಾಯಿ ಮಗಳು ನೀರು ಪಾಲಾದ ಘಟನೆ ತಾಲೂಕಿನ ಬಿ.ಯದ್ಲಾಪೂರು ಗ್ರಾಮದಲ್ಲಿ ಜರುಗಿದೆ. ಗ್ರಾಮದಲ್ಲಿ ಹಾಯ್ದು ಹೋಗಿರುವ ಆರ್‌ಡಿಎಸ್ ಕಾಲುವೆ ನೀರು ಪಾಲಾದವರನ್ನು ತಾಯಿ ಸುಜಾತ(27), ಮಗಳು ಶ್ರಾವಣಿ (10) ಎಂದು ಗುರುತಿಸಲಾಗಿದೆ. ಸೋಮವಾರ ಕಾಲುವೆಯ ನೀರಿನಲ್ಲಿ ತೊಳೆಯಲು ಬಟ್ಟೆ ಮತ್ತು ಮಗಳು ತೆರಳಿದ್ದರು. ಮಧ್ಯಾಹ್ನವಾದರೂ ಮನೆಗೆ ಮರಳಿ ಬಾರದಿರುವುದನ್ನು ಗಮನಿಸಿದ ಮನೆಯವರು ಕಾಲುವೆಗೆ ಹೋದಾಗ ಚಪ್ಪಲಿ, ಬಟ್ಟೆ ದಡದಲ್ಲಿದ್ದು ಇಬ್ಬರೂ ಕಾಣಲಿಲ್ಲ. ಹೀಗಾಗಿ, ಇಬ್ಬರೂ ಕಾಲು ಜಾರಿ ನೀರಿನಲ್ಲಿ ಕೊಚ್ಚಿಹೋಗಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಹೆಚ್ಚಿನ ನೀರಿನ ಹರಿವು ಇರುವುದರಿಂದ ಇಬ್ಬರ ಹುಡುಕಾಟ ನಡೆದಿದೆ ಎಂದು ತಿಳಿಸಲಾಗಿದೆ.

ತೀನ್‌ಖಂದಿನಲ್ಲಿ ಯುವಕನ ಕೊಲೆ

ರಾಯಚೂರು: ಹಳೆ ದ್ವೇಷ ಕ್ಷುಲ್ಲಕ ಕಾರಣಕ್ಕೆ ನಗರದ ತೀನ್ ಖಂದಿಲ್ ಬಳಿ ನಿನ್ನೆ ಸಂಜೆ ನಡೆದ ಇಬ್ಬರ ಜಗಳ ಕೊಲೆಯಲ್ಲಿ ಅವಸನಗೊಂಡಿದೆ. ಆಟೋ ಚಾಲಕ ಸಮೀರ ಮತ್ತು ಹಣ್ಣು ಮಾರಾಟಗಾರ ಅಮಾ ನ್ ಮಧ್ಯ ನಡೆದ ಕ್ಷುಲ್ಲಕ ಜಗಳದಲ್ಲಿ ಆರೋಪಿ ಅಮಾನ್, ಆಟೋ ಚಾಲಕ ಸಮೀರ ಎಂಬುವವನಿಗೆ ಚಾಕುವಿನಿಂದ ಚುಚ್ಚಿದ್ದನು. ಚಾಕುವಿನಿಂದ ತೀವ್ರ ಗಾಯಗೊಂಡಿದ್ದ ಸಮೀರ ಸೋಮವಾರ ಬೆಳಗಿನ ಜಾವ ಒಂದು ಗಂಟೆಗೆ ಆಸ್ಪತ್ರೆಯಲ್ಲಿ ನಿಧನ ಹೊಂದಿದ್ದಾನೆ. ನಿನ್ನೆ ಈ ಪ್ರಕರಣಕ್ಕೆ ಸಂಬಂಧಿಸಿದ ಸದಾರ ಬಜಾರ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು. ಚಾಲಕ ಸಮೀರ ನಿಧನದ ಹಿನ್ನೆಲೆಯಲ್ಲಿ ಸೋಮವಾರ ಅಮಾನ್ ವಿರುದ್ಧ ಕೊಲೆ ಆರೋಪ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸಮೀಪನ ಆಟೋದಲ್ಲಿ ಕುಳಿತಿದ್ದ ಸಂದರ್ಭದಲ್ಲಿ ಇಬ್ಬರ ಮಧ್ಯೆ ಅನಗತ್ಯ ಜಗಳಕ್ಕೆ ಕಾರಣವಾಗುತ್ತದೆ. ಅಮಾನ್ ಜೇಬಿನಲ್ಲಿದ್ದ ಚಾಕು ತೆಗೆದು ಆಟೋ ಟೈರ್‌ಗೆ ಚುಚ್ಚುತ್ತಾನೆ. ವಾಗ್ವಾದ ತೀವ್ರಗೊಂಡು ಅಮಾನ್, ಸಮೀರ್‌ಗೆ ಚಾಕು ಹಾಕಿದ ಘಟನೆ ತೀನ್ ಖಂದಿಲ್ ಬಳಿ ಕೊಂಚ ಗೊಂದಲಕ್ಕೆ ಕಾರಣವಾಗುತ್ತದೆ. ಸದಾರ ಬಜಾರ ಠಾಣೆ ಪೊಲೀಸ್‌ರು ಆರೋಪಿ ಅಮಾನ್ ಬಂಧಿಸಿ ನ್ಯಾಯಾಂಗ ವಶಕ್ಕೆ ನೀಡಲಾಗಿದೆ.

ಹಳೆಯ ದ್ವೇಷ: ಮಹಿಳೆ ಅಪಹರಣ

ಮುದಗಲ್: ಹಳೆ ದ್ವೇಷದ ಹಿನ್ನೆಲೆಯಲ್ಲಿ ನಾಲ್ಕು ಜನರು ಸೇರಿಕೊಂಡು ಮಹಿಳೆ ಅಪಹರಣ ಮಾಡಿದ ಘಟನೆ ಸಮೀಪದ ಕಿಲ್ಲಾರ ಹಟ್ಟಿ ತಾಂಡಾದಲ್ಲಿ ನಡೆದಿದೆ. ಕಿಲ್ಲಾರಹಟ್ಟಿ ತಾಂಡಾದ ಅರುಣ ಕುಮಾರ ಹನುಮಂತ ನಾಯ್ಕ, ಅಶೋಕ ಹನುಮಂತ ನಾಯ್ಕ, ಪ್ರವೀಣ ಲಕ್ಷ್ಮಣ್ಣ ನಾಯ್ಕ, ಪ್ರಕಾಶ ಉಮಲೆಪ್ಪ ನಾಯ್ಕ ನಾಲ್ವರು ಸೇರಿಕೊಂಡು ತಾಂಡಾದ ಅಂಬಮ್ಮ ಗಿರೀಶ ಖೋರಾ (45) ಮಹಿಳೆಯನ್ನು ಅಪಹರಣ ಮಾಡಿದ್ದಾರೆ ಎಂದು ಕುಂದಾನ ಗಿರೇಶ ಖೋರಾ (18) ಪೊಲೀಸ್ ಠಾಣೆಗೆ ದೂರು ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸಿದ್ದಾರೆ.

{ಡಿ.ಕೆ.ಶಿವಕುಮಾರ} ಉಪ ಮುಖ್ಯಮಂತ್ರಿ

ಉಪಚುನಾವಣೆಯಲ್ಲಿ ಯಾರೇ ಅಭ್ಯರ್ಥಿಯಾದರೂ ಸಿದ್ದರಾಮಯ್ಯ, ತುಕಾರಾಂ ಅವರ ಕೈ ಬಲಪಡಿಸುತ್ತೀರಿ ಎಂಬ ಆತ್ಮವಿಶ್ವಾಸ ನಮಗಿದೆ. ನೀವು ಸರಳ, ಸಜ್ಜನ, ಅಭಿವೃದ್ಧಿಗೆ ಹೆಸರಾದ ನನ್ನ ಸಹೋದರನನ್ನು ವಿಧಾನಸಭೆಗೂ ಕಳಿಸಿದ್ದೀರಿ, ಮಂತ್ರಿ ಮಾಡಿದ್ದೀರಿ, ಈಗ ಲೋಕಸಭೆಗೆ ಕಳುಹಿಸಿದ್ದೀರಿ.

ಏಳು ತಿಂಗಳಿನಿಂದ ಕಾರಟಗಿ ಪುರಸಭೆಯ ಗುತ್ತಿಗೆ ನೌಕರರಿಗೆ, ಚಾಲಕರಿಗೆ ಸಿಕ್ಕಿಲ್ಲ ವೇತನ

ವೇತನಕ್ಕಾಗಿ ಪುರಸಭೆ ನೌಕರರ ಪರದಾಟ

ವಿರೇಂದ್ರ ಪಾಟೀಲ್, ಕಾರಟಗಿ

ಕಾರಟಗಿ ಪುರಸಭೆಯಲ್ಲಿ ವೇತನಕ್ಕಾಗಿ ಮನವಿ ಮಾಡಲು ಬಂದಿರುವ ಚಾಲಕರು.

ಕಾರಟಗಿ: ಇಲ್ಲಿನ ಪುರಸಭೆಯ ವಿವಿಧ ವಾಹನಗಳ ಗುತ್ತಿಗೆ ಆಧಾರಿತ ಚಾಲಕರು ವೇತನಕ್ಕಾಗಿ ಪರದಾಡುತ್ತಿದ್ದು, ಬಾಕಿ ಹಣ ನೀಡುವಂತೆ ಅಂಗಲಾಚುತ್ತಿದ್ದಾರೆ. ಮತ್ತೊಂದೆಡೆ ಗುತ್ತಿಗೆ ಅವಧಿ ಮುಗಿದಿದ್ದು, ನವೀಕರಣ ಮಾಡದೇ ಚಾಲಕರಿಂದ ಸೇವೆ ಪಡೆಯುತ್ತಿದ್ದಾರೆ. ಇದರಿಂದ ಕುಟುಂಬ ನಿರ್ವಹಣೆ ಕಷ್ಟಸಾಧ್ಯವಾಗಿದೆ.

ಕಾರಟಗಿ ಪುರಸಭೆಯ ಟ್ರಾಕ್ಟರ್, ಆಟೋ, ಟಿಪ್ಪರ್, ಜೆಸಿಬಿ ವಾಹನ ಚಾಲಕರ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಪುರಸಭೆ ಈ ಎಲ್ಲ ಚಾಲಕರಿಗೆ ಕಳೆದ ಏಳು ತಿಂಗಳಿಂದ ವೇತನ ನೀಡಿಲ್ಲ. ಇದರಿಂದ ಕುಟುಂಬ ನಿರ್ವಹಣೆಗೆ ಪರದಾಡುತ್ತಿದ್ದಾರೆ. ಧರ್ಮಸ್ಥಳ ಸಂಸ್ಥೆಯ ಮಹಿಳಾ ಗುಂಪುಗಳಲ್ಲಿ ಸಾಲ ಪಡೆದು ಮಕ್ಕಳ ಶಾಲಾ ಶುಲ್ಕ ಪಾವತಿ ಮಾಡಿದ್ದೇವೆ ಎಂದು ಪುರಸಭೆಯ ಮುಂದೆ ಸೋಮವಾರ ಚಾಲಕರು ತಮ್ಮ ಅಳಲು ತೋಡಿಕೊಂಡರು. ವೇತನ ನೀಡುವಂತೆ ಅಧಿಕಾರಗಳಲ್ಲಿ ಮನವಿ ಮಾಡಿಕೊಂಡರ.

7 ತಿಂಗಳಿಂದ ವೇತನ ಇಲ್ಲ: ಪುರಸಭೆಯಲ್ಲಿ 6 ಜನ ವಾಹನ ಚಾಲಕರು, ಇಬ್ಬರು ಸುಪರ್ ವೈಜರ್ ಗುತ್ತಿಗೆ ಆಧಾರದಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಕಳೆದ 29 ತಿಂಗಳ ಹಿಂದೆಯೇ ಹೊರಗುತ್ತಿಗೆ ಆಧಾರದಲ್ಲಿ ಚಾಲಕರು ಕರ್ತವ್ಯಕ್ಕೆ ಹಾಜರಾಗಿದ್ದರು. ಆದರೆ ಈಗಾಗಲೇ ಗುತ್ತಿಗೆ ಟೆಂಡರ್ ಅವಧಿ ಮುಕ್ತಾಯವಾಗಿದೆ. ಆದರೆ ಮರು ಟೆಂಡರ್ ಮಾಡಿ ನೇಮಕ ಮಾಡಿಕೊಳ್ಳದೇ ಇರುವ ಚಾಲಕರನ್ನೇ ಪುರಸಭೆ ಅಧಿಕಾರಿಗಳು ಕೆಲಸಕ್ಕೆ ಮುಂದುವರೆಸಿಕೊಂಡಿದ್ದಾರೆ. ಬಾಕಿ ಏಳು ತಿಂಗಳ ವೇತನ ಬಿಡುಗಡೆ ಮಾಡುವಲ್ಲಿ ಪುರಸಭೆ ಅಧಿಕಾರಿಗಳು ಸಂಪೂರ್ಣ ನಿರ್ಲಕ್ಷ್ಯ ಮಾಡಿದ್ದಾರೆ ಎಂಬ ಆರೋಪ ಚಾಲಕರಿಂದ ಕೇಳಿ ಬರುತ್ತಿದೆ. ಕೆಲಸದ ಟೆಂಡರ್ ಅವಧಿ ಮುಕ್ತಾಯವಾಗಿದೆ. ಮರು ಟೆಂಡರ್ ಕರೆಯುವವರೆಗೂ ಇರುವ ಚಾಲಕರಿಗೆ ಅವಕಾಶ ನೀಡಲಾಗಿದೆ. 4 ಆಟೋಟಿಪ್ಪರ್, 1 ಟ್ರಾಕ್ಟರ್, 1 ಜೆಸಿಬಿ ವಾಹನಗಳು ಪುರಸಭೆಯಲ್ಲಿ ವಿವಿಧ ಕಾರ್ಯಕ್ಕೆ ಬಳಕೆ ಮಾಡಲಾಗುತ್ತದೆ. ಸ್ವಚ್ಛತೆ, ಕಸ ವಿಲೇವಾರಿ, ಚರಂಡಿ ಮಲೀನ ತೆರವು ಸೇರಿದಂತೆ ಇನ್ನಿತರ ಕೆಲಸಕ್ಕೆ ಈ ವಾಹನಗಳನ್ನು ಬಳಕೆ ಮಾಡಲಾಗುತ್ತದೆ. ಈ ವಾಹನಗಳ ಚಾಲನೆಗಾಗಿ ಟೆಂಡರ್ ಮೂಲಕ ಚಾಲಕರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ. 29 ತಿಂಗಳು ಕೆಲಸ ಮಾಡಿರುವ ಚಾಲಕರಿಗೆ ಈಗಾಗಲೇ 22 ತಿಂಗಳ ವೇತನ ನೀಡಿದ್ದು, ಇನ್ನು ಏಳು ತಿಂಗಳ ವೇತನ ಬಿಡುಗಡೆ ಮಾಡದೇ ಅಧಿಕಾರಿಗಳು ಸತಾಯಿಸುತ್ತಿದ್ದಾರೆ.

ಪುರಸಭೆಯಲ್ಲಿ ಅನುದಾನವಿದ್ದರೂ ತಮ್ಮ ವೇತನ ಬಿಡುಗಡೆ ಮಾಡುವಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಕಾರಣವಾಗಿದೆ.

ಪುರಸಭೆಯ ಪರಿಸರ ಅಭಿಯಂತರರು ಮತ್ತು ಮುಖ್ಯಾಧಿಕಾರಿಗಳ ನಡುವಿನ ಸಮನ್ವಯ ಕೊರತೆಯಿಂದಾಗಿ ನಮಗೆ ವೇತನ ಬಿಡುಗಡೆ ಮಾಡುವಲ್ಲಿ ವಿಳಂಬವಾಗುತ್ತಿದೆ ಎಂದು ಅಳಲು ತೋಡಿಕೊಂಡಿರುವ ವಾಹನ ಚಾಲಕರಾದ ರವಿ, ದುರಗಪ್ಪ, ಆನಂದ, ಹುಲಗಪ್ಪ, ದುರಗಪ್ಪ, ಇಬ್ರಾಹಿಂ, ಮಾರುತಿ, ಅಂಜಿ ಮತ್ತಿತರು ಈಗ ಪುರಸಭೆಯಲ್ಲಿ ನೂತನ ಆಡಳಿತ ಮಂಡಳಿ ರಚನೆಯಾಗಿದ್ದು, ಅಧ್ಯಕ್ಷ, ಉಪಾಧ್ಯಕ್ಷರು ಪುರಸಭೆಯ ಆಡಳಿತ ನಿರ್ವಹಣೆ ಮಾಡುತ್ತಿದ್ದಾರೆ. ಹೀಗಾಗಿ ಅಧ್ಯಕ್ಷರು ನಮ್ಮ ಬಾಕಿ ವೇತನ ಬಿಡುಗಡೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

> ಪುರಸಭೆಯಲ್ಲಿ ಕೆಲಸ ಮಾಡುತ್ತಿರುವ ವಿವಿಧ ವಾಹನಗಳ ಚಾಲಕರ ವೇತನ ಬಿಡುಗಡೆಯಾಗಿಲ್ಲ ಎಂಬ ಮಾಹಿತಿ ಇತ್ತೀಚಿಗೆ ನನ್ನ ಗಮನಕ್ಕೆ ಬಂದಿದೆ. ಆಡಳಿತ ಮಂಡಳಿ ರಚನೆಯಾಗದ ಕಾರಣ ಇದುವರೆಗೂ ಪುರಸಭೆಯ ಕೆಲಸ ಕಾರ್ಯದ ಬಗ್ಗೆ ಪ್ರಶ್ನಿಸಲು ಸದಸ್ಯರಿಗೆ ಸಮಸ್ಯೆಯಾಗುತ್ತಿತ್ತು. ಈಗಷ್ಟೇ ಅಧ್ಯಕ್ಷೆಯಾಗಿ ಅಧಿಕಾರವಹಿಸಿಕೊಂಡಿದ್ದೇನೆ. ಈ ಕುರಿತು ಮುಖ್ಯಾಧಿಕಾರಿಗಳೊಂದಿಗೆ ಚರ್ಚಿಸಿ ಬಾಕಿ ವೇತನ ಬಿಡುಗಡೆ ಮಾಡಲು ಶೀಘ್ರ ಕ್ರಮ ಕೈಗೊಳ್ಳುತ್ತೇನೆ.
>
> – ರೇಖಾ ಆನೇಹೊಸೂರು, ಅಧ್ಯಕ್ಷೆ, ಪುರಸಭೆ ಕಾರಟಗಿ

> ಅಧಿಕಾರಿಗಳೊಂದಿಗೆ ಚರ್ಚಿಸಿ, ಪರಿಶೀಲಿಸುತ್ತೇನೆ. ಶೀಘ್ರವೇ ಹೊರಗುತ್ತಿಗೆ ಆಧಾರದ ಪುರಸಭೆ ವಾಹನ ಚಾಲಕರಿಗೆ ನ್ಯಾಯ ಕೊಡಿಸುವೆ. ವೇತನ ನೀಡಲು ಕ್ರಮ ವಹಿಸುತ್ತೇನೆ.
>
> –ನಲಿನ್ ಅತುಲ್, ಜಿಲ್ಲಾಧಿಕಾರಿ, ಕೊಪ್ಪಳ

ಒಳ ಮೀಸಲಿಗೆ ಆಗ್ರಹಿಸಿ ಪ್ರತಿಭಟನೆ ನಾಳೆ

ಪಟ್ಟಣದಲ್ಲಿ ಒಳ ಮೀಸಲಾತಿ ಶೀಘ್ರ ಜಾರಿಗೆ ಒತ್ತಾಯಿಸಿ ಪ್ರತಿಭಟನೆ ಮಾಡುವ ಬಗ್ಗೆ ಮಾತನಾಡಿದರು.

ಕಾರಟಗಿ: ಒಳ ಮೀಸಲಾತಿ ಶೀಘ್ರ ಜಾರಿಗೆ ಒತ್ತಾಯಿಸಿ ಜಿಲ್ಲಾ ಕೇಂದ್ರದ ಕೊಪ್ಪಳದಲ್ಲಿ ಅ. 16 ರಂದು ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಹೋರಾಟ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಬಿ. ಹುಸೇನಪ್ಪ ಸ್ವಾಮಿ ಮಾದಿಗ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ಅ. 16ರ ಬುಧವಾರ ಬೆಳಗ್ಗೆ ಕೊಪ್ಪಳ ನಗರದ ಜಗಜೀವನರಾಮ್ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿ ವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು. ಸಾಮಾಜಿಕ, ನ್ಯಾಯಪರ ಇರುವ ದಲಿತ ಸಂಘಟನೆ ಮುಖಂಡರು, ಪ್ರಗತಿಪರ ಚಿಂತಕರು, ಬುದ್ಧಿಜೀವಿಗಳು, ವಿದ್ಯಾರ್ಥಿಗಳು, ದಸಂಸ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ನ್ಯಾಯಾಲಯದ ಆದೇಶ ಇದ್ದರೂ ರಾಜ್ಯ ಸರಕಾರದ ಆದೇಶ ತಿಂಗಳು ಕಳೆದರೂ ಅನುಷ್ಠಾನಗೊಳಿಸಿಲ್ಲ. ಕಳೆದ ಚುನಾವಣೆಯಲ್ಲಿ ಒಳ ಮೀಸಲಾತಿ ಜಾರಿಗೊಳಿಸುವುದಾಗಿ ತಿಳಿಸಿದ್ದರು. ಆದರೆ, ಅಧಿಕಾರಕ್ಕೆ ಬಂದು ಒಂದೂವರೆ ವರ್ಷಗಳು ಕಳೆದರು ಸಿದ್ದರಾಮಯ್ಯ ಅವರು ಜಾರಿಗೆ ಮುಂದಾಗುತ್ತಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಮಾದಿಗ ದಂಡೋರ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಬಿ. ಹುಲ್ಲೇಶ, ತಾಲೂಕಾಧ್ಯಕ್ಷ ಶಿವಪ್ಪ ಸಿದ್ದಾಪುರ ಮಾತನಾಡಿದರು. ಸಮಿತಿಯ ತಾಲೂಕು ಗೌರವಾಧ್ಯಕ್ಷ ಕರಿಯಪ್ಪ, ಕಾರ್ಯಾಧ್ಯಕ್ಷ ರಾಮಣ್ಣ, ಉಪಾಧ್ಯಕ್ಷ ಹುಸೇನಪ್ಪ, ನಾಗರಾಜ ಗುಂಡೂರು, ಕನಕಗಿರಿ ತಾಲೂಕಾಧ್ಯಕ್ಷ ಹನುಮಂತಪ್ಪ ಬಳ್ಳಾರಿ, ಸಹ ಕಾರ್ಯದರ್ಶಿಗಳಾದ ಮಹೇಶ ಸಿದ್ದಾಪುರ, ರಮೇಶ ನಾಗನಕಲ್, ಹುಲುಗಪ್ಪ ಸಿದ್ದಾಪುರ, ಶಿವಪ್ಪ ಸಿದ್ದಾಪುರ, ಕನಕಪ್ಪ ನರಸಾಪುರ ಇದ್ದರು.

> ಅಹಿಂದ್ ವರ್ಗದ ಪ್ರಶ್ನಾತೀತ ನಾಯಕ ಎಂದು ಕರೆದುಕೊಳ್ಳುವ ಸಿಎಂ ಸಿದ್ದರಾಮಯ್ಯ ಸುಪ್ರೀಂ ಕೋರ್ಟ್ ಐತಿಹಾಸಿಕ ತೀರ್ಪಿನ ನಂತರವೂ ಜಾರಿಗೆ ಮುಂದಾಗದೇ ವಿಳಂಬ ನೀತಿಗೆ ಮುಂದಾಗಿರುವುದು ವಿಪರ್ಯಾಸ. ಯಾವಾಗಲೂ ನಾನು ಸಾಮಾಜಿಕ ನ್ಯಾಯದ ಪರ ಎನ್ನುವ ಅವರಿಂದ ನಮಗೆ ಒಳ ಮೀಸಲಾತಿಯ ಪ್ರಯೋಜನ ಪಡೆದುಕೊಳ್ಳಲು ಸಾಧ್ಯವಾಗಿಲ್ಲ.
>
> –ಬಿ. ಹುಸೇನಪ್ಪ ಸ್ವಾಮಿ ಮಾದಿಗ, ಸಂಚಾಲಕ

ದೇಗುಲ ಅಭಿವೃದ್ಧಿಗೆ ರಾಜಕೀಯ ಬೇಡ

ರೇವಗ್ಗಿ ರೇವಣಸಿದ್ದೇಶ್ವರ ಅಭಿವೃದ್ಧಿಗೆ ಸಾರ್ವಜನಿಕರ ಅಹವಾಲು ಸ್ವೀಕಾರದ ಸಭೆ ಶಾಸಕ ಡಾ. ಅವಿನಾಶ ಜಾಧವ್ ಅಧ್ಯಕ್ಷತೆಯಲ್ಲಿ ಜರುಗಿತು.

ಚಿಂಚೋಳಿ: ರೇವಗ್ಗಿ ರಟಕಲ್ ರೇವಣಸಿದ್ದೇಶ್ವರ ದೇವಸ್ಥಾನದ ಆಡಳಿತಾಧಿಕಾರಿ ಸೇಡಂ ಸಹಾಯಕ ಆಯುಕ್ತರಾದ ಪ್ರಭುರೆಡ್ಡಿ ಅವರ ಸಮ್ಮುಖದಲ್ಲಿ ರಟಕಲ್ ರೇವಗ್ಗಿ ರೇವಣಸಿದ್ದೇಶ್ವರ ಅಭಿವೃದ್ಧಿಗೆ ಸಾರ್ವಜನಿಕರ ಅಹವಾಲು ಸ್ವೀಕಾರದ ಸಭೆ ಶಾಸಕ ಡಾ. ಅವಿನಾಶ ಜಾಧವ್ ಅಧ್ಯಕ್ಷತೆಯಲ್ಲಿ ಸೋಮವಾರ ಜರುಗಿತು.

ಶಾಸಕ ಡಾ.ಅವಿನಾಶ ಜಾಧವ್ ಮಾತನಾಡಿ, ದೇವಸ್ಥಾನದ ಅಭಿವೃದ್ಧಿಗಾಗಿ ಎಲ್ಲರೂ ಒಗಟ್ಟಿನಿಂದ ಸೇವಾ ಕಾರ್ಯಗಳು ಮಾಡೋಣ. ರೇವಣಸಿದ್ದೇಶ್ವರ ದೇವಸ್ಥಾನ ಈ ಭಾಗದ ಪ್ರತಿಯೊಬ್ಬರ ಆರಾಧ್ಯ ದೈವ. ಹೀಗಾಗಿ ದೇವಸ್ಥಾನದ ಅಭಿವೃದ್ಧಿ ವಿಚಾರದಲ್ಲಿ ಯಾರು ರಾಜಕೀಯ ಮಾಡಬಾರದು ಮತ್ತು ರಾಜಕೀಯಕ್ಕಾಗಿ ದೇವಸ್ಥಾನವನ್ನು ವೇದಿಕೆಯನ್ನಾಗಿ ಬಳಕೆ ಮಾಡಿಕೊಳ್ಳಬಾರದು ಎಂದರು. ಎಲ್ಲಾ ಜಾತಿ ಧರ್ಮದ ಭಕ್ತರ ದಂಡು ದರ್ಶನಕ್ಕಾಗಿ ಸಾಗಿ ಬರುತ್ತದೆ ಮತ್ತು ನೂರಾರು ವರ್ಷಗಳ ಇತಿಹಾಸದ ಈ ಪವಿತ್ರ ಸ್ಥಳಕ್ಕೆ ಪ್ರವಾಸಿಗಾರನ್ನು ಆಕರ್ಷಿಸುವಂತಹ ಅಭಿವೃದ್ಧಿ ಕಾಮಾಗಾರಿಗಳು ಮತ್ತು ಅತಿ ಎತ್ತರದ ಲಿಂಗ ಸಹಿತ ರೇವಣಸಿದ್ದೇಶ್ವರ ಮೂರ್ತಿ ಪ್ರತಿಷ್ಠಾಪನೆಯನ್ನು ಹಿಂದೆ ಶಾಸಕರಾಗಿದ್ದ ನಮ್ಮ ತಂದೆ ಡಾ. ಉಮೇಶ ಜಾಧವ್ ಮತ್ತು ನನ್ನ ಆಡಳಿತ ಅವಧಿಯಲ್ಲಿ ಮಾಡಲಾಗಿದೆ. ಇಲ್ಲಿಯಾವುದೇ ರಾಜಕೀಯ ಮಾಡದೆ ಎಲ್ಲರೂ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸೋಣ ಎಂದರು.

> ಸಾರ್ವಜನಿಕರ ಸಲಹೆ ಸೂಚನೆ ಮತ್ತು ಅಭಿಪ್ರಾಯಕ್ಕಾಗಿ ಈ ಸಭೆ ಆಯೋಜನೆ ಮಾಡಲಾಗಿದ್ದು, ಸಾರ್ವಜನಿಕರ ಮಾರ್ಗದರ್ಶನದಂತೆ ದೇವಸ್ಥಾನದ ಅಭಿವೃದ್ಧಿ ಪಡಿಸಲಾಗುವುದು. ಮುಂದಿನ ತಿಂಗಳು ನಡೆಯುವ ಸಭೆಯಲ್ಲಿ ಸಾರ್ವಜನಿಕವಾಗಿ ಲೆಕ್ಕಪತ್ರ ಇಡಲಾಗುವುದು.
>
> –ಡಾ. ಅವಿನಾಶ ಜಾಧವ್, ಶಾಸಕ

ಆರೋಗ್ಯಕರ ಜೀವನಕ್ಕೆ ಕ್ರೀಡೆ ಸಹಕಾರಿ

ಕ್ರಿಕೇಟ್ ಟೂರ್ನಾಮೆಂಟ್‌ನ್ನು ಶಾಸಕ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಮಂಡಳಿ ಅಧ್ಯಕ್ಷ ಆರ್. ಬಸನಗೌಡ ತುರವಿಹಾಳ ಅವರು ಚಾಲನೆ ನೀಡಿದರು.

ಮಸ್ಕಿ: ಆರೋಗ್ಯಕರ ಜೀವನಕ್ಕೆ ಕ್ರೀಡೆ ಸಹಕಾರಿಯಾಗಿದೆ, ಎಲ್ಲಾ ಯುವಕರು ವಿವಿಧ ಕ್ರೀಡೆಯಲ್ಲಿ ಪಾಲ್ಗೊಂಡು ತಮ್ಮ ದೇಹವನ್ನು ಸದೃಢವಾಗಿ ಇಟ್ಟುಕೊಳ್ಳಬೇಕೆಂದು ಶಾಸಕ ಹಾಗೂ ಖಾದಿ ಮತ್ತು ಗ್ರಾಮೋದ್ಯೋಗ ನಿಗಮ ಮಂಡಳಿ ಅಧ್ಯಕ್ಷ ಆರ್.ಬಸನಗೌಡ ತುರವಿಹಾಳ ಅವರು ಹೇಳಿದರು.

ಸಮೀಪದ ಮಾರಲದಿನ್ನಿ ಹೊರ ವಲಯದಲ್ಲಿ ಹಮ್ಮಿಕೊಂಡಿದ್ದ ಕ್ರಿಕೇಟ್ ಟೂರ್ನಮೆಂಟ್‌ಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ರೀಡೆಗಳು ದೈಹಿಕ ಮತ್ತು ಮಾನಸಿಕ ಸದೃಢತೆಗೆ ಅವಶ್ಯಕವಾಗಿವೆ. ಹಾಗಾಗಿ ಯುವಕರು ಆಸಕ್ತಿಯಿಂದ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು.

ಈ ಸಂದರ್ಭದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಪಾಟೀಲ್ ಯದ್ದಲದಿನ್ನಿ, ಮುಖಂಡ ಸಿದ್ದನಗೌಡ ಮಾಟೂರು, ತಾಪಂ ಮಾಜಿ ಅಧ್ಯಕ್ಷ ಶಿವಣ್ಣ ನಾಯಕ, ಮಾರಲದಿನ್ನಿ ಗ್ರಾಪಂ ಅಧ್ಯಕ್ಷ ಬೀರಪ್ಪ ವೆಂಕಟಾಪೂರ, ಶರಣಪ್ಪ ಯಲಿಗಾರ ಸೇರಿದಂತೆ ಗ್ರಾಮದ ಮುಖಂಡರು ಭಾಗಿಯಾಗಿದ್ದರು.

> ಆಧುನಿಕ ಯುಗದಲ್ಲಿ ಕೆಲಸದ ಜಂಜಾಟದಲ್ಲಿ ದೈಹಿಕ ಕಸರತ್ತು ಮಾಡಲು ಯುವಸಮೂಹ ಹಿಂದೇಟು ಹಾಕುತ್ತಿದೆ, ಕೆಲಸದ ಒತ್ತಡದ ನಡುವೆ ಪ್ರತಿದಿನ ಒಂದು ಗಂಟೆಯಾದರೂ ಕ್ರೀಡೆಗಳಲ್ಲಿ ಭಾಗಿಯಾದರೆ, ಮಾನಸಿಕವಾಗಿ ಹಾಗೂ ದೈಹಿಕವಾಗಿ ಸದೃಢವಾಗಿರಲು ಸಾಧ್ಯವಾಗಿದೆ.
>
> –ಆರ್.ಬಸನಗೌಡ ತುರವಿಹಾಳ , ಶಾಸಕ

ಧರ್ಮದಿಂದ ಸಮಾಜದಲ್ಲಿ ಶಾಂತಿ ಸಾಧ್ಯ

ಈಶಪ್ಪ ಮಾಸ್ತರ ಓಜನಹಳ್ಳಿ ಮತ್ತು ತಬಲಾ ವಾದಕರು, ಗದ್ದುಗೆ ಪೂಜೆ ಮಾಡುವರಿಗೆ ಬಟ್ಟೆಗಳನ್ನು ಕಾಣಿಕೆಯಾಗಿ ನೀಡುವ ಮೂಲಕ ಭಕ್ತಿ ಸೇವೆ ಸಲ್ಲಿಸಿದರು.

ಕೊಪ್ಪಳ: ತಾಲೂಕಿನ ಯತ್ನಟ್ಟಿ ಗ್ರಾಮದ ಶ್ರೀ ಮ.ನಿ.ಪ್ರ.ಸ್ವ. ಬಸವ ರಾಜೇಶ್ವರಸ್ವಾಮಿಗಳ ಮಠದಲ್ಲಿ ಸ್ವಾಮಿಗಳ ಅಪ್ಪಣೆಯಂತೆ 113 ನೇ ವರ್ಷದ ಶ್ರೀದೇವಿ ಪುರಾಣ ಕಾರ್ಯಕ್ರಮ ಶನಿವಾರದಂದು ಸಂಪನ್ನಗೊಂಡಿತು.

ಪುರಾಣ ಮಂಗಳೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿದ ಸಾಹಿತಿ, ಕಲಾವಿದ, ಸಮಾಜ ಸೇವಕ ಡಾ.ಷಣ್ಮುಖಯ್ಯ ತೋಟದವರು ಪ್ರತಿ ವರ್ಷದಂತೆ ಪುರಾಣ ಪ್ರವಚನ ಮಾಡಿದ ಶಂಕ್ರಯ್ಯ ಮೈನಹಳ್ಳಿ , ಈಶಪ್ಪ ಮಾಸ್ತರ ಓಜನಹಳ್ಳಿ ಮತ್ತು ತಬಲಾ ವಾದಕರು, ಗದ್ದುಗೆ ಪೂಜೆ ಮಾಡುವರಿಗೆ ಬಟ್ಟೆಗಳನ್ನು ಕಾಣಿಕೆಯಾಗಿ ನೀಡುವ ಮೂಲಕ ತಮ್ಮ ಭಕ್ತಿ ಸೇವೆ ಸಲ್ಲಿಸಿದರು.

ಮಠದ ಭಕ್ತರನ್ನು ಉದ್ದೇಶಿಸಿ ಮಾತನಾಡುತ್ತ ಬಸರಾಜೇಶ್ವರ ಸ್ವಾಮಿಗಳ ಪವಾಡಗಳನ್ನು ಮತ್ತು ಪುರಾಣದ ಇತಿಹಾಸ ತಿಳಿಸುತ್ತ ಇಂತಹ ಶ್ರೀದೇವಿ ಪುರಾಣ ಪ್ರವಚನ ಮಾಡುವುದರಿಂದ ಸಮಾಜದಲ್ಲಿ ಶಾಂತಿ ಸ್ಥಾಪಿಸಲು ಸಾಧ್ಯವೆಂದು ಡಾ.ಷಣ್ಮುಖಯ್ಯ ತೋಟದ ತಿಳಿಸಿದರು.

ಪುರಾಣ ಮಂಗಳೋತ್ಸವದ ಬಳಿಕ ಲಘು ರಥೋತ್ಸವದ ಮೂಲಕ ಬನ್ನಿ ಗಿಡಕ್ಕೆ ಪೂಜೆ ಮಾಡಿ ಬನ್ನಿ ಮುಡಿದರು.

ಕಾರ್ಯಕ್ರಮದಲ್ಲಿ ಮೈನಹಳ್ಳಿ ಮತ್ತು ಸುತ್ತ ಮುತ್ತಲಿನ ಗ್ರಾಮದ ಯತ್ನಟ್ಟಿ ಗ್ರಾಮದ ಭಕ್ತರು, ಭಜನಾ ಸಂಘ, ಮಠದ ಸಮಿತಿಯವರು ಸಂಭ್ರಮದಿಂದ ಭಾಗವಹಿಸಿದ್ದರು. ಮಠದ ಭಕ್ತರಾದ ಸಿದ್ದಣ್ಣನವರು ಕಾರ್ಯ್ರಕ್ರಮದ ನಿರೂಪಣೆ ಮಾಡಿದರು.

ಮಾನ್ವಿ ತಾಲೂಕಿನ ಕರೆಗುಡ್ಡ ಗ್ರಾಮದಲ್ಲಿನ ಶ್ರೀ ಮಹಾಂತೇಶ್ವರ ಮಠದಲ್ಲಿ ದಸರಾ ಹಬ್ಬದ ಅಂಗವಾಗಿ ಶಾಂಭವಿ ದೇವಿಗೆ ಶಾಸಕ ಹಂಪಯ್ಯನಾಯಕ ಭೇಟಿ ನೀಡಿ ಪೂಜೆ ಸಲ್ಲಿಸಿ ಶ್ರೀ ಮಹಾಂತಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಆಶೀರ್ವಾದ ಪಡೆದರು.

ಜಿಲ್ಲೆಗೆ ಸಾಹಿತ್ಯ ಸಮ್ಮೇಳನ ರಥಜ್ಯೋತಿ ನಾಳೆ

ರಾಯಚೂರು: ಮಂಡ್ಯದಲ್ಲಿ ಡಿ.20ರಿಂದ ನಡೆಯುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ರಾಜ್ಯದುದ್ದಕ್ಕೂ ಆರಂಭಿಸಿರುವ ರಥಜ್ಯೋತಿ ಅ.16 ಹಾಗೂ 17 ರಂದು ರಾಯಚೂರು ಜಿಲ್ಲೆಯಲ್ಲಿ ಸಂಚರಿಸಲಿದೆ ಎಂದು ಕಸಾಪ ಜಿಲ್ಲಾಧ್ಯಕ್ಷ ರಂಗಣ್ಣ ಪಾಟೀಲ ಅಳ್ಳುಂಡಿ ತಿಳಿಸಿದ್ದಾರೆ.

16 ರಂದು ಯಾದಗಿರಿ ಜಿಲ್ಲೆಯಿಂದ ಲಿಂಗಸೂಗೂರಿಗೆ ಬೆಳಿಗ್ಗೆ 8ಕ್ಕೆ ರಥಜ್ಯೋತಿಯೂ ಪ್ರವೇಶಿಸಲಿದ್ದು, ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಸಾರ್ವಜನಿಕರೊಂದಿಗೆ ಸ್ವಾಗತಿಸಲಾಗುವುದು. ನಂತರ ದೇವದುರ್ಗ ಮಾರ್ಗವಾಗಿ ರಾಯಚೂರು ನಗರಕ್ಕೆ ರಾತ್ರಿ ಆಗಮಿಸಿ ವಾಸ್ತವ್ಯ ಇರಲಿದೆ.17ರಂದು ರಂದು ಬೆಳಗ್ಗೆ 8 ಗಂಟೆಗೆ ಕನ್ನಡ ಜ್ಯೋತಿ ರಥಯಾತ್ರೆ ಆರಂಭವಾಗಿ ರಾಯಚೂರು, ಮಾನ್ವಿ, ಸಿರಿವಾರ, ಮಸ್ಕಿ, ಸಿಂಧನೂರ ಮಾರ್ಗಗಳಲ್ಲಿ ಸಂಚರಿಸಿ ಸಂಜೆ ಕೊಪ್ಪಳ ಜಿಲ್ಲೆಗೆ ಬೀಳ್ಕೊಡಲಾಗುವುದು. ಈ ಜ್ಯೋತಿ ರಥಯಾತ್ರೆಯಲ್ಲಿ ಪ್ರತಿಯೊಬ್ಬ ಕನ್ನಡಿಗರು ಭಾಗವಹಿಸಿ ಯಶಸ್ವಿಗೊಳಿಸಬೇಕು. ಜಿಲ್ಲೆಗಳಲ್ಲಿ ಸಂಚರಿಸುವ ವೇಳೆಯಲ್ಲಿ ಎಲ್ಲಾ ತಾಲೂಕಿನ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಪದಾಧಿಕಾರಿಗಳು ಸಂಘ ಸಂಸ್ಥೆಯವರನ್ನು ಸಂಪರ್ಕಿಸಿ ಕಾರ್ಯಕ್ರಮಗಳ ಯಶಸ್ವಿಗೆ ಸಹಕರಿಸಲು ತಿಳಿಸಿದ್ದಾರೆ.

ದೇವಿ ಪುರಾಣ ಮಹಾ ಮಂಗಲೋತ್ಸವ

ಕುಷ್ಟಗಿ: ಪಟ್ಟಣದ ಶಾಖಾಪುರ ರಸ್ತೆಯಲ್ಲಿರುವ ಶ್ರೀಕಾಳಿಕಾದೇವಿ ದೇವಸ್ಥಾನದಲ್ಲಿ ಶ್ರೀ ವಿಶ್ವಕರ್ಮ ಸಮಾಜದಿಂದ ಆಯೋಜಿಸಿದ್ದ 37ನೇ ವರ್ಷದ ಶ್ರೀದೇವಿ ಪುರಾಣ ಮಹೋತ್ಸವದ ಮಂಗಲೋತ್ಸವ ಅದ್ದೂರಿಯಾಗಿ ಸೋಮವಾರ ನಡೆಯಿತು. ದಸರಾ ಹಿನ್ನೆಲೆ ಪ್ರತಿ ವರ್ಷದಂತೆ 37ನೇ ವರ್ಷದ ಶ್ರೀ ದೇವಿ ಪುರಾಣ ಮಹೋತ್ಸವವು ಅ.3 ರಿಂದ ಅ.12ರ ವಿಜಯದಶಮಿ ವರೆಗೆ ಜರುಗಿತು. ಪುರಾಣದ ನಿಮಿತ್ತ ಪ್ರತಿದಿನ ಶ್ರೀ ಕಾಳಿಕಾದೇವಿಗೆ ಅಲಂಕಾರ, ಅಭಿಷೇಕ, ಪೂಜೆಯೊಂದಿಗೆ ಸಂಜೆ 7 ರಿಂದ ರಾತ್ರಿ, 9ರ ವರೆಗೆ ಪುರಾಣ ಪಠಣ ಹಾಗೂ ಪ್ರವಚನ ಕಾರ್ಯಕ್ರಮ ನೆರವೇರಿತು. ಅ. 12ರ ವಿಜಯ ದಶಮಿಯ ಸಂಜೆ ಪುರಾಣ ಮಹಾಮಂಗಲ ನಂತರ ಶ್ರೀದೇವಿಯ ಪುರಾಣ ಗ್ರಂಥ ಮೆರವಣಿಗೆ ಹಾಗೂ ಶಮಿ ವೃಕ್ಷಕ್ಕೆ ತೆರಳಿ ಬನ್ನಿ ಮುಡಿಯುವ ಕಾರ್ಯಕ್ರಮ ಜರುಗಿತು. ಸೋಮವಾರ ಬೆಳಗ್ಗೆ ವಿಶ್ವಕರ್ಮ ಸಮಾಜ ಬಾಂಧವರಿಂದ ಶ್ರೀದೇವಿ ಪುರಾಣ ಗ್ರಂಥ ಹಾಗೂ ಭಾವಚಿತ್ರ ಮೆರವಣಿಗೆ ಸಕಲ ವಾದ್ಯ ವೈಭವಗಳೊಂದಿಗೆ ಕುಷ್ಟಗಿ ಪಟ್ಟಣದ ಬೀದಿಯಲ್ಲಿ ನಡೆಯಿತು. ಸತತ 9 ದಿನಗಳ ಶ್ರೀದೇವಿ ಪುರಾಣ ಪ್ರವಚನವನ್ನು ನಾಗಲಿಂಗ ಬಡಿಗೇರ, ಪಠಣವನ್ನು ದೇವೇಂದ್ರಪ್ಪ ಕಮ್ಮಾರ, ಹಾರ್ಮೋನಿಯಂ ಶೇಷಗಿರಿ ಸೋನಾರ, ತಬಲಾ ಸಾಥ್ ಅಡಿವೆಪ್ಪ ಪತ್ತಾರ ನೀಡಿ ಪುರಾಣ ಕಾರ್ಯಕ್ರಮ ನೆರವೇರಿಸಿದರು. ವಿಶ್ವಕರ್ಮ ಸಮಾಜ ದ ತಾಲೂಕಾ ಧ್ಯಕ್ಷ ಶರಣಪ್ಪ ಬಡಿಗೇರ, ಜಿಲ್ಲಾ ಉಪಾಧ್ಯಕ್ಷ ರಾಮ ಚಂದ್ರಪ್ಪ ಬಡಿಗೇರ, ನಗರ ಅಧ್ಯಕ್ಷ ಸಿದ್ದಪ್ಪ ಬಡಿಗೇರ, ಮಾನಪ್ಪ ಕಮ್ಮಾರ ಇದ್ದರು.

ಎಫ್‌ಕೆಸಿಸಿಐ ಸದಸ್ಯ ತ್ರಿವಿಕ್ರಮ ಆಯ್ಕೆ



ರಾಯಚೂರು ಜಿಲ್ಲಾ ವಾಣಿಜ್ಯೋದ್ಯಮ ಸಂಘದಿಂದ ತ್ರಿವಿಕ್ರಮ ಜೋಶಿ ಅವರನ್ನು ಸನ್ಮಾನಿಸಿದರು.

ರಾಯಚೂರು: ಕರ್ನಾಟಕ ವಾಣಿಜ್ಯೋದ್ಯಮಿಗಳ ಮಹಾ ಸಂಸ್ಥೆಯ ವ್ಯವಸ್ಥಾಪನಾ ಸಂಸ್ಥೆಗೆ ತ್ರಿವಿಕ್ರಮ ಜೋಶಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಬಾರಿಯ ಕರ್ನಾಟಕ ವಾಣಿಜ್ಯೋದ್ಯಮ ಮಹಾ ಸಂಸ್ಥೆ ಚುನಾವಣೆಯಲ್ಲಿ ರಾಯಚೂರು ಜಿಲ್ಲಾ ವಾಣಿಜ್ಯೋದ್ಯಮ ಸಂಘದ ಪ್ರತಿನಿಧಿಯಾಗಿ ಸ್ಪರ್ಧಿಸಿದ್ದ ಅವರು ರಾಯಚೂರು, ಕೊಪ್ಪಳ, ಯಾದಗಿರಿ ವಿಭಾಗದಿಂದ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅವರ ಆಯ್ಕೆಯ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲಾ ವಾಣಿಜ್ಯೋದ್ಯಮ ಸಂಘದಿಂದ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಅಧ್ಯಕ್ಷ ಎಸ್ ಕಮಲ್ ಕುಮಾರ ಜೈನ್, ಮಾಜಿ ಸಂಸದ ಬಿ.ವಿ ನಾಯಕ, ಪ್ರಧಾನ ಕಾರ್ಯದರ್ಶಿ ಜಂಬಣ್ಣ ಯಕ್ಷಾಸಪೂರು, ಹರವಿ ನಾಗನಗೌಡ, ಕೆ ಹೇಮಣ್ಣ ಸೇರಿದಂತೆ ವಾಣಿಜ್ಯೋದ್ಯಮಗಳು ಉಪಸ್ಥಿತರಿದ್ದರು.

ರಂಗರಥ ರಂಗೋತ್ಸವ ಇಂದಿನಿಂದ ಆರಂಭ



ರಾಯಚೂರು: ಭಗತ್ ಸಾಂಸ್ಕೃತಿಕ ಸೇವಾ ಸಂಘದಿಂದ ಅ.15ರಿಂದ ಮೂರು ದಿನಗಳ ಕಾಲ ಕನ್ನಡ ಭವನದಲ್ಲಿ ರಂಗರಥ ರಂಗೋತ್ಸವ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ವಿ.ಎನ್.ಅಕ್ಕಿ ತಿಳಿಸಿದರು. ನಗರದ ಪತ್ರಿಕಾಭ ವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಂಗ ಭೂಮಿ ಉಳಿಸುವ ಉದ್ದೇಶದಿಂದ ಆಯೋಜಿಸುವ ಕಾರ್ಯಕ್ರಮಗಳಿಗೆ ಬಡ ಕಲಾವಿದರಿಗೆ ಪಂ. ಸಿದ್ದರಾಮ ಜಂಬಲದಿನ್ನಿ ರಂಗಮಂದಿರದ ಬಾಡಿಗೆ ನಿಭಾಯಿಸಲು ಕಷ್ಟವಾಗುತ್ತಿದೆ. ದಿನಕ್ಕೆ 10-15 ಸಾವಿರ ಬಾಡಿಗೆ ಭರಿಸುವುದು ಕಷ್ಟಸಾಧ್ಯ ಅಲ್ಲದೆ ಪ್ರಾಯೋಜಕತ್ವ ಸಿಕ್ಕರೂ ಅಸಾಧ್ಯವೂ ಹೌದು ಎಂದ ಅವರು ಅದಕ್ಕಾಗಿ ಪರ್ಯಾಯವಾಗಿ ವಿಶಾಲವಾದ ಭವನವಿಲ್ಲದ ಕಾರಣಕ್ಕೆ ಕನ್ನಡ ಭವನವನ್ನೂ ಸಹಿತ ಸಾಂಸ್ಕೃತಿಕ ಮಂದಿರವಾಗಿಸುವ ಉದ್ದೇಶವೂ ರಂಗೋತ್ಸವದ ಹಿಂದಿದೆ. ಅ.15ರ ಸಂಜೆ ಆರಂಭವಾಗುವ ಮೂರು ದಿನಗಳ ರಂಗೋತ್ಸವಕ್ಕೆ ಏಮ್ಸ್ ಹೋರಾಟ ಸಮಿತಿ ಸಂಚಾಲಕ ಡಾ.ಬಸವರಾಜ ಕಳಸ ಉದ್ಘಾಟಿಸಲಿದ್ದಾರೆ. ಮೂರು ದಿನಗಳ ರಂಗೋತ್ಸವವನ್ನು ಸಿರಗುಪ್ಪ ತಾಲೂಕಿನ ಸಿರಿಗೇರಿಯ ಧಾತ್ರಿ ರಂಗಸಂಸ್ಥೆಯ ಕಲಾವಿದರು ನಡೆಸಿಕೊಡಲಿದ್ದಾರೆ. ಮೊದಲ ದಿನ ಶ್ರೀಕೃಷ್ಣ ಸಂಧಾನ, 16ರಂದು ಮೋಳಿಗೆ ಮಾರಯ್ಯ ಅವರ ನಾಟಕ ಪ್ರದರ್ಶನವಾಗಲಿದೆ. 17ರಂದು ನಿನಾಸಂ ರಂಗನಿರ್ದೇಶಕ ಪ್ರವೀಣ ರೆಡ್ಡಿ ಗುಂಜಹಳ್ಳಿ, ನಿರ್ಮಲಾ ವೇಣುಗೋಪಾಲ ಸನ್ಮಾನಿಸಲಾಗುತ್ತಿದೆ.

ವಿಶ್ವವಾಣಿ
ಆರಾಮ
ಬೆಂಗಳೂರು ಮಂಗಳವಾರ 15-10-2024
ಅನುದಿನವೂ ವಿರಾಮಕ್ಕೆ ಒಂದು ನೆಪ

ಚಿತ್ತ **ವಿಹಾರ**

ನೆಮ್ಮದಿಯ ಬದುಕು

ರಾಜ್ಯದ ದೊರೆಯು ಐಷಾರಾಮಿ ಬದುಕು ಸಾಗಿಸುತ್ತಿದ್ದನು. ಕೈಗೊಂದು ಕಾಲಿಗೊಂದು ಆಳು. ಅರಮನೆ ತುಂಬಾ ಅರಸಿಯರು, ಮಂತ್ರಿಗಳು. ಒಂದು ಸಾರಿ ರಾಜ್ಯಭಾರ ಮಾಡಲು ನಿರ್ಧರಿಸಿ ಕುದುರೆ ಏರಿ ಹೊರವಲಯದಲ್ಲಿ ಹೋಗುತ್ತಿರುವಾಗ ಮರದಡಿ ಒಬ್ಬ ಮುನಿ ಧ್ಯಾನ ಮಾಡುತ್ತಾ ಕುಳಿತಿದ್ದನ್ನು ಕಂಡನು.

ಸ್ವಲ್ಪ ಹೊತ್ತು ಅಲ್ಲಿಯೇ ನಿಂತು ಋಷಿಯ ಚಲನವಲನ ವೀಕ್ಷಿಸಿದನು. ಧ್ಯಾನದಿಂದ ಎಚ್ಚೆತ್ತ ಋಷಿಯ ಮುಖ ಕಂಡಾಗ ಪ್ರಸನ್ನಚಿತ್ತವಾಗಿತ್ತು. ಈ ದೃಶ್ಯ ಕಂಡು ರಾಜನಿಗೆ ಆಶ್ಚರ್ಯ ವಾಯಿತು. ನಾನು ರಾಜ. ಐಷಾರಾಮಿ ಬದುಕು ನನ್ನದಾಗಿದ್ದರೂ ಮನಸ್ಸಿನ ಸಂತೋಷ ನನಗೆ ಮರಿಚೀಕೆ ಯಾದುದು. ಆದರೆ ಆ ಋಷಿಗೆ ಇರಲು ಮನೆಯಲ್ಲಿ ಉಡಲು ಸರಿಯಾದ ಬಟ್ಟೆಯಲ್ಲಿ. ತಿನ್ನಲು ಜಾಸ್ತಿ ಆಹಾರವಿಲ್ಲ. ಆದರೂ ಆ ಋಷಿ ಎಷ್ಟೊಂದು ಸಂತೃಪ್ತ ನಾಗಿರುವನು ಎಂದು ತಿಳಿದು ಆ ಋಷಿಯ ಬಳಿ ಹೋಗಿ ಕೇಳಿದನು. ಆಗ ಮುನಿಯು 'ನಾನು ಸತ್ತಾಗಲೇ ನಿನಗೆ ಸಂತಸ' ಎಂದನು. ಇದರಿಂದ ಕುಪಿತಗೊಂಡ ರಾಜ ತನ್ನ ಬಳಿಯಿರುವ ಭರ್ಜಿ ತೆಗೆದು ಮುನಿಯನ್ನು ಇರಿಯಲು ಮುಂದಾದ. ಆಗ 'ನಾನು ಇದನ್ನೇ ಹೇಳಿದ್ದು...ನಿನ್ನಲ್ಲಿರುವ ನಾನೆಂಬ ಅಹಂ ದೂರವಾದರೆ ನಿನಗೆ ಸಂತಸ ಪ್ರಾಪ್ತಿ ಯಾಗುತ್ತದೆ' ಎಂದನು ಆ ಮುನಿ. ಆಗ ರಾಜನಿಗೆ ತನ್ನ ತಪ್ಪಿನ ಅರಿವಾಗಿ ತದನಂತರಎಲ್ಲರ ಜೊತೆ ಎಲ್ಲರ ಅಭಿಪ್ರಾಯ ಮನ್ನಿಸಿ ಎಲ್ಲರೊಳಗೊಂದಾಗಿ ಬದುಕಲು ನಿರ್ಧರಿಸಿದನು. ಆಗ ಆತನಲ್ಲಿ ಸಂತಸ ತುಂಬಿತು. ನಮ್ಮ ಸುತ್ತಲಿನ ಸಮಾಜದಲ್ಲೂ ಇಂತಹ ವ್ಯಕ್ತಿಗಳನ್ನು ಗಮನಿಸ ಬಹುದು; ಕೆಲವರು ಸಿರಿವಂತರಾದರೂ, ಸಾಕಷ್ಟು ನೆಮ್ಮದಿ ಇಲ್ಲದೇ ಇರುವವರು; ಇನ್ನು ಕೆಲವರು ಸರಳ ಜೀವನ ನಡೆಸಿ ದರೂ, ಸಂತಸದಿನದ ಇರುವುದನ್ನು ಕಾಣಬಹುದು. ಬಾಹ್ಯದ ಆಡಂಬರಕ್ಕಿಂತ, ಮನಸ್ಸಿನ ನೆಮ್ಮದಿ ಮುಖ್ಯ; ಇದನ್ನು ಗಮನದಲ್ಲಿಟ್ಟುಕೊಂಡು ಜೀವನ ನಡೆಸುವುದನ್ನು ಕಲಿತಾಗ, ಬದುಕಿನಲ್ಲಿ ಸಂತಸ, ನೆಮ್ಮದಿ ಕೂಡಿಬರುತ್ತದೆ.

● **ರಂಗನಾಥ ಎನ್. ವಾಲ್ಮೀಕಿ**

ನೀಡುವುದರಿಂದ ಸುಖ

ಮಾನವ ಜನ್ಮ ದೊಡ್ಡದು. ನಮಗೆ ಈ ಮನುಷ್ಯ ಜನ್ಮ ದೊರಕಿದ್ದು ಅನೇಕ ಜನ್ಮದ ಪುಣ್ಯಫಲ, ಅದನ್ನು ಸದುಪಯೋಗ ಪಡಿಸಿಕೊಳ್ಳ ಬೇಕು ಎಂದು ದಾಸರು ತಿಳಿಸುತ್ತಾರೆ. ಜೀವನದಲ್ಲಿ ಸ್ವಲ್ಪ ವಾದರೂ ಪರರಿಗೆ ಸಹಾಯ ನೀಡುವ ಒಳ್ಳೆಯ ಗುಣವು ಇರಬೇಕು. ಸಹಾಯ ಮಾಡುವುದರಲ್ಲಿ ಸಿಗುವ ಆನಂದ ಮತ್ತೆ ಯಾವುದೇ ಕಾರ್ಯ ಮಾಡುವುದರಿಂದ ಸಿಗುವು ದಿಲ್ಲ. ನಾವು ಮಾಡುವ ಸಹಾಯಕ್ಕೆ ಅವರಿಂದ ಮತ್ತೇನೋ ಒಂದನ್ನು ಪಡೆಯುವ ನಿರೀಕ್ಷೆ ಇಟ್ಟುಕೊಳ್ಳಬಾರದು. ಸಹಾಯ ಪಡೆದವರು ನಮ್ಮನ್ನು ಗೌರವಿಸಬೇಕು ಎಂದು ನಿರೀಕ್ಷೆ ಇಟ್ಟುಕೊಂಡರೆ, ಸಹಾಯದ ಬೆಲೆಯೇ ನಿರರ್ಥಕ. ಯಾರೋ ಕಷ್ಟದಲ್ಲಿರುತ್ತಾರೆ. ಬಹಳ ದೊಡ್ಡ ಸಹಾಯ ಮಾಡಲೇಬೇಕೆಂಬುದಿಲ್ಲ. ಉದಾಹರಣೆಗೆ ನಾವು ಓಡಾ ಡುವ ಬಸ್ ಅಥವಾ ಮೆಟ್ರೋದಲ್ಲಿ ವಯಸ್ಸಾದವರು, ಕೈಲಾಗದವರಿಗೆ ಬಸ್ ಹತ್ತಲು ಸಹಾಯ ಹಸ್ತ ನೀಡುವುದು, ಸೀಟ್ ಬಿಟ್ಟುಕೊಡುವುದು ಇಂತಹ ಸಣ್ಣ ಸಣ್ಣ ಸಹಾಯ ಮನಕ್ಕೆ ಬಹಳ ಮುದ ನೀಡುತ್ತದೆ. ನಮಗಿರುವ ಜ್ಞಾನವನ್ನು ಮುಚ್ಚಿಟ್ಟುಕೊಳ್ಳದೆ ಮತ್ತೊಬ್ಬರಿಗೆ ಧಾರೆ ಎರೆಯುವುದು, ನಮ್ಮ ಹೊಸ ಸಹೋದ್ಯೋಗಿಗೆ ಕೆಲಸ ಹೇಳಿಕೊಡುವುದು, ಓದುವ ವಿದ್ಯಾರ್ಥಿಗೆ ನಮ್ಮ ಕೈಲಾದ ಧನಸಹಾಯ ಮಾಡು ವುದು ಇವೇ ಮೊದಲಾದ ರೀತಿಯ ಸಣ್ಣ ಸಣ್ಣ ಸಹಾಯ ಗಳು ಕೂಡ ಸಹಾಯ ಮಾಡುವುದೂ ಆಗಿದೆ. ನಾವು ಸಮಾಜಕ್ಕೆ ಏನು ನೀಡುತ್ತೇವೆಯೋ ಅದು ಮತ್ತೆ ಯಾವುದೋ ರೂಪದಲ್ಲಿ, ನಮ್ಮ ಕಷ್ಟಕಾಲದಲ್ಲಿ ನಮಗೆ ದೊರಕುತ್ತದೆ ಎಂಬ ಒಂದು ಮಾತಿದೆ. ಸಹಾಯ ಮಾಡುವ ಗುಣದಿಂದ ಜೀವನ ಸಾರ್ಥಕವಾದೀತು.

● **ವಿಜಯಕುಮಾರ್ ಕಟ್ಟೆ**

ಯುವ ಕಾವ್ಯ

ಯಾರು ಅಧ್ಯಕ್ಷರು?

ಎಲ್ಲೆಡೆ ನಡೆದಿದೆ ಚರ್ಚೆ ಇಂದು
ಸಮ್ಮೇಳನಾಧ್ಯಕ್ಷ ಯಾರಾಗಬೇಕೆಂದು
ಕನ್ನಡ ಸಾಹಿತಿಯೋ ಉದ್ಯಮಿಯೋ
ಚಿತ್ರನಟನೋ ರಾಜಕಾರಣಿಯೋ?
ಆದರೆ
ಬಡ ಬೋರೇಗೌಡ ನಡೆಸಿದ್ದಾನೆ
ತನ್ನ ಕೆಲಸ ತನ್ನ ಪಾಡಿಗೆ!
ಬೇಕಿಲ್ಲ ಅವಂಗೆ ಅಧ್ಯಕ್ಷರ ಚರ್ಚೆ
ಸಾಕಿಷ್ಟೆ ಅವನಿಗೆ ತುಂಬಿದರೆ ಹೊಟ್ಟೆ

● **ರಾಯಭಾರಿ**

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com

ಫ್ಯಾಷನ್ ಡಿಸೈನ್‌ನಲ್ಲಿ ಹೊಸ ವಿನ್ಯಾಸ!

ಮೈಸೂರಿನ ರಚನಾ ವೇಣು ಎಸ್. ಇವರು ಹೊಸ ಹೊಸ ವಸ್ತ್ರವಿನ್ಯಾಸಗಳನ್ನು ರೂಪಿಸುವ ಮೂಲಕ, ಅವುಗಳಲ್ಲಿ ಆಕರ್ಷಕ ವರ್ಣ ವಿನ್ಯಾಸಗಳನ್ನು ಅಳವಡಿ ಸುವ ಮೂಲಕ, ಫ್ಯಾಷನ್ ಡಿಸೈನಿಂಗ್ ಕ್ಷೇತ್ರದಲ್ಲಿ ತಮ್ಮದೇ ಛಾಪನ್ನು ಬೀರಿದ್ದಾರೆ ಮತ್ತು ಅವರ ಉದ್ಯಮಶೀಲತೆಯು ಇದೇ ಕ್ಷೇತ್ರದಲ್ಲಿ ಮುಂದುವರಿಯುವ ಇಂದಿನ ಯುವಜನತೆಗೆ ಸ್ಫೂರ್ತಿ ನೀಡಬಲ್ಲದು.

● **ಅಜಯ್**

ಫ್ಯಾಷನ್ ಡಿಸೈನ್ ಕ್ಷೇತ್ರ ಇಂದು ವ್ಯಾಪಕವಾಗಿ ಬೆಳೆಯುತ್ತಿದೆ. ಆದರೆ, ಈ ರಂಗದಲ್ಲಿ ಸೃಜನ ಶೀಲತೆಯನ್ನು ತೋರಿ, ಜನಪ್ರಿಯತೆಯನ್ನು ಗಳಿಸು ತ್ತಿರುವವರ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ಈ ಹಿನ್ನೆಲೆಯಲ್ಲಿ ಮೈಸೂರಿನ 'ವಸ್ತ್ರಕೃತಿ' ಬುಟಿಕ್ ರೂವಾರಿ ಆಗಿರುವ ರಚನಾ ವೇಣು ಅವರು ಅಪಾರ ಭರವಸೆ ಮೂಡಿಸಿದ್ದಾರೆ. ರಚನಾ ಅವರು ಮೂಲತಃ ತುಮಕೂರಿನವರು. ಈಗ ಮೈಸೂರಿನಲ್ಲಿ ನೆಲೆಸಿದ್ದು, ಬುಟಿಕ್ ಕ್ಷೇತ್ರದಲ್ಲಿ ತಮ್ಮದೇ ವಿಶೇಷ ಪ್ರತಿಭೆಯನ್ನು ತೋರುತ್ತಿದ್ದಾರೆ. ಬಿ.ಕಾಂ. ಪದವಿ ಪಡೆದ ಬಳಿಕ ಫ್ಯಾಷನ್ ಡಿಸೈನ್‌ನಲ್ಲಿ ವಿಶೇಷ ಅಧ್ಯಯನ ನಡೆಸಿ ದರು ಮತ್ತು ಈಗ ಇದೇ ಕ್ಷೇತ್ರದಲ್ಲಿ ಹೊಸಹೊಸ ಅನ್ವೇಷಣೆಯನ್ನು ನಡೆಸುತ್ತ ಫ್ಯಾಷನ್ ಪ್ರಿಯರ ಮೆಚ್ಚುಗೆಗಳಿಸಿದ್ದಾರೆ. ಸತತ ಪರಿಶ್ರಮದ ಮೂಲಕ ನವನವೀನ ಆವಿಷ್ಕಾರಗಳನ್ನು ಕಲಿಯುತ್ತ, ಅವು ಗಳನ್ನು ಅಳವಡಿಸಿಕೊಳ್ಳುತ್ತ, ಫ್ಯಾಷನ್ ರಂಗದಲ್ಲಿ ಜನಪ್ರಿಯತೆ ಗಳಿಸುತ್ತಿದ್ದಾರೆ.

ನಮ್ಮ ದೇಶದ ಸಾಂಸ್ಕೃತಿಕ ನಗರಿ ಎಂದೇ ಹೆಸರಾಗಿರುವ ಮೈಸೂರಿನಲ್ಲಿ ಆರಂಭಿಸಿರುವ 'ವಸ್ತ್ರಕೃತಿ'ಯು ರಚನಾ ಅವರ ಮಹತ್ವಾಕಾಂಕ್ಷೆಯ ಬುಟಿಕ್. ಕಳೆದ ಹನ್ನೆರಡು ವರ್ಷಗಳಿಂದ 'ವಸ್ತ್ರಕೃತಿ'ಯ ಮೂಲಕ ವಸ್ತ್ರವಿನ್ಯಾಸದಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಈ ಮೂಲಕ ಇವರು ಉದ್ಯಮಶೀಲತೆಯನ್ನೂ ಮೈಗೂಡಿಸಿಕೊಂಡಿದ್ದಾರೆ. ಆರಂಭಿಕವಾಗಿ ನಾಲ್ಕಾರು ಜನರಿಗೆ ಉದ್ಯೋಗ ನೀಡಿದ್ದು, ಈಗ ಸುಮಾರು 22 ಮಂದಿಗೆ ಉದ್ಯೋಗದಾತರೂ ಆಗಿದ್ದಾರೆ. ಇವರ ಉದ್ಯಮಶೀಲತೆಯು ಇಂದಿನ ಯುವಜನರಿಗೆ ಒಂದು ಹೊಸ ಸ್ಫೂರ್ತಿಯನ್ನು ಒದಗಿಸುವಂತೆ ಬೆಳೆದಿದೆ ಎಂದರೆ ಅದು ಅತಿಶಯೋಕ್ತಿಯಲ್ಲ.

ಫ್ಯಾಷನ್ ಡಿಸೈನ್ ಎಂಬುದು ಒಂದು ಒಂದು ಅಪೂರ್ವ ಕಲೆ. ನಾವಿನ್ಯತೆಯೇ ಇದರ ಹೆಗ್ಗುರುತು. ಈಗಿನ ಆಧುನಿಕ ಯುಗದಲ್ಲಿ, ನಾವೀನ್ಯತೆ ಹೊಂದಿರುವ ವಿನ್ಯಾಸಗಳು, ವರ್ಣಸಂಯೋಜನೆಗಳು ಯುವಜನರ ಜನಪ್ರಿಯತೆ ಗಳಿಸುತ್ತಿವೆ. ಫ್ಯಾಷನ್ ಡಿಸೈನ್ ವಿನ್ಯಾಸದಲ್ಲಿ ಟ್ರೆಂಡ್ ಸೆಟ್ ಮಾಡುವುದು ಎಂದರೆ ನನಗೆ ಎಲ್ಲಿಲ್ಲದ ಖುಷಿ; ಅದಕ್ಕಾಗಿ ವಿಶೇಷ ಶ್ರಮ ಹಾಕುವುದಕ್ಕೂ ಹಿಂಜರಿಯುವುದಿಲ್ಲ. ನಾನು ರೂಪಿಸಿದ ಹೊಸ ವಿನ್ಯಾಸವು ಜನರ ಮೆಚ್ಚುಗೆ ಗಳಿಸಿದಾಗ ತುಂಬಾ ಸಂತಸವಾಗುತ್ತದೆ; ಅವರಿಗೂ ತೃಪ್ತಿ ಎನಿಸುತ್ತದೆ. ಇದು ನನಗೆ ಹೆಮ್ಮೆಯ ಸಂಗತಿ.

-ರಚನಾ ವೇಣು ಎಸ್.

ಆರೋಗ್ಯಕ್ಕೆ ಪೂರಕ ಹವ್ಯಾಸ

ಆರೋಗ್ಯಕರ ಜೀವನ ಶೈಲಿ ಮತ್ತು ದೇಹದ ಅಧಿಕ ತೂಕ ಇಳಿಸುವ ಕುರಿತು ಸಮಾಲೋಚನೆ ಮತ್ತು ಕೌನ್ಸೆಲಿಂಗ್ ನೀಡುವುದು ರಚನಾ ವೇಣು ಅವರ ಇನ್ನೊಂದು ಹವ್ಯಾಸ. ಸ್ವತಃ ಹಿಂದೆ ಅಧಿಕ ತೂಕ ಇದ್ದ ಇವರು, ಸೂಕ್ತ ವ್ಯಾಯಾಮ ಮತ್ತು ಆಹಾರವನ್ನು ಸಮತೋಲಿತವಾಗಿ ಬಳಸುವ ಮೂಲಕ ಇಂದು ಹದವಾದ ತೂಕವನ್ನು ಪಡೆದಿದ್ದಾರೆ. ತಾವು ತೂಕ ಇಳಿಸುವ ಕ್ಷೇತ್ರದಲ್ಲಿ ಗಳಿಸಿದ ಅನುಭವವನ್ನು ತಮ್ಮ ಹಿತೈಷಿ ಗಳೊಂದಿಗೂ ಹಂಚಿಕೊಂಡು, ಹಲವರ ತೂಕ ಇಳಿಸಲು ಸಹಕರಿಸಿದ್ದಾರೆ. ತಮ್ಮ ಪರಿಚಿತರಿಗೆ ಆರೋಗ್ಯಕರ ಜೀವನ ಶೈಲಿಯ ಟಿಪ್ಸ್ ನೀಡುವ ಹವ್ಯಾಸದಿಂದಾಗಿ, ಒಟ್ಟೂ ಸಮಾಜಕ್ಕೆ ಕೊಡುಗೆ ನೀಡುತ್ತಿದ್ದಾರೆ. ಬಾಟಿಕ್ ಕ್ಷೇತ್ರದಲ್ಲಿನ ಸಾಧನೆಯ ಜತೆಯಲ್ಲೇ, ತೂಕ ಇಳಿಸುವ ಆಪ್ತ ಸಮಾಲೋಚನೆಯನ್ನು ಹವ್ಯಾಸವಾಗಿ ಮುಂದುವರಿಸುವ ಇರಾದೆ ರಚನಾ ವೇಣು ಅವರದ್ದು.

ಹೊಸತನ ಅಗತ್ಯ

'ಫ್ಯಾಷನ್ ಡಿಸೈನ್ ಎನ್ನುವುದು ಕೇವಲ ಅನುಕರಣೆಯಲ್ಲ, ಯಾರೋ ಹಾಕಿಕೊಟ್ಟ ಹಾದಿಯಲ್ಲಿ ಸಾಗುವುದಲ್ಲ. ಬದಲಿಗೆ ಅದು ನಮ್ಮದೇ ಯೋಚನೆಯಲ್ಲಿ, ಹೊಚ್ಚ ಹೊಸತಾಗಿ ಮೂಡಬೇಕು. ಆಗ ಮಾತ್ರ ಅದು ಯುವಜನರ ಮನ್ನಣೆ ಗಳಿಸಲು ಸಾಧ್ಯ' ಎನ್ನುವುದು ರಚನಾ ಅವರ ಅಭಿಮತ.

ವಿವಿಧ ದೇಶಗಳ ವಸ್ತ್ರ ವಿನ್ಯಾಸ

ಜಗತ್ತಿನ ವಿವಿಧ ದೇಶಗಳ ಸಂಸ್ಕೃತಿ, ಜನ ಜೀವನ, ವಸ್ತ್ರ ವಿನ್ಯಾಸ, ಜೀವನ ಶೈಲಿ ಮೊದಲಾದವುಗಳನ್ನು ಗಮನಿಸುವುದಕ್ಕೆಂದು, ವಿವಿಧ ದೇಶಗಳಿಗೆ ಪ್ರವಾಸ ಹೋಗುವುದು ರಚನಾ ವೇಣು ಅವರ ಇನ್ನೊಂದು ಹವ್ಯಾಸ. ಈಗಾಗಲೇ ಸುಮಾರು 27 ದೇಶಗಳಲ್ಲಿ ಪ್ರವಾಸ ಮಾಡಿರುವ ರಚನಾ ವೇಣು ಅವರು, ಅಲ್ಲಿ ಕಂಡ ಸ್ಥಳೀಯ ಸಂಸ್ಕೃತಿಯ ವಸ್ತ್ರ ವಿನ್ಯಾಸದ ಸಕಾರಾತ್ಮಕ ಅಂಶಗಳನ್ನು ತಮ್ಮ ಬಾಟಿಕ್ ವಿನ್ಯಾಸಗಳಲ್ಲಿ ಅಳವಡಿಸುತ್ತಿದ್ದಾರೆ. ಆಯಾ ಸ್ಥಳೀಯ ವರ್ಣಮಯ ವಸ್ತ್ರ ವಿನ್ಯಾಸವು ಅವರನ್ನು ಬಹಳವಾಗಿ ಆಕರ್ಷಿಸುತ್ತದೆ ಮತ್ತು ಆ ವಸ್ತ್ರವಿನ್ಯಾಸದಲ್ಲಿ ಕಂಡ ಆಕರ್ಷಕ ಶೈಲಿಯನ್ನು ತನ್ನ ವಿನ್ಯಾಸದಲ್ಲಿ ಅಳವಡಿಸುತ್ತಾರೆ ಮತ್ತು ಇದು ಜನರ ಮೆಚ್ಚುಗೆಯನ್ನು ಸಹ ಗಳಿಸಿದೆ.

ಸೂಕ್ಷ್ಮಗ್ರಾಹಿ ಮನಸ್ಸು

ಅಂದ ಹಾಗೆ ರಚನಾ ವೇಣು ಅವರದು ಸದಾ ಕಲಿಯುವ ಮನಸ್ಸು. ಫ್ಯಾಷನ್ ಜಗತ್ತಿನ ಹೊಸ ಹೊಸ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಅಪ್‌ಡೇಟ್ ಆಗುತ್ತಲೇ ಇರುತ್ತಾರೆ. ಇದಕ್ಕಾಗಿ ಹಲವು ದೇಶಗಳನ್ನು ಸುತ್ತಿದ್ದಾರೆ. ಅಲ್ಲಿಯ ಕಲೆ, ಸಂಸ್ಕೃತಿ, ಉಡುಗೆ ತೊಡುಗೆಗಳನ್ನು ಗಮನಿಸಿ ತಮ್ಮ ಫ್ಯಾಷನ್ ವಿನ್ಯಾಸಕ್ಕೆ ಅಳವಡಿಸಿಕೊಳ್ಳುತ್ತಿದ್ದಾರೆ. ಈಗಾಗಲೇ ಸುಮಾರು 27 ದೇಶಗಳಲ್ಲಿ ಪ್ರವಾಸ ಮಾಡಿರುವ ರಚನಾ ವೇಣು ಅವರು, 'ತಮ್ಮ ಪ್ರವಾಸದ ಅನುಭವಗಳು ಹೊಸ ಹೊಸ ವಸ್ತ್ರವಿನ್ಯಾಸಗಳಿಗೆ ಸ್ಫೂರ್ತಿ ನೀಡಿವೆ ಮತ್ತು ಅದಕ್ಕಾಗಿ ಆಯಾ ದೇಶದ ಸ್ಥಳೀಯರನ್ನು ನಾನು ಅಭಿನಂದಿಸುತ್ತೇನೆ ಮತ್ತು ಅವರಿಗೆ ಧನ್ಯವಾದಗಳನ್ನು ಸಹ ಸಮರ್ಪಿಸುತ್ತೇನೆ' ಎಂದಿದ್ದಾರೆ. ಆ ಮೂಲಕ, ಹೊಸ ವಿನ್ಯಾಸಗಳಿಗೆ ಸ್ಫೂರ್ತಿ ನೀಡಿದವರನ್ನು ಸ್ಮರಿಸುವ, ಅವರ ಕೊಡುಗೆಯನ್ನು ಗುರುತಿಸುವ ಸಕಾರಾತ್ಮಕ

ಮನೋಭಾವವನ್ನು ರಚನಾ ವೇಣು ಅವರು ತೋರಿದ್ದಾರೆ.

ಉದ್ಯಮಶೀಲತೆಗೆ ಮಾದರಿ

ಫ್ಯಾಷನ್ ಡಿಸೈನ್‌ನಲ್ಲಿ ಆಸಕ್ತಿ ಹೊಂದಿರುವ ಉದ್ಯಮಶೀಲ ಯುವಜನರಿಗೆ ರಚನಾ ವೇಣು ಅವರು ಮಾದರಿಯಾಗಿದ್ದಾರೆ. ಈ ಕ್ಷೇತ್ರದಲ್ಲಿ ಅಪಾರ ಸಾಧ್ಯತೆಗಳಿವೆ, ಇದನ್ನು ಅರಿಯಲು ಬಯಸುವ ಈಗಿನ ತಲೆಮಾರಿನ ಆಸಕ್ತರಿಗೆ ಈ ಕ್ಷೇತ್ರದ ವಿಚಾರ

ಗಳನ್ನು ಹಂಚಿಕೊಳ್ಳುವಲ್ಲಿ ತಾನು ಸದಾ ಮುಂದು ಎಂದು ರಚನಾ ವೇಣು ಎಸ್. ಅವರು ಹೇಳಿದ್ದಾರೆ. ಮೈಸೂರಿನಲ್ಲಿರುವ ಇವರ 'ವಸ್ತ್ರಕೃತಿ' ದಿನವೂ ಹಲವು ಫ್ಯಾಷನ್ ಆಸಕ್ತರ ಆಸಕ್ತಿಗೆ ಅನುಗುಣವಾಗಿ ಹೊಸ ಹೊಸ ವಿನ್ಯಾಸಗಳನ್ನು ರೂಪಿಸುತ್ತಿರುವುದು, ವಿಶೇಷ ವರ್ಣ ವಿನ್ಯಾಸದಲ್ಲಿ ಸಕಾರಾತ್ಮಕ ಪ್ರಯೋಗಗಳನ್ನು ಮಾಡುತ್ತಿರುವುದು, ಅಂತಹ ಹೊಸ ವಿನ್ಯಾಸಗಳು, ವರ್ಣ ವಿನ್ಯಾಸಗಳು ಜನರ ಮೆಚ್ಚುಗೆ ಗಳಿಸುತ್ತಿ ರುವುದು ನಿಜಕ್ಕೂ ಹೆಮ್ಮೆಯ ವಿಷಯ ಎನಿಸಿದೆ.

ವಾಲಿಯ ಕೋಟೆ

● **ಗವಿಸಿದ್ದೇಶ್.ಕೆ ಕಲ್ಲುಗುಡಿ**

ಹಂಪೆಯ ಸಮೀಪ ಇರುವ ಆನೆಗೊಂದಿಯಿಂದ 500 ಮೀಟರ್ ಅಂತರದಲ್ಲಿ ಸಿಗುವ ಪರ್ವತವೇ ವಾಲಿಪರ್ವತ. ಇದು ವಾಲಿ ನೆಲೆಸಿದ ಜಾಗ ಎನ್ನಲಾಗಿದ್ದು, ಈಗಲೂ ವಾಲಿ ನೆಲಸಿದ್ದ ಗುಹೆ ಇಲ್ಲಿದೆ. ಇಲ್ಲಿ 500 ವರ್ಷಗಳ ಇತಿಹಾಸ ಇರುವ ದುರ್ಗಾದೇವಿಯ ದೇವಸ್ಥಾನ, ಪುಷ್ಕರಣೀ, ನವಗ್ರಹವನ, ನಕ್ಷತ್ರವನ, ಹಾಗೂ ಸುಮಾರು 850 ದೇಶೀ ಹಸುಗಳಿ ರುವ ವಿಶಾಲವಾದ ಗೋಶಾಲೆಗಳಿ ವೆ. ವಾಲಿಪರ್ವತದಲ್ಲಿರುವ ದುರ್ಗಾ ದೇವಾಲಯ ವನ್ನು ಕೃಷ್ಣದೇವರಾಯ ಸ್ಥಾಪಿಸಿದದ್ದ ಎನ್ನಲಾ ಗಿದ್ದು, ಗುಹೆಯ ಮುಂಭಾಗ 100 ಮೀಟರ್ ಅಂತರದಲ್ಲಿ ಪುಷ್ಕರಣಿ ಇದೆ. ಬೆಟ್ಟವನ್ನು ಏರಬೇಕಾದರೆ ಮೊದಲು ಸಿಗುವುವುದೇ ಗೋಶಾಲೆ. ಉತ್ತರಭಾರತದಿಂದ ಬಂದಂತಹ ಸಾಧುವೊಬ್ಬರ ಕರ್ತೃತ್ವಶಕ್ತಿಗೆ ಉದಾಹರಣೆ ಈ ಗೋಶಾಲೆ. ಉತ್ತರಭಾರತದವರೇ ಅಧಿಕ ಸಂಖ್ಯೆಯಲ್ಲಿ ಬರುತ್ತಿದ್ದು, 'ನಿತ್ಯ ಅನ್ನದಾನ' ನಡೆಯುತ್ತಿದೆ.

ನಿಜವಾದ ಆತ್ಮಜ್ಞಾನ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದು ಸಲ ಜನಕ ಮಹಾರಾಜನು ಒಂದು ದೊಡ್ಡ ಸಭೆಯನ್ನು ಏರ್ಪಡಿಸಿ, ಆ ಸಭೆಗೆ, ಎಲ್ಲಾ ದೊಡ್ಡ, ದೊಡ್ಡ ಆತ್ಮಾಜ್ಞಾನಿಗಳಿಗೂ ಆಮಂತ್ರಣವಿತ್ತನು. ಪರಮ ಸತ್ಯದ ಉದ್ಘಾಟನೆಯಾಗಬೇಕೆಂದು ಅವನ ಇಚ್ಛೆಯಾಗಿತ್ತು. ಪರಮ ಸತ್ಯವನ್ನು ತೋರಿಸಿಕೊಟ್ಟ ಜ್ಞಾನಿಗೆ ಬೇಕಾದಷ್ಟು ಧನ ಧಾನ್ಯಗಳನ್ನು ಉಡುಗೊರೆಯಾಗಿ ಕೊಟ್ಟು,ಗೌರವಿಸುವೆನೆಂದು ತಿಳಿಸಿದ್ದನು.

ಯಾರು ತತ್ವಶಾಸ್ತ್ರದಲ್ಲಿ ಪ್ರವೀಣರೋ, ಯಾರು ಜನ ಸಾಮಾನ್ಯರಿಗೆ ಚಿರಪರಿಚಿತರೊ, ಯಾರು ಹೆಚ್ಚು ವಿದ್ಯಾಶಾಸ್ತ್ರ ಸಂಪನ್ನರೋ, ಮೇಧಾವಿ ಪಂಡಿತರು ಗಳೊ, ಇವರಿಗೆಲ್ಲಾ ಆಹ್ವಾನವನ್ನು ಕಳಿಸಿದ್ದನು. ಆದರೆ ಒಬ್ಬ ಮೇಧಾವಿಗೆ ಮಾತ್ರ ಆತ ಆಹ್ವಾನವನ್ನು ಕಳಿಸಿರಲಿಲ್ಲ. ಅವನೇ ಅಷ್ಟಾವಕ್ರ. ಅವನ ಮೈ ಎಂಟು ಕಡೆಗಳಲ್ಲಿ ಊನವಾಗಿತ್ತು. ಅವನನ್ನು ನೋಡಿದ ತಕ್ಷಣ ಯಾರಿಗಾದರೂ ಮನಸ್ಸಿನಲ್ಲಿ ಅಸಹ್ಯ ಮೂಡು ವಂತಿತ್ತು. ಅಂತಹ ಶರೀರದಲ್ಲಿ ಆತ್ಮಜ್ಞಾನವಿರಲು ಹೇಗೆ ಸಾಧ್ಯ? ಹಾಗಾಗಿ ಅವನಿಗೆ ಆಹ್ವಾನ ಕಳಿಸಿರ ಲಿಲ್ಲ. ಆದರೆ ಅವನ ತಂದೆಗೆ ಆಹ್ವಾನ ಕಳಿಸಲಾಗಿತ್ತು.

ಆದರೆ ಅಷ್ಟಾವಕ್ರ, ಏನೋ ತುರ್ತು ಕೆಲಸದ ಕಾರಣದಿಂದ ತಂದೆಯನ್ನು ನೋಡಲಿಕ್ಕಾಗಿ, ಜನಕನ ಆಸ್ಥಾನಕ್ಕೆ ಬರ ಬೇಕಾದಂತ ಸಂದರ್ಭ ಬಂದಿತು. ಅವನು ಆಸ್ಥಾನದೊಳಗೆ ಬಂದೊಡನೆ ಅವನನ್ನು ನೋಡಿ ಅಲ್ಲಿದ್ದವರೆಲ್ಲರೂ ಜೋರಾಗಿ ನಗತೊಡಗಿ ದರು. ನಿಜವಾಗಿಯೂ ಯಾರಾದರೂ ಅವನನ್ನು ನೋಡಿದರೆ ನಗು ಬರುವ ಹಾಗೆಯೇ ಇದ್ದ. ಅವನ ಕುರೂಪ ಮೈ, ಭಗ್ನವಾದ ಸೊಟ್ಟ ಸೊಟ್ಟ ವಾದ ದೇಹ, ಅವನು ನಡೆದಾಡಿದಾಗ ಯಾರಿಗೆ ಆದರೂ ನಗುಬರಿಸುವಂತಿತ್ತು. ಎಲ್ಲರೂ ಅವನನ್ನು ನೋಡಿ, ಹಾಸ್ಯ ಮಾಡುತ್ತಾ ಜೋರಾಗಿ ನಕ್ಕಾಗ ಅಷ್ಟಾವಕ್ರ ತಾನು ಕೂಡ ಅವರೆಲ್ಲರಿಗಿಂತ ಜೋರಾಗಿ ನಗತೊಡಗಿದ. ಅವನೂ, ನಗುವುದನ್ನು ನೋಡಿ ಎಲ್ಲರೂ ಸ್ತಬ್ಧರಾಗಿ ಸುಮ್ಮನಾಗಿ ಬಿಟ್ಟರು. ಎಲ್ಲರಿಗೂ ಅವನು, ತಾನೇ ಏಕೆ ನಗುತ್ತಿದ್ದಾನೆ? ಎಂದು ಆಶ್ಚರ್ಯವಾಯಿತು. ಆಗ ಜನಕ ಮಹಾರಾಜ, 'ಉಳಿದವರೆಲ್ಲರೂ ಏಕೆ ನಗುತ್ತಿದ್ದಾ ರೆಂದು ನನಗೆ ಅರ್ಥವಾಯಿತು, ಆದರೆ ನೀನು ಕೂಡಾ ಗಹಗಹಿಸಿ ನಕ್ಕಿದ್ದೇಕೆ? ಎಂದು ನನಗೆ ಅರ್ಥವಾಗಲಿಲ್ಲ' ಎಂದ.

ಆಗ ಅಷ್ಟಾವಕ್ರ, 'ಈ ಚಮ್ಮಾರರ ಸಭೆಯನ್ನು ನೀನು ಪಂಡಿತರ ಸಭೆ ಎಂದು ತಿಳಿದುಕೊಂಡಿರು ವೆಯಲ್ಲಾ, ಅದನ್ನು ನೋಡಿ ನನಗೆ ನಗು ಬಂತು. ಇವರೆಲ್ಲರೂ ಕೂಡ ಚಮ್ಮಾರರೆ! ಇವರಿಗೆ ಕಾಣುವುದು ಶರೀರ, ಅದರ ಚರ್ಮ ಮಾತ್ರ. ಒಳಗಿರುವ ಜ್ಞಾನ ಯಾರಿಗೂ ಕಾಣುತ್ತಲೇ ಇಲ್ಲ. ನಾನು ಇಲ್ಲಿ ರುವ ಎಲ್ಲರಿಗಿಂತ ನೇರವಾಗಿರುವವನು. ಇವರೆಲ್ಲರಿಗೂ ನಾನು ಅಷ್ಟಾವಕ್ರನಾಗಿ, ಕುರೂಪಿ ಯಾಗಿ ಕಾಣುತ್ತಿರುವೆ. ನನ್ನೊಳಗಿರುವ ಜ್ಞಾನ ಮಾತ್ರ ಇವರ್ಯಾರಿಗೂ ಕಾಣುತ್ತಿಲ್ಲ. ಇಂಥವರಿಂದ ನೀನು ಜ್ಞಾನ ಪಡೆಯಬೇಕೆಂಬಾಸೆಯನ್ನು ಇಟ್ಟುಕೊಂಡಿರು ವೆಯಲ್ಲಾ, ಇದು ಮರಳನ್ನು ಹಿಂಡಿ, ಎಣ್ಣೆ ತೆಗೆಯುವ ಪ್ರಯತ್ನದಂತೆ ಕಾಣುತ್ತಿದೆ. ನಿನಗೆ ನಿಜ ವಾಗಿಯೂ ಜ್ಞಾನಪಡೆಯಬೇಕೆಂಬ ಆಸೆ ಇದ್ದರೆ ನೀನು ನನ್ನ ಬಳಿಗೆ ಮಾತಾಡು ' ಎಂದು ಹೇಳಿದ.

ಅಷ್ಟಾವಕ್ರರ ಮಾತು ಸರಿಯಾಗಿಯೇ ಇತ್ತು. ಹೊರಗಿನ ಕಣ್ಣುಗಳು ಬಹಿರಂಗವನ್ನು ಮಾತ್ರ ನೋಡಬಲ್ಲವು. ಅವುಗಳಿಗೆ, ಒಳಗಿರುವ ಜ್ಞಾನ ಕಾಣಿಸುವುದಿಲ್ಲ.

ನಾವು ಕೂಡ ಜೀವನದಲ್ಲಿ ಇಂತಹ ಅನೇಕ ತಪ್ಪುಗಳನ್ನು ಮಾಡುತ್ತೇವೆ. ಯಾವುದೇ ಪುಸ್ತಕವನ್ನು ಅದರ ಮುಖಪುಟ ದಿಂದ ಅಳೆಯಬಾರದು ಎಂದು ಹೇಳುತ್ತಾರೆ. ಆದರೆ ವ್ಯಕ್ತಿ ಗಳನ್ನು ಅವರ ಹಣ, ಪೋಷಕು ಅಧಿಕಾರದಿಂದ ಅನೇಕ ಬಾರಿ ನಾವು ಅಳೆದುಬಿಡುತ್ತೇವೆ. ಸ್ಥಿತಿವಂತರು ಏನೇ ಮಾಡಿದರು ಕೂಡ ಅದನ್ನು ಸಹನೀಯವಾಗಿಸಿಕೊಂಡು ಬಿಡು ತ್ತೇವೆ. ಅದೇ ತಪ್ಪನ್ನು ಸಾಮಾನ್ಯರು ಮಾಡಿದಾಗ ಅದನ್ನೇ ದೊಡ್ಡ ವಿಷಯವನ್ನಾಗಿಸಿ ಅವರು ಮತ್ತೆ ತಲೆಯೆತ್ತದಂತೆ ನಡೆಸಿ ಕೊಳ್ಳುತ್ತೇವೆ. ಕ್ಷಮೆಗೂ ಈ ರೀತಿಯ ಮಲತಾಯಿ ಧೋರಣೆ ಬೇಕೆ. ಒಬ್ಬರ ಬಣ್ಣ, ಲಕ್ಷಣ, ಹಣ, ಅಂತಸ್ತು, ಅಧಿಕಾರ ಎಂದಿಗೂ ಕೂಡ ಅವರನ್ನು ತೂಗುವ ಅವರ ಗುಣಗಳನ್ನು ಪರಿಚಯಿಸುವ ವಿಷಯಗಳಾಗ ಬಾರದು. ವಿದ್ಯಾ ವಂತರಾದ ನಾವು ಇನ್ನಾದರೂ ಆಂತ ರ್ಯದ ಜ್ಞಾನಕ್ಕೆ, ಸೌಂದರ್ಯಕ್ಕೆ ಬೆಲೆ ನೀಡಿದಾಗ ನಮ್ಮ ಮುಂದಿನ ಜನಾಂಗಕ್ಕೆ ಒಳ್ಳೆಯ ಬದುಕನ್ನ ಕಟ್ಟಿಕೊಡುತ್ತೇವೆ.

ಪ ದ ಬಂ ಧ

1		2	■	3		4	■	5
■	■	6			■	7		
8			■		■		■	
	■	9	10	■	11		12	■
13	14	■	15			■	16	17
■	18	19		■	20	21	■	
22	■		■	23	■	24		
25			■	26			■	■
	■	27			■	28		

ಎಡದಿಂದ ಬಲಕ್ಕೆ

1. ಕವನ ರಚಿಸುವ ಕವಿಯ ಇನ್ನೊಂದು ಹೆಸರು (3)
3. ಒಡೆಯ ಅಥವಾ ಯಜಮಾನ (3)
6. ವಸ್ತುಗಳ ಹರಾಜು, ಏಲಂ (3)
7. ಸುವಾಸನೆಯುಕ್ತ ಒಂದು ಬೇರು (3)
8. ಪ್ರೀತಿಯ ಸಂಕೇತವಾಗಿ ಕೊಡುವ ಹೂವು (3)
9. ಬರಹದ ಚಿನ್ಹೆ (2)
11. ಮನದ ಮಧ್ಯೆಯೇ ಇರುವ ಮನ್ಮಥ (3)
13. ಮತ್ತೊಂದು ವಂಶ (2)
15. ಗಂಡು ಕುರಿ (3)
16. ಎರಡಕ್ಷರದ ಅವಸ್ಥೆ (3)
18. ವರ್ತಕ ಅಥವಾ ವ್ಯಾಪಾರಿ (3)
20. ಕಳವು ಮಾಡಿ ಎನ್ನಿ (2)
24. ವಾದ್ಯವನ್ನು ನುಡಿಸುವವನು (3)
25. ಮರಿ ಬಿದ್ದ ಪ್ರಪಾತ (3)
26. ಕೆಡುಕನ್ನು ಉಂಟು ಮಾಡುವುದು (3)
27. ಬಿದಿರಿನ ಮೊಳಕೆ ಪದಾರ್ಥಕ್ಕೂ ಬಳಸುತ್ತಾರೆ (3)
28. ಸದ್ದಿನೊಂದಿಗೆ ಬಂದಿರುವ ಆನೆ (3)

ಮೇಲಿನಿಂದ ಕೆಳಕ್ಕೆ

2. ಮನದೊಳಗೇನೋ ಗೊಂದಲ (4)
3. ಆನೆಯನ್ನು ನಡೆಸುವವನು (3)
4. ಲಲಿತಕಲೆಗಳನ್ನು ತಿಳಿದವನು (4)
5. ಪಕ್ಷದ ಐದನೆಯ ದಿನ (3)
10. ಪೆಟ್ಟಿಗೆಗೆ ಮತ್ತೊಂದು ಹೆಸರು (3)
11. ನಮ್ಮೊಂದಿಗೆ ಸದಾ ಇರಬೇಕಾದ ಕರುಣೆ, ದಯೆ (3)
12. ಮತ್ತೊಂದು ಒಡವೆ (2)
14. ಶ್ರೀರಾಮನ ಮಗ (2)
17. ಅಲ್ಲಿ ಇಲ್ಲಿ ಭಿಕ್ಷೆ ಬೇಡುವವನು (3)
19. ಮದುವೆಯಾದ ಮಹಿಳೆಯ ಕೊರಳಲ್ಲಿರುವ
21. ದಿವಸವೂ ಬರುವ ಸೂರ್ಯ (4)
22. ವೆಂಕಟನಿಗೂ ಬರಬಹುದಾದ ಕಷ್ಟ (3)
23. ಮೈಯೆಲ್ಲಾ ಹಳದಿ ಬಣ್ಣಕ್ಕೆ ತಿರುಗಿದ ರೋಗ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ತುರುಸು 4. ಸಮುದ್ರ 6. ಗುರುಕುಲ 7. ಗುಡಾಣ 9. ಅಳಿಲು 10. ಕುಂತಿ 11. ಖುರಪುಟ 13. ಮರುಭೂಮಿ 15. ಗೊಟ್ಟ 16. ಬೆದರು 18. ಹಾರಕ 20. ಪಾವಟಿಗೆ 21. ಆಮಿಷ 22. ಪುಳಕ.

ಮೇಲಿನಿಂದ ಕೆಳಕ್ಕೆ: 1. ತುಡುಗು 2. ಸುಗುಣ 3. ನಾಕುತಂತಿ 5. ಮುರಳಿ 8. ಡಾವರ 9. ಅತ್ತರು 10. ಕುಂಟ 12. ಪುಕಾರು 13. ಮಟ್ಟ 14. ಭೂಚರ 15. ಗೊತ್ತುವಳಿ 17. ದಶಮಿ 18. ಹಾಗೆವು 19. ಕಳಂಕ.

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಸಮಾಚಾರ ಸಣ್ಣದಲ್ಲ

ಸ್ವ-ಉದ್ಯೋಗ ತರಬೇತಿ 21ರಿಂದ

ಕುಮಟಾ: ಕೆನರಾ ಬ್ಯಾಂಕ್ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಕುಮಟಾದಲ್ಲಿ ಅಕ್ಟೋಬರ್‌ನಲ್ಲಿ ಉಚಿತ ತರಬೇತಿ ಆಯೋಜಿಸಿದ್ದು, ಆಸಕ್ತರು ಇದರ ಪ್ರಯೋಜನ ಪಡೆಯಬಹುದಾಗಿದೆ. 21 ರಿಂದ 30ರ ವರೆಗೆ, 10 ದಿನಗಳ ಕೋಳಿ ಸಾಕಾಣಿಕೆ ತರಬೇತಿ ಮತ್ತು ಅಗರಬತ್ತಿ, ಫಿನೈಲ್, ಮೇಣದ ಬತ್ತಿ, ಮುಂತಾದ ಗೃಹ ಬಳಕೆ ವಸ್ತುಗಳ ತಯಾರಿಕಾ ತರಬೇತಿ ನಡೆಯಲಿದೆ. ತರಬೇತಿಯು ಊಟ ಮತ್ತು ವಸತಿ ಸಹಿತ ಉಚಿತವಾಗಿರುತ್ತದೆ. ಅಭ್ಯರ್ಥಿಯು ನಿರುದ್ಯೋಗಿಯಾಗಿದ್ದು, ಸ್ವ ಉದ್ಯೋಗದಲ್ಲಿ ಆಸಕ್ತಿ ಹೊಂದಿರಬೇಕು. ವಯೋಮಿತಿ 18 ರಿಂದ 45 ವರ್ಷಗಳು. ಹಾಗೂ ಕನಿಷ್ಟ ವಿದ್ಯಾರ್ಹತೆ ಕನ್ನಡ ಓದಲು ಬರೆಯಲು ಬರಬೇಕು ಮತ್ತು ತರಬೇತಿಗೆ ಅನುಗುಣವಾಗಿ ಕನಿಷ್ಠ ಜ್ಞಾನವಿರಬೇಕು. ಆಸಕ್ತರು ನೇರವಾಗಿ ನಿರ್ದೇಶಕರು, ಕೆನರಾ ಬ್ಯಾಂಕ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಕೈಗಾರಿಕಾ ವಸಾಹತು ಪ್ರದೇಶ, ಹೆಗಡೆ ರಸ್ತೆ, ಕುಮಟಾ -581343 ಉತ್ತರ ಕನ್ನಡ ಜಿಲ್ಲೆ ಇವರಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅಲ್ಲದೇ ದೂರವಾಣಿ ಸಂಖ್ಯೆ: 9538281989, 9916783825, 8880444612, 9449860007 ಕ್ಕೆ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಸಾಗರ ಕವಚ ಅಣುಕು ಪ್ರದರ್ಶನ

ಕಾರವಾರ: ಕರಾವಳಿ ಭಾಗದಲ್ಲಿ ರಕ್ಷಣೆ ಮತ್ತು ಭದ್ರತೆ ಕುರಿತು ವಿವಿಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕ್ರಮ ಕೈಗೊಳ್ಳುವ ಬಗ್ಗೆ ಜಿಲ್ಲೆಯಲ್ಲಿ ಅ 16 ಮತ್ತು 17

ರಂದು ರಕ್ಷಣಾ ವ್ಯವಸ್ಥೆಯ ಅಣಕು ಪ್ರದರ್ಶನ ಸಾಗರ ಕವಚವನ್ನು ಜಿಲ್ಲಾಡಳಿತ, ಪೊಲೀಸ್ ಇಲಾಖೆ, ಭಾರತೀ ಯ ನೌಕಾಪಡೆ, ಕೋಸ್ಟ್ ಗಾರ್ಡ್ ಮತ್ತು ರಾಜ್ಯದ ಕರಾ ವಳಿ ಕಾವಲು ಪಡೆಯ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಲಾಗುತ್ತಿದೆ. ಈ ಕಾರ್ಯಾಚರಣೆಗೆ ಸಂಬಂಧಪಟ್ಟಂತೆ ಸಂಬಂಧಿಸಿದ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಇಲಾಖೆಗಳು ಭಾಗವಹಿಸುತ್ತಿದ್ದು, ಕಾರ್ಯಾ ಚರಣೆಯ ಅವಧಿಯಲ್ಲಿ ಸಾರ್ವಜನಿಕರು ಯಾವುದೇ ಗೊಂದಲ ಹಾಗೂ ಆತಂಕಕ್ಕೆ ಒಳಗಾಗಬಾರದು ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮೀಪ್ರಿಯ ತಿಳಿಸಿದ್ದಾರೆ.

ಕೃಷ್ಣ ಪದಕಿಗೆ ಜನ್ನ ಕಾವ್ಯ ಪ್ರಶಸ್ತಿ

ಶಿರಸಿ: ಮಾಣಿಕ್ಯ ಪ್ರಕಾಶನ,ಹಾಸನ ಇವರು ಕೊಡಮಾಡುವ 2024ನೇ ಸಾಲಿನ ರಾಜ್ಯಮಟ್ಟದ ಜನ್ನ ಕಾವ್ಯ ಪ್ರಶಸ್ತಿಗೆ ಶಿರಸಿಯ ಕೃಷ್ಣ ಪದಕಿಯವರನ್ನು



ಆಯ್ಕೆ ಮಾಡಲಾಗಿದೆ. ನವೆಂಬರ್ 10 ರಂದು ಸಂಸ್ಕೃತ ಭವನ ಹಾಸನದಲ್ಲಿ ಹಮ್ಮಿಕೊಂಡಿರುವ ಪ್ರಕಾಶನದ ರಾಜ್ಯಮಟ್ಟದ ಕವಿಕಾವ್ಯ ಸಂಭ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಾಶಕಿ ದೀಪಾ ಉಪ್ಪಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆಗೆ ಬಿದ್ದ ಕಂಪನಿ ಟೆಂಟ್

ಬೀದಿಗೆ ಬಿದ್ದ ಚಿತ್ತರಗಿ ಶ್ರೀಕುಮಾರ ವಿಜಯ ನಾಟಕ ಕಂಪನಿ ಕಲಾವಿದರು

ಮಾಳಿಂಗರಾಯ ಪೂಜಾರ ಗದಗ

ಜಿಲ್ಲಾದ್ಯಂತ ಒಂದು ವಾರದಿಂದ ಸುರಿಯುತ್ತಿರುವ ಚಿತ್ತಿ ಮಳೆ ಸಾಕಷ್ಟು ಅವಾಂತರ ಸೃಷ್ಟಿಸಿದ್ದು, ಮುಂಡರಗಿಯಲ್ಲಿ ಒಂದು ನಾಟಕ ಕಂಪನಿಯೇ ಧರೆಗೆ ಉರುಳಿದ್ದು, ರಂಗಭೂಮಿ ಕಲಾವಿದರ ಬದುಕು ಬೀದಿಗೆ ಬಂದಿದೆ.

ಜಿಲ್ಲೆಯ ಮುಂಡರಗಿ ಪಟ್ಟಣದಲ್ಲಿ ಚಿತ್ತರಗಿಯ ಶ್ರೀಕುಮಾರವಿಜಯ ನಾಟಕ ಕಂಪನಿಯು ಕಳೆದ ಒಂದು ವರ್ಷದಿಂದ ಇಲ್ಲಿ ನಾಟಕ ಪ್ರದರ್ಶನ ಮಾಡುತ್ತಾ ಬಂದಿದೆ. ಈ ನಾಟಕ ಕಂಪನಿಯು ತಮ್ಮ ಕಲಾ ಪ್ರದರ್ಶನದಿಂದ ಸಾಕಷ್ಟು ಕಲಾ ಪ್ರೇಕ್ಷಕರನ್ನು ತನ್ನತ್ತ ಸೆಳೆದಿದೆ. ಶುಕ್ರವಾರ ರಾತ್ರಿ ಗಾಳಿ ಸಹಿತ ಸುರಿದ ಮಳೆಯಿಂದ ನಾಟಕ ಕಂಪನಿಯು ಸಂಪೂರ್ಣ ನೆಲಕ್ಕೆ ಬಿದ್ದಿದ್ದರಿಂದ ಸಾಕಷ್ಟು ಪ್ರಮಾಣದಲ್ಲಿ ಹಾನಿಯಾಗಿದೆ.

ಈ ನಾಟಕ ಕಂಪನಿಯಲ್ಲಿ ಸುಮಾರು 25 ಕುಟುಂಬದವರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ನಾಟಕ ಕಂಪನಿಯಲ್ಲಿ ತಮ್ಮ ಕಲೆಯನ್ನು ವ್ಯಕ್ತಪಡಿಸಿ, ಸಂಸಾರದ ಡೋಣಿ ಸಾಗಿಸುತ್ತಿದ್ದರು. ನಾಟಕ ಪ್ರದರ್ಶನ ಮಾಡುವವರ ಜೀವನ ಒಂದು ರೀತಿಯಲ್ಲಿ ಅಲೆಮಾರಿ ಜೀವನವಾಗಿದೆ ಈ ರೀತಿ ನಾಟಕ ಕಂಪನಿ ನೆಲಕ್ಕೆ ಬಿದ್ದರೆ ಇವರ ಜೀವನವೇ ಬೀದಿಗೆ ಬಂದಂತಾಗಿದೆ.

ನಾಟಕ ಕಂಪನಿಯ ಶೆಡ್ ಸಮೇತ ನೆಲಕ್ಕೆ ಬಿದ್ದಿದ್ದರಿಂದ ಪ್ರದರ್ಶನದ ಮಾಡಲು ಬಳಸುವ ಲೈಟ್, ಪರದೆ, ಕಾರ್, ಬೈಕ್, ಕುರ್ಚಿ, ಟೇಬಲ್, ಕಲಾವಿದರ ಡ್ರೆಸ್ ಸೇರಿದಂತೆ ಮುಂತಾದವರು ಸಾಮಗ್ರಿಗಳು ಎಲ್ಲಾ ಮಳೆಗೆ ಹಾಳಾಗಿ ಹೋಗಿದ್ದು, ಸುಮಾರು 8 ರಿಂದ 10 ಲಕ್ಷ ನಷ್ಟವಾಗಿದೆ. ಸರಕಾರ ಕೂಡಲೇ ನಾಟಕ ಪ್ರದರ್ಶನ ಮಾಡುವ ಕಂಪನಿಯ ಮಾಲೀಕರ ಸ್ಥಿತಿ ಚಿಂತಾಜನಕವಾಗಿದೆ.

ಚಿತ್ತರಗಿಯ ಶ್ರೀಕುಮಾರವಿಜಯ ನಾಟಕ ಕಂಪನಿ ಗಾಳಿ ಸಹಿತ ಮಳೆಗೆ ನೆಲಕ್ಕೆ ಬಿದ್ದಿರುವುದು.

> ಮಳೆಯಿಂದ ನಾಟಕ ಕಂಪನಿಯು ನೆಲಕ್ಕೆ ಬಿದ್ದಿದ್ದು, ಇದರಿಂದ ಸುಮಾರು 8 ರಿಂದ 10 ಲಕ್ಷ ನಷ್ಟವಾಗಿದೆ. ನಮ್ಮ ನಾಟಕ ಕಂಪನಿಯಲ್ಲಿ 25 ಕ್ಕೂ ಕುಟುಂಬಗಳು ಕೆಲಸ ಮಾಡುತ್ತಾರೆ ಸರಕಾರ ಕೂಡಲೇ ಪರಿಹಾರ ನೀಡಬೇಕು.
>
> -ಮಂಜುನಾಥ ಜಾಲಿಹಾಳ
> ಚಿತ್ತರಗಿ, ನಾಟಕ ಕಂಪನಿಯ ಅಧ್ಯಕ್ಷರು

ರಂಗಭೂಮಿಯಲ್ಲಿ ಅಭಿಯಾನ ಮಾಡುವ(ನಟಿಸುವ) ಕಲಾವಿದರ ಹಿಂದೆ ಬಹಳಷ್ಟು ವ್ಯೆಥೆ ಇರುತ್ತದೆ ಟಿವಿ ಮಾಧ್ಯಮ ಬಂದಾಗ ನಾಟಕಗಳನ್ನು ಯಾರು ನೋಡುತ್ತಾರೆ ಎಂದು ಅನೇಕರು ಜರಿದಿದ್ದರು. ಇನ್ನು ಸಿನಿಮಾರಂಗ ಕಾಲಿಟ್ಟಾಗಲ್ಲಂತೂ ಎಂದು ಹಲವು ಮಂದಿ ವಾದ ಮಂಡಿಸಿದ್ದರು. ಆದರೆ ರಂಗಭೂಮಿ ಪೇಕ್ಷಕರ ಸಂಖ್ಯೆ ದಿನದಿನಕ್ಕೆ ಹೆಚ್ಚಾಗುತ್ತಿದೆ.

ಇತ್ತೀಚೆಗೆ ಕನ್ನಡ ರಂಗಭೂಮಿಯಲ್ಲಿ ಯುವ ತಲೆಮಾರು ನಾಟಕ ರಚನೆ, ನಿರ್ದೇಶನ ಹಾಗೂ ಪ್ರಯೋಗಗಳಲ್ಲಿ ಅನೇಕ ಹೊಸತನಗಳನ್ನು ಹೊತ್ತು ತರುತ್ತಿದೆ. ಒಟ್ಟಾರೆ ಕಲಾಪ್ರೇಕ್ಷಕರು ನಾಟಕ ಕಂಪನಿಯತ್ತ ಸೆಳೆದಿದೆ ಆದರೆ ಈಗ ಮಳೆಯಿಂದ ನಾಟಕ ಕಂಪನಿಗಳು ಸಾಕಷ್ಟು ಪ್ರಮಾಣದಲ್ಲಿ ನಷ್ಟವನ್ನು ಅನುಭವಿದೆ.

ನರೇಗಾದ ನೆರವು ಪಡೆದು ಬದುಕು ಬದಲಾಯಿಸಿಕೊಳ್ಳಿ

ಉದ್ಯೋಗ ಖಾತ್ರಿ ನಡಿಗೆ ಸಬಲತೆಯಡೆಗೆ ಕಾರ್ಯಕ್ರಮದಲ್ಲಿ ಗ್ರಾಮೀಣ ಉದ್ಯೋಗದ ಸಹಾಯಕ ನಿರ್ದೇಶಕ ಚಂದ್ರಶೇಖರ.ಬಿ.ಕಂದಕೂರ ಮಾತನಾಡಿದರು.

ಗದಗ: ಗ್ರಾಮೀಣ ಪ್ರದೇಶದ ಕೂಲಿಕಾರರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ವೈಯಕ್ತಿಕ ಕಾಮಗಾರಿಗಳಿಗೆ ಹೆಚ್ಚು ಒತ್ತು ನೀಡಿ,ಆರ್ಥಿಕ ನೆರವು ಪಡೆದು ಬದುಕು ಬದಲಾಯಿಸಿಕೊಳ್ಳುವ ಮೂಲಕ ಆರ್ಥಿಕವಾಗಿ ಸದೃಢ ಆಗಬೇಕು ಎಂದು ಗ್ರಾಮೀಣ ಉದ್ಯೋಗದ ಸಹಾಯಕ ನಿರ್ದೇಶಕ ಚಂದ್ರಶೇಖರ.ಬಿ. ಕಂದಕೂರ ಹೇಳಿದರು.

ಹೊಳೆ ಆಲೂರ ಗ್ರಾಮದ ಗ್ರಾಮ ಪಂಚಾಯತಿ ಸಭಾಂಗಣದಲ್ಲಿ ನಡೆದ ಉದ್ಯೋಗ ಖಾತ್ರಿ ನಡಿಗೆ ಸಬಲತೆಯಡೆಗೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಗ್ರಾಮೀಣ ಬಾಗದ ಕೂಲಿಕಾರರ ಜೀವನಮಟ್ಟ ಸುಧಾರಿಸುವ ಕಾಮಗಾರಿಗಳು ನರೇಗಾ ಯೋಜನೆಯಡಿ ಲಭ್ಯವಿದ್ದು, ಗ್ರಾಮ ಪಂಚಾಯತ ಕಚೇರಿಗೆ ಭೇಟಿ ನೀಡಿ ಮಾಹಿತಿ ಪಡೆದು ಯೋಜನೆಯ ಲಾಭ ಪಡೆದುಕೊಳ್ಳಿ ಎಂದರು. ಉದ್ಯೋಗ ಖಾತ್ರಿ ಯೋಜನೆಯಲ್ಲಿ ವರ್ಷಕ್ಕೆ 100 ದಿನಗಳವರೆಗೆ ಕೂಲಿಕಾರರಿಗೆ ಕೆಲಸ ನೀಡುತ್ತೇವೆ.

ಗ್ರಾಮ ಪಂಚಾಯತ ಅಧ್ಯಕ್ಷೆ ಚಂದವ್ವ ಪೂಜಾರಿ, ಉಪಾಧ್ಯಕ್ಷೆ ಜೋತಿ ಗಾಣಗೇರ, ಸದಸ್ಯರಾದ ಸಂತೋಷ ದೊಡ್ಡಮನಿ, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಬಸವರಾಜ ಗಿರಿತಮ್ಮನ್ನವರ, ತಾಲೂಕ ಪಂಚಾಯತಿ ತಾಂತ್ರಿಕ ಸಂಯೋಜಕ ಪ್ರವೀಣ ಸೂಡಿ, ತಾಲೂಕ ಪಂಚಾಯತಿ ಐಇಸಿ ಸಂಯೋಜಕ ಮಂಜುನಾಥ ಎಸ್, ಬಿ ಎಫ್ ಟಿ ಈರಣ್ಣ ದಳವಾಯಿ, ಕಾರ್ಯದರ್ಶಿ ಮಲ್ಲಿಕಾರ್ಜುನ ಭಾವಿ, ಸ್ವಸಂಘದ ಮಹಿಳಾ ಸದಸ್ಯರು ಗ್ರಾಮ ಪಂಚಾಯಿತಿ ಸಿಬ್ಬಂದಿಗಳು ಹಾಗೂ ಗ್ರಾಮಸ್ಥರು ಹಾಜರಿದ್ದರು.

33 ವರ್ಷ ಹೋರಾಟದ ಸಾರ್ಥಕತೆಗೆ ಪ್ರಯತ್ನಿಸೋಣ

ಅರಣ್ಯ ಅತಿಕ್ರಮಣದಾರರ 'ಬೆಂಗಳೂರು ಚಲೋ' ಬಗ್ಗೆ ಸಭೆ

ಶಿರಸಿ: ಅರಣ್ಯ ಭೂಮಿ ಹಕ್ಕಿಗಾಗಿ ನಿರಂತರ 33 ವರ್ಷ ಹೋರಾಟದ ಸಾರ್ಥಕತೆಗೆ ಎಲ್ಲರು ಸಹಕಾರ, ಮತ್ತು ಪ್ರಯತ್ನ ಅಗತ್ಯ. ಇಲ್ಲದಿದ್ದರೇ ಅರಣ್ಯವಾಸಿಗಳು ಅತಂತ್ರರಾಗುವರು ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ಇಲ್ಲಿನ ಸ್ಥಳಿಯ ಹೋರಾಟಗಾರರ ವೇದಿಕೆಯ ಕಾರ್ಯಾಯಲದಲ್ಲಿ ನಡೆದ ನ.7 ರ ಬೆಂಗಳೂರು ಚಲೋ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯಿದೆ ಅಡಿಯಲ್ಲಿ ಶೇ 2 ರಷ್ಟು ಅರ್ಜಿಗೆ ಮಾತ್ರ ಹಕ್ಕು ಪತ್ರ ದೊರಕ್ಕಿದ್ದು ಶೇ 73 ರಷ್ಟು ಅರ್ಜಿಗಳು ಪ್ರಥಮ ಹಂತದಲ್ಲಿ ತಿರಸ್ಕರಿಸಲಾಗಿದೆ. ಈ ಹಿನ್ನಲೆಯಲ್ಲಿ 33 ವರ್ಷದಿಂದ ಹೋರಾಟಕ್ಕೆ ಜರುಗುತ್ತಿದ್ದರು. ನ್ಯಾಯ ಸಿಗಿದೇ ಇರುವುದು ವಿಷಾದಕಾರ. ಇಂದು ಹೋರಾಟವು ತಾರ್ತಿಕ ಹಂತಕ್ಕೆ ತಲುಪಿದ್ದು ಈ ಹಂತದಲ್ಲಿ ಸರ್ಕಾರದ ಇಚ್ಛಾಶಕ್ತಿ ಪ್ರದರ್ಶಿಸಬೇಕೆಂದು ಅವರು ಹೇಳಿದರು.

6000 ಸಾವಿರ ಮೇಲ್ಮವಿ: ಅಸಮರ್ಪಕ ಜಿ.ಪಿ.ಎಸ್ ಮೇಲ್ಮನವಿ ಅಭಿಯಾನದ ಅಡಿಯಲ್ಲಿ ಶಿರಸಿ ತಾಲೂಕಿನಲ್ಲಿ 6000 ಸಾವಿರಕ್ಕೂ ಮಿಕ್ಕಿ ಉಚಿತವಾಗಿ ಜಿಪಿ.ಎಸ್ ಮೇಲ್ಮನವಿ ಕಾರ್ಯ ಜರುಗಿಸಲಾಗಿದೆ ಎಂದು ಅಧ್ಯಕ್ಷ ರವೀಂದ್ರ ನಾಯ್ಕ ಹೇಳಿದರು.

ಸಭೆಯಲ್ಲಿ ಜಿಲ್ಲಾ ಸಂಚಾಲಕರಾದ ನೆಹರು ನಾಯ್ಕ ಬಿಳೂರು, ನಾಗರಾಜ ಎಸ್ ದೇವಸ್ಥಳ ಅಚನಳ್ಳಿ, ರಾಜು ನರೇಬೈಲ್, ಇಬ್ರಾಹೀಂ ಗೌಡಳ್ಳಿ, ಎಮ್.ಆರ್. ನಾಯ್ಕ ಕಂಡ್ರಾಜಿ, ಮಲ್ಲೇಶಿ ಬದನಗೋಡ, ಸ್ವಾತಿ ಜೈನ್, ಚಂದ್ರಶೇಖರ ಶಾನಭಾಗ ಬಂಡಲ ಮುಂತಾದವರು ಇದ್ದರು.

ಅರಣ್ಯವಾಸಿಗಳು ಕಾನೂನು ಸಂಕೋಲೆಯಲ್ಲಿ ಬಂಧನ: ಸಿದ್ದಾಪುರ ಅರಣ್ಯ ಭೂಮಿ ಅರಣ್ಯೇತರ ಚಟುವಟಿಕೆಗೆ ಕಾನೂನು ಮತ್ತು ನ್ಯಾಯಾಲಯದ ನಿರ್ಭಂದನೆಯಿಂದ ಅರಣ್ಯ ಭೂಮಿ ಹಕ್ಕಿನಿಂದ ವಂಚಿತರಾಗಿ ಅರಣ್ಯವಾಸಿಗಳು ಕಾನೂನು ಸಂಕೋಲೆಯ ಕೊಂಡಿಯಲ್ಲಿ ಬಂಧನವಾಗಿದ್ದಾರೆ ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಅಭಿಪ್ರಾಯ ವ್ಯಕ್ತಪಡಿಸಿದರು.

ಸಭೆಯಲ್ಲಿ ನಾಗಪತಿ ಗೌಡ ಹುತ್ಗಾರ್, ಸಂಚಾಲಕ ಸೀತರಾಮ .ಎಚ್. ಗೌಡ ಹುಕ್ಕಳ್ಳಿ, ಗ್ರಾಮಪಂಚಾಯತ್ ಸದ್ಯಸ ರವೀಶ ಗೌಡ, ಜಿಲ್ಲಾ ಸಂಚಾಲಕ ಹರಿಹರ ನಾಯ್ಕ ಓಂಕಾರ್, ಸೀತರಾಮ ಲಿಂಗು ಗೌಡ ಹಿರಿಯ ದುರೀಣರು, ಹಿರಿಯ ಸಾಮಾಜಿಕ ಕಾರ್ಯಕರ್ತ ವಿ.ಜಿ. ಹೆಗಡೆ, ದ್ಯಾವ ಗೌಡ ಹೆಗ್ಗೆ, ಹನುಮಂತ ಗೌಡ ಬೀಳೆಕಲ್‌ಮನೆ, ಬೀರಾ ಕೆರಿಯಾ ಗೌಡ ಹುಕ್ಕಳಿ ಮುಂತಾದವರು ಮಾತನಾಡಿದರು. ವೆಂಕಟ ರಮಣ ಗೌಡ ಕುಳ್ಳೆ ಉಪಸ್ಥಿತರಿದ್ದರು.

ಅ. 16, 17 ರಂದು ಅರಣ್ಯ ಅತಿಕ್ರಮಣದಾರರ ಸಭೆ

ಜೋಯಿಡಾ ತಾಲೂಕಿನ ಅರಣ್ಯ ಅತಿಕ್ರಮಣದಾರರ ಸಭೆ ಅ. 16 ಬೆಳಗ್ಗೆ 10 ಗಂಟೆಗೆ ಜೋಯಿಡಾ ಕುಣಬಿ ಭವನದಲ್ಲಿ ಹಾಗೂ ಅ. 17 ರಂದು ಹೊನ್ನಾವರ ಮೂಡ ಗಣಪತಿ ದೇವಸ್ಥಾನದಲ್ಲಿ ನಡೆಸಲಾಗುವುದು ಎಂದು ಅರಣ್ಯ ಭೂಮಿ ಹಕ್ಕು ಹೋರಾಟಗಾರರ ವೇದಿಕೆಯ ಅಧ್ಯಕ್ಷ ರವೀಂದ್ರ ನಾಯ್ಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನೋಂದಾಯಿತ ಸದಸ್ಯರಿಗೆ ಗುರುತಿನ ಪತ್ರ ವಿತರಿಸಲಾಗುವ ಸಭೆಯಲ್ಲಿ ನ.7 ರಂದು ಬೆಂಗಳೂರಿನಲ್ಲಿ ನಡೆಯಲಿರುವ ಬೆಂಗಳೂರು ಚಲೋ ಕಾರ್ಯಕ್ರಮ ಕುರಿತು ಚರ್ಚಿಸಲಾಗುವುದು ಎಂದು ಅವರು ತಿಳಿಸಿದ್ದಾರೆ. ಆಸಕ್ತರು ಸಭೆಗೆ ಆಗಮಿಸಲು ಅಧ್ಯಕ್ಷ ರವೀಂದ್ರ ನಾಯ್ಕ ಪ್ರಕಟಣೆಯಲ್ಲಿ ನೀಡಿದ್ದಾರೆ.

ವಸತಿ ಪ್ರದೇಶದಲ್ಲಿ ಗ್ಯಾಸ್ ಪಂಪ್ ಬೇಡ

ಕರ್ಕಿನಾಕಾ ಸಮೀಪ ನಿರ್ಮಿಸುವ ಘಟಕಕ್ಕೆ ನಿವಾಸಿಗರ ವಿರೋಧ

ಹೊನ್ನಾವರ: ಪಟ್ಟಣದ ಕರ್ಕಿನಾಕಾ ಸಮೀಪದ ಜನವಸತಿ ಪ್ರದೇಶದಲ್ಲಿ ಗ್ಯಾಸ್ ಪಂಪ್ ನಿರ್ಮಿಸಲು ಅನುಮತಿ ನೀಡಬಾರದು ಎಂದು ಸ್ಥಳಿಯ ನಿವಾಸಿಗಳು ಪ.ಪಂ. ಮುಖ್ಯಾಧಿಕಾರಿಗಳಿಗೆ, ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು.

ಹೊನ್ನಾವರ ಹೋಬಳಿಯ ಸರ್ವೆ ನಂಬರ್ 82 ಹಿಸ್ಸಾ 9 ಕ್ಷೇತ್ರದ 0-8-0 ಪ್ರದೇಶದಲ್ಲಿ ಗ್ಯಾಸ ಬಂಕ್‌ನ್ನು ನಿರ್ಮಿಸಬಾರದು. ಈ ಪ್ರದೇಶವು ಜನವಸತಿ ಇದ್ದು, ಈ ಸರ್ವೆ ನಂಬರ್ ವಸತಿ ಉದ್ದೇಶದ ಬಗ್ಗೆ ಭೂ ಪರಿವರ್ತಿತವಾಗಿದ್ದು, ಪಾಳು ಬಿದ್ದ ಜಾಗ ಆಗಿದೆ. ಈ ಭಾಗದ ಸುತ್ತ-ಮುತ್ತಲೂ ಕೇವಲ 15-20 ಮೀಟರ್ ವ್ಯಾಪ್ತಿಯಿಂದ ಆರಂಭವಾಗುವಂತೆ ಹಲವಾರು ವಾಸ್ತವ್ಯದ ಮನೆಗಳು ಸೇರಿದಂತೆ ಅಂಗಡಿ, ಗ್ಯಾರೇಜ್, ಇಲೆಕ್ಟ್ರಾನಿಕ್ ಉಪಕರಣಗಳ ಮಳಿಗೆ, ಕ್ಲಿನಿಕ್, ಮದುವೆಯ ಮಂಟಪ ಆಟೋರಿಕ್ಷಾ ನಿಲ್ದಾಣ, ಹೋಟೆಲ್ ಇದೆ. 50 ಮೀಟರ್ ದೂರದಲ್ಲಿ ರಾಷ್ಟ್ರೀಯ ಹೆದ್ದಾರಿ ಎನ್.ಎಚ್ 66 ಹಾದು ಹೋಗಿರುದಲ್ಲದೇ, ವಿದ್ಯುತ್ ಲೈನ್ ಹಾದು ಹೋಗಿದೆ. ಇದಲ್ಲದೇ ಈ ಭಾಗದಲ್ಲಿ ಸಮರ್ಪಕ ಪಾರ್ಕಿಂಗ್ ಘನ ವಾಹನಗಳು ಬಂದು ಹೋಗಲು ಸೂಕ್ತ ಸ್ಥಳಾವಕಾಶ ಇಲ್ಲ.

ಅ.7 ಮತ್ತು 8 ರಂದು ಈ ಸ್ಥಳಕ್ಕೆ ಕೆಲವರು ಆಗಮಿಸಿ ಗ್ಯಾಸ ಬಂಕ್ ನಿರ್ಮಾಣಕ್ಕೆ ಅನುಮತಿ ದೊರೆತಿದೆ. ಶೀಘ್ರವಾಗಿ ಕಾಮಗಾರಿಯನ್ನು ಆರಂಭಿಸುವ ಬಗ್ಗೆ ಹೇಳಿದಾಗಲೇ ಸಾರ್ವಜನಿಕರು ವಿರೋಧಿಸಿದ್ದಾರೆ. ಗ್ಯಾಸ್ ಬಂಕ್ ನಿರ್ಮಿಸುವ ಉದ್ದೇಶಿಸಿದ ಸ್ಥಳವು ಮರಳು ಮಿಶ್ರಿತವಾಗಿ ತಗ್ಗು ಪ್ರದೇಶದಲ್ಲಿ ಇದೆ. ಸುತ್ತ-ಮುತ್ತಲೂ ನೂರಕ್ಕಿಂತ ಹೆಚ್ಚಿನ ವಾಸ್ತವ್ಯದ ಮನೆ ಇದ್ದು, ಗ್ಯಾಸ್ ಬಂಕ್ ನಿರ್ಮಾಣದಿಂದ ಭಯದಲ್ಲೇ ಜೀವನ ನಡೆಸುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಜನವಸತಿ ಪ್ರದೇಶದ ಜೊತೆ ಇಕ್ಕಟ್ಟಾದ ಸ್ಥಳ, ಸೂಕ್ತ ಪಾರ್ಕಿಂಗ್, ಗ್ಯಾಸ್ ಸ್ಟೋರೇಜ್ ಇತ್ಯಾದಿಗಳನ್ನು ನಿರ್ಮಾಣ ಮಾಡುವ ಬಗ್ಗೆ ಮಾನದಂಡಗಳಂತೆ ಗುಂಡಿಗಳು ಮರಳು ಮಿಶ್ರಿತ ಮಣ್ಣು ಸದೃಢತೆ ಹೊಂದಿರದ ಕಾರಣ ಕುಸಿತವಾಗುವಾಗುವ ಸಾಧ್ಯತೆಯು ಇದೆ. ಪ.ಪಂ.ಸದಸ್ಯ ಸುಬ್ರಾಯ ಗೌಡ, ಸ್ಥಳಿಯ ನಿವಾಸಿಗಳಾದ ಎಸ್.ಎಂ.ನಾಯ್ಕ, ಕೇಶವ.ನಾಯ್ಕ, ಗುರುನಾಥ ನಾಯ್ಕ, ಶೇಖರ ಮತ್ತಿತರಿದ್ದರು.

ವಿಶ್ವ ಹಿಂದೂ ಪರಿಷತ್ತಿನ ಉತ್ತರ ಕರ್ನಾಟಕ, ಶಿರಸಿ ಜಿಲ್ಲೆಯ ಮಾತೃಶಕ್ತಿ ಹಾಗೂ ದುರ್ಗಾ ವಾಹಿನಿ ವತಿಯಿಂದ ವಿವಿಧೆಡೆ ದುರ್ಗಾಷ್ಟಮಿ ಹಾಗೂ ಆಯುಧ ಪೂಜೆಯ ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು.

ಮೊರಾರ್ಜಿ ಶಾಲೆ ಮಕ್ಕಳು ರಾಷ್ಟ್ರ ಮಟ್ಟಕ್ಕೆ

ಕಾರವಾರ: ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಚಿತ್ರದುರ್ಗದಲ್ಲಿ ಆಯೋಜಿಸಲಾದ ಪ್ರೌಢ ಶಾಲಾ ರಾಜ್ಯ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ, ಕುಮಟಾ ತಾಲೂಕಿನ ಹೆಗಡೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಸಚಿನ್ ಶಿವಾನಂದ ಗೌಡ ವಿಜೇತನಾಗಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿ ದ್ದಾನೆ. ಸಿಂಧು ಹರಿಶ್ಚಂದ್ರ ನಾಯ್ಕ 7 ನೇ ತರಗತಿ ವಿದ್ಯಾ ರ್ಥಿನಿ ಪ್ರಾಥಮಿಕ ವಿಭಾಗದಲ್ಲಿ ಜಿಲ್ಲಾ ಮಟ್ಟದಲ್ಲಿ 100 ಮೀ ಓಟದಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಣ ಶಿಕ್ಷಕ ಸವಿತಾ ಗೌಡ ಇವರಿಗೆ ಉಪ ನಿರ್ದೇಶಕ ಉಮೇಶ ವೈ ಕೆ ಹಾಗೂ ಶಾಲಾ ಪ್ರಾಂಶುಪಾಲರು ರಾಜು ಬಿ ಗಾಂವಕರ ಅಭಿನಂದನೆ ಸಲ್ಲಿಸಿದ್ದಾರೆ.

ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹರಪನಹಳ್ಳಿ
ಅಸಲು ದಾವಾ ನಂ.: 88/2022

ವಾದಿಗಳು: ಶ್ರೀ ಮತಿ ಹೇಮವತಿ ಮತ್ತು ಇತರರು.

ವಿರುದ್ಧ

ಪ್ರತಿವಾದಿಗಳು: ಶ್ರೀ ಮಾಲತ್ತೇಶ ಶೆಟ್ಟಿ ಮತ್ತು ಇತರರು ಮತ್ತು ಇತರರು.

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಈ ಮೂಲಕ ಪ್ರತಿವಾದಿ ನಂ.03 ರವರಾದ ಶ್ರೀ ಸಂಜೀವಶೆಟ್ಟಿ ತಂದೆ ಲೇಟ್ ಅಂಗಡಿ ಲಿಂಗಶೆಟ್ಟಿ, ವಯಸ್ಸು 56 ವರ್ಷ, ವೃತ್ತಿ: ವ್ಯವಸಾಯ, ವಾಸ:ಚನ್ನಮ್ಮನ ಕೆರೆ, ಅಚ್ಚುಕಟ್ಟು ಪ್ರದೇಶ ಬನಶಂಕರಿ, 3ನೇ ಹಂತ , ಬೆಂಗಳೂರು ಆದ ನಿಮ್ಮ ವಿರುದ್ಧ ವಾದಿಳಾದ ಶ್ರೀಮತಿ ಹೇಮಾವತಿ ಗಂಡ ಲೇಟ್ ಮೈಲಾರಶೆಟ್ಟಿ ಮತ್ತು ಇತರರು ಸೇರಿ ಹರಪನಹಳ್ಳಿ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಲಯದಲ್ಲಿ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಆಸಲು ದಾವಾ ನಂ: 88/2022 ರ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಗೆ ಸಂಬಂಧಿಸಿದಂತೆ ದಾವಾ ಸಮನ್ಸ್‌ನ್ನು/ನೋಟೀಸ್ ಸಾಮಾನ್ಯ ಸ್ವರೂಪದಲ್ಲಿ ಹಾಗೂ ನೋಂದಾಯಿತ ಅಂಚೆಯ ಮೂಲಕ ನಿಮಗೆ ತಿಳಿಸಿದರು ಸಹ ನೀವು ಜಾರಿಯಾಗದ ಕಾರಣ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುತ್ತದೆ ಈ ದಾವೆಯ ದಿನಾಂಕ ದಿನಾಂಕ: 04.11.2024 ಬೆಳಿಗ್ಗೆ 11,00 ಗಂಟೆಗೆ ಮುದ್ದತ್ತು ಇರುತ್ತದೆ. ಕಾರಣ ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು. ಒಂದು ವೇಳೆ ಈ ಮೇಲೆ ತಿಳಿಸಿದ ದಿನದಂದು ನ್ಯಾಯಾಲಯಕ್ಕೆ ಹಾಜರಾಗಲು ನೀವು ತಪ್ಪಿದಲ್ಲ. ನಿಮ್ಮ ಗೈರು ಹಾರಿಯಲ್ಲಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. 2024 ಅಕ್ಟೋಬರ್ ತಿಂಗಳ 14 ನೇ ತಾರೀಖಿನಂದು ನ್ಯಾಯಾಲಯದ ಮಾಹರಿನೊಂದಿಗೆ ಈ ನೋಟಿಸ್ ಕೊಡಿಲಾಗಿದೆ.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಹಿರಿಯ ಶಿರಸ್ತೆದಾರರು
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಜೆ.ನ್ಯಾಯಾಲಯ
ಹರಪನಹಳ್ಳಿ.

ವಾದಿಯ ಪರ ವಕೀಲರು
ಶ್ರೀ ಕೆ. ಜಗದಪ್ಪ
ದಿನಾಂಕ:14.10.2024
ಸ್ಥಳ: ಹರಪನಹಳ್ಳಿ

IIFL FINANCE
CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ **https://gold.samil.in** ನಲ್ಲಿ **ಆನ್‌ಲೈನ್ ಮೂಲಕ 18.10.2024** ರಂದು **ಮಧ್ಯಾಹ್ನ 02:00 ರಿಂದ 05:00** ರವರೆಗೆ ನ ನಡುವೆ **ಶ್ರೀರಾಮ್ ಆಟೋಮಾಲ್ ಇಂಡಿಯಾ ಲಿಮಿಟೆಡ್** ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು / ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ವಿಫಲವಾದಲ್ಲಿ ಅದನ್ನು **28.10.2024** ರಂದು ಯಾವುದೇ ಸೂಚನೆ ಇಲ್ಲದೆ ಜಿಲ್ಲಾ ಮಟ್ಟದಲ್ಲಿ ನಿಗದಿತ ಜಿಲ್ಲಾ ಕೇಂದ್ರದಲ್ಲಿ ಮರು ಹರಾಜು ಮಾಡಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಆದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಹಾವೇರಿ-ಪಿಬಿ ರೋಡ್ ಜಿಎಲ್ - #3346 ಎ, 'ನೀಲಮ್ಮ ಆರ್ಕೇಡ್', 1ನೇ ಮಹಡಿ, ಬಸ್ ನಿಲ್ದಾಣದ ಹತ್ತಿರ, ಪಿ ಬಿ ರಸ್ತೆ, ಹಾವೇರಿ ಜಿಲ್ಲೆ, ಹಾವೇರಿ - 581110, ಕರ್ನಾಟಕ.

ಶಾಖೆಯ ಹೆಸರು: ಹಾವೇರಿ-ಹಂಗಲ್ ಜಿಎಲ್. ತಾಲೂಕು - ಹಂಗಲ್
ಚಿನ್ನದ ಸಾಲದ ಖಾತೆ ಸಂಖ್ಯೆ: GL30178056, GL24339499, GL24858885, GL24979388, GL25715568, GL25889870, GL26525000, GL26150742, GL26273063, GL26351368, GL26353787, GL26727312, GL32485208, GL26885279, GL27200794, GL27973686, GL28090620, GL28078003, GL28270083, GL28476572, GL28502654, GL28485548, GL28487529, GL28503999, GL28490223, GL28564889, GL28836490, GL29419263, GL29644584, GL29891513, GL29906218, GL30364876, GL30379776, GL30523721, GL30686924, GL30672181, GL30904178, GL30883320
ಶಾಖೆಯ ಹೆಸರು: ಹಾವೇರಿ-ಹಿರೇಕೆರೂರು ಜಿಎಲ್. ತಾಲೂಕು - ಹಿರೇಕೆರೂರು
ಚಿನ್ನದ ಸಾಲದ ಖಾತೆ ಸಂಖ್ಯೆ: GL23528625, GL26292188, GL26781570, GL26847619, GL26850839, GL27502579, GL27526964, GL27622442, GL27644365, GL28329986, GL28313563, GL28537552, GL28626789, GL28644764, GL28654965, GL29081868, GL29102141, GL29582061, GL29589121, GL29866581, GL29873662, GL30056639, GL30050281, GL30114504, GL30099833, GL30201155, GL30212930, GL30349850, GL30588786, GL30660010, GL30634208, GL30701005, GL30702800, GL30716691, GL30928803, GL30917866, GL30976907, GL31109450
ಶಾಖೆಯ ಹೆಸರು: ಹಾವೇರಿ-ಪಿಬಿ ರೋಡ್ ಜಿಎಲ್. ತಾಲೂಕು - ಹಾವೇರಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL25278670, GL28162097, GL29457445, GL25457702, GL32657392, GL26459103, GL28074332, GL28162682, GL28183961, GL29764369, GL30831078, GL30292062, GL30491282, GL30514199, GL30723318, GL30741534, GL30837460, GL30855063, GL30838158, GL30855161, GL30929458, GL30951329, GL30942494, GL31004998, GL31015177, GL31046686, GL31026110
ಶಾಖೆಯ ಹೆಸರು: ರಾಣೆಬೆನ್ನೂರು-ರಾಣೆಬೆನ್ನೂರು ಬಸ್ ನಿಲ್ದಾಣ ಜಿಎಲ್. ತಾಲೂಕು - ರಾಣೆಬೆನ್ನೂರು
ಚಿನ್ನದ ಸಾಲದ ಖಾತೆ ಸಂಖ್ಯೆ: GL29321173, GL29330806, GL29673510, GL29714965, GL29960788, GL29951710, GL29964212, GL29987061, GL30100349, GL30115132, GL30183594, GL30212426, GL30201247, GL30215506, GL30815365, GL30824540, GL30843508
ಶಾಖೆಯ ಹೆಸರು: ತಿಳುವಳ್ಳಿ-ತಿಳುವಳ್ಳಿ ಜಿಎಲ್. ತಾಲೂಕು - ಬ್ಯಾಡಗಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL26981475, GL27115088, GL27145522, GL27225069, GL27395845, GL27382224, GL27591674, GL27613698, GL27597651, GL27729423, GL27738247, GL27750457, GL27778477, GL28023522, GL28088856, GL28062607, GL28587110, GL28575067, GL28699549, GL28731309, GL29154105, GL29138673, GL29366040, GL29383266, GL29409332, GL29426423, GL29662523, GL29650366, GL30295261, GL30290440, GL30426828, GL30814110, GL30905770, GL30882595, GL31046040, GL31017649, GL31027064, GL31048673, GL31166547

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್‌ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್‌ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್‌ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.
ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 15.10.2024
ಸ್ಥಳ: ಹಾವೇರಿ

ಎಸ್‌ಡಿ/-
ಅಧಿಕೃತಸಹಿ
ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್

IIFL FINANCE
CIN: L67100MH1995PLC093797
Regd. Office: IIFL House, Sun Infotech Park, Road No. 16V, Plot No.B-23, Thane Industrial Area, Wagle Estate, Thane - 400604
Tel: (91-22) 41035000 • Fax: (91-22) 25806654
E-mail: reach@iifl.com • Website: www.iifl.com

ಚಿನ್ನದ ಆಭರಣಗಳ ಹರಾಜಿನ ಸಾರ್ವಜನಿಕ ಪ್ರಕಟಣೆ

ನಾವು, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್ ("IIFL") ತಮ್ಮ ಸಾಲವನ್ನು ಕ್ರಮಬದ್ಧಗೊಳಿಸದ ಅಥವಾ ಬಾಕಿ ಇರುವ ಮೊತ್ತವನ್ನು ಪಾವತಿಸದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನದ ಆಭರಣಗಳನ್ನು ಹರಾಜು ಮಾಡುತ್ತಿದ್ದೇವೆ ಎಂದು ನಿರ್ದಿಷ್ಟವಾಗಿ ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಲ್ಲಾ ಸಂಬಂಧಪಟ್ಟ ಸಾಲಗಾರರಿಗೆ ಸೂಚಿಸಲಾಗಿದೆ. ನೋಂದಾಯಿತ ಹರಾಜು ಸೂಚನೆಗಳು ಮತ್ತು ಪುನರಾವರ್ತಿತ ಜ್ಞಾಪನೆಗಳ ಮೂಲಕ ತಿಳಿಸಲಾಗಿದೆ. ಈ ಕೆಳಗಿನ ಸಾಲ ಖಾತೆಗಳಲ್ಲಿ ಅಡವು ಇರಿಸಲಾದ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಅವರ ಆನ್‌ಲೈನ್ ಹರಾಜು ಪ್ಲಾಟ್‌ಫಾರ್ಮ್ **https://gold.samil.in** ನಲ್ಲಿ **ಆನ್‌ಲೈನ್ ಮೂಲಕ 18.10.2024** ರಂದು **ಮಧ್ಯಾಹ್ನ 02:00 ರಿಂದ 05:00** ರವರೆಗೆ ನ ನಡುವೆ **ಶ್ರೀರಾಮ್ ಆಟೋಮಾಲ್ ಇಂಡಿಯಾ ಲಿಮಿಟೆಡ್** ಆನ್‌ಲೈನ್‌ನ ಮೂಲಕ ನಡೆಸಲಾಗುತ್ತದೆ. ಸ್ಥಳ ಅಥವಾ ದಿನಾಂಕದಲ್ಲಿನ ಬದಲಾವಣೆಯನ್ನು (ಏನಾದರೂ ಇದ್ದರೆ) ಹರಾಜಿನ ಕೇಂದ್ರದಲ್ಲಿ ಪ್ರದರ್ಶಿಸಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಇ-ಹರಾಜು ನಡೆಸಲು ಅಸಾಧ್ಯವಾದರೆ ಅಥವಾ ಹರಾಜು ಅದೇ ದಿನ ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಹರಾಜು ಪ್ಲಾಟ್‌ಫಾರ್ಮ್ ಮತ್ತು / ಅಥವಾ ಹರಾಜು ಕೇಂದ್ರದಲ್ಲಿ ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಸದರಿ ಹರಾಜನ್ನು ನಡೆಸುವ ಅಥವಾ ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಹರಾಜು ಮಾಡಲಾಗಿರದ ಚಿನ್ನಾಭರಣಗಳನ್ನು ಹರಾಜು ಪ್ಲಾಟ್‌ಫಾರ್ಮ್‌ನಲ್ಲಿ ಮತ್ತು/ಅಥವಾ ಹರಾಜು ಕೇಂದ್ರದಲ್ಲಿ ಅವುಗಳ ವಿವರಗಳನ್ನು ಪ್ರದರ್ಶಿಸಿದ ಬಳಿಕ ನಂತರದ ಕೆಲಸದ ದಿನಗಳಲ್ಲಿ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಶಾಖೆಯ ಮಟ್ಟದಲ್ಲಿ ಹರಾಜು ವಿಫಲವಾದಲ್ಲಿ ಅದನ್ನು **28.10.2024** ರಂದು ಯಾವುದೇ ಸೂಚನೆ ಇಲ್ಲದೆ ಜಿಲ್ಲಾ ಮಟ್ಟದಲ್ಲಿ ನಿಗದಿತ ಜಿಲ್ಲಾ ಕೇಂದ್ರದಲ್ಲಿ ಮರು ಹರಾಜು ಮಾಡಲಾಗುತ್ತದೆ. ಯಾವುದೇ ಕಾರಣಕ್ಕಾಗಿ ಇಲ್ಲಿ ನಮೂದಿಸಲಾದ ದಿನಾಂಕದಂದು ಜಿಲ್ಲಾ ಮಟ್ಟದ ಹರಾಜನ್ನು ನಡೆಸಲಾಗದಿದ್ದರೆ ಅಥವಾ ಆದೇ ದಿನ ಹರಾಜು ಪೂರ್ಣಗೊಳ್ಳದಿದ್ದರೆ, ನಂತರದ ಯಾವುದೇ ದಿನಾಂಕದಂದು ಅವೇ ನಿಯಮಗಳು ಮತ್ತು ಷರತ್ತುಗಳೊಂದಿಗೆ ಜಿಲ್ಲಾ ಮಟ್ಟದ ಹರಾಜನ್ನು ನಡೆಸುವ ಅಥವಾ ಅದನ್ನು ಮುಂದುವರಿಸುವ ಹಕ್ಕನ್ನು ಐಐಎಫ್‌ಎಲ್ ಕಾದಿರಿಸಿಕೊಂಡಿದೆ. ಗ್ರಾಹಕರು ಮರಣಹೊಂದಿದರೆ, ಹರಾಜಿಗೆ ಸಂಬಂಧಿಸಿದ ಎಲ್ಲಾ ಷರತ್ತುಗಳು ನಾಮನಿರ್ದೇಶಿತ/ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯವಾಗುತ್ತವೆ.

ಜಿಲ್ಲಾ ಕೇಂದ್ರ : ಬಳ್ಳಾರಿ-ದುರ್ಗಾಂಬಾ ದೇವಸ್ಥಾನ ಜಿಎಲ್ - ಇಂಡಿಯಾ ಇನ್ಫೋಲೈನ್ ಫೈನಾನ್ಸ್ ಲಿಮಿಟೆಡ್ , ದುರ್ಗಾಂಬಾ ದೇವಸ್ಥಾನದ ಎದುರು, ಪಾರ್ವತಿ ನಗರ, ಬಳ್ಳಾರಿ ಮುಖ್ಯ ರಸ್ತೆ ಬಳ್ಳಾರಿ, ಕರ್ನಾಟಕ - 583101.

ಶಾಖೆಯ ಹೆಸರು: ಬಳ್ಳಾರಿ-ದುರ್ಗಾಂಬಾ ದೇವಸ್ಥಾನ ಜಿಎಲ್. ತಾಲೂಕು - ಬಳ್ಳಾರಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL29157912, GL29180369, GL30873411, GL30868705, GL30905383, GL30879230
ಶಾಖೆಯ ಹೆಸರು: ಬಳ್ಳಾರಿ-ಕುರುಗೋಡು ಜಿಎಲ್. ತಾಲೂಕು - ಬಳ್ಳಾರಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL25352946, GL25689690, GL26637376, GL26803138, GL26813332, GL26913220, GL27531371, GL27697108, GL27950711, GL27964447, GL28225012, GL28361901, GL28377337, GL28426117, GL28468861, GL28548624, GL28558452, GL28806740, GL28807827, GL29023744, GL29018636, GL29050088, GL29035408, GL29182191, GL29203267, GL30497797, GL30873804, GL30868986, GL30933588, GL30952025, GL30971143, GL30989875, GL31102928
ಶಾಖೆಯ ಹೆಸರು: ಬಳ್ಳಾರಿ-ರಾಂಪುರ ಜಿಎಲ್. ತಾಲೂಕು - ಬಳ್ಳಾರಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL28677073, GL28695060, GL28686181, GL32994832, GL28887140, GL28902694, GL29052959, GL29025750, GL29237199, GL29254381, GL30858041, GL30871787, GL30911326, GL30967134, GL30955764, GL31049197, GL31018425, GL31036615
ಶಾಖೆಯ ಹೆಸರು: ಹಗರಿಬೊಮ್ಮನಹಳ್ಳಿ - ಹಗರಿಬೊಮ್ಮನಹಳ್ಳಿ ಜಿಎಲ್. ತಾಲೂಕು - ಎಚ್ಚಿ ಹಳ್ಳಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL28807351, GL20239357, GL22089864, GL24925737, GL27756961, GL25959886, GL28415740, GL26152330, GL26269653, GL26444252, GL26485693, GL26655096, GL27788300, GL27458060, GL27150571, GL28020918, GL27277782, GL27255229, GL27462994, GL27488182, GL27656672, GL27657020, GL27868607, GL27854716, GL27880067, GL27935857, GL28125308, GL28278589, GL28262599, GL28486883, GL28503675, GL28531120, GL28561676, GL28642997, GL28626398, GL28731002, GL28713284, GL28739845, GL28762062, GL28755040, GL28807944, GL28821583, GL28992692, GL29002713, GL29022551, GL29011670, GL29154135, GL29138302, GL29202649, GL29194778, GL29407982, GL29643460, GL29709336, GL29696625, GL29711222, GL29916769, GL29931012, GL29932638, GL29920333, GL30049784, GL30056534, GL30049904, GL30055282, GL30147408, GL30152598, GL30161864, GL30365141, GL30378971, GL30741441, GL30726851, GL30810652, GL30825264, GL30889468, GL30933317, GL30951712, GL30940081, GL30952909, GL31025844, GL31048465
ಶಾಖೆಯ ಹೆಸರು: ಹರಪನಹಳ್ಳಿ - ಜಿಎಲ್. ತಾಲೂಕು - ಹರಪನಹಳ್ಳಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL24722597, GL30766812, GL26550272, GL32628887, GL29049512, GL29029194, GL30200291, GL30212315
ಶಾಖೆಯ ಹೆಸರು: ಹೊಸಪೇಟೆ-ಕಾಲೇಜು ರೋಡ್ ಜಿಎಲ್. ತಾಲೂಕು - ಹೊಸಪೇಟೆ
ಚಿನ್ನದ ಸಾಲದ ಖಾತೆ ಸಂಖ್ಯೆ: GL26559783, GL28938847, GL31015213, GL31005103
ಶಾಖೆಯ ಹೆಸರು: ಸಂಡೂರ್ - ಸಂಡೂರ್ ಜಿಎಲ್. ತಾಲೂಕು - ಸಂಡೂರ್
ಚಿನ್ನದ ಸಾಲದ ಖಾತೆ ಸಂಖ್ಯೆ: GL28607124, GL28699122, GL28731505, GL29062241, GL29075591, GL29156427, GL29180057, GL29177678, GL29170046, GL30995159, GL31014328, GL31063046
ಶಾಖೆಯ ಹೆಸರು: ವಿಜಯನಗರ-ಕೊಟ್ಟೂರು ಜಿಎಲ್. ತಾಲೂಕು - ಕೂಡ್ಲಿಗಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL27598017, GL27810947, GL27833484, GL28012069, GL28377940, GL28368671, GL28434813, GL28424455, GL28559704, GL28537132, GL28905078, GL28883166, GL29710998, GL29698509, GL29905927, GL29895645, GL29987324, GL29966191, GL30049865, GL30057869, GL30293552, GL30282354, GL30407321, GL30631106, GL30621060, GL30844251, GL30856122, GL30874024, GL30870805, GL30928292, GL30918379, GL30933533, GL30935425, GL30941289, GL30953046, GL30978887, GL30990098, GL31005983, GL31015648, GL31023890, GL31049060, GL31046963, GL31027208, GL31027742, GL31047578, GL31030170, GL31050165, GL31134152, GL31409564
ಶಾಖೆಯ ಹೆಸರು: ವಿಜಯನಗರ-ಕೂಡ್ಲಿಗಿ ಜಿಎಲ್. ತಾಲೂಕು - ಕೂಡ್ಲಿಗಿ
ಚಿನ್ನದ ಸಾಲದ ಖಾತೆ ಸಂಖ್ಯೆ: GL25434075, GL26125949, GL27832862, GL27811622, GL27976068, GL27995770, GL28055727, GL28040200, GL28844624, GL28822115, GL28990375, GL29003607, GL29101058, GL29083317, GL29180614, GL29159120, GL30773219, GL30763879, GL30768491, GL30772638, GL30955431, GL30967875, GL30967898, GL30955472, GL30982746, GL30998341, GL31034735, GL31058268, GL31077054, GL31088238, GL31131167

ಇ-ಹರಾಜನ್ನು ''ಎಲ್ಲಿ ಇದ್ದಾರೋ ಹಾಗೆ'', ''ಏನು ಇದೆಯೋ ಹಾಗೆ'' ಮತ್ತು ''ಇರುವುದೆಲ್ಲಾ ಇದೆ'' ಆಧಾರದ ಮೇಲೆ ನಡೆಸಲಾಗುವುದು ಮತ್ತು ಐಐಎಫ್‌ಎಲ್ ಗುಣಮಟ್ಟ, ಶುದ್ಧತೆ, ಕ್ಯಾರೇಟೇಜ್, ತೂಕ ಅಥವಾ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಾತಿನಿಧ್ಯ ಅಥವಾ ವಾರಂಟಿಗಳನ್ನು ನೀಡುವುದಿಲ್ಲ. ಚಿನ್ನದ ಆಭರಣಗಳು. ಇ-ಹರಾಜು ಪ್ರಕ್ರಿಯೆ ಮತ್ತು ಅಂತಹ ಇ-ಹರಾಜಿಗೆ ಅನುಸಾರವಾಗಿ ಮಾರಾಟವು (ಯಾವುದಾದರೂ ಇದ್ದರೆ) ಐಐಎಫ್‌ಎಲ್ ತನ್ನ ಸ್ವಂತ ವಿವೇಚನೆಯಿಂದ ವಿಧಿಸಲು ಸೂಕ್ತವೆಂದು ಪರಿಗಣಿಸಬಹುದಾದ ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಐಐಎಫ್‌ಎಲ್, ತನ್ನ ಸಂಪೂರ್ಣ ವಿವೇಚನೆಯಿಂದ, ಹರಾಜು ಪಟ್ಟಿಯಿಂದ ಯಾವುದೇ ಖಾತೆಗಳನ್ನು ಮುಂದೂಡಬಹುದು ಅಥವಾ ತೆಗೆದುಹಾಕಬಹುದು, ಯಾವುದೇ ಪೂರ್ವ ಸೂಚನೆ ಇಲ್ಲದೆ ಮತ್ತು ಯಾವುದೇ ಕಾರಣವನ್ನು ನೀಡದೆಯೇ ಮತ್ತು ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳು ಅಥವಾ ಕೊಡುಗೆಗಳನ್ನು ತಿರಸ್ಕರಿಸಬಹುದು. ಡೀಫಾಲ್ಟ್ ಮಾಡಿದ ಸಾಲಗಾರ(ರು), ವಾಗ್ದಾನ ಮಾಡಿದ ಆಭರಣಗಳು ಮತ್ತು ಇತರ ವಿವರಗಳನ್ನು ಆಯಾ ಶಾಖೆಯಲ್ಲಿ ಪ್ರದರ್ಶಿಸಲಾಗಿದೆ. ಸಾಲ ಮರುಪಾವತಿ ಮಾಡದ ಸಾಲಗಾರನಿ(ರಿ)ಗೆ ಇತ್ತೀಚಿನ ಬಡ್ಡಿ ಮತ್ತು ಅನ್ವಯವಾಗುವ ಎಲ್ಲಾ ಶುಲ್ಕಗಳು ಸೇರಿದಂತೆ ಸಂಪೂರ್ಣ ಬಾಕಿಗಳನ್ನು ಮರುಪಾವತಿಸಿ ಅವರ ಸಾಲದ ಖಾತೆಯನ್ನು ಮುಚ್ಚುವ ಅಥವಾ ಕ್ರಮಬದ್ಧಗೊಳಿಸುವ ಆಯ್ಕೆಯನ್ನು ಈ ಪ್ರಕಟಣೆಯು ಪ್ರಕಟಗೊಂಡ ನಂತರವೂ ಹೊಂದಿರುತ್ತಾರೆ, ಆದರೆ ಯಾವುದೇ ಸಂದರ್ಭದಲ್ಲಿ ಅದನ್ನು ಹರಾಜಿನ ದಿನಾಂಕದವರೆಗೆ ಮಾಡಬೇಕು; ಅದು ವಿಫಲವಾದರೆ, ಅಡಮಾನ ಇಟ್ಟಿರುವ ಚಿನ್ನದ ಆಭರಣಗಳನ್ನು ಮಾರಾಟ ಮಾಡಲಾಗುತ್ತದೆ ಮತ್ತು ಬಾಕಿಗಳನ್ನು (ಯಾವುದಾದರೂ ಇದ್ದರೆ) ಬಡ್ಡಿ ಮತ್ತು ವೆಚ್ಚಗಳೊಂದಿಗೆ ಮರುಪಡೆಯಲಾಗುತ್ತದೆ. ಆದಾಗ್ಯೂ, ಈ ಪ್ರಕಟಣೆಯ ನಂತರ ಅಥವಾ ನಂತರ ಮುಚ್ಚಲಾದ ಅಥವಾ ಕ್ರಮಬದ್ಧಗೊಳಿಸಲಾದ ಡೀಫಾಲ್ಟರ್ ಸಾಲಗಳು ಪ್ರಮಾಣಾನುಗುಣವಾದ ಪ್ರಕಟಣೆ ಶುಲ್ಕವನ್ನು ಭರಿಸಬೇಕಾಗುತ್ತದೆ. ಎರವಲುದಾರರು ತಮ್ಮ ಇತ್ತೀಚಿನ ಬ್ಯಾಂಕ್ ಖಾತೆಯ ವಿವರಗಳನ್ನು ಸಲ್ಲಿಸಲು/ಅಪ್‌ಡೇಟ್ ಮಾಡಲು ವಿನಂತಿಸಲಾಗಿದೆ, ಯಾವುದಾದರೂ ಇದ್ದರೆ ಹೆಚ್ಚುವರಿ ಹರಾಜು ಆದಾಯದ ಮರುಪಾವತಿಗಾಗಿ.
ವಿವರವಾದ ಮಾಹಿತಿಗಾಗಿ, ನಿಯಮಗಳು ಮತ್ತು ಷರತ್ತುಗಳಿಗಾಗಿ, ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್‌ನ ಸಂಬಂಧಿತ ಶಾಖೆಯನ್ನು ಸಂಪರ್ಕಿಸಿ.

ದಿನಾಂಕ: 15.10.2024
ಸ್ಥಳ: ಬಳ್ಳಾರಿ

ಐಐಎಫ್‌ಎಲ್ ಫೈನಾನ್ಸ್ ಲಿಮಿಟೆಡ್
ಎಸ್‌ಡಿ/-
ಅಧಿಕೃತಸಹಿ

ಸಮಾಚಾರ ಸಣ್ಣದಲ್ಲ

ಹರ್ಮನ್‌ಪ್ರೀತ್‌ಗೆ 78 ಲಕ್ಷ ಮೌಲ್ಯ

ದೆಹಲಿ: ಪ್ಯಾರಿಸ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರನ್ನು ಹಾಕಿ ಇಂಡಿಯಾ ಲೀಗ್ (ಎಚ್ ಐಎಲ್) ಹರಾಜು ಪ್ರಕ್ರಿಯೆಯಲ್ಲಿ ₹ 78 ಲಕ್ಷಕ್ಕೆ ಸೂರ್ಮಾ ಹಾಕಿ ಕ್ಲಬ್ ಖರೀದಿಸಿತು. ಇದರೊಂದಿಗೆ ಹರ್ಮನ್ ಅವರು ಮೊದಲ ದಿನದ ಬಿಡ್ ಪ್ರಕ್ರಿಯೆಯಲ್ಲಿ ಅತಿ ಹೆಚ್ಚು ಮೌಲ್ಯ ಪಡೆದ ಆಟಗಾರನಾದರು. ಭಾರತ ತಂಡದ ಆಟಗಾರರನ್ನು ತಮ್ಮ ತೆಕ್ಕೆಗೆ ಎಳೆದುಕೊಳ್ಳಲು ಎಂಟು ಫ್ರಾಂಚೈಸಿಗಳೂ ಅಪಾರ ಪೈಪೋಟಿ ನಡೆಸಿದವು. ಅಲ್ಲದೇ ಬಹಳಷ್ಟು ಹಣವನ್ನೂ ವಿನಿಯೋಗಿಸಿದವು. ಅಭಿಷೇಕ್ ಅವರನ್ನು ₹ 72 ಲಕ್ಷಕ್ಕೆ ಶರಾಚಿ ರಾರ್ ಬೆಂಗಾಲ್ ಟೈಗರ್ಸ್ ತಂಡವು ಖರೀದಿಸಿತು. ಅವರು ಹೆಚ್ಚು ಮೌಲ್ಯ ಗಳಿಸಿದ ಎರಡನೇ ಆಟಗಾರನಾದರು. ಯುಪಿ ರುದ್ರಾಸ್ ತಂಡವು ಹಾರ್ದಿಕ್ ಸಿಂಗ್ (₹70 ಲಕ್ಷ) ಅವರನ್ನು ಸೆಳೆದುಕೊಳ್ಳುವಲ್ಲಿ ಯಶಸ್ವಿಯಾ ಯಿತು. ಪ್ರಮುಖ ಆಟಗಾರರಾದ ಅಮಿತ್ ರೋಹಿದಾಸ್ (₹ 48 ಲಕ್ಷ) ಅವರನ್ನು ತಮಿಳುನಾಡು ಡ್ರ್ಯಾಗನ್ಸ್, ಜುಗರಾಜ್ ಸಿಂಗ್ (₹ 48 ಲಕ್ಷ) ಅವರನ್ನು ಶರಾಚಿ ರಾರ್ ಬೆಂಗಾಲ್ ಟೈಗರ್ಸ್ ತಂಡಗಳು ಖರೀದಿಸಿದವು. ಹೈದರಾಬಾದ್ ತೂಫಾನ್ಸ್ ತಂಡವು ಸುಮಿತ್ (₹ 46 ಲಕ್ಷ) ಅವರನ್ನು ಸೇರ್ಪಡೆ ಮಾಡಿಕೊಂಡಿತು.

ವಿದೇಶಿ ಗೋಲ್‌ಕೀಪರ್ ವಿಭಾಗದಲ್ಲಿ, ಐರ್ಲೆಂಡ್‌ನ ಡೇವಿಡ್ ಹಾರ್ಟ ₹ 32 ಲಕ್ಷ ಮೌಲ್ಯ ಪಡೆದು ತಮಿಳುನಾಡು ಡ್ರ್ಯಾಗನ್ಸ್ ಸೇರಿದರು. ಜರ್ಮನಿಯ ಜೀನ್ ಪಾಲ್ ಡೆನ್ಬರ್ಗ್ (₹ 27 ಲಕ್ಷ) ಹೈದರಾಬಾದ್ ತೂಫಾನ್ಸ್ ತಂಡಕ್ಕೆ, ನೆದರ್ಲೆಂಡ್ಸ್‌ನ ಪಿರ್ಮಿನ್ ಬ್ಲಾಕ್ (₹ 25 ಲಕ್ಷ) ಶರಾಚಿ ರಾರ್ ಬೆಂಗಾಲ್ ಟೈಗರ್ಸ್ ತಂಡಕ್ಕೆ ಮತ್ತು ಬೆಲ್ಜಿಯಂನ ವಿನ್ಸೆಂಟ್ ವನಾಶ್ (₹ 23 ಲಕ್ಷ) ಅವರನ್ನು ಸೂರ್ಮಾ ಹಾಕಿ ಕ್ಲಬ್ ಖರೀದಿಸಿದವು. ಭಾರತೀಯ ಗೋಲ್‌ಕೀಪರ್ ವಿಭಾಗದಲ್ಲಿ ಸೂರಜ್ ಕರ್ಕೆರಾ (₹ 22 ಲಕ್ಷ) ಮತ್ತು ಪವನ್ (₹ 15 ಲಕ್ಷ) ಅವರನ್ನು ಕ್ರಮವಾಗಿ ಗೊನಾಶಿಕಾ ತಂಡ ಮತ್ತು ಡೆಲ್ಲಿ ಎಸ್ಜಿ ಪೈಪರ್ಸ್ ತಂಡಗಳು ತಮ್ಮದಾಗಿಸಿಕೊಂಡವು.

ಬಾಂಗ್ಲಾ ಎದುರಿನ ಭರ್ಜರಿ ಪ್ರದರ್ಶನದಿಂದ ಫಾರ್ಮ್‌ಗೆ ಮರಳಿದ ಕೇರಳ ಆಟಗಾರ

ಶತಕ ಬಾರಿಸಿ ಟೀಕಾಕಾರರ ಬಾಯಿ ಮುಚ್ಚಿಸಿದ ಸಂಜು ಸ್ಯಾಮ್ಸನ್

ಹೈದರಾಬಾದ್: ಬಾಂಗ್ಲಾದೇಶ ವಿರುದ್ಧದ ಕೊನೆಯ ಟಿ-20 ಪಂದ್ಯದಲ್ಲಿ ಭಾರತದ ದಾಖಲೆಯ ಜಯ ಸಾಧಿಸಿದೆ. ತಮ್ಮ ಭರ್ಜರಿ ಪ್ರದರ್ಶನದ ಮೂಲಕ ಈ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದ ವಿಕೆಟ್ ಕೀಪರ್ ಬ್ಯಾಟರ್ ಸಂಜು ಸ್ಯಾಮ್ಸನ್, ವೈಯಕ್ತಿಕವಾಗಿಯೂ ಗೆಲುವಿನ ನಗೆ ಬೀರಿದ್ದಾರೆ.

ಸಂಜು ಸ್ಯಾಮ್ಸನ್, ಕಳೆದ ಶ್ರೀಲಂಕಾ ಸರಣಿ ಸೇರಿದಂತೆ ಬಾಂಗ್ಲಾ ವಿರುದ್ಧದ ಮೊದಲೆರಡು ಪಂದ್ಯಗಳಲ್ಲಿ ನೀರಸ ಪ್ರದರ್ಶನ ತರುವ ಮೂಲಕ ಟೀಕಾಕಾರರ ಕೆಂಗಣ್ಣಿಗೆ ಗುರಿಯಾಗಿದ್ದರು. ಸೋಷಿಯಲ್ ಮೀಡಿಯಾದಲ್ಲಿ ವ್ಯಾಪಕ ಟ್ರೋಲ್ ಆಗಿದ್ದರು. ಅವರನ್ನು ತಂಡದಿಂದ ಕೈ ಬಿಡಬೇಕೆಂಬ ಆಗ್ರಹ ಜೋರಾಗಿತ್ತು. ಆದರೆ ಬಾಂಗ್ಲಾ ಎದುರಿನ ಅಂತಿಮ ಪಂದ್ಯದಲ್ಲಿ ಅಬ್ಬರಿಸುವ ಮೂಲಕ ಸಂಜು, ತಮ್ಮ ವಿರುದ್ಧದ ಎಲ್ಲ ಟೀಕೆಗಳನ್ನು ಒಂದೇ ಬಾರಿಗೆ ನಿವಾಳಿಸಿ ಹಾಕಿದ್ದಾರೆ.

ಸಂಜು ಅಬ್ಬರಕ್ಕೆ ಬಾಂಗ್ಲಾ ಬೌಲರ್‌ಗಳು ಅಕ್ಷರಶಃ ಬೆಚ್ಚಿ ಬಿದ್ದಿದ್ದರು. ಅವರ ಆಕರ್ಷಕ ಇನ್ನಿಂಗ್ಸ್‌ನಲ್ಲಿ ಬರೋಬ್ಬರಿ 8 ಸಿಕ್ಸ್ ಹಾಗೂ 11 ಬೌಂಡರಿ ಸೇರಿದ್ದವು. 47 ಎಸೆತಗಳನ್ನು ಎದುರಿಸಿದ ಸಂಜು ಬರೋಬ್ಬರಿ 111 ರನ್ ಗಳಿಸಿದರು. ಅಮೋಘ ಪ್ರದರ್ಶನದ ಮೂಲಕ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದ ಸಂಜು, ಬಳಿಕ ಮಾತನಾಡಿ, ''ತಂಡದ ಮ್ಯಾನೇಜ್ಮೆಂಟ್ ನನ್ನ ಮೇಲೆ ಇಟ್ಟ ಭರವಸೆಯನ್ನು ಉಳಿಸಿಕೊಳ್ಳುವ ಜವಾಬ್ದಾರಿ ನನ್ನ ಮೇಲೆ ಇತ್ತು. ಈ ಪಂದ್ಯದಲ್ಲಿ ಅದು ಸಾಧ್ಯವಾಯಿತು'' ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು ಡ್ರೆಸ್ಸಿಂಗ್ ರೂಮ್ ವಾತಾವರಣ ಮತ್ತು ಸಹ ಆಟಗಾರರು ನನಗೆ ನೀಡಿದ ಸಹಕರದಿಂದ ಇದು ಸಾಧ್ಯವಾಗಿದೆ. ಮತ್ತು ನಾನು ಕೂಡ ಬಹಳ ಸಂತೋಷಗೊಂಡಿದ್ದೇನೆ. ಕಳೆದ ಕೆಲವು ಪಂದ್ಯಗಳಿಂದ ಕಳಪೆ ಪ್ರದರ್ಶನ ನೀಡಿದ್ದೇನೆ. ಹಾಗಾಗಿ ಆ ಒತ್ತಡ ಇತ್ತು ಆದರೆ , ನನ್ನ ಅನುಭವ ಆ ಒತ್ತಡವನ್ನು ಕಡಿಮೆ ಮಾಡಿತು. ಅದರ ಫಲವೇ ಈ ಪ್ರದರ್ಶನ'' ಎಂದರು. ತಂಡದಲ್ಲಿ ಸ್ಥಾನ ಪಡೆಯಲು ಖಂಡಿತವಾಗಿಯೂ ಸ್ಪರ್ಧೆ ಇದೆ. ಆದರೆ ನಾವು ನಮ್ಮ ಆಟ ಆಡಬೇಕು ಎಂದರು. ನನಗೆ ಬೆಂಬಲ ನೀಡುತ್ತಿರುವ ಎಲ್ಲಾ ಅಭಿಮಾನಿಗಳಿಗೂ ಅಭಿನಂದನೆಗಳು. ಟೀಕಾಕಾರೂ ಕೂಡ ಇರುತ್ತಾರೆ. ಆದರೆ ನಾವು ನಮ್ಮ ಆಟ ಆಡಬೇಕು ಎಂದು ಹೇಳಿದರು.

ಸಂಸದ ಶಶಿ ತರೂರ್ ಸಮ್ಮಾನ

ದೆಹಲಿ: ಬಾಂಗ್ಲಾದೇಶ ವಿರುದ್ಧ ಭರ್ಜರಿ ಪ್ರದರ್ಶನ ನೀಡಿದ ವಿಕೆಟ್ ಕೀಪರ್ ಬ್ಯಾಟರ್ ಸಂಜು ಸ್ಯಾಮ್ಸನ್ ಅವರಿಗೆ ಕಾಂಗ್ರೆಸ್ ಸಂಸದ ಶಶಿ ತರೂರ್ ಅವರು ತಿರುವನಂತಪುರದಲ್ಲಿ ಭರ್ಜರಿ ಸ್ವಾಗತ ನೀಡಿದ್ದಾರೆ.

ತರೂರ್ ಅವರು ತಮ್ಮ ಮನೆಯಲ್ಲಿ ನಡೆದ ಅಭಿನಂದನಾ ಸಮಾರಂಭದ ಚಿತ್ರಗಳನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ. ಸೋಮವಾರ ನಡೆದ ಸಭೆಯಲ್ಲಿ ಶಶಿ ತರೂರ್ ಅವರು ಸ್ಯಾಮ್ಸನ್‌ಗೆ ನೀಲಿ ಪೊನ್ನಡ (ಶಾಲು) ಹೊದಿಸಿ ಸನ್ಮಾನಿಸಿದರು. ಬಾಂಗ್ಲಾದೇಶದ ವಿರುದ್ಧ ಅದ್ಭುತ ಶತಕ ಗಳಿಸಿದ ನಂತರ ಸಂಜು ಸ್ಯಾಮ್ಸನ್ ತಿರುವನಂತಪುರಕ್ಕೆ ಮರಳಿದ್ದಾರೆ. ಶತಕ ಹೀರೋ ಸಂಜುಗೆ ಸ್ವಾಗತ ನೀಡಲು ಸಂತೋಷವಾಗುತ್ತಿದೆ. ಅವರನ್ನು ಗೌರವಿಸಲು ಭಾರತದ ಬಣ್ಣದ (ನೀಲಿ ಬಣ್ಣ) ಪೊನ್ನಡ' ಶಾಲು ಬಳಸಿದೆ ಎಂದು ತರೂರ್ ತಮ್ಮ ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ದೀರ್ಘಕಾಲದಿಂದ ಸ್ಯಾಮ್ಸನ್ ಅವರ ಬೆಂಬಲಕ್ಕೆ ನಿಂತಿದ್ದ ತರೂರ್, ಕೇರಳದ ಸೂಪರ್‌ಸ್ಟಾರ್‌ಗೆ ಅವಕಾಶಗಳ ಕೊರತೆ ಆಗುತ್ತಿದೆ. ಟೀಮ್ ಮ್ಯಾನೇಜ್‌ಮೆಂಟ್ ಅವರನ್ನು ನಿರಂತರವಾಗಿ ಅವರನ್ನು ಶೋಷಣೆ ಮಾಡುತ್ತಿದೆ ಎಂದು ಆರೋಪಿಸಿದ್ದರು.

ನಾಳೆಯಿಂದ ಬೆಂಗಳೂರಿನಲ್ಲಿ ಭಾರತ-ಕಿವೀಸ್ ಟೆಸ್ಟ್ ಸರಣಿ

ಮಾಜಿ ನಾಯಕರ ದಾಖಲೆಗಳ ಮೇಲೆ ರೋಹಿತ್ ಶರ್ಮಾ ಕಣ್ಣು

ಮುಂಬೈ: ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಬಾಂಗ್ಲಾ ವಿರುದ್ಧದ ಟೆಸ್ಟ್ ಸರಣಿ ಬಳಿಕ ನ್ಯೂಜಿಲೆಂಡ್ ವಿರುದ್ಧದ ಸರಣಿಗೆ ಎದುರು ನೋಡುತ್ತಿದ್ದಾರೆ. ಈ ಸರಣಿಯಲ್ಲಿ ಹಿಟ್ ಮ್ಯಾನ್ ರೋಹಿತ್ ಬ್ಯಾಟರ್ ಮತ್ತು ನಾಯಕನಾಗಿ ಅನೇಕ ದಾಖಲೆಗಳನ್ನು ಬರೆಯುವ ಅವಕಾಶಗಳನ್ನು ಹೊಂದಿದ್ದಾರೆ.

ಭಾರತ ತಂಡ ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳ ಟೆಸ್ಟ್ ಸರಣಿಯನ್ನು ಆಡಲಿದೆ. ಬುಧವಾರದಿಂದ (ಅಕ್ಟೋಬರ್ 16) ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸರಣಿಯ ಆರಂಭಿಕ ಪಂದ್ಯ ನಡೆಯಲಿದ್ದು, ಮುಂದಿನ ಎರಡು ಪಂದ್ಯಗಳು ಪುಣೆಯ ಎಂಸಿಎ ಸ್ಟೇಡಿಯಂ ಮತ್ತು ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲಿ ನಡೆಯಲಿದೆ.

ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಬಾಂಗ್ಲಾದೇಶವನ್ನು ವೈಟ್‌ವಾಶ್ ಮಾಡಿದ ನಂತರ, ಭಾರತವು ಬ್ಲ್ಯಾಕ್ ಕ್ಯಾಪ್ಸ್ ವಿರುದ್ಧ ಅದೇ ಪ್ರದರ್ಶನವನ್ನು ಪುನರಾವರ್ತಿಸಲು ಬಯಸಿದೆ. ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಪಾಯಿಂಟ್‌ಗಳ ಪಟ್ಟಿಯಲ್ಲಿ ತನ್ನ ನಂ. 1 ಸ್ಥಾನವನ್ನು ಮತ್ತಷ್ಟು ಬಲಪಡಿಸಲು ಭಾರತ ಯೋಜನೆ ಹಾಕಿಕೊಂಡಿದೆ.

ನಾಯಕ ರೋಹಿತ್ ಶರ್ಮಾ ಬ್ಯಾಟರ್ ಮತ್ತು ನಾಯಕನಾಗಿ ಈ ಟೂರ್ನಿಯಲ್ಲಿ ಅನೇಕ ದಾಖಲೆಗಳನ್ನು ನಿರ್ಮಿಸುವ ಅವಕಾಶಗಳನ್ನು ಹೊಂದಿದ್ದಾರೆ.

ಟೆಸ್ಟ್‌ನಲ್ಲಿ ಭಾರತದ ಪರ ಅತಿ ಹೆಚ್ಚು ಸಿಕ್ಸರ್‌ಗಳು: ರೋಹಿತ್ ಭಾರತೀಯ ಪುರುಷರ ಕ್ರಿಕೆಟ್ ತಂಡಕ್ಕಾಗಿ ಆಡಿದ 61 ಟೆಸ್ಟ್‌ಗಳಲ್ಲಿ 87 ಸಿಕ್ಸರ್‌ಗಳನ್ನು ಹೊಡೆದಿದ್ದಾರೆ. ವೀರೇಂದ್ರ ಸೆಹ್ವಾಗ್ ಅವರ ದಾಖಲೆಯನ್ನು ಮುರಿಯಲು ಮತ್ತು ಟೆಸ್ಟ್ ಕ್ರಿಕೆಟ್‌ನಲ್ಲಿ ಭಾರತದ ಪ್ರಮುಖ ಸಿಕ್ಸ್-ಹಿಟ್ಟರ್ ಆಗಲು ಬಲಗೈ ಬ್ಯಾಟರ್‌ಗೆ ಇನ್ನೂ ಐದು ಸಿಕ್ಸರ್‌ಗಳ ಅಗತ್ಯವಿದೆ. ತಮ್ಮ ಆಟದ ದಿನಗಳಲ್ಲಿ, ಸೆಹ್ವಾಗ್ 104 ಪಂದ್ಯಗಳಲ್ಲಿ 91 ಸಿಕ್ಸರ್‌ಗಳನ್ನು ಸಿಡಿಸಿದ್ದಾರೆ.

ಸಾವಿರ ರನ್ ಸರದಾರ: ಐಸಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ 2022-24ರ ಆವೃತ್ತಿಯಲ್ಲಿ ಇದುವರೆಗೆ ಆಡಿದ 11 ಪಂದ್ಯಗಳಲ್ಲಿ ರೋಹಿತ್ 742 ರನ್ ಗಳಿಸಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಕನಿಷ್ಠ 258 ರನ್ ಗಳಿಸಲು ಯಶಸ್ವಿಯಾದರೆ, ಎರಡು ಆವೃತ್ತಿಗಳಲ್ಲಿ 1000 ರನ್ ಗಳಿಸಿದ ಮೊದಲ ಭಾರತೀಯ ಕ್ರಿಕೆಟಿಗ ಎಂಬ ಹೆಗ್ಗಳಿಕೆಗೆ ಪಾತ್ರರಾಗುತ್ತಾರೆ. 2019-21ರ ಡಬ್ಲ್ಯುಟಿಸಿ ಆವೃತ್ತಿಯಲ್ಲಿ, ರೋಹಿತ್ ಭಾರತ ತಂಡಕ್ಕಾಗಿ 12 ಪಂದ್ಯಗಳಲ್ಲಿ ಒಟ್ಟು 1094 ರನ್ ಗಳಿಸಿದ್ದರು.

ಟೆಸ್ಟ್‌ನಲ್ಲಿ 4ನೇ ಯಶಸ್ವಿ ನಾಯಕ: ರೋಹಿತ್ ನಾಯಕತ್ವದಲ್ಲಿ ಭಾರತ ಇದುವರೆಗೆ ಆಡಿದ 18 ಟೆಸ್ಟ್‌ಗಳಲ್ಲಿ 12 ಅನ್ನು ಗೆದ್ದಿದೆ. 37 ವರ್ಷ ಹಿಟ್ ಮ್ಯಾನ್, ನ್ಯೂಜಿಲೆಂಡ್ ವಿರುದ್ಧದ ಮೂರು ಪಂದ್ಯಗಳಲ್ಲಿ ಮೂರು ಗೆದ್ದರೆ, ಅವರು ಮೊಹಮ್ಮದ್ ಅಜರುದ್ದೀನ್ ಅವರ ದಾಖಲೆಯನ್ನು ಮುರಿದು, ಟೆಸ್ಟ್‌ಗಳಲ್ಲಿ ಭಾರತದ ನಾಲ್ಕನೇ ಯಶಸ್ವಿ ನಾಯಕರಾಗುತ್ತಾರೆ. 1990 ರಿಂದ 1997 ರವರೆಗೆ 47 ಟೆಸ್ಟ್‌ಗಳಲ್ಲಿ ಭಾರತವನ್ನು ಮುನ್ನಡೆಸಿದ್ದ ಅಜರ್ 14 ಬಾರಿ ಗೆದ್ದಿದ್ದಾರೆ.

ಡಬ್ಲ್ಯುಟಿಸಿಯಲ್ಲಿ ಯಶಸ್ಸು

ರೋಹಿತ್ ಇದುವರೆಗೆ ಡಬ್ಲ್ಯುಟಿಸಿಯಲ್ಲಿ ಭಾರತೀಯ ನಾಯಕನಾಗಿ ಆಡಿದ 18 ಪಂದ್ಯಗಳಲ್ಲಿ 12 ಪಂದ್ಯಗಳನ್ನು ಗೆದ್ದಿದ್ದಾರೆ. ನ್ಯೂಜಿಲೆಂಡ್ ವಿರುದ್ಧದ ಎಲ್ಲಾ ಮೂರು ಟೆಸ್ಟ್‌ಗಳನ್ನು ಗೆಲ್ಲುವಲ್ಲಿ ಯಶಸ್ವಿಯಾದರೆ, ಅವರು ವಿರಾಟ್ ಕೊಹ್ಲಿ ಅವರ ದಾಖಲೆಯನ್ನು ಮುರಿದು ಭಾರತದ ಅತ್ಯಂತ ಯಶಸ್ವಿ ಡಬ್ಲ್ಯುಟಿಸಿ ನಾಯಕರಾಗುತ್ತಾರೆ. ವಿರಾಟ್ 2019 ರಿಂದ 2022 ರವರೆಗೆ 22 ಪಂದ್ಯಗಳಲ್ಲಿ ಭಾರತವನ್ನು ಮುನ್ನಡೆಸಿ 14 ಪಂದ್ಯಗಳನ್ನು ಗೆದ್ದಿದ್ದರು.

ಗಂಗೂಲಿ ದಾಖಲೆ ಮೇಲೆ ಕಣ್ಣು: ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತವು ಕಿವೀಸ್ ಅನ್ನು ವೈಟ್‌ವಾಶ್ ಮಾಡಲು ಯಶಸ್ವಿಯಾದರೆ ರೋಹಿತ್ ಸೌರವ್ ಗಂಗೂಲಿ ಅವರ ದಾಖಲೆಯನ್ನು ಮುರಿಯುತ್ತಾರೆ. ಅಂತರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತದ ನಾಲ್ಕನೇ ಅತ್ಯಂತ ಯಶಸ್ವಿ ನಾಯಕರಾಗುತ್ತಾರೆ. ರೋಹಿತ್ ಇದುವರೆಗೆ ನಾಯಕನಾಗಿ ಆಡಿರುವ 128 ಪಂದ್ಯಗಳ ಪೈಕಿ 95 ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದಾರೆ. ಗಂಗೂಲಿ 195 ಅಂತರಾಷ್ಟ್ರೀಯ ಪಂದ್ಯಗಳಲ್ಲಿ 97 ಗೆಲುವುಗಳೊಂದಿಗೆ ತಮ್ಮ ನಾಯಕತ್ವದ ವೃತ್ತಿಜೀವನವನ್ನು ಮುಗಿಸಿದ್ದರು. ಇವುಗಳಲ್ಲದೆ, ರೋಹಿತ್ ಕಿವೀಸ್ ವಿರುದ್ಧದ ಮೂರು ಟೆಸ್ಟ್‌ಗಳಲ್ಲಿ ಕನಿಷ್ಠ 406 ರನ್ ಗಳಿಸಲು ಯಶಸ್ವಿಯಾದರೆ ಡಬ್ಲ್ಯುಟಿಸಿಯಲ್ಲಿ 3000 ರನ್ ಗಳಿಸಿದ ಮೊದಲ ಭಾರತೀಯ ಬ್ಯಾಟರ್ ಎನಿಸಲಿದ್ದಾರೆ. ಸದ್ಯಕ್ಕೆ ಅವರು 34 ಪಂದ್ಯಗಳಲ್ಲಿ 2594 ರನ್ ಗಳಿಸಿದ್ದಾರೆ.

ಐಪಿಎಲ್‌ಗೂ ಮುನ್ನವೇ ಆರ್‌ಸಿಬಿಗೆ ಶಾಕ್

ಬೆಂಗಳೂರು: 2025ನೇ ಸಾಲಿನ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗೆ ಈಗಿನಿಂದಲೇ ಭರದ ಸಿದ್ಧತೆಗಳು ನಡೆಯುತ್ತಿವೆ. ಎಲ್ಲಾ ಫ್ರಾಂಚೈಸಿಗಳು ತಮಗೆ ಬೇಕಾದ ಆಟಗಾರರನ್ನು ಉಳಿಸಿಕೊಳ್ಳಲು ರಣತಂತ್ರ ಹೆಣೆಯುತ್ತಿವೆ. ಐಪಿಎಲ್ ಮೆಗಾ ಹರಾಜಿಗೂ ಮುನ್ನ ಫ್ರಾಂಚೈಸಿಯೊಂದಕ್ಕೆ ಗರಿಷ್ಠ 6 ಆಟಗಾರರನ್ನು ರೀಟೈನ್ ಮಾಡಿಕೊಳ್ಳಲು ಅವಕಾಶ ನೀಡಿದೆ. ಈ ನಡುವೆ ಆರ್‌ಸಿಬಿಯ ಸ್ಟಾರ್ ಆಟಗಾರ ಆಸ್ಟ್ರೇಲಿಯಾದ ಕ್ಯಾಮರೋನ್ ಗ್ರೀನ್ ಗಾಯದ ಸಮಸ್ಯೆ ಎದುರಿಸುತ್ತಿರುವುದರಿಂದ ಅವರನ್ನು ರೀಟೈನ್ ಮಾಡಿಕೊಳ್ಳಬೇಕೋ ಅಥವಾ ರಿಲೀಸ್ ಮಾಡಬೇಕೋ ಎನ್ನುವ ವಿಚಾರದಲ್ಲಿ ಗೊಂದಲಕ್ಕೆ ಸಿಲುಕಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿ ಸಾಕಷ್ಟು ಅಳೆದುತೂಗಿ ಕೆಲ ಆಟಗಾರರನ್ನು ರೀಟೈನ್ ಮಾಡಿಕೊಳ್ಳುವ ಲೆಕ್ಕಾಚಾರದಲ್ಲಿತ್ತು. ಆದರೆ ತಂಡದ ದುಬಾರಿ ಆಟಗಾರರಾಗಿರುವ ಕ್ಯಾಮರೋನ್ ಗ್ರೀನ್ ಸೊಂಟ ನೋವಿನ ಸಮಸ್ಯೆಯಿಂದ ಬಳಲುತ್ತಿದ್ದು ಸರ್ಜರಿಗೆ ಒಳಗಾಗುತ್ತಿದ್ದಾರೆ. ಹೀಗಾಗಿ ಮುಂದಿನ ಆರು ತಿಂಗಳುಗಳ ಕಾಲ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ಹೊರಬಿದ್ದಿದ್ದಾರೆ. ಹೀಗಾಗಿ ಆರ್‌ಸಿಬಿ ತಂಡ ಇಕ್ಕಟ್ಟಿನಲ್ಲಿ ಸಿಲುಕಿದೆ. ಮುಂಬೈ ಇಂಡಿಯನ್ಸ್ ಫ್ರಾಂಚೈಸಿಯಿಂದ ಕ್ಯಾಮರೋನ್ ಗ್ರೀನ್ ಅವರನ್ನು 17.5 ಕೋಟಿ ರುಪಾಯಿಗೆ ಆರ್‌ಸಿಬಿ ಟ್ರೇಡ್ ಮಾಡಿತ್ತು. ಆರ್‌ಸಿಬಿ ಪರ ಕ್ಯಾಮರೋನ್ ಕಳೆದ ಪಂದ್ಯಾವಳಿ ಯಲ್ಲಿ ಸಾಧಾರಣ ಪ್ರದರ್ಶನ ತೋರಿದ್ದರು.

ಕ್ಯಾಮರೋನ್ ಗ್ರೀನ್ ಸೊಂಟ ನೋವು ಕಾಣಿಸಿಕೊಂಡ ಬೆನ್ನಲ್ಲೇ ಸ್ಕ್ಯಾನ್‌ಗೆ ಒಳಗಾಗಿ ದ್ದರು. ಈ ಸ್ಕ್ಯಾನ್ ಪರಿಶೀಲಿಸಿದಾಗ ಅವರಿಗೆ ಅಪರೂಪದ ಸಮಸ್ಯೆ ಇರುವುದು ಕಂಡು ಬಂದಿದೆ. ಹೀಗಾಗಿ ಶಸ್ತ್ರಚಿಕಿತ್ಸೆಗೆ ಒಳಗಾಗಲಿದ್ದು, ಮುಂದಿನ ಆರು ತಿಂಗಳುಗಳ ಕಾಲ ಸ್ಪರ್ಧಾತ್ಮಕ ಕ್ರಿಕೆಟ್‌ನಿಂದ ದೂರ ಉಳಿಯಲಿದ್ದಾರೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ. ಹೀಗಾಗಿ ಕ್ಯಾಮರೋನ್ ಗ್ರೀನ್ ಮುಂಬರುವ ಐಪಿಎಲ್ ಟೂರ್ನಿಯ ಆರಂಭಿಕ ಕೆಲ ಪಂದ್ಯಗಳಿಗೂ ಅಲಭ್ಯರಾಗುವ ಭೀತಿ ಎದುರಾಗಿದೆ.

ಟೆಸ್ಟ್ ಸರಣಿಯಿಂದಲೂ ಔಟ್

ಭಾರತ ಹಾಗೂ ಆಸ್ಟ್ರೇಲಿಯಾ ನಡುವಿನ 5 ಪಂದ್ಯಗಳ ಬಾರ್ಡರ್ ಗವಾಸ್ಕರ್ ಟೆಸ್ಟ್ ಸರಣಿಯು ನವೆಂಬರ್ 22ರಿಂದ ಆರಂಭವಾಗಲಿದೆ. ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಪ್ರವೇಶಿಸುವ ನಿಟ್ಟಿನಲ್ಲಿ ಉಭಯ ತಂಡಗಳ ಪಾಲಿಗೆ ಈ ಸರಣಿ ಸಾಕಷ್ಟು ಮಹತ್ವದ್ದೆನಿಸಿದೆ. ಆಸ್ಟ್ರೇಲಿಯಾ ಪರ ಟೆಸ್ಟ್ ಸರಣಿಯಲ್ಲಿ 4ನೇ ಬ್ಯಾಟಿಂಗ್ ಕ್ರಮಾಂಕದಲ್ಲಿ ಕಣಕ್ಕಿಳಿಯುತ್ತಿದ್ದ ಕ್ಯಾಮರೋನ್ ಗ್ರೀನ್ , ಉಪಯುಕ್ತ ಬೌಲರ್ ಆಗಿಯೂ ಸೈ ಎನಿಸಿಕೊಂಡಿದ್ದರು. ಇದೀಗ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯಲ್ಲಿ ಗ್ರೀನ್ ಅನುಪಸ್ಥಿತಿ ಕಾಂಗರೂ ಪಡೆಯನ್ನು ಕಾಡುವ ಸಾಧ್ಯತೆಯಿದೆ.

ಸ್ವರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟದ ಕಥೆ

ಕಮರ್ಷಿಯಲ್ ಸಿನಿಮಾಗಳ ಭರಾಟೆಯ ನಡುವೆ ಸ್ವಾತಂತ್ರ್ಯ ಹೋರಾಟದ ಕ್ರಾಂತಿಕಾರಿ ಕಥೆಯ ಸ್ವರಾಜ್ಯ 1942 ಮೂಡಿಬಂದಿದ್ದು , ತೆರೆಗೆ ಸಿದ್ಧವಾಗಿದೆ. ಈ ಹಿಂದೆ ಹತ್ಯೆ ಚಿತ್ರವನ್ನು ನಿರ್ದೇಶಿಸಿದ್ದ ವರುಣ್ ಗಂಗಾಧರ್ ಸ್ವರಾಜ್ಯ 1942 ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಸದ್ಯ ಈ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ.

ಹುಬ್ಬಳ್ಳಿ ಮೂಲದ ಬಾಲಕನೊಬ್ಬ ಹುಬ್ಬಳ್ಳಿಯಲ್ಲಿ ನಡೆಯುತ್ತಿದ್ದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಲು ಹೊರಟಾಗ ಬ್ರಿಟಿಷರ ಗುಂಡೇಟಿಗೆ ಹುತಾತ್ಮನಾದ ಕಥೆಯೇ ಸ್ವರಾಜ್ಯ 1942. ಹದಿನಾಲ್ಕನೇ ವಯಸ್ಸಿನಲ್ಲಿ ದೇಶಕ್ಕಾಗಿ ಹೋರಾಡುವ ಉತ್ಸಾಹ ತೋರಿದ ಆ ಹುತಾತ್ಮರ ಮಾಹಿತಿ ಕಲೆ ಹಾಕಿ ಕುಟುಂಬದವರ ಒಪ್ಪಿಗೆ ಮೇರೆಗೆ ಸಿನಿಮಾ ಮಾಡಲಾಗಿದೆ. ನಿರ್ದೇಶಕ ವರುಣ್ ಗಂಗಾಧರ್ ಈ ಚಿತ್ರದ ಮೂಲಕ ತಮ್ಮ ಪುತ್ರನನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದಾರೆ.

ಮಾಸ್ಟರ್ ವರುಣ್ ಜಿ, ಯಶ್ ರಾಜ್ ಕಾರಜೋಳ್, ಓಂ ಕಾರಜೋಳ್, ಆದ್ಯಾ ಕಾರಜೋಳ್, ವೀಣಾ ಸುಂದರ್, ನಾಗೇಶ್ ಮಯ್ಯ, ಮೂಗು ಸುರೇಶ್, ಸಚಿನ್ ಪುರೋಹಿತ್, ಜಾನಿ ಈ ಚಿತ್ರದಲ್ಲಿ ನಟಿಸಿದ್ದಾರೆ. ಅಲೆನ್ ಕ್ರಾಸ್ಟಾ ಸಂಗೀತ ನಿರ್ದೇಶನ, ಸೂರ್ಯಕಾಂತ್ ಛಾಯಾಗ್ರಹಣ, ಸಂಜೀವ್ ರೆಡ್ಡಿ ಸಂಕಲನ ಸ್ವರಾಜ್ಯ 1942 ಸಿನಿಮಾಗಿದೆ. ವಿವೈ ಸಿನಿಮಾಸ್ ಬ್ಯಾನರ್ ನಲ್ಲಿ ಡಾ.ಪುಷ್ಪಾವತಿ ಮತ್ತು ಎ ಕಾರಜೋಳ ಶಕುಂತಲಾ ಈ ಚಿತ್ರ ನಿರ್ಮಾಣ ಮಾಡಿದ್ದಾರೆ.

> **1942ರಲ್ಲಿಯೇ ಹುಬ್ಬಳ್ಳಿಯ ಹುಡುಗ ಸ್ವಾತಂತ್ರ್ಯ ಹೋರಾಟಕ್ಕೆ ಧುಮಿಕಿದ ಕಥೆಯನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಶಾಲೆಯ ಪಠ್ಯ ಪುಸ್ತಕವನ್ನು ಸಿನಿಮಾ ರೂಪಕ್ಕೆ ತಂದಿದ್ದೇನೆ. ಶಾಲಾ ಮಕ್ಕಳಿಗಾಗಿಯೇ ಈ ಚಿತ್ರದ ವಿಶೇಷ ಪ್ರದರ್ಶನ ಏರ್ಪಡಿಸಲಾಗುವುದು.**
> - **ವರುಣ್ ಗಂಗಾಧರ್** ನಿರ್ದೇಶಕ

ಬಿಗ್‌ಬಾಸ್ ತೊರೆಯಲು ನಿರ್ಧರಿಸಿದ ಸುದೀಪ್

ಕನ್ನಡದ ಬಿಗ್‌ಬಾಸ್ ಹತ್ತು ಸೀಸನ್‌ಗಳು ಯಶಸಿಯಾಗಿವೆ. ಸದ್ಯ ಹನ್ನೊಂದನೇ ಸೀಸನ್ ಆರಂಭವಾಗಿದ್ದು ಎರಡು ವಾರಗಳಷ್ಟೇ ಕಳೆದಿದವೆ. ಸ್ವರ್ಗ ಮತ್ತು ನರಕದಲ್ಲಿ ಸ್ಪರ್ಧಿಗಳು ಪೈಪೋಟಿ ನೀಡುತ್ತಿದ್ದಾರೆ. ಸುದೀಪ್ ಅವರ ಸಾಥ್ಯದಲ್ಲಿಯೇ ಈ ಬಾರಿಯ ಬಿಗ್‌ಬಾಸ್ ಮೂಡಿಬರುತ್ತಿದೆ. ಈ ನಡುವೆಯೇ ಇದೇ ನಾನು ನಡೆಸಿಕೊಡುವ ಕೊನೆಯ ಬಿಗ್‌ಬಾಸ್ ಶೋ ಎಂದು ಹೇಳಿರುವ ಕಿಚ್ಚ, ಬಿಗ್‌ಬಾಸ್‌ನಿಂದ ಹೊರ ನಡೆಯುವ ನಿರ್ಧಾರ ಮಾಡಿದ್ದಾರೆ. ಸುದೀಪ್ ಅವರ ಈ ದಿಢೀರ್ ನಿರ್ಧಾರ ಕೇಳಿ ಎಲ್ಲರೂ ಶಾಕ್ ಆಗಿದ್ದಾರೆ.

ಬಿಗ್‌ಬಾಸ್ ಸೀಸನ್ ಹನ್ನೊಂದಕ್ಕೆ ನೀವು ತೋರಿದ ಪ್ರೀತಿಗೆ ಧನ್ಯವಾದ. ಈ ಟಿಆರ್‌ಪಿ, ಕಾರ್ಯಕ್ರಮಕ್ಕೆ ಹಾಗೂ ನನ್ನ ಬಗ್ಗೆ ನಿಮ್ಮ ಪ್ರೀತಿ ಎಂಥದ್ದು ಎಂದು ಹೇಳುತ್ತದೆ. ಹನ್ನೊಂದು ವರ್ಷಗಳ ಕಾಲ ಒಟ್ಟಿಗೆ ಸಾಗಿದ ಪ್ರಯಾಣ ಇದು. ಬಿಗ್‌ಬಾಸ್ ಕನ್ನಡ ಹೋಸ್ಟ್ ಆಗಿ ಇದು ನನ್ನ ಕೊನೆಯ ಸೀಸನ್. ನನ್ನ ನಿರ್ಧಾರವನ್ನು ನನ್ನ ಕಲರ್ಸ್ ಹಾಗೂ ಇಷ್ಟು ವರ್ಷಗಳಿಂದ ಬಿಗ್‌ಬಾಸ್ ಅನ್ನು ನೋಡಿದ ಎಲ್ಲರೂ ಗೌರವಿಸುತ್ತಾರೆ ಎಂದು ಭಾವಿಸುತ್ತೇನೆ. ಈ ಸೀಸನ್ ಯಶಸ್ವಿಗೊಳಿಸೋಣ. ಪ್ರೀತಿಯ ಅಪ್ಪುಗೆ ಎಂದು ಸುದೀಪ್ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ. ಸುದೀಪ್ ಅವರ ಈ ದಿಢೀರ್ ನಿರ್ಧಾರಕ್ಕೆ ಕಾರಣ ಏನು ಎಂದು ಹಲವರು ತಲೆ ಕೆಡಿಸಿಕೊಂಡಿದ್ದಾರೆ. ಬಿಗ್‌ಬಾಸ್‌ನಲ್ಲಿ ಕಿಚ್ಚ ಸುದೀಪ್ ಅವರಿಗೆ ಅವಮಾನವಾಗಿದೆ ಈ ಹಿನ್ನೆಲೆಯಲ್ಲಿ ಅವರು ಬಿಗ್‌ಬಾಸ್ ತೊರೆಯಲು ನಿರ್ಧಾರ ಮಾಡಿದ್ದಾರೆ ಎನ್ನಲಾಗುತ್ತಿದೆ.

ಬಿಗ್ ಬಾಸ್ ಎಂಬ ಕಾರ್ಯಕ್ರಮ ನಡೆಸುವ ಕೆಲವು ಕನ್ನಡ ದ್ರೋಹಿಗಳ ನಿಮ್ಮ ಕಿತ್ತೋದ್ ಆಟಕ್ಕೆ ಸುದೀಪ್ ಬಿಗ್ ಬಾಸ್ ನಿರೂಪಣೆ ನಿಲ್ಲಿಸಬೇಕಾಗಿದೆ. ಅವರಿಗೆ ಮಾಡಿದ ಅವಮಾನ ಸಹಿಸೋಲ್ಲ, ಎ ಮುಂಬೈ ಮರಾಠಿ ಹಾಗೂ ತಮಿಳ್ ನಿರ್ದೇಶಕ, ಮೊದಲು ಬಿಗ್ ಬಾಸ್ ಬಿಡಿ ಇಲ್ಲ, ಬಿಗ್ ಬಾಸ್ ನಿಲ್ಲಬೇಕು. ಅಸಲಿ ವಿಷಯ ನಾಳೆ ಮಾತಾಡ್ತೀನಿ ಎಂದು ಬಿಗ್ ಬಾಸ್ ಮಾಜಿ ಸ್ಪರ್ಧಿ ರೂಪೇಶ್ ರಾಜಣ್ಣ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ರಾಜನಿಲ್ಲದ ಅರಮನೆ, ಕಿಚ್ಚ ನಿಲ್ಲದ ಬಿಗ್‌ಬಾಸ್ ಎರಡೂ ಒಂದೇ ಎಂದು ಮಾಜಿ ಬಿಗ್‌ಬಾಸ್ ಸ್ಪರ್ಧಿಗಳು ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ. ಈ ಹಿಂದೆಯೂ ಸುದೀಪ್ ಅವರು ಈ ಬಾರಿಯ ಬಿಗ್‌ಬಾಸ್ ಶೋ ನಡೆಸಿಕೊಡುವುದಿಲ್ಲ ಎಂಬ ವಿಚಾರ ಕೇಳಿ ಬಂದಿತ್ತು. ಆ ಬಳಿಕ ಕಲರ್ ವಾಹಿನಿಯವರು ಸುದೀಪ್ ಅವರ ಮನವೊಲಿಸಿ ನಿರೂಪಣೆ ಒಪ್ಪಿಸಿದ್ದರು.

ಡಿಸೆಂಬರ್‌ನಲ್ಲಿ ಯುಐ ರಿಲೀಸ್

ರಿಯಲ್ ಸ್ಟಾರ್ ಉಪೇಂದ್ರ ಅಭಿನಯದ ಯುಐ ಯಾವಾಗ ತೆರೆಗೆ ಬರಲಿದೆ ಎಂದು ಎಲ್ಲರೂ ಕಾದುಕುಳಿತ್ತಿದ್ದರು. ಅಂತು ಈಗ ಚಿತ್ರದ ಬಿಡುಗಡೆಯ ದಿನಾಂಕ ಘೋಷಣೆಯಾಗಿದೆ. ಡಿಸೆಂಬರ್ 20 ರಂದು ಯುಐ ವಿಶ್ವಾದ್ಯಂತ ಅದ್ದೂರಿಯಾಗಿ ತೆರೆಗೆ ಬರಲಿದೆ. ಚಿತ್ರದ ಹೊಸ ಪೋಸ್ಟರ್ ರಿಲೀಸ್ ಮಾಡುವ ಮೂಲಕ ರಿಲೀಸ್ ಡೇಟ್ ಅನೌನ್ಸ್ ಮಾಡಲಾಗಿದೆ. ವಿಭಿನ್ನ ಗೆಟಪ್‌ನಲ್ಲಿ ಮಿಂಚಿರುವ ಉಪ್ಪಿ ಗನ್ ಹಿಡಿದು ನಿಂತಿರುವ ಲುಕ್ ಅದ್ಭುತವಾಗಿದೆ. ಇಷ್ಟು ದಿನ ಸಿನಿಮಾ ನೋಡಿ ನೀವ್ ಹಿಟ್ ಅಥವಾ ಫ್ಲಾಪ್ ಅಂತ ಹೇಳ್ತಿದ್ರಿ ಈ ಸಿನಿಮಾ ನಿಮ್ಮನ್ ನೋಡಿ... ಎಂಬ ಡೈಲಾಗ್ ಗಮನಸೆಳೆಯುತ್ತಿದೆ. ಇದನ್ನು ನೋಡಿದರೆ ಚಿತ್ರದಲ್ಲಿ ಅದ್ಭುತವಾದ ಕಥೆ ಇದೆ ಎಂಬುದು ಸ್ಪಷ್ಟವಾಗುತ್ತದೆ. ಯುಐ ಟೈಟಲ್‌ನಲ್ಲೇ ಕ್ಯೂರಿಯಾಟಿಸಿ ಮೂಡಿಸಿದ್ದ ಉಪೇಂದ್ರ, ಕತ್ತಲು ಆವರಿಸಿದ ಟೀಸರ್ ತೋರಿಸಿ ತಲೆಗೆ ಹುಳುಬಿಟ್ಟಿದ್ದರು. ಮಾತ್ರವಲ್ಲ ವಿಭಿನ್ನ ಸಾಹಿತ್ಯದ ಹಾಡುಗಳ ಮೂಲಕವೂ ಯುಐ ಮನಗೆದ್ದಿತ್ತು.

ಅಕ್ಟೋಬರ್‌ನಲ್ಲಿ ಯುಐ ತಂಡದಿಂದ ಸಿಹಿಸುದ್ದಿ ಸಿಗಲಿದೆ ಎಂದು ಉಪ್ಪಿ ಹೇಳಿದ್ದರು. ಹಾಗಾಗಿ ಎಲ್ಲರೂ ಇದೇ ತಿಂಗಳು ಸಿನಿಮಾ ರಿಲೀಸ್ ಆಗಲಿದೆ ಎಂದುಕೊಂಡಿದ್ದರು. ಆದರೆ ಈ ತಿಂಗಳು ಚಿತ್ರದ ಟ್ರೇಲರ್ ರಿಲೀಸ್ ಆಗುವ ನಿರೀಕ್ಷೆ ಇದೆ. ಉಪ್ಪಿ ಬಹಳ ವರ್ಷಗಳ ಬಳಿಕ ನಿರ್ದೇಶಿಸಿರುವ ಸಿನಿಮಾ ಇದು ಎಂಬುದು ಕುತೂಹಲ ಮೂಡಲು ಪ್ರಮುಖ ಕಾರಣವಾಗಿದೆ. ಯುಐ ಪ್ರೇಕ್ಷಕರನ್ನು ಹೊಸ ಲೋಕಕ್ಕೆ ಕೊಂಡೊಯ್ಯಲಿದೆ. ಇದು ಈಗಾಗಲೇ ರಿಲೀಸ್ ಆಗಿರುವ ಟೀಸರ್‌ನಲ್ಲಿ ಸ್ಪಷ್ಟವಾಗಿದೆ. ಉಪ್ಪಿಗೆ ಜತೆಯಾಗಿ ರೀಷ್ಮಾ ಹಾಗೂ ನಿಧಿ ಸುಬ್ಬಯ್ಯ ನಟಿಸಿದ್ದು, ಅಚ್ಯುತ್ ಕುಮಾರ್, ರವಿಶಂಕರ್, ಸಾಧು ಕೋಕಿಲ ಹೀಗೆ ದೊಡ್ಡ ತಾರಾಬಳಗವೇ ಚಿತ್ರದಲ್ಲಿದೆ. ಅಜನೀಶ್ ಲೋಕನಾಥ್ ಸಂಗೀತ ಸಂಯೋಜಿಸಿದ್ದಾರೆ. ಯುಐ ಹೈ ಬಜೆಟ್ ಸಿನಿಮಾವಾಗಿದ್ದು, ಪ್ಯಾನ್ ಇಂಡಿಯಾ ಚಿತ್ರವಾಗಿ ನಿರ್ಮಾಣವಾಗಿದೆ. ಮನೋಹರ್ ಜಿ.ಮನೋಹರ್ ಹಾಗೂ ಕೆ.ಪಿ.ಶ್ರೀಕಾಂತ್ ಒಟ್ಟಾಗಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಸಂಗಮೇಶ್ವರರ ಮಧುರ ಹಾಡು

ಗಿರಿಮಲ್ಲೇಶ್ವರ ಕಂಬೈನ್ಸ್ ಬ್ಯಾನರ್‌ನಲ್ಲಿ ಮಾಧವಾನಂದ ನಿರ್ಮಿಸುತ್ತಿರುವ ಸಮರ್ಥ ಸದ್ಗುರು ಶ್ರೀಸಂಗಮೇಶ್ವರ ಮಹಾರಾಜರು ಚಿತ್ರದ ಹಾಡುಗಳು ಬಿಡುಗಡೆಯಾಗಿವೆ. ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವಿರೇಂದ್ರ ಹೆಗ್ಗಡೆ ಹಾಡುಗಳನ್ನು ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಜಮಖಂಡಿ ತಾಲೂಕಿನ ಕೃಷ್ಣಾ ನದಿ ತೀರದ ಹಿಪ್ಪರಗಿಯ ಇಂಚಗೇರಿ ಮಠದ ಕಲ್ಪತರುವಾದ ಶ್ರೀಸಂಗಮೇಶ್ವರ ಮಹಾರಾಜರ ಜೀವನ ಚರಿತ್ರೆ ಆಧರಿಸಿದ ಸಮರ್ಥ ಸದ್ಗುರು ಶ್ರೀಸಂಗಮೇಶ್ವರ ಮಹಾರಾಜರು ಚಿತ್ರದ ಹಾಡುಗಳು ಹಾಗೂ ಚಿತ್ರ ಭರ್ಜರಿ ಯಶಸ್ಸು ಕಾಣಲಿ ಎಂದು ವೀರೇಂದ್ರ ಹೆಗಡೆ ಶುಭಹಾರೈಸಿದರು.

ರವಿ ನಾರಾಯಣ್ ಸಂಗಮೇಶ್ವರರ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಹಿರಿಯ ನಟರಾದ ರಾಮಕೃಷ್ಣ, ವಿಜಯಕಾಶಿ, ವಿನಯಾ ಪ್ರಸಾದ್, ಸಂದೀಪ್ ಮಲಾನಿ, ನಾರಾಯಣ ಸ್ವಾಮಿ, ತುಷಾರ್ ಮಲಗೊಂಡ, ಭವ್ಯಶ್ರೀ ರೈ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ರಾಜಾ ರವಿಶಂಕರ್ ನಿರ್ದೇಶನ, ಸಿ.ನಾರಾಯಣ್ ಛಾಯಾಗ್ರಾಹಣ, ಎ.ಟಿ.ರವೀಶ್ ಸಂಗೀತ, ರವಿ ಸಂಕಲನ, ಕುಮಾರ್ ನೊಣವಿನಕೆರೆ ಕಲಾ ನಿರ್ದೇಶನ ಚಿತ್ರಕ್ಕಿದೆ.